ಸಂಪ್ರದಾಯ ಆಚರಣೆಗಳಲ್ಲಿ ಹೆಣ್ಣಿನ ಜೈವಿಕತೆ

(ವೈದಿಕ ಮತ್ತು ಅವೈದಿಕರನ್ನು ಅನುಲಕ್ಷಿಸಿ)

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ
ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕ
ವೀರೇಶ

ಮಾರ್ಗದರ್ಶಕರು
ಡಾ.ಶೈಲಜಾ ಇಂ.ಹಿರೇಮಠ
ಪ್ರವಾಚಕರು ಹಾಗೂ ನಿರ್ದೇಶಕರು
ಮಹಿಳಾ ಅಧ್ಯಯನ ವಿಭಾಗ/ ಕೇಂದ್ರ

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬

೨೦೧೦

ಸಂಪ್ರದಾಯ ಆಚರಣೆಗಳಲ್ಲಿ ಹೆಣ್ಣಿನ ಜೈವಿಕತೆ

(ವೈದಿಕ ಮತ್ತು ಅವೈದಿಕರನ್ನು ಅನುಲಕ್ಷಿಸಿ)

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕ

ವೀರೇಶ

ಮಾರ್ಗದರ್ಶಕರು

ಡಾ.ಶೈಲಜಾ ಇಂ.ಹಿರೇಮಠ

ಪ್ರವಾಚಕರು ಹಾಗೂ ನಿರ್ದೇಶಕರು

ಮಹಿಳಾ ಅಧ್ಯಯನ ವಿಭಾಗ/ ಕೇಂದ್ರ

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩ ೨೭೬

2010

ಮಾರ್ಗದರ್ಶಕರ ಪ್ರಮಾಣ ಪತ್ರ

ವೀರೇಶ ಇವರು ಸಂಪ್ರದಾಯ ಆಚರಣೆಗಳಲ್ಲಿ ಹೆಣ್ಣಿನ ಜೈವಿಕತೆ (ವೈದಿಕ ಮತ್ತು ಅವೈದಿಕರನ್ನು ಅನುಲಕ್ಷಿಸಿ) ಎಂಬ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ ಪದವಿಗಾಗಿ ಭಾಷಾ ನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಶೈಲಜ ಇಂ. ಹಿರೇಮಠ
ಪ್ರವಾಚಕರು ಹಾಗೂ ನಿರ್ದೇಶಕರು
ಮಹಿಳಾ ಅಧ್ಯಯನ ವಿಭಾಗ/ಕೇಂದ್ರ
ಕನ್ನಡ ವಿಶ್ವವಿದ್ಯಾಲಯ,ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 15-2-2010

ಪ್ರಮಾಣ ಪತ್ರ

ಸಂಪ್ರದಾಯ ಆಚರಣೆಗಳಲ್ಲಿ ಹೆಣ್ಣಿನ ಜೈವಿಕತೆ (ವೈದಿಕ ಮತ್ತು ಅವೈದಿಕರನ್ನು ಅನುಲಕ್ಷಿಸಿ) ಎಂಬ ಮಹಾಪ್ರಬಂಧವನ್ನು ಡಾ. ಶೈಲಜ ಇಂ. ಹಿರೇಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ ಪದವಿಗಾಗಿ ಭಾಷಾ ನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Veeresh

ವೀರೇಶ
ಸಂಶೋಧಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 15-2-2010

ಪರಿವಿಡಿ

* * *

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮತ್ತು ಮಹತ್ವ

೧. ಪ್ರಸ್ತಾವನೆ

೨. ಅಧ್ಯಯನ ಉದ್ದೇಶ

೩. ಅಧ್ಯಯನದ ವ್ಯಾಪ್ತಿ

೪. ಅಧ್ಯಯನದ ವಿಧಾನ ಮತ್ತು ವೈಧಾನಿಕತೆ

೫. ಅಧ್ಯಯನದ ಸ್ವರೂಪ

೬. ಅಧ್ಯಯನದ ಸಮೀಕ್ಷೆ

೭. ಅಧ್ಯಯನದ ಮಹತ್ವ

೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮತ್ತು ಮಹತ್ವ

೧.೧. ಪ್ರಸ್ತಾವನೆ

ಸಮಾಜದಲ್ಲಿ ಒಂದಲ್ಲ ಒಂದು ಬಗೆಯಲ್ಲಿ ಸಂಪ್ರದಾಯ ಆಚರಣೆಗಳು ನಡೆದುಕೊಂಡು ಬರುತ್ತಿರುವುದು ಇಂದಿಗೂ ಕಂಡುಬರುತ್ತಿದೆ. ಈ ಸಂಪ್ರದಾಯ ಆಚರಣೆಗಳಿಗೆ ಮುಖ್ಯ ಕಾರಣ ನಂಬಿಕೆ. ಈ ನಂಬಿಕೆಯು ಮೂಲತಃ ವೈಯಕ್ತಿಕ ವಾಡಿಕೆಯಂದು ಹೇಳಲಾಗುತ್ತಿದೆ. ಇದು ಪ್ರಭಾವಶಾಲಿಯಾದ ವ್ಯಕ್ತಿಯೊಬ್ಬನ ವಾಡಿಕೆಯಿಂದ ಬಂದದ್ದಾಗಿದೆ. ಇದನ್ನು ಸಮಾಜದಲ್ಲಿನ ಜನರು ಅಥವಾ ಸಮಾಜ ಅನುಸರಿಸಿಕೊಂಡು ಬಂದಿದ್ದರಿಂದ ಈ ನಂಬಿಕೆ ಸಮುದಾಯ ವ್ಯವಸ್ಥೆಯಲ್ಲಿ ಸಾಮೂಹಿಕ ಸ್ವರೂಪ ಪಡೆದುಕೊಂಡು ಸಂಪ್ರದಾಯ ಆಚರಣೆ ರೂಪದಲ್ಲಿ ಉಳಿಯಲು ಕಾರಣವಾಗಿವೆ. ನಂಬಿಕೆಯನ್ನಾಧರಿಸಿ ಹುಟ್ಟಿಕೊಂಡ ಸಂಪ್ರದಾಯ ಆಚರಣೆಗಳು ವ್ಯಕ್ತಿ, ಸಮಾಜ, ಜಾತಿ, ವರ್ಗ, ಗುಂಪು, ಪಂಗಡ ಮುಂತಾದ ರೀತಿಯಲ್ಲಿ ಕವಲೊಡೆದು ಮುನ್ನಡೆಯಲು ಕಾರಣವಾಗಿವೆ. ಜೊತೆಗೆ ಆಯಾ ಸಮುದಾಯಿಕ ಜನರು ಸಂಪ್ರದಾಯ ಆಚರಣೆಗಳನ್ನು ಅನುಸರಿಸಬೇಕು, ಆಚರಿಸಲೇಬೇಕು ಅವುಗಳನ್ನು ಬಿಡಬಾರದು ಬಿಟ್ಟರೆ ಏನಾದರೂ ಅನಾಹುತ ಕಾದಿದೆ ಎಂಬ ಆಳವಾದ ನಂಬಿಕೆಯನ್ನು ಸೃಷ್ಠಿಮಾಡುತ್ತವೆ. ಆ ಮೂಲಕವೇ ಇಡೀ ಸಮಾಜ ಅಥವಾ ನಿರ್ಧಿಷ್ಠ ಪ್ರದೇಶದ ಜನತೆಯ ಅಂಗೀಕಾರದ ಮುದ್ರೆಯನ್ನು ಪಡೆದು ಒಂದು ಗುಂಪಿಗೆ ಅಥವಾ ಕುಟುಂಬಕ್ಕೆ ಸೀಮಿತವಾಗಿರದೇ, ಇಡೀ ಜನ, ಸಮುದಾಯಕ್ಕೆ ವ್ಯಾಪಿಸಿಕೊಂಡು ಇಂದಿಗೂ ಅಲಿಖಿತ ನಿಯಮಗಳಾಗಿ ಉಳಿದಿವೆ.

ಸಂಪ್ರದಾಯ ಆಚರಣೆಗಳು ವ್ಯಕ್ತಿ, ಸಮಾಜ ಸಮುದಾಯವನ್ನು ನಿಯಂತ್ರಿಸುತ್ತವೆ. ಅಲ್ಲದೆ ಸ್ತ್ರೀ-ಪುರುಷರಿಬ್ಬರನ್ನು ನಿಯಂತ್ರಣಕ್ಕೆ ಒಳಪಡಿಸುತ್ತವೆ. ಮತ್ತು ಇವುಗಳಿಂದ ಯಾರೂ ತಪ್ಪಿಸಿಕೊಳ್ಳದಂದ ಸ್ಥಿತಿ. ಸಂಪ್ರದಾಯ ಆಚರಣೆಗಳಿಗೆ ಕುಂದುಂಟಾಗದಂತೆ ಅನುಸರಿಸಿಕೊಂಡು ಹೋಗುವ ನಿರ್ಮಾಣವಾಗಿ ಒತ್ತಡ ಇರುತ್ತದೆ. ಸಮುದಾಯಗಳ ಮೇಲೆ ಮಾನವನ ಬೌದ್ಧಿಕ, ಮಾನಸಿಕ ಹಾಗೂ ಶಾರೀರಿಕ ಗುಣಲಕ್ಷಣ ಕ್ರಿಯೆಗಳು ಸಾರ್ವತ್ರಿಕವಾಗಿ ಭಿನ್ನವಾಗಿರುವುದರಿಂದ ಒಂದೇ ಬಗೆಯ ಸಂಪ್ರದಾಯ ಆಚರಣೆಗಳು ಭಿನ್ನ ಭಿನ್ನವಾದ ರೀತಿಯಲ್ಲಿ ರೂಪಗೊಂಡು ಮುನ್ನಡೆಯುತ್ತಿವೆ. ಬೇರೆ ಬೇರೆ ರೀತಿಯಾದ ಜನರ ಧರ್ಮ,

ಜಾತಿ, ಜನಾಂಗ, ವರ್ಗ, ಕೋಮು ಮತೀಯತೆ ಹೀಗೆ ಹಲವು ರೀತಿಯಲ್ಲಿ ಮುನ್ನಡೆದು ಪ್ರಬಲತೆಯನ್ನು ಸಾಧಿಸಿವೆ. ಜೊತೆಗೆ ಇವುಗಳು ಪಿತೃ ಪ್ರಧಾನ ಸಮಾಜದ ಧಾರ್ಮಿಕ ಅಡಿಯಲ್ಲಿ ಮುಂದುವರೆಯುತ್ತಿರುವುದೂ ಕೂಡ ಇದೆ.

ಹೆಣ್ಣಿನ ಜೈವಿಕತೆಗೆ ಸಂಬಂಧಿಸಿದ ಋತುಮತಿಯಾಗುವಿಕೆ, ಮುಟ್ಟು, ಹೆರಿಗೆ, ಸಂತಾನ ಇವುಗಳಿಗೆ ಸಂಬಂಧಿಸಿದ ಸಂಪ್ರದಾಯ ಆಚರಣೆಗಳಿವೆ. ಇವುಗಳನ್ನು ಆಧಾರಿಸಿ ನಡೆಯುವ ನಂಬಿಕೆ ಸಂಪ್ರದಾಯ ಆಚರಣೆಗಳು ಗಂಡು–ಹೆಣ್ಣಿನಲ್ಲಿ, ಶ್ರೇಷ್ಠ–ಕನಿಷ್ಠ, ಮೇಲು–ಕೀಳು, ಪ್ರಧಾನ–ಅಧೀನ ಮುಂತಾದ ತಾರತಮ್ಯದಂತಹ ಸಂಗತಿಗಳನ್ನು ಸೃಷ್ಟಿಗೊಳಿಸಲು ಕಾರಣವಾಗುತ್ತಿವೆ. ಜೊತೆಗೆ ಹೆಣ್ಣಿನ ಕುರಿತಾಗಿ ಹೆಣ್ಣಿನ ದೇಹದ ಕುರಿತಾಗಿ ಸಮಾಜದಲ್ಲಿ ಹಲವು ರೀತಿಯಾದ ತಪ್ಪು ಗ್ರಹಿಕೆಗಳನ್ನು ಸೃಷ್ಟಿಗೊಳ್ಳಲು ಕಾರಣವಾಗುತ್ತಿವೆ. ಅದೇನೆಂದರೆ 'ಹೆಣ್ಣು' ಎಂದರೆ 'ಚಂಚಲೆ', 'ಅಶುದ್ದಳು', 'ಅಪವಿತ್ರಳು' 'ಮೈಲಿಗೆ', 'ಸೂತಕ'ದವಳು ಹೀಗೆ ನಾನತರವಾಗಿ ಸಮಾಜದಲ್ಲಿ ತಪ್ಪುಗ್ರಹಿಕೆಗಳನ್ನು ಸೃಷ್ಟಿಗೊಳ್ಳಲು ಕಾರಣವಾಗಿವೆ. "ಹೆಣ್ಣಿನ ಮೊದಲ ಮುಟ್ಟು, ತಿಂಗಳ ಮುಟ್ಟು, ಬಸಿರು, ಬಾಣಂತನಗಳಂತಹ ಜೈವಿಕ ಪ್ರಕ್ರಿಯೆಯ ಕುರಿತು ಬಗೆ ಬಗೆಯ ಕಥೆಗಳು, ನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು ರೂಢಿಯಲ್ಲಿವೆ. ಇಂತಹ ಮಿಥ್‌ಗಳು, ನಂಬಿಕೆ–ಸಮಪ್ರದಾಯ–ಆಚರಣೆಗಳು ಕೇವಲ ಹೆಣ್ಣಿನ ದೇಹ ಸಂರಚನೆಯ ಕುರಿತು ಮಾತನಾಡುತ್ತವೆ ಎಂದು ಹೇಳಲಾಗುವುದಿಲ್ಲ; ಆಯಾ ಧರ್ಮ ಜಾತಿಗಳಲ್ಲಿನ ಲಿಂಗಾಧಾರಿತ ಅಸಮಾನತೆಯ ಮೇಲೆ, ಶೋಷಣೆಗಳ ಮೂಲ ನೆಲೆಗಳ ಮೇಲೆ ಬೆಳಕು ಚೆಲ್ಲುತ್ತಿರುತ್ತವೆ. ಹೆಣ್ಣಿನ ಕುರಿತಿರುವ ಮಿಥ್‌ಗಳು ಕೇವಲ ಮಿಥ್‌ಗಳಾಗಿ ಉಳಿಯುವುದಿಲ್ಲ; ಬದಲಿಗೆ ಹೆಣ್ಣಿನ ಬಗೆಗೆ ತಾತ್ವಿಕತೆಯನ್ನು ನಿರ್ವಚಿಸುತ್ತಿರುತ್ತವೆ, ನಿರೂಪಿಸುತ್ತಿರುತ್ತವೆ. ಹೀಗೆ ನಿರ್ವಚಿಸಲ್ಪಟ್ಟ ತಾತ್ವಿಕತೆಯು ನಂಬಿಕೆ, ಆಚರಣೆ ಹಾಗೂ ಸಂಪ್ರದಾಯಗಳ ಮೂಲಕ ಜಾರಿಗೊಳ್ಳುತ್ತಿರುತ್ತವೆ"(ಶೈಲಜ ಹಿರೇಮಠ(ಸಂ), ೨೦೦೭, ಪು.೨) ಹೀಗಾಗಿ ಅವುಗಳು ಗಂಡಿಗೆ ಹಕ್ಕು, ಅಧಿಕಾರ, ಶಕ್ತಿ, ಹೆಮ್ಮೆ ಮತ್ತು ಆತ್ಮ ವಿಶ್ವಾಸದಂತವುಗಳನ್ನು ತುಂಬಿದರೆ; ಹೆಣ್ಣಿಗೆ ಹಕ್ಕು, ಅಧಿಕಾರ ಅಸ್ತಿತ್ವವನ್ನು ಕಿತ್ತುಕೊಳ್ಳಲು ಕಾರಣವಾಗುತ್ತಿವೆ. ಈ ಕಾರಣದಿಂದಾಗಿ ಸಂಪ್ರದಾಯ ಆಚರಣೆಗಳ ಕುರಿತಾಗಿ ಅಧ್ಯಯನ ಅಗತ್ಯವಾಗಿ ನಡೆಯಬೇಕಾಗಿದೆ. ನನ್ನ ಅಧ್ಯಯನದಲ್ಲಿ ಸಂಪ್ರದಾಯ ಆಚರಣೆಗಳನ್ನು ಪ್ರಮುಖವಾಗಿ ಎರಡು ನೆಲೆಗಳಲ್ಲಿ ಅಭ್ಯಸಿಸಲಾಗಿದೆ. ಅವುಗಳೆಂದರೆ ೧. ಸಂಪ್ರದಾಯ ಆಚರಣೆಗಳಲ್ಲಿ ಹೆಣ್ಣಿನ ಜೈವಿಕತೆ ೨. ಸಂಪ್ರದಾಯ ಆಚರಣೆಗಳು ಸಾಮಾಜಿಕ ಮೌಲ್ಯವಾಗುವ ಬಗೆ.

೧. ಸಂಪ್ರದಾಯ ಆಚರಣೆಗಳಲ್ಲಿ ಹೆಣ್ಣಿನ ಜೈವಿಕತೆ

ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುವ ಸಂಪ್ರದಾಯ ಆಚರಣೆಗಳು ಹೆಣ್ಣಿಗೆ ಋತುಮತಿಯಾಗುವ ಮೊದಲು, ಋತುಸ್ರಾವ ನಿಂತ ಮೇಲೆ ಇಲ್ಲ. ಹೀಗಾಗಿ ಇವುಗಳು ಹೆಣ್ಣನ್ನು ಹೆಣ್ಣಿನ ದೇಹವನ್ನು ಹೇಗೆ ಕಾಣುತ್ತಿವೆ. ಅಲ್ಲದೆ ಹೆಣ್ಣಿನ ದೇಹದ ಬಗೆಗೆ ಹಲವು

ರೀತಿಯಲ್ಲಿ ತಪ್ಪು ಗ್ರಹಿಕೆಗೆ ಕಾರಣವಾಗುತ್ತಿರುವ ಸಂಗತಿ ಯಾವುವು? ಇವುಗಳು ಹೆಣ್ಣಿನ ಜೈವಿಕತೆಯನ್ನು ವೈಭವಿಕರಿಸಿವೆಯೇ? ಅಥವಾ ಹೆಣ್ಣನ್ನು ನಿಯಂತ್ರಿಸುವ ತಂತ್ರಗಳಾಗಿ ಕಾರ್ಯನಿರ್ವಹಿಸುತ್ತಿವೆಯೇ? ಹಾಗೆಯೇ ಹೆಣ್ಣನ್ನು ಜೈವಿಕ ನೆಲೆಯಲ್ಲಿ ನೋಡಲಾಗುತ್ತಿದೆಯೇ? ನೋಡಿದರೆ ಅದರ ಕಾರಣವೇನು? ಎನ್ನುವ ಪೂರ್ವಕಲ್ಪನೆಯೊಂದಿಗೆ ಅಧ್ಯಯನ ಮಾಡಲಾಗಿದೆ. ಹಾಗೆಯೇ ಅಧ್ಯಯನದಲ್ಲಿ ವೈದಿಕ ಮತ್ತು ಅವೈದಿಕರನ್ನು ಅನುಲಕ್ಷಿಸಿ ಎನ್ನುವುದನ್ನು ಕೇವಲ ಸಮುದಾಯ ಅಥವಾ ಜಾತಿಗಳನ್ನು ಸಾಂಕೇತಿಕವಾಗಿ ಬಳಸಲಿಕ್ಕೆ ವೈದಿಕ ಮತ್ತು ಅವೈದಿಕ ಎಂದು ಪದಗಳನ್ನು ಬಳಸಲಾಗಿದೆ.

೧.೨. ಸಂಪ್ರದಾಯ ಆಚರಣೆಗಳು ಸಾಮಾಜಿಕ ಮೌಲ್ಯಗಳಾಗುವ ಬಗೆ

ಸಂಪ್ರದಾಯ ಆಚರಣೆಗಳು 'ಅನಿಷ್ಟ' ನಿವಾರಣೆಯ ಉದ್ದೇಶವನ್ನು ಒಳಗೊಂಡಿವೆ ಎಂದು ಹೇಳಲಾಗುತ್ತದೆ. ಆದರೆ ಇವುಗಳು 'ಹೆಣ್ಣಿಗೆ' ಹಾಗೂ 'ಹೆಣ್ಣಿನ ದೇಹಕ್ಕೆ' ಅಪಾಯ ತಂದೊಡ್ಡಲು ಕಾರಣವಾಗಿವೆ. ಹೀಗಾಗಿ ಇವುಗಳನ್ನು ನಿರ್ಮೂಲನೆಯನ್ನು ಮಾಡುವ ನಿವಾರಣೋಪಾಯದ ದಾರಿಯನ್ನು ಕಂಡುಕೊಳ್ಳಬೇಕಾಗಿರುವುದು ಇಂದು ಅನಿವಾರ್ಯವಾಗಿದೆ. ಏಕೆಂದರೆ ಈ ರೀತಿಯ ಅಂಧಾನುಕರಣೆಯ ಸಂಪ್ರದಾಯ ಆಚರಣೆಗಳು ವೈಜ್ಞಾನಿಕ ಯುಗದಲ್ಲಿ ಮನುಕುಲಕ್ಕೆ ಅಂಟಿಕೊಂಡಿರುವ ಕಳಂಕವಾಗಿವೆ. ಇವುಗಳ ಮುಖಾಂತರ ಹೆಣ್ಣಿನ ಸ್ವತಂತ್ರಕ್ಕೆ ಕಡಿವಾಣ ಹಾಕಿವೆ. ಹಾಗೆ ಜೈವಿಕತೆಯನ್ನು ಆಧಾರಿಸಿ ಅವಳ ಮೇಲೆ 'ಇದು ನಿನ್ನ ಕರ್ತವ್ಯ', 'ಇದು ನಿನ್ನ ಪಾತ್ರ', 'ಇದು ನಿನ್ನ ಸಮಸ್ಯೆ', ಎಂದು ಒತ್ತಿ ಹೇಳುವುದರ ಮೂಲಕ ಹೆಣ್ಣಿಗೆ ಸಾಮಾಜಿಕ ಅಸ್ತಿತ್ವವನ್ನು ಮೊಟಕುಗೊಳಿಸಿ ಆಕೆಯನ್ನು ಗೌಣಳನ್ನಾಗಿ (ಅದೃಶ್ಯಳನ್ನಾಗಿ) ಮಾಡಿ ಕೌಟುಂಬಿಕ ಚೌಕಟ್ಟಿನೊಳಗೆ ಹೆಣ್ಣು ಬಂಧಿಯಾಗಲು ಕಾರಣವಾಗಿವೆ. ಹೀಗಾಗಿ ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುವ ಸಂಪ್ರದಾಯ ಆಚರಣೆಗಳನ್ನು ದಾಖಲಿಸಿ ಮರು ವಿಶ್ಲೇಷಣೆ ಮಾಡಲಾಗಿದೆ. ಹಾಗೆ ಲಿಂಗ ಮತ್ತು ಜಾತಿ ಶ್ರೇಣೀಕರಣಕ್ಕನುಗುಣವಾಗಿ ರೂಪಿತಗೊಂಡು ಬಂದಿರುವ ಸಂಪ್ರದಾಯ ಆಚರಣೆಗಳು ತಾರತಮ್ಯವನ್ನುಂಟು ಮಾಡುತ್ತಿರುವುದರಿಂದ ಇಂದು ಅವುಗಳನ್ನು ಮರುಪರಿಶೀಲಿಸುವ ದೃಷ್ಟಿಯಿಂದ ಅಧ್ಯಯನ ಮಾಡಲಾಗಿದೆ.

ಜೈವಿಕ ಪ್ರಕ್ರಿಯೆಯನ್ನು ಆಧಾರಿಸಿ ನಡೆಯುತ್ತಿರುವ ಸಂಪ್ರದಾಯ ಆಚರಣೆಗಳು ಹೆಣ್ಣಿಗೆ ಕೀಳು ಮನೋಭಾವನೆಯನ್ನು ಉಂಟುಮಾಡುತ್ತಿವೆ. ಜೊತೆಗೆ ಪಾವಿತ್ರ್ಯ ನಿಷ್ಠೆಯನ್ನು ಭದ್ರವಾಗಿ ಹೇರಲ್ಪಡುತ್ತಿವೆ. ಇದೊಂದು ಮಾನವ ಚರಿತ್ರೆಯಲ್ಲಿ ಕಾಣಿಸಿಕೊಂಡ ವಿಚಿತ್ರ ಶೋಷಣೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ 'ಜೈವಿಕ ಸಾಕ್ಷ್ಯ'ವು ಹೆಣ್ಣನ್ನು ಗಂಡಿಗಿಂತ ಭಿನ್ನಳೆಂದು ಹೇಳುತ್ತದೆ ಹೊರತು ಕೀಳೆಂದಲ್ಲ. ಹೆಣ್ಣಿನ ಜೈವಿಕತೆಯನ್ನಾಧರಿಸಿ ಹೆಣ್ಣಿಗೆ ಕಟ್ಟುಪಾಡು, ವಿಧಿ, ನಿಷೇಧಗಳನ್ನು ಹೇರುತ್ತವೆ. ಇವು ಅವಳ ಸ್ವಾಯತ್ತತೆಯನ್ನು ಹಾಗೂ ಆಕೆಯ ಜೈವಿಕ ಶಕ್ತಿಯನ್ನು ಅಪಮೌಲ್ಯಗೊಳಿಸಿ ಅವಳನ್ನು ಅಧೀನಗೊಳಿಸಲು ಕಾರಣವಾಗುತ್ತಿವೆ.

ಈ ಎಲ್ಲ ಸಂಗತಿಗಳು ಹೆಣ್ಣಿನ ಜೈವಿಕತೆಯನ್ನು ಆಧಾರವಾಗಿಟ್ಟುಕೊಂಡೇ ನಡೆಯುತ್ತಿರುವುದರಿಂದ ಇವುಗಳನ್ನು ಬದಲಾಯಿಸಬೇಕಾದ ಅವಶ್ಯಕತೆ ಇದೆ. ಒಂದು ಸಮಾಜದಲ್ಲಿ ಸೃಷ್ಟಿಗೊಳ್ಳುವ ಸಂಪ್ರದಾಯ ಆಚರಣೆಗಳನ್ನು ಮುರಿದು ಕಟ್ಟುವ ಮತ್ತು ಹೆಣ್ಣಿನ ಬದುಕಿಗೆ ಸ್ವಾತಂತ್ರ ಕಲ್ಪಿಸುವ ನೆಲೆಯಲ್ಲಿ ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಹಾಗೆಯೇ ಹೆಣ್ಣಿನ ಜೈವಿಕತೆಯನ್ನು ಮುಂದೊಡ್ಡಿ ಹೆಣ್ಣನ್ನು ನಿರ್ವಚಿಸಿದ ಬಗೆ ಹಾಗೂ ಪುರಷನ ಜೈವಿಕತೆಯನ್ನು ಕೇಂದ್ರವಾಗಿಟ್ಟುಕೊಂಡು ನಡೆದ ನಿರ್ವಚನಗಳೇ ಸಂಪ್ರದಾಯ ಆಚರಣೆಗಳಲ್ಲಿ ಕ್ರಿಯಾಶೀಲವಾಗಿವೆ. ಸ್ತ್ರೀವಾದ/ ಮಹಿಳಾ ಅಧ್ಯಯನವು ಸಮಾಜದಲ್ಲಿ ಸೃಷ್ಟಿಗೊಳಿಸುವ ಲಿಂಗ ತಾರತಮ್ಯವನ್ನು ಮತ್ತು ಹೆಣ್ಣು, ಹೆಣ್ಣಿನ ಜೈವಿಕತೆಯ ಕುರಿತಾಗಿ ತಪ್ಪು ಗ್ರಹಿಕೆಗೆ ಕಾರಣವಾಗುವ ಸಂಗತಿಗಳತ್ತ ಗಮನ ಹರಿಸಿ ಅವನ್ನು ಹೋಗಲಾಡಿಸುವ ಕ್ರಮಗಳನ್ನು ಸೂಚಿಸುತ್ತದೆ. ಸಂಪ್ರದಾಯ ಆಚರಣೆಗಳು ಹೆಣ್ಣಿಗೆ ತೀವ್ರ ಸ್ವರೂಪದ ಸಮಸ್ಯೆಯನ್ನು ತಂದೊಡ್ಡಿದ್ದರಿಂದ ಇವುಗಳ ಕುರಿತಾಗಿ ಗಂಭೀರವಾಗಿ ಚಿಂತಿಸಬೇಕಾಗಿದೆ. ಏಕೆಂದರೆ ಸಂಪ್ರದಾಯ ಎನ್ನುವುದು ಮಾತಿನ ಮೂಲಕ ವ್ಯಕ್ತವಾದರೆ, ಆಚರಣೆ ಎನ್ನುವುದು ಕ್ರಿಯಾ ರೂಪದಲ್ಲಿ ಕಂಡುಬರುತ್ತದೆ. ಅಲ್ಲದೆ ಇವುಗಳು ತೀವ್ರ ಸ್ವರೂಪದ ಸಮಸ್ಯೆಯನ್ನುಂಟು ಮಾಡುತ್ತಿರುವ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಹೀಗಾಗಲೇ ಚಲಾವಣೆಯಲ್ಲಿರುವ ಮತ್ತು ಚಲಾವಣೆ ಗೊಂಡಿರುವವುಗಳನ್ನು ದಾಖಲಿಸಿ ಪುನರ್ ವಿಮರ್ಶಿಸಿ, ಪುನರ್‌ಮೌಲೀಕರಣ ಗೊಳಿಸುವುದು ಅವಶ್ಯಕವಾಗಿದೆ. ಹಾಗೇ ಮಾನವತಾವಾದದ ಹಿನ್ನೆಲೆಯಲ್ಲಿ, ಹೊಸ ಮೌಲ್ಯಗಳನ್ನು ಹುಟ್ಟುಹಾಕಬೇಕಾಗಿದೆ. ಹಾಗೆ ಸಮಾಜದಲ್ಲಿನ ಸಂಪ್ರದಾಯಿಕ ಸಂಗತಿಯನ್ನು ಬದಲಾಯಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸಂಪ್ರದಾಯ ಆಚರಣೆಗಳಲ್ಲಿ ಹೆಣ್ಣಿನ ಜೈವಿಕತೆಯನ್ನು ನೋಡಲಾಗಿದೆ. ಕುರಿತು ಈ ಅಧ್ಯಯನದಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

೧.೨. ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಈ ಕೆಳಕಂಡ ಕೆಲವು ಉದ್ದೇಶಗಳನ್ನು ಒಳಗೊಂಡಿದೆ. ಅವುಗಳು ಈ ಕೆಳಗಿನಂತಿವೆ.

೧. ಸಂಪ್ರದಾಯ ಆಚರಣೆಗಳು ಮತ್ತು ಹೆಣ್ಣಿನ ನಡುವೆ ಕಲ್ಪಿಸಿದ ಸಂಬಂಧವನ್ನು ಗುರುತಿಸುವುದು.

೨. ಸಂಪ್ರದಾಯ ಆಚರಣೆಗಳ ರಾಜಕಾರಣವನ್ನು ಪರಿಶೀಲಿಸುವುದು.

೩. ಹೆಣ್ಣಿನ ಜೈವಿಕ ಸಹಜ ಕ್ರಿಯೆಗಳಾದ ಋತುಮತಿ, ಮುಟ್ಟು, ಗರ್ಭಿಣಿ, ಹೆರಿಗೆ, ಬಾಣಂತನದಂತಹ ಸಂದರ್ಭದಲ್ಲಿ ನಡೆಯುವ ಸಂಪ್ರದಾಯ ಆಚರಣೆಗಳನ್ನು ಸ್ತ್ರೀವಾದಿ ನೆಲೆಯಿಂದ ವಿಶ್ಲೇಷಿಸುವುದು.

೪. ಹೆಣ್ಣಿನ ಜೈವಿಕತೆಗೆ ಸಂಬಂಧಿಸಿದ ಸಂಪ್ರದಾಯ ಆಚರಣೆಗಳ ಹಿಂದಿನ ತಾತ್ವಿಕತೆ ತಿಳಿಯುವುದರ ಮೂಲಕ ಹೆಣ್ಣಿನ ಕುರಿತಾದ ಅರ್ಥ, ನಿರ್ವಚನ ಅದರ ಹಿಂದಿನ ರಾಜಕಾರಣವನ್ನು ಪರಿಶೀಲಿಸುವುದು.

೫. ಸಂಪ್ರದಾಯ ಆಚರಣೆಗಳು ಹೆಣ್ಣಿಗೆ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸಲು ಗುರುತರ ಪಾತ್ರ ನಿರ್ವಹಿಸುತ್ತಿವೆಯೇ ಎನ್ನುವುದರ ಹಿಂದಿನ ರಾಜಕಾರಣವನ್ನು ತಿಳಿಯುವುದು.

೬. ಸಂಪ್ರದಾಯ ಆಚರಣೆಗಳನ್ನು ಮತ್ತು ಲಿಂಗ ಸಂಬಂಧಿ ನೆಲೆಗಳಲ್ಲಿ ಪರಿಶೀಲಿಸುವುದು

೧.೩. ಅಧ್ಯಯನದ ವ್ಯಾಪ್ತಿ

ಕರ್ನಾಟಕದಾದ್ಯಂತ ಕೆಲವು ಸಮುದಾಯಾಧಾರಿತ ಅಧ್ಯಯನಗಳು ನಡೆದಿವೆ ಮತ್ತು ನಡೆಯುತ್ತಿವೆ. ಇಲ್ಲಿ ವೈದಿಕ ಮತ್ತು ಅವೈದಿಕ ಸಮುದಾಯಗಳಲ್ಲಿನ ನಡೆದಿರುವ ಮತ್ತು ನಡೆಯುವ ಸಂಪ್ರದಾಯ ಆಚರಣೆಗಳನ್ನು ದಾಖಲಿಸಿಕೊಂಡು ಅಧ್ಯಯನ ಮಾಡಲಾಗಿದೆ. ಈ ಮಾಹಿತಿಗಳನ್ನು ನನ್ನ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಇದರ ಜೊತೆಯಲ್ಲಿ ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯದ ಮೂಲಕ ಮಾಹಿತಿಯ ಸಂಗ್ರಹಿಸಲಾಗಿದೆ. ಹೀಗೆ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಗಳೊಂದಿಗೆ ಅಧ್ಯಯನ ಕೃತಿಗಳಲ್ಲಿನ ಮಾಹಿತಿಗಳನ್ನು ಆಧಾರವಾಗಿಟ್ಟುಕೊಂಡು ಹೆಣ್ಣಿನ ಜೈವಿಕತೆಯನ್ನು ಸ್ತ್ರೀವಾದಿ ನೆಲೆಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೧.೪. ಅಧ್ಯಯನದ ವಿಧಾನ ಮತ್ತು ವೈದಾನಿಕತೆ

ಕಳೆದ ನಾಲ್ಕು ದಶಕಗಳಿಂದ ಸಾಮಾಜಿಕ ಸಂಶೋಧನೆಯಲ್ಲಿ ಸ್ತೀವಾದಿ ಸಂಶೋದನಾ ವಿಧಾನವು ಹೊಸಪ್ರಕಾರವಾಗಿ ಬೆಳೆಯುತ್ತಿದೆ. ಸಂಪ್ರದಾಯಿಕ ಸಂಶೋಧನೆಯು ಮಹಿಳೆಯರ ಕುರಿತು ಅಧ್ಯಯನ ಮಾಡುವಾಗ ಪೂರ್ಣಸತ್ಯವನ್ನು ಹೊರತರಲು ಸಾಧ್ಯವಿಲ್ಲ ಎನ್ನುವ ಅಭಿಪ್ರಾಯವು ಇದೆ. ಏಕೆಂದರೆ ಮಹಿಳೆಯರು ವಿಭಿನ್ನ ಜಾತಿ, ವರ್ಗ, ಪಂಗಡಕ್ಕೆ ಸೇರಿದ ಕಾರಣದಿಂದಾಗಿ ಮತ್ತು ಈ ಮಹಿಳಾ ಸಮಸ್ಯೆಗಳಿಗೆ ಹಲವಾರು ರೂಪಗಳಿವೆ. ಈ ಸನ್ನಿವೇಶಗಳಲ್ಲಿ ಸ್ತ್ರೀವಾದಿ ಸಂಶೋಧನೆಯು ಎಲ್ಲಾ ಮಹಿಳೆಯರ ಧ್ವನಿಯನ್ನು ಒಳಗೊಳ್ಳಲು ಪ್ರಯತ್ನಿಸುತ್ತದೆ. ಹಾಗೆ ಮಹಿಳೆಯರ ಅನುಭವ, ಅನುಭವಿಸಿರುವ ಸಮಸ್ಯೆಗಳ ಕುರಿತು, ಅವಳಲ್ಲಿ ದಾಖಲೆಗೊಂಡ ಸಮಸ್ಯೆಯನ್ನು ನಿಜಾಂಶದ ಮೂಲಕ ಹೊರತರುವ ಸಾಮರ್ಥ್ಯಗಳ ನಡುವೆ ಸ್ತ್ರೀವಾದಿ ಸಂಶೋಧನೆ ಮುಂದುವರೆದಿದೆ. ಸ್ತ್ರೀವಾದಿ ಸಂಶೋಧಕರು ತಮ್ಮ ಸಂಶೋಧನೆಯ ಉದ್ದೇಶ ಹಾಗೂ ವಿಷಯಕ್ಕೆ ಪೂರಕವಾಗಿ ಒದಗುವ ದಾಖಲೆಗಳಿಗೆ ಅನುಗುಣವಾಗಿ ಸೂಕ್ತವಾದ ವಿಧಾನ ಅಥವಾ ತಂತ್ರಗಳನ್ನು ಉಪಯೋಗಿಸುತ್ತಿದ್ದಾರೆ.

ಅದರಲ್ಲಿ ಕೆಲವರು ಸಮೀಕ್ಷೆಗಳ ಮೂಲಕ ಕೆಲವರು ಸಾಂಖಿಕ ಮಾಹಿತಿಯನ್ನು ಪಡೆಯುವುದರ ಮೂಲಕ, ಗಣಿತ ಹಾಗೂ ಸಂಖ್ಯಾಶಾಸ್ತ್ರದ ವಿಧಾನಗಳ ಮೂಲಕ ಮಾಡಿದರೆ ಇನ್ನು ಕೆಲವರು ಪ್ರಸ್ತುತ ಲಭ್ಯವಿರುವ ಅಥವಾ ದಾಖಲೆಗೊಂಡ ಮಾಹಿತಿ ಹಾಗೂ ನೀತಿಗಳ, ಆಶಯಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆಯಲ್ಲಿ ತೊಡಗಿದ್ದಾರೆ.

ಮತ್ತೊಂದು ಕಡೆ ಕೆಲವರು ಆಳವಾದ ಸಂದರ್ಶನ ಅಥವಾ ಬದುಕಿನ ಅನುಭವಗಳನ್ನು ಕೇಳುತ್ತಾ ಸತ್ಯ ಸಂಗತಿಗಳ ಸಂಶೋಧನೆಯನ್ನು ನಡೆಸಿದ್ದಾರೆ ಮತ್ತು ಇಂದಿಗೂ ನಡೆಸುತ್ತಿದ್ದಾರೆ. ಹೀಗೆ ಹಲವಾರು ವಿಧಾನಗಳ ಮೂಲಕ ಇಂದು ಸ್ತ್ರೀವಾದಿ ಸಂಶೋಧನೆ ನಡೆಯತೊಡಗಿದೆ. ಪ್ರಸ್ತುತ ಅಧ್ಯಯನದಲ್ಲಿ ಈಗಾಗಲೇ ಕರ್ನಾಟಕದಾದ್ಯಂತ ಇರುವ ಹಲವು ಸಮುದಾಯಾಧಾರಿತ ಅದ್ಯಯನಗಳು ನಡೆದಿವೆ. ಇವುಗಳಲ್ಲಿ ದಾಖಲೆಗೊಂಡಿರುವ ಜೀವನಾವರ್ತ ಆಚರಣೆ ಅಥವಾ ಜೈವಿಕತೆಗೆ ಸಂಬಂಧಿಸಿದ ಕ್ರಿಯೆಗಳನ್ನು ಮಾತ್ರ ಎತ್ತಿಕೊಂಡು ಅಧ್ಯಯನ ಮಾಡುತ್ತಿರುವುದರಿಂದ ಪ್ರಸ್ತುತವಿರುವ ಸಂಶೋಧನಾ ವಿಧಾನಗಳನ್ನು ಪುನಃ ರೂಪಿಸಿ ಮಹಿಳೆಯರ ವಿಷಯಗಳನ್ನು ಅಧ್ಯಯನ ಮಾಡಲಾಗಿದೆ. ಹಾಗೆಯೇ ಸ್ತ್ರೀವಾದಿ ಸಂಶೋಧನಾ ವಿಧಾನಗಳನ್ನು ಅನುಸರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಇದರ ಹಿನ್ನೆಲೆಯಲ್ಲಿ ಸಂಶೋಧನಾ ವಿಧಾನಗಳಲ್ಲೊಂದಾದ ಗುಣಾತ್ಮಕ ವಿಧಾನವನ್ನು ಅನುಸರಿಸುತ್ತಾ, ಅನುಷಂಗಿಕ ದತ್ತಾಂಶವನ್ನು ಬಳಸಲಾಗಿದೆ. ಜೊತೆಗೆ ಅಗತ್ಯಕ್ಕೆ ಅನುಗುಣವಾಗಿ ಕ್ಷೇತ್ರಿಯ ದತ್ತಾಂಶಗಳನ್ನು ಉಪಯೋಗಿಸಲಾಗಿದೆ. ಹಾಗೆಯೇ ಇದಕ್ಕೆ ಸ್ತ್ರೀವಾದಿ ದೃಷ್ಟಿಕೋನವನ್ನು ಪ್ರಸ್ತುತಪಡಿಸುವ ಸಂಶೋಧನಾ ವಿಧಾನವನ್ನೇ ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿಗಳ ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ

೧.೫. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ಒಟ್ಟು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳೆಂದರೆ **ಮೊದಲ ಅಧ್ಯಾಯದಲ್ಲಿ** ಸಾಮಾನ್ಯವಾಗಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ವೈಧಾನಿಕತೆ, ಸಮೀಕ್ಷೆ ಮತ್ತು ಮಹತ್ವವನ್ನು ಹೊಂದಿದೆ.

ಎರಡನೇ ಅಧ್ಯಾಯದಲ್ಲಿ ಸಂಪ್ರದಾಯ ಆಚರಣೆಗಳ ಅರ್ಥ, ವ್ಯಾಖ್ಯೆ ಮತ್ತು ಸಂಪ್ರದಾಯ ಆಚರಣೆಗಳು ಹೆಣ್ಣಿನ ಜೈವಿಕತೆಗೆ ವಿಸ್ತರಿಸಿಕೊಂಡ ಬಗೆಯನ್ನು ನೋಡಲಾಗಿದೆ. ನಂತರದಲ್ಲಿ ಮಾತೃ ಆರಾಧನೆಯಲ್ಲಿ ಹೆಣ್ಣಿನ ಜೈವಿಕತೆಯನ್ನು ಪಿತೃಪ್ರಧಾನತೆಗೆ ಅಥವಾ ಪುರುಷ ಪ್ರಧಾನತೆಗೆ ತಕ್ಕಂತೆ ಬಳಸಿಕೊಂಡು ಹೋಗಿದುರ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಧರ್ಮ, ಧರ್ಮಗ್ರಂಥಗಳಲ್ಲಿ ಹೆಣ್ಣಿನ, ಹೆಣ್ಣಿನ ಜೈವಿಕತೆಗೆ ಸಂಬಂಧಪಟ್ಟಂತಹ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗೆಯೇ ಧಾರ್ಮಿಕ

ಸಂಗತಿಗಳು ಸಂಪ್ರದಾಯ ಆಚರಣೆಗಳನ್ನು ರೂಪಿಸಿದ ಬಗೆ ಕುರಿತು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಬಹು ಮುಖ್ಯವಾಗಿ (ವಿವಿಧ) ವೈದಿಕ ಮತ್ತು ಅವೈದಿಕ ಸಮುದಾಯಗಳಲ್ಲಿ ಹೆಣ್ಣಿನ ಜೈವಿಕತೆಯ ಸಂಗತಿಗಳಾದ ಋತುಮತಿ, ಮುಟ್ಟು, ಹೆರಿಗೆ, ಗರ್ಭಿಣಿ, ಬಾಣಂತನದಂತಹ ಪ್ರಕ್ರಿಯೆಗಳನ್ನಾಧಾರಿಸಿದ ಸಂಪ್ರದಾಯ ಆಚರಣೆಗಳನ್ನು ದಾಖಲಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಐದರಲ್ಲಿ ಸಾರ್ವಜನಿಕ ಮತ್ತು ಖಾಸಗಿಯಲ್ಲಿನ ಹೆಣ್ಣಿನ ಜೈವಿಕತೆಯನ್ನಾಧರಿಸಿದ ಸಂಪ್ರದಾಯ ಆಚರಣೆಗಳನ್ನು ದಾಖಲಿಸಿ, ಅವುಗಳು ಹೆಣ್ಣನ್ನು ನಿಯಂತ್ರಿಸುವ, ನಿರ್ದೇಶಿಸುವ ಮತ್ತು ನಿಷ್ಠೆಗೊಳಿಸುವ ಬಗೆಯನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಆರರಲ್ಲಿ ಹೆಣ್ಣಿನ ಜೈವಿಕತೆಯನ್ನು ಆಧರಿಸಿದ ಸಂಪ್ರದಾಯ ಆಚರಣೆಗಳು ಸೃಷ್ಟಿಸುವ ಲಿಂಗಾಧಾರಿತ ಶ್ರಮವಿಭಜನೆ ಕುರಿತು ಸ್ತ್ರೀವಾದಿ ಸಿದ್ಧಾಂತಗಳೊಂದಿಗೆ ಚರ್ಚೆ ಮಾಡಲಾಗಿದೆ.

ಅಧ್ಯಾಯ ಏಳರಲ್ಲಿ ಈ ಮೇಲಿನ ಎಲ್ಲಾ ಸಂಗತಿಗಳಿಂದ ಹೆಣ್ಣು–ಗಂಡಿನ ಮಧ್ಯೆ ಉಂಟಾಗಲು ಮತ್ತು ಉಂಟಾಗಿರುವ ಲಿಂಗಾಧಾರಿತ ಅಸಮಾನತೆ, ಅಧಿಕಾರ ಹಂಚಿಕೆಯಂತಹ ಸಂಗತಿಗಳ ಕುರಿತು ಸ್ತ್ರೀವಾದಿ ದೃಷ್ಟಿಯ ಹಿನ್ನೆಲೆಯಲ್ಲಿ ಈ ಅಧ್ಯಾಯದಲ್ಲಿ ಚರ್ಚೆಮಾಡಲಾಗಿದೆ.

ಅಧ್ಯಾಯ ಎಂಟರಲ್ಲಿ ಫಲಿತದೊಂದಿಗೆ ಸಮರೋಪವನ್ನು ಹೊಂದಿದೆ.

೧.೬. ಅಧ್ಯಯನ ಸಮೀಕ್ಷೆ

ಪ್ರಸ್ತುತ ಅಧ್ಯಯನದಲ್ಲಿ ಎರಡು ರೀತಿಯ ಸಮೀಕ್ಷೆಯನ್ನು ಮಾಡಲಾಗಿದೆ. ಅವುಗಳೆಂದರೆ ಇದುವರೆಗೂ ನಡೆದ ಸಮುದಾಯಾಧಾರಿತ ಅಧ್ಯಯನಗಳನ್ನು ಮತ್ತು ಹೆಣ್ಣಿನ ಜೈವಿಕತೆಯ ಸಾಮರ್ಥವನ್ನು ಸ್ತ್ರೀವಾದಿ ನೆಲೆಯಿಂದ ನಡೆದ ಅಧ್ಯಯನಗಳನ್ನು ಆಯ್ದುಕೊಂಡು ಅಧ್ಯಯನ ಮಾಡಲಾಗಿದೆ.

ಮೊದಲಿಗೆ ಕರ್ನಾಟಕದಲ್ಲಿ ವಿವಿಧ, ಜಾತಿ, ಜನಾಂಗ, ವರ್ಗ, ಪಂಗಡ, ಬುಡಕಟ್ಟು ಕುರಿತಂತೆ ಸಮುದಾಯಾಧಾರಿತ ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಬಹುಮುಖ್ಯ ಹೆಣ್ಣಿನ ಜೈವಿಕತೆಗೆ ಸಂಬಂಧಿಸಿದಂತೆ ಹಾಗೂ ಕೆಲವು ಜಾತಿಗನುಗುಣವಾಗಿ ನಡೆದುಕೊಂಡು ಬಂದಿರುವ ಸಂಪ್ರದಾಯ ಆಚರಣೆಗಳ ಕುರಿತಾಗಿ ಅಧ್ಯಯನ ಮಾಡಿರುವ ಸಂಶೋಧನಾ, ಕೃತಿ, ಲೇಖನ ಮಾಲೆ, ಸಂಚಿಕೆ ಮುಂತಾದ ಆಕರ ಸಾಮಗ್ರಿಗಳು ಇಲ್ಲಿ ಬಳಕೆಯಾಗಿವೆ. ಅವುಗಳ ಅಧ್ಯಯನ ಸಮೀಕ್ಷೆ ನಡೆಸಲಾಗಿದೆ. ಅವುಗಳು ಈ ರೀತಿಯಾಗಿ ದೊರಯುತ್ತವೆ.

ಆರ್.ಬಿ. ಕುಮಾರ್‌ರವರ 'ಮುದ್ದೆ ಕಂಬಾರರು', ಎಂ.ಗುರುಲಿಂಗಯ್ಯ, ವಿ. ನಾಗಪ್ಪನವರ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆಯಾಗಿರುವ 'ಕಾಡುಗೊಲ್ಲ', ಅಭಯ್‌ಕುಮಾರ್ ಕೌಕ್ರಾಡಿಯವರ 'ಮುಗೇರರು', ಪಿ.ಕೆ. ಕಂಡೋಭರವರ 'ಸುಡುಗಾಡು ಸಿದ್ದರ ಸಂಸ್ಕೃತಿ', ಅಂಬಳಿಕೆ ಹಿರಿಯಣ್ಣ ರವರ 'ಮಲೆನಾಡು ವೈಷ್ಣವ ವಕ್ಕಲಿಗರ ಸಂಸ್ಕೃತಿ', ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆಯಿಂದ ಹೊರಬಂದಿರುವ (ಸಂ) ಜಿ, ವಿ. ಬಾಗ್ದೆರವರ 'ಕಂಜಾರ ಬಾಟ', ಬಸವರಾಜ್ ಎಸ್. ಹಿರೇಮಠ್ ಅಂಜಲಿ ಸಾಳಂಕಿ, (ಸಂ) 'ಘೀಸಾಡಿ', ಜಾನಕಲ್ ರಾಜಣ್ಣ ಎಂ, (ಸಂ) 'ದಕ್ಕಲಿಗ', ಕರೇಶೇಟ್ಟ ರುದ್ರಪ್ಪರವರ 'ಮ್ಯಾಸಬೇಡ ನಾಯಕರು ಜನಾಂಗಿಯ ಅಧ್ಯಯನ', ಉಪಸಂಸ್ಕೃತಿ ಅಧ್ಯಯನ ಮೂಲಕ ಹೊರಬಂದಿರುವ ಹಲವು ಬುಡಕಟ್ಟು ಮತ್ತು ಅಲೆಮಾರಿ, ಅರೆಅಲೆಮಾರಿ ಜನಾಂಗೀಯ ವಿವಿಧ ಸಮುದಾಯಾಧಾರಿತ ಅಧ್ಯಯನಗಳಾದ ಚಕ್ಕರೆ ಶಿವಶಂಕರ (ಸಂ) 'ಗೊರವರ ಸಂಸ್ಕೃತಿ', ಚಂದ್ರು ಕಾಳೇನ ಹಳ್ಳಿಯವರ 'ಸೋಲಿಗರ ಸಂಸ್ಕೃತಿ', ಕೊಟ್ಟಗಾನ ಹಳ್ಳಿ ರಾಮಯ್ಯರವರ 'ಸಿಂಧು ಮಾದಿಗರ ಸಂಸ್ಕೃತಿ', ಲಕ್ಷ್ಮೀಪತಿ ಕೋಲಾರರವರ 'ಮ್ಯಾಸ್ತ್ರೀಕ್‌ರವರ ಸಂಸ್ಕೃತಿ', ಬಾಲಗುರುಮೂರ್ತಿ.ಪ್ರತಾಪ್.ರಾ. ಬಹುರೂಪಿರವರ 'ಬುಡುಗ ಜಂಗಮ', ಕೃಷ್ಣಮೂರ್ತಿ ಹನ್ನೂರುರವರ 'ಮ್ಯಾಸಬೇಡರ ಸಂಸ್ಕೃತಿ', ದೇವೇಂದ್ರಕುಮಾರ್. ಸಿ. ಅಕಾರಿಯವರ 'ದೊಂಬರ ಸಂಸ್ಕೃತಿ', ಪಿ.ಎನ್. ಹರೀಶ್‌ರವರ 'ಎರವರ ಸಂಸ್ಕೃತಿ', ಗೀತಾ ನಾಗಭೂಷಣ್‌ರವರ 'ದುರುಗಮುರುಗಿಯರ ಸಂಸ್ಕೃತಿ', ಬಿ. ಸಿ. ದಾದಾಫೀರ್‌ರವರ 'ಪಿಂಜಾರರ ಸಂಸ್ಕೃತಿ', ಹೀಗೆ ಕರ್ನಾಟಕದಲ್ಲಿ ವಿವಿಧ ಸಮುದಾಯಗಳ ಬಗ್ಗೆ ಅಧ್ಯಯನ ನಡೆದಿರುವ ಪಟ್ಟಿ ಸಾಗುತ್ತದೆ. ಇವುಗಳೆಲ್ಲವೂ ಸಮುದಾಯಾಧಾರಿತ ಅಧ್ಯಯನಗಳಾಗಿವೆ. ಹಾಗೆಯೇ ಇವುಗಳಲ್ಲಿ ಹೆಣ್ಣಿನ ಜೈವಿಕತೆಗೆ ಸಂಬಂಧಪಟ್ಟಂತೆ ಜೀವನಾವರ್ತ ಕುರಿತಾದ ನಂಬಿಕೆ ಆಚರಣೆ ವಿಧಿ ನಿಷೇದಗಳ ಕುರಿತಂತೆ ಅಧ್ಯಯನ ಮಾಡಿರುವುದು ತಿಳಿಸುತ್ತವೆ.

ಹೆಣ್ಣಿನ ಜೈವಿಕತೆ ಸಾಮರ್ಥ್ಯ ಮತ್ತು ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನಗಳ ಹಿನ್ನಲೆಯಲ್ಲಿ ಅಧ್ಯಯನ ಮಾಡಿರುವ ಪುಸ್ತಕ, ಕೃತಿ, ಲೇಖನಗಳು ದೊರೆಯುತ್ತವೆ. ಅವುಗಳಲ್ಲಿ ಜೋತ್ಸ್ನ ಕಾಮತ್‌ರವರ 'ಮಹಿಳೆ ಒಂದು ಅಧ್ಯಯನ', ಈ ಕೃತಿಯಲ್ಲಿ ಹಿಂದಿನ ಮತ್ತು ಇಂದಿನ ಹೆಣ್ಣಿಗೆ ಕಂಡಿರುವ ಕಾಣಲಾಗಿರುವ ಹಾಗೂ ಹೆಣ್ಣನ್ನು ದೈವೀಕರಿಸುತ್ತಾ ವೈಭವೀಕರಣದ ಅಡಿಯಲ್ಲಿಟ್ಟು ಶೋಷಣೆಗೆ ಒಳಪಡಿಸುತ್ತಾ ಹೆಣ್ಣನ್ನು ಬಳಸಿಕೊಂಡಿರುವುದರ ಬಗ್ಗೆ ಬೆಳಕು ಚೆಲ್ಲುತ್ತದೆ. ಇದರಲ್ಲಿ ಬಹುಮುಖ್ಯವಾಗಿ 'ಲಜ್ಜಾಗೌರಿ', ಜೀವೋತ್ಪತ್ತಿಯ ಪ್ರತೀಕ', 'ಪ್ರಾಚೀನ ಸ್ತ್ರೀ ಶಿಕ್ಷಣ', ಮಿತಾಕ್ಷರದಲ್ಲಿ ಮಹಿಳೆ 'ಮಹಾಸತಿ ಅಳಿದುಳಿದ ರೂಪ', ಹಾಗೂ 'ಇರಾವತಿ ಕರ್ವೆ', 'ಯುಗಾಂತ'. ಮುಂತಾದ ಲೇಖನಗಳು ಹೆಣ್ಣಿಗೆ ಇದ್ದ ಸ್ಥಾನಮಾನ ಸೂಚಿಸುವುದರ ಜೊತೆಗೆ ಪ್ರಸ್ತುತ ಸಂದರ್ಭದವರೆಗೆ ಹೆಣ್ಣನ್ನು ಕಾಣುವಂತಹ ಸ್ಥಿತಿಯ ಕುರಿತು ಬೆಳಕು ಚೆಲ್ಲುತ್ತದೆ.

ಹೆಚ್. ಎಸ್. ಶ್ರೀಮತಿಯವರ 'ಹೆಣ್ಣು-ಹೆಂಗಸು', ಈ ಕೃತಿ ಹೆಣ್ಣು ಬದುಕಿನ ಬಗೆಗಿನ ಸಂಗತಿಗಳನ್ನು ಅಧ್ಯಯನ ಮಾಡುವುದರೊಂದಿಗೆ ಹೆಣ್ಣಿನ ಸಾಮಾಜಿಕ ಸ್ಥಿತಿಯನ್ನು ತಿಳಿಸುತ್ತದೆ. ಪ್ರಮುಖವಾಗಿ ಈ ಕೃತಿಯಲ್ಲಿ 'ಸ್ತ್ರೀ-ಪುರುಷ ಸಂಬಂಧಗಳು', ಎನ್ನುವ ಲೇಖನದಲ್ಲಿ ಸಮಾಜದಲ್ಲಿ ಉಂಟಾಗಿರುವ ಲಿಂಗ ತಾರತಮ್ಯ, ಅಸಮಾನತೆಯ ಅಂಶಗಳನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಹಾಗೂ ಸ್ತ್ರೀವಾದವು ಒಳಗೊಂಡಿರುವ ಚಿಂತನೆಗಳ ಕುರಿತು ಬೆಳಕು ಚೆಲ್ಲುತ್ತದೆ. ಹಾಗೆಯೇ 'ಸ್ತ್ರೀವಾದಿ ಚಿಂತನೆ ಕೆಲವು ಪ್ರಶ್ನೆಗಳು, ಸಂದೇಹಗಳು', 'ಸಾಮಾಜಿಕ ಚಿಂತನಗೆಳಲ್ಲಿ ಹೆಣ್ಣು', 'ಹೆಣ್ಣಿನ ಭಾಷೆ', 'ಹೆಣ್ಣು ಮತ್ತು ಅವಳ ಸಾಮರ್ಥ್ಯ ಮಾಪನ', 'ಹೆಣ್ಣಿನ ಸಂವೇಧನೆ ಬಾಯಾರಿದ ಕುಡಿ', 'ಹೆಣ್ಣಿನ ಸ್ವಭಾವವನ್ನು ಕುರಿತು ವೈಜ್ಞಾನಿಕ ಅಧ್ಯಯನಗಳು ಹೆಸರಿಲ್ಲದ ಒಂದು ಸಮಸ್ಯೆ ಅಥವಾ ಹೌಸ್ ವೈಫ್ ಸಿಂಡ್ರೂಮ್', 'ಭಾರತೀಯ ಮಹಿಳೆಯರ ಬದಲಾಗುತ್ತಿರುವ ಸ್ಥಿತಿಗಳು', 'ಮಲೆ ಮೂಡಿ ಬಂದರೆ ಹೆಣ್ಣೆಂಬರು', ಈ ಲೇಖನಗಳಲ್ಲಿ ಬಹುಮುಖ್ಯವಾಗಿ ಸ್ತ್ರೀವಾದ ಚಿಂತನೆಯಿಂದ ಪ್ರಾರಂಭವಾಗಿ ಹೆಣ್ಣು ಬದುಕಿನ ಸುತ್ತ ಹೆಣೆದು ಕೊಂಡಿರುವ ಸಾಮಾಜಿಕ ಸಂಬಂಧಗಳ ಹಿನ್ನಲೆಯನ್ನು ತಿಳಿಯಪಡಿಸುತ್ತಾ, ಹೆಣ್ಣಿನ ಅಭಿವ್ಯಕ್ತಿ ಸಮಾಜ ವ್ಯವಸ್ಥೆಯಲ್ಲಿ ಮೌನವಾಗಿರುವ ಸಂಗತಿಗಳನ್ನು ಹೇಳುತ್ತವೆ. ಮತ್ತು ಹೆಣ್ಣಿನ ಕುರಿತಾಗಿ ಜೀವ ವಿಜ್ಞಾನ ಮತ್ತು ಮನೋವಿಜ್ಞಾನಗಳು ನಡೆಸಿರುವ ಸಂಪ್ರದಾಯಿಕ ಚಿಂತನೆಗಳನ್ನು ಗಂಭೀರವಾಗಿ ವಿಶ್ಲೇಷಣೆ ಮಾಡಿ, ಸ್ತ್ರೀವಾದಿ ಹಿನ್ನಲೆಯಿಂದ ಪ್ರಶ್ನಿಸಿರುವ ಸಂಗತಿಗಳು ಈ ಲೇಖನಲ್ಲಿ ದೊರೆಯುತ್ತವೆ. ಏಕೆಂದರೆ ಸಾಂಪ್ರದಾಯಿಕ ಚಿಂತನೆಯನ್ನು ಮುರಿಯಬೇಕಾದ ಸಂಗತಿಯನ್ನು ಒತ್ತಿ ಹೇಳುತ್ತವೆ ಮತ್ತು ಹೆಣ್ಣಿನ ಸಾಮರ್ಥ್ಯ, ಹೆಣ್ಣಿನ ಸ್ಥಾನ ಮಾನದ ಕಡೆ ಗಮನ ಹರಿಸಿರುವುದು ಈ ಲೇಖನಗಳಲ್ಲಿ ದೊರೆಯುತ್ತದೆ.

ಸರೋಜರವರ 'ಮಹಿಳೆ ಮತ್ತು ಆರೋಗ್ಯ: ಮಹಿಳಾ ಅಧ್ಯಯನಗಳ ದೃಷ್ಟಿಯಲ್ಲಿ', ಈ ಕೃತಿಯಲ್ಲಿ ಮಹಿಳೆಯ ಆರೋಗ್ಯ ಕುರಿತಂತೆ ಮೌಲಿಕ ಹಾಗೂ ವೈವಿಧ್ಯಮಯ ಸಾಮಗ್ರಿಗಳನ್ನು ಕಲೆ ಹಾಕಿ ಮಹಿಳಾ ದೃಷ್ಟಿಕೋನದಿಂದ ಮಹಿಳಾ ಸಮಸ್ಯೆಯನ್ನು ಶೋಧನೆ ಮಾಡಿದ ಕೃತಿಯಾಗಿದೆ. ಈ ಕೃತಿಯಲ್ಲಿ ಮಹಿಳೆಯರ ಕೌಟುಂಬಿಕ, ಸಾಮಾಜಿಕ, ಸಮುದಾಯಿಕ ಬದುಕಿನ ಒಳಗೆ ಎಡೆ ಎತ್ತುತ್ತಿರುವ ಆರೋಗ್ಯ (ಮಹಿಳಾ) ಸಮಸ್ಯೆಗಳನ್ನು ಮತ್ತು ಆರೋಗ್ಯ ಸಮಸ್ಯೆಗಳಿಗೆ ಕಾರಣವನ್ನು ಹುಡುಕಿರುವುದು ಈ ಕೃತಿಯಲ್ಲಿ ಕಂಡುಬರುತ್ತದೆ. ಭಾರತೀಯ ಸ್ತ್ರೀ ಸಂಖ್ಯೆ ಆಹಾರ ಪೋಷಣೆ, ಮಹಿಳಾ ಆರೋಗ್ಯ ಪ್ರಜನನ, ಆರೋಗ್ಯ ವಿಶ್ವ ಮಹಿಳಾ ಆರೋಗ್ಯ ಚಳುವಳಿಯ ಕಾಳಜಿಗಳು ಕುರಿತಾಗಿ ಲೇಖನಗಳು ಇದರಲ್ಲಿ ದೊರೆಯುತ್ತವೆ. ಬಹುಮುಖ್ಯವಾಗಿ ಹೆಣ್ಣಿನ ಆರೋಗ್ಯದ ಕುರಿತಾಗಿ ಸಮಸ್ಯೆಯನ್ನು ತಿಳಿಸುವುದರ ಜೊತೆಗೆ ಮಹಿಳೆಯರ ಅನಾರೋಗ್ಯಕ್ಕೆ ಕಾರಣವನ್ನು

ತಿಳಿಸುತ್ತದೆ. ಹಾಗೆಯೇ ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಕಾರಣಗಳನ್ನು ಸ್ತ್ರೀಯರ ಅನುಭವಾತ್ಮಕ ನೆಲೆಯಿಂದ ಪರಾಮರ್ಶಿಸಿರುವುದು ದೊರೆಯುತ್ತದೆ. ಉಷಾರವರ 'ಮಹಿಳೆ ಮತ್ತು ಜಾತಿ: ಒಂದು ಸೈದ್ಧಾಂತಿಕ ಗ್ರಹಿಕೆ' ಎನ್ನುವ ಪುಸ್ತಕದಲ್ಲಿ ಜಾತಿ ಮತ್ತು ಮಹಿಳೆಯ ಸಂಬಂಧಗಳನ್ನು ಚರ್ಚಿಸಿರುವುದು ಇದರಲ್ಲಿ ದೊರೆಯುತ್ತದೆ. ಹಾಗೆಯೇ ಭಾರತೀಯ ಚಿಂತನಾಕ್ರಮದಲ್ಲಿ ಜಾತಿ ಮತ್ತು ಮಹಿಳಾ ಪ್ರಶ್ನೆಗಳ ಗ್ರಹಿಕೆ ಸಮಕಾಲೀನ ಸಮಾಜದಲ್ಲಿನ ನವ ಪಿತೃ ಪ್ರಧಾನತೆ ಮತ್ತು ನವ ಜಾತೀಯತೆ ಎನ್ನುವ ಲೇಖನದಲ್ಲಿ ಹೆಣ್ಣಿಗೆ ತಂದೊಡ್ಡಿರುವ ಶೋಷಣೆಯನ್ನು ಜಾತಿಯ ಮುಖಾಂತರ ವಿವರಿಸಿರುವುದು ದೊರೆಯುತ್ತದೆ. ಹೆಚ್.ಎಸ್. ಶ್ರೀಮತಿಯವರ 'ಸ್ತ್ರೀವಾದ' ಈ ಕೃತಿಯಲ್ಲಿ ಹೆಣ್ಣು ಎಂದರೆ ಯಾರು? ಅಥವಾ ಏನು? ಲಿಂಗ ತಾರತಮ್ಯದ ನೆಲೆಗಳು ಲಿಂಗ ತಾರತಮ್ಯ ಸ್ವರೂಪ, ವಿಮೋಚನೆಗಾಗಿ ಸ್ತ್ರೀವಾದಿ ಹೋರಾಟ ಎನ್ನುವ ಲೇಖನಗಳು ಸಮಾಜ ವ್ಯವಸ್ಥೆಯಲ್ಲಿನ ಪುರುಷ ಪ್ರಧಾನತೆಯು ಹೆಣ್ಣನ್ನು ಕಾಣಲಾಗುತ್ತಿರುವ ಸ್ಥಿತಿ ಮತ್ತು ಹೆಣ್ಣಿಗೆ ಉಂಟು ಮಾಡುತ್ತಿರುವ ಅಸಮಾನತೆ ಮತ್ತು ತಾರತಮ್ಯತೆಗೆ ಸ್ತ್ರೀವಾದಿಯು ನೀಡುವ ಚಿಂತನೆಗಳನ್ನು ಹೇಳಿರುವುದು ಈ ಕೃತಿಯಲ್ಲಿ ದೊರೆಯುತ್ತದೆ.

ಬಿ.ಎನ್. ಸುಮಿತ್ರಬಾಯಿಯವರ 'ಸ್ತ್ರೀವಾದ', ಈ ಕೃತಿಯಲ್ಲಿ ಕಳೆದ ದಶಕಗಳಿಂದ ಮೂಡಿ ಬರುತ್ತಿರುವ ಮತ್ತು ಮೂಡಿ ಬಂದಿರುವ ಸಾಹಿತ್ಯದಲ್ಲಿನ ತಾರತಮ್ಯದ ನೆಲೆಗಳನ್ನು ಗುರುತಿಸುತ್ತಾ ಪುರುಷ ಸೃಷ್ಟಿಸಿದ ಮೌಲ್ಯಗಳಿಗೆ ಪ್ರತಿರೋದ ವ್ಯಕ್ತಪಡಿಸುವ ಚಿಂತನೆಗಳು ಈ ಕೃತಿಯಲ್ಲಿ ದೊರೆಯುತ್ತದೆ. ಬಹುಮುಖ್ಯವಾಗಿ ಪಾಶ್ಚೀಮಾತ್ಯ ಸ್ತ್ರೀವಾದದ ವಿವಿಧ ಮೊಗ್ಗಲುಗಳು, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ಮತ್ತು ಅದರ ವಿವಿಧ ಪಂಥಗಳು, ಸ್ತ್ರೀವಾದ ಮುಖ್ಯ ತಾತ್ವಿಕ ಘಟಕಗಳು ಮತ್ತು ಅವುಗಳ ಇಂದಿನ ಪ್ರಸ್ತುತತೆ ಕನ್ನಡ ಕರ್ನಾಟಕ ಸಂದರ್ಭ ಮತ್ತು ಸ್ತ್ರೀವಾದ ತಾತ್ವಿಕತೆ ಮಹಿಳಾ ಸಾಹಿತ್ಯ ಸ್ವಂತ ಪರಂಪರೆ, ಸ್ವಂತ ಅಭಿವ್ಯಕ್ತಿ ಈ ಲೇಖನಗಳಲ್ಲಿ ಸ್ತ್ರೀವಾದದ ಚಿಂತನೆಗಳು ಸಾಹಿತ್ಯದಲ್ಲಿನ ಪುರುಷ ಪರವಾದ ಸಾಹಿತ್ಯ ರಚನೆಯನ್ನು ಒಡೆದು ಕಟ್ಟುವ ಕಡೆ ಬೆಳಕು ಚೆಲ್ಲುತ್ತದೆ. ಹೆಚ್.ಎಸ್.ಶ್ರೀಮತಿಯವರ 'ಗರ್ಭಾಶಯ ಮಹಿಳೆ ಶಕ್ತಿ ಕೇಂದ್ರ' ಈ ಕಿರು ಪುಸ್ತಕದಲ್ಲಿ ಹೆಣ್ಣಿನ ಜೈವಿಕತೆ ಮಹತ್ವವನ್ನು ತಿಳಿಸಿರುವುದು ದೊರೆಯುತ್ತದೆ. ಪಿತೃ ಪ್ರಧಾನ ಸಮಾಜದ ವ್ಯವಸ್ಥೆಯಲ್ಲಿನ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನಿಸುವ ಮತ್ತು ಸ್ತ್ರೀವಾದ ಚಿಂತನೆಗಳನ್ನು ಪ್ರಸ್ತುತ ಪಡಿಸುವ ಕೃತಿಗಳು ಕೂಡ ದೊರೆಯುತ್ತವೆ. ವಿಜಯಶ್ರೀ ಸಬರದ್‌ರವರ 'ಮಹಿಳೆ–ಶೋಷಣೆ ಸವಾಲುಗಳು', ಚಂದ್ರಮತಿ ಸೊಂದರವರ 'ಚಿಪ್ಪೊಡೆದ ಮೌನ: ಸ್ತ್ರೀವಾದ ವಿಮರ್ಶೆ, ಆರ್.ಇಂದಿರಾರವರ 'ಮಹಿಳೆ ಸಮಾಜ ಮತ್ತು ಸಂಸ್ಕೃತಿ', ಬಿ.ಆರ್.ಅಂಬೇಡ್ಕರ್ ಕನ್ನಡಕ್ಕೆ ಮಾ. ನ. ಜವರಯ್ಯರವರ 'ಜಾತಿ ಸತಿ ಮತ್ತು ಮಹಿಳೆ', ಗಾಯಿತ್ರಿ ನವಾಡರವರ 'ವಿರಚನೆ',

ಮೈತ್ರೇಯಿ ಮುಖ್ಯೋಪಾಧ್ಯಾಯ ಕನ್ನಡಕ್ಕೆ ವೈದೇಹಿ 'ಬೆಳ್ಳಿಯ ಸಂಕೋಲೆಗಳು' ಇದರಲ್ಲಿನ ಲೇಖನಗಳಾದ ಸಂಸ್ಕೃತಿ ಮತ್ತು ಪರಂಪರೆ ಅಗೋಚರ ಶಕ್ತಿ, ಆರ್.ಸುನಂದಮ್ಮರವರ 'ಮಹಿಳಾ ಸಂಸ್ಕೃತಿ', ಹಾಲತಿ ಸೋಮೇಶ್ವರರವರ 'ಮಹಿಳಾ ಚಳುವಳಿ (ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನಲೆ) ವಾಗೀಶ್ವರೀ ಶಾಸ್ತ್ರೀಯವರ 'ಹಿಂದು ಸ್ತ್ರೀ ಚಿತೆಯಿಂದ ಚಿಂತೆಗೆ',

ಅನುಸೂಯ ಕಾಂಬ್ಳೆ (ಸಂ) ವಿಚಾರ ಸಾಹಿತ್ಯ ಮತ್ತು ಹೆಣ್ಣು, ಶೈಲಜಾ ಹಿರೇಮಠ್‌ರವರ 'ಸ್ತ್ರೀಕಥನ' ಮತ್ತು 'ಮಾತೃ ಪ್ರಧಾನ ಪರಿಕಲ್ಪನೆ'', ಸಿಮಂತಿನಿ ನಿರಂಜನ, ತೇಜಸ್ವಿನಿ ನಿರಂಜನ (ಸಂ) 'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ', ಕಮಲಾಹಂಪನರವರ 'ಬೊಗಸೆ (ಮಹಿಳೆಯ ಸುತ್ತಮುತ್ತ)'ದಲ್ಲಿನ 'ಚರಿತ್ರೆ-ಸಂಸ್ಕೃತಿ-ಸಾಹಿತ್ಯ', 'ಸ್ತ್ರೀ-ಹೆಣ್ಣು ಹಿರಿಮೆಯ ಸಂಕೇತ'' ಎನ್ನುವ ಲೇಖನಗಳು ಶಾರದ ಶ್ಯಾಮಣ್ಣ ರವರ ' ಭಾರತೀಯ ಮಹಿಳೆ (ಪೌರಾಣಿಕ ಹಿನ್ನಲೆಯಲ್ಲಿ ತೌಲನಿಕ ವಿಮರ್ಶೆ)'ದಲ್ಲಿನ ಲೇಖನ 'ಪಾತಿವ್ರತ್ಯೆ ಪರಿಕಲ್ಪನೆ', 'ಗಂಡಸರ ಕುಚೇಷ್ಟೆ', ಭಾಗ ೨ ರಲ್ಲಿ 'ಸ್ತ್ರೀ ಸಮಾಜ ಮತ್ತು ಪುರುಷರೊಡನೆ ಸಂಬಂಧ' ಸ್ತ್ರೀ ಪರ ಚಿಂತನೆಗಳನೊಳಗೊಂಡ ಲೇಖನಗಳು ಈ ಕೃತಿಯಲ್ಲಿ ದೊರೆಯುತ್ತದೆ. ಆರ್.ಇಂದಿರಾರವರ 'ಸ್ತ್ರೀವಾದಿ ದಿಕ್ಸೂಚಿ', ಸಾ.ರಾ. ಅಬುಬೂಕರ್‌ರವರ 'ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ', 'ಹೆಂಗಸರ ಹಕ್ಕಿನ ಸಂಘದಿಂದ ವಿಭಿನ್ನ ನೆಲೆಗಳು ವಿಭಿನ್ನ ರಾಜಕೀಯ ಜಂಡರ್ ಹಾಗೂ ಅನನ್ಯತೆಗಳು' ಎನ್ನುವ ವಿಚಾರ ಸಂಕೀರರ್ಣದಲ್ಲಿನ ಸಂಶೋಧನಾ ಪ್ರಬಂಧಗಳು ಸ್ತ್ರೀ ಪರವಾದ ಮತ್ತು ಪಿತೃ ಪ್ರಧಾನ ಸಮಾಜವು ಹೆಣ್ಣಿಗೆ ಹಾಕುವ ನಿಯಂತ್ರಣ ನಿರ್ಬಂಧ ನಿರ್ದೇಶನದಂತಹ ಸಂಗತಿಗಳನ್ನು ಒಡೆದು ಕೊಟ್ಟುವ ಹಾಗೂ ಸ್ತ್ರೀಪರ ಚಿಂತನೆಗಳನ್ನು ಪ್ರಸ್ತುತಪಡಿಸುವ ಬಹುತೇಕ ಕೃತಿಗಳು ಕಂಡುಬರುತ್ತವೆ. ಹೀಗೆ ಅಧ್ಯಯನಕ್ಕೆ ತಕ್ಕಂತೆ ಅಧ್ಯಯನ ಸಮೀಕ್ಷೆಯನ್ನು ಮಾಡಲಾಗಿದೆ.

೧.೭. ಅಧ್ಯಯನದ ಮಹತ್ವ

ನಿಸರ್ಗದ ಶಕ್ತಿಯಾದ ನೆಲ, ಜಲ, ಗಾಳಿ ಬೆಳಕು ಬೆಂಕಿ ಮುಂತಾದ ನೈಸರ್ಗಿಕ ಶಕ್ತಿಯು ದೈವಿಕವಾಗಿ ಆಚರಣೆಗೆ ಒಳಪಟ್ಟಿವೆ. ಹಾಗೆಯೇ ಇವು ಧರ್ಮ, ಸಂಸ್ಕೃತಿ, ಆಚಾರ-ವಿಚಾರ, ನಂಬಿಕೆಗಳಿಗೆ ಕಾರಣವಾಗಿವೆ. ಆದರೆ ಇವುಗಳು ನಿಸರ್ಗದ ಶಕ್ತಿಗಳೇ ಹೊರತು. ಯಾವುದೇ ಲಿಂಗ ತಾರತಮ್ಯ ಅಸಮಾನತೆ ಉಂಟುಮಾಡುವಂತಹವುಗಳಲ್ಲ. ಅದರಂತೆ ಹೆಣ್ಣಿನ ಜೈವಿಕ ಸಹಜ ಕ್ರಿಯೆಯು ಯಾವುದೇ ತಾರತಮ್ಯ ಮಾಡುವಂತದಲ್ಲ, ಆದರೆ ಇಲ್ಲಿ ಹೆಣ್ಣಿನ ಜೈವಿಕ ಸಹಜ ಕ್ರಿಯೆಯನ್ನು ಆಧರಿಸಿ ನಡೆಯುವ ಸಂಪ್ರದಾಯ ಆಚರಣೆಗಳು ಭವಿಷ್ಯದ ಸಮಾಜಕ್ಕೆ ತಕ್ಕುದಾದವಲ್ಲ. ಮತ್ತು ಲಿಂಗ ಸಮಾನತೆ ಸಮಾಜದಲ್ಲಿ ಬೇಕಾಗಿರುವಂತದ್ದು, ಹಾಗಾಗಿ ಲಿಂಗಬೇಧ ಹಾಗೂ ಒತ್ತಾಯ, ಹಿಂಸೆ ಶೋಷಣೆಯಂತಹ

ಸಂಗತಿಗಳ ವಿರುದ್ಧದ ಆಲೋಚನೆಗಳನ್ನು ಮಾಡಬೇಕಾಗಿದೆ. ಈ ಹಿನ್ನೆಲೆಯಿಂದ ಸಂಪ್ರದಾಯ ಆಚರಣೆಗಳು ಹೆಣ್ಣಿನ ಜೈವಿಕತೆಯನ್ನು ಆಧಾರವಾಗಿ ಇಟ್ಟುಕೊಂಡು ತಾರತಮ್ಯಕ್ಕೆ ಒಳಪಡಿಸಿರುವ ಸಂಗತಿಗಳನ್ನು ಅಧ್ಯಯನಕ್ಕೆ ಒಳಪಡಿಸಿ ಸೂಕ್ತ ಪರಿಹಾರಗಳನ್ನು ರೂಪಿಸಬೇಕಾಗಿದೆ. ಸಮಾಜದ ಅನೇಕ ಅನಿಷ್ಟ ಸಂಪ್ರದಾಯ ಆಚರಣೆಗಳನ್ನು ಕಿತ್ತು ಹಾಕಲು ಪ್ರಯತ್ನದಲ್ಲಿ ಇಂತಹ ಶೈಕ್ಷಣಿಕ ಹಾಗೂ ಬೌದ್ಧಿಕ ಯತ್ನಗಳು ಸಾಲಿನಲ್ಲಿ ಮಹತ್ವದಾಗುತ್ತದೆ.

ಪೂರ್ವಗ್ರಹಗಳನ್ನು ಮೀರಲು ಇಂತಹ ಅಧ್ಯಯನಗಳಿಂದ ಸಾಧ್ಯ. ಗಂಡು-ಹೆಣ್ಣಿನಲ್ಲಿ ಸಮಾನ ಜೀವನ ಕ್ರಮವನ್ನು ರೂಪಿಸಿಬೇಕಾದ ಹೊತ್ತಿನಲ್ಲಿ ಲಿಂಗ ಶೋಷಣೆಯ ಬಲೆಯನ್ನು ಕಿತ್ತಿ ಹಾಕಬೇಕು. ಅಂತಹ ಯತ್ನಕ್ಕೆ ಈ ಬಗೆಯ ಅಧ್ಯಯನಗಳು ಸಹಕಾರಿಯಾಗುತ್ತವೆ. ಅಭಿವೃದ್ಧಿ, ಪ್ರಗತಿ, ವಿಕಾಸ ಎಂಬ ಈ ಮೂರು ಕ್ರಮಗಳು ಸಮಾನ ವೇಗದಲ್ಲಿ ನಡೆಯಬೇಕಾಗಿದೆ. ಸಂಪ್ರದಾಯ ಆಚರಣೆಗಳಿಂದಾಗಿ ಲಿಂಗತಾರತಮ್ಯ ಅಸಮಾನತೆಯಂತಹ ಅನಿಷ್ಠ ಮೌಲ್ಯಗಳು ಮುಂದುವರೆಯುತ್ತಿವೆ. ಆದುದರಿಂದಾಗಿ ಮಾನವರ ಜೀವನ ಕ್ರಮದಲ್ಲಿ ವಿಕಾಸವಾಗುತ್ತದೆ.

ಈ ಕಾಲದ ವೈಚಾರಿಕ ಜಾಗೃತಿಗೆ ಪೂರಕವಾದ ಸಂಶೋಧನಾತ್ಮಕ ಪರಿಸರವನ್ನು ಬೆಳೆಸಲು ಈ ಬಗೆಯ ಅಧ್ಯಯನಗಳಿಂದ ಸಾಧ್ಯವಾಗುತ್ತದೆ. ಎಲ್ಲಾ ಮಾನವಿಕ ವಿಜ್ಞಾನಗಳು ತಂತ್ರಜ್ಞಾನ ಮತ್ತು ವಿಕಾಸದ ಬೆಳವಣಿಗೆಯಿಂದ ಹಿಂದೆ ಸರಿಯುತ್ತಿರುವಾಗ ಲಿಂಗತಾರತಮ್ಯವನ್ನು ಹೆಣ್ಣಿನ ಜೈವಿಕ ನೆಲೆಯಿಂದ ವಿಶ್ಲೇಷಿಸುವುದರಿಂದ ಜ್ಞಾನಪರಂಪರೆಯನ್ನು ಅನ್ವಯಿಕವಾಗಿ ಕಟ್ಟಿಕೊಳ್ಳಲು ದಾರಿಯಾಗುತ್ತದೆ.

ರೂಢಿಯಲ್ಲಿರುವ ಅನೇಕ ಸಂಪ್ರದಾಯ ಆಚರಣೆಗಳಂತಹ ಅಧ್ಯಯನಗಳಿಂದ ಲಿಂಗ ತಾರತಮ್ಯ ಮೀರಿದ ಮಾನವ ಸಮೂಹದ ಭವಿಷ್ಯವನ್ನು ಕಂಡುಕೊಳ್ಳುವುದು ಇದೆ. ಸಂಸ್ಕೃತಿ ಚರಿತ್ರೆಯನ್ನು ಅರಿಯಲು ಈ ತೆರನಾದ ಅಧ್ಯಯನ ಮುಖ್ಯವಾಗುತ್ತದೆ. ಏಕೆಂದರೆ ಒಂದು ಸಮಾಜದಲ್ಲಿ ಸೃಷ್ಟಿಗೊಳ್ಳುವ ಸಂಸ್ಕೃತಿಯ ನಂಬಿಕೆ ಸಂಪ್ರದಾಯ ಆಚರಣೆಗಳನ್ನು ಮುರಿದು ಕಟ್ಟುವ ನೆಲೆಯಲ್ಲಿ ಅಧ್ಯಯನ ನಡೆಯುವುದು ಅತ್ಯಂತ ಅವಶ್ಯಕವಾಗಿದೆ. ಪುರುಷ ಪ್ರಧಾನ ಕುಟುಂಬಗಳನ್ನು ಹಿಂದಿನಿಂದ ಇಂದಿನವರೆಗೆ ಸೂಕ್ಷ್ಮವಾಗಿ ಅವಲೋಕಿಸಿದರೆ ಪುರುಷ - ಸ್ತ್ರೀಯರಿಬ್ಬರು ವಿಭಿನ್ನ ಘಟಕಗಳಾಗಿ ಕಾಣುತ್ತಾ ಬಂದಿರುವುದು ಮನದಟ್ಟಾಗುತ್ತದೆ. ಇದಕ್ಕೆ ಕಾರಣ ಸಂಪ್ರದಾಯ ಆಚರಣೆಗಳೆನ್ನಬಹುದು. ಹಾಗಾಗಿ ಇದನ್ನು ಹೋಗಲಾಡಿಸುವ ದೃಷ್ಟಿಯಿಂದ ಈ ತೆರನಾದ ಅಧ್ಯಯನವು ಮಹತ್ವ ಪಡೆಯುತ್ತದೆ.

ನಂಬಿಕೆ ಭಾಗವಾಗಿ ಬೆಳೆದ ಇವುಗಳು ಲಿಂಗಭೇದವನ್ನು ಹುಟ್ಟುಹಾಕುತ್ತವೆ. ಜೊತೆಗೆ ಮೇಲು-ಕೀಳು, ಬಲಶಾಲಿ-ಬಲಹೀನ ಎನ್ನುವಂತ ಭಾವನೆಗಳನ್ನು ಸ್ತ್ರೀ ಬದುಕಿಗೆ

ಸೃಷ್ಟಿಗೊಳಿಸುತ್ತವೆ. ಹಾಗೆಯೇ ಶ್ರೇಣೀಕರಣದ ಮೂಲಕ ಸಮಾಜವನ್ನು ಮತ್ತು ಹೆಣ್ಣನ್ನು ಕೆಳಹಂತಕ್ಕೆ ತಳ್ಳುತ್ತವೆ. ಹಾಗಾಗಿ ಸಂಪ್ರದಾಯ ಆಚರಣೆಗಳು ಬೇಕೆ? ಬೇಡವೇ? ಎಂಬುದನ್ನು ಗುರುತಿಸಿಕೊಳ್ಳುವುದು ನಮ್ಮ ಮುಂದಿರುವ ಬಹು ದೊಡ್ಡ ಸವಾಲು ಈ ಹಿನ್ನೆಲೆಯಿಂದ ಅಧ್ಯಯನ ಮಾಡುವುದಕ್ಕೆ ಮಹತ್ವ ಪಡೆದಿದೆ.

ಬಹುಪಾಲು ಸ್ತ್ರೀವಾದಿ ಅಧ್ಯಯನಗಳು ಹೆಣ್ಣಿನ ಸ್ಥಾನಮಾನಗಳನ್ನು ನಿರ್ದರಿಸುವಲ್ಲಿ ವಿವಾಹ, ತಾಯ್ತನ, ಪಾತಿವ್ರತ್ಯದಂತಹ ಅಂಶಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳುತ್ತವೆ. ಮುಂದುವರೆದು ಇವುಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಲಿಂಗ ತಾರತಮ್ಯವನ್ನು ಹುಟ್ಟುಹಾಕುತ್ತವೆ ಎಂಬ ನಿರ್ಧಾರಕ್ಕೆ ಬಂದು ತಲುಪುತ್ತವೆ. ಆದರೆ ವಿವಾಹ, ತಾಯ್ತನ, ಪಾತಿವ್ರತ್ಯಕ್ಕೆ ಸಾಮಾಜಿಕ ಮೌಲ್ಯಗಳು ಹೆಣ್ಣಿನ ಜೈವಿಕತೆಯನ್ನು ಕೇಂದ್ರವಾಗಿಟ್ಟುಕೊಂಡಿವೆ. ಈ ಅಂಶಗಳತ್ತ ಸ್ತ್ರೀವಾದಿ ಅಧ್ಯಯನಗಳು ಕೆಲಸ ಮಾಡಬೇಕಾಗಿದೆ. ಹೆಣ್ಣಿನ ಜೈವಿಕತೆಯ ಕುರಿತು ಸಾಮಾಜಿಕ ದೃಷ್ಟಿಕೋನವೇ ಹೆಣ್ಣಿನ ಸ್ಥಾನಮಾನವನ್ನು ಹಾಗೂ ವಿವಾಹ, ತಾಯ್ತನ, ಪಾತಿವ್ರತ್ಯ, ಹಾದರದಂತಹ ಮೊದಲಾದ ಮೌಲ್ಯಗಳನ್ನು ಸೃಷ್ಟಿಗೊಳಿಸಲು ಕಾರಣವಾಗಿವೆ. ಹೆಣ್ಣಿನ ಜೈವಿಕತೆಯನ್ನು ಕೇಂದ್ರವಾಗಿಟ್ಟುಕೊಂಡು ಸಾಂಪ್ರದಾಯ ಆಚರಣೆಗಳು ಹೆಣ್ಣು–ಗಂಡಿನಲ್ಲಿ ಶ್ರೇಷ್ಠ–ಕನಿಷ್ಠ ಎನ್ನುವ ಸಾಮಾಜಿಕ ಶ್ರೇಣೀಕರಣವನ್ನು ಉಂಟುಮಾಡುತ್ತವೆ.

ಹೆಣ್ಣಿನ ಸಂತಾನೋತ್ಪಾದಕ ಶಕ್ತಿಯನ್ನು ಮದುವೆಯ ಮೂಲಕ ಒಂದು ಉಪಭೋಗ ವಸ್ತುವಿನ ಹಾಗೆ ಸ್ವೀಕರಿಸಿ ಪುರುಷಧಿಕಾರವು ತನ್ನನ್ನು ಗುರುತಿಸಿಕೊಂಡಾಗ ಹೆಣ್ಣಿಗೆ ಸಾಂಕೇತಿಕ ವ್ಯವಸ್ಥೆಯಲ್ಲಿ ಕನಿಷ್ಠ ಸ್ಥಾನವನ್ನು ಕಲ್ಪಿಸುತ್ತದೆ. ಇಂತಹ ಕನಿಷ್ಠತೆಯಿಂದ ಮತ್ತು ಸಾಂಪ್ರದಾಯಿಕ ನಿಷ್ಪಮೌಲ್ಯಗಳಂತಹ ಹಿಡಿತಗಳಿಂದ ಮುಕ್ತವಾಗಬೇಕು.

ಒಟ್ಟಿನಲ್ಲಿ ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುವ ಸಾಂಪ್ರದಾಯ ಆಚರಣೆಗಳು ತೊಲಗಿ ಲಿಂಗ ಭೇದ ಸಮಸ್ಯೆಯ ನಿರ್ಮೂಲನೆಗೆ ಪೂರಕವಾಗುವಂತೆ ರಚಿತವಾಗಬೇಕೆಂಬುದು ನನ್ನ ಅಧ್ಯಯನದ ನಿಲುವುಗಳಾಗಿವೆ. ಹಾಗೆಯೇ ಸಮಾಜದಲ್ಲಿ ಸಂಪೂರ್ಣವಾಗಿ ಲಿಂಗ ಬೇಧತೆ ಹೋಗಿ ಗಂಡು–ಹೆಣ್ಣಿನಲ್ಲಿ ಸಮಾನತೆ ಮೂಡಬೇಕು ಎನ್ನುವ ನಿಟ್ಟಿನಲ್ಲಿ ಹಾಗೂ ಈ ರೀತಿಯಾಗಿ ಬದಲಾವಣೆಯಾಗಲು ಏಕೆ ಸಾಧ್ಯವಾಗುತ್ತಿಲ್ಲ. ಎನ್ನುವುದಕ್ಕೆ ಕಾರಣ ಕಂಡುಕೊಳ್ಳುವುದರ ನಿಟ್ಟಿನಲ್ಲಿ ಈ ಅಧ್ಯಯನ ಮಹತ್ವ ಪಡೆದಿದೆ.

* * *

ಅಧ್ಯಾಯ ಎರಡು

ಸಂಪ್ರದಾಯ ಆಚರಣೆಗಳು: ಮಾತೃಕೇಂದ್ರದಿಂದ ಪಿತೃಪ್ರಧಾನತೆಯೆಡೆಗೆ

೨.೧. ಸಂಪ್ರದಾಯ ಆಚರಣೆಯ ಅರ್ಥ - ವ್ಯಾಖ್ಯೆ

೨.೨. ಹೆಣ್ಣು, ಜೈವಿಕತೆಯ ಅರ್ಥ - ವ್ಯಾಖ್ಯೆ

೨.೩ ಸಂಪ್ರದಾಯ ಆಚರಣೆಗಳು ಮಾತೃಕೇಂದ್ರದಿಂದ ಪಿತೃಪ್ರಧಾನತೆಯೆಡೆಗೆ

೨

ಸಂಪ್ರದಾಯ ಆಚರಣೆಗಳು: ಮಾತೃಕೇಂದ್ರದಿಂದ ಪಿತೃಪ್ರಧಾನತೆಯೆಡೆಗೆ

ಆಧುನಿಕತೆ ಬೆಳೆದಂತೆಲ್ಲ ಮಾನವನ ಜೀವನಕ್ರಮದಲ್ಲಿ ಅನೇಕ ರೀತಿಯಲ್ಲಿ ಬದಲಾವಣೆಯಾಗುವುದು ಸಹಜ. ಆದರೆ ಹೆಣ್ಣಿನ ಜೀವನಕ್ರಮದಲ್ಲಿ ನಡೆಯುವ ಬದಲಾವಣೆಗಳು ಪ್ರಗತಿದಾಯಕವೆನಿಸುವುದಿಲ್ಲ. ಅದು ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಯಾವುದು ಪ್ರಗತಿ ಎಂದು ಗುರುತಿಸಲ್ಪಡುತ್ತಿದೆಯೋ ಅದು ಮಹಿಳೆಯರ ಬದುಕಿಗೆ ಮಾರಕವಾಗಿರುತ್ತದೆ. ಪುರುಷ ಪ್ರಧಾನ ಸಮಾಜ, ವಿವಾಹ, ಕುಟುಂಬ, ಸಂಪ್ರದಾಯ ಆಚರಣೆಗಳು ಸಾಮಾಜಿಕ ಪ್ರಗತಿಯಲ್ಲಿ ಮಾನವನ ಸಂಸ್ಕೃತಿ ಪ್ರತೀಕವಾಗಿರುತ್ತವೆ ಎಂದು ಹೇಳಲಾಗುತ್ತದೆ. ಆದರೆ ಈ ಸಂಗತಿಗಳು ಮಹಿಳೆಯರನ್ನು ಎರಡನೇ ದರ್ಜೆಯವರನ್ನು ಪರಿಗಣಿಸಲು ಕಾರಣವಾಗುತ್ತವೆ. ಇದಕ್ಕೆ ಕಾರಣ ಸಂಪ್ರದಾಯ ಆಚರಣೆಗಳೇ ಆಗಿವೆ. ಹೆಣ್ಣಿನ ಜೈವಿಕತೆಯನ್ನಾಧರಿಸಿದ ಸಂಪ್ರದಾಯ ಆಚರಣೆಗಳು ನಡೆಯುತ್ತಿವೆ. ಅವು 'ಹೆಣ್ಣಿನ ದೇಹವನ್ನು', 'ಅಪವಿತ್ರ', 'ಅಸ್ಪೃಶ್ಯತೆ', 'ಕನಿಷ್ಠ' ಎಂದು ಹೆಣ್ಣನ್ನು ನೋಡುವಂತೆ ಮಾಡುತ್ತಿವೆ. ಆದುದರಿಂದ ಇಂತಹ ಜೈವಿಕತೆಯನ್ನಾಧರಿಸಿ ನಡೆಯುವ ಸಂಪ್ರದಾಯ, ಆಚರಣೆಗಳು ಹೆಣ್ಣು, ಹೆಣ್ಣಿನ ದೇಹವನ್ನು ಹೇಗೆ ಕಾಣುತ್ತಿವೆ ಎನ್ನುವ ಚಿಂತನೆಯ ಹಿನ್ನೆಲೆಯಲ್ಲಿ ಸಂಪ್ರದಾಯ ಆಚರಣೆಗಳಲ್ಲಿ ಹೆಣ್ಣಿನ ಜೈವಿಕತೆಯನ್ನು ನೋಡಲಾಗಿದೆ.

ಚರಿತ್ರೆಯಲ್ಲಿ ಏಕಮುಖಿ ಚಿಂತನಾಕ್ರಮ, ಆಲೋಚನೆ, ಕಲ್ಪಿತನಂಬಿಕೆಗಳು ಸಂಪ್ರದಾಯ ಆಚರಣೆಗಳು ಬೆಳೆದು ಬಂದಿವೆ. ಅವು ಮುಂದುವರೆದು ಸಾಮೂಹಿಕ ಸ್ವರೂಪ ಪಡೆದು ಮಾನವನ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಹುಟ್ಟು, ನಾಮಕಾರಣ, ಋತುಮತಿ, ನಿಶ್ಚಿತಾರ್ಥ, ಮದುವೆ, ಸಾವು ಹೀಗೆ ಬದುಕಿನ ನಾನಾ ಕ್ರಮಗಳಲ್ಲಿ ನಡೆಯುತ್ತಿವೆ. ಹೀಗೆ ನಡೆಯುತ್ತಿರುವ ಸಂಪ್ರದಾಯ ಆಚರಣೆಗಳ ಉದ್ದೇಶ 'ಅನಿಷ್ಠ' ನಿವಾರಣೆಯನ್ನು ಮಾಡುವುದು ಎಂದು ಹೇಳಲಾಗುತ್ತಿದೆ. ಆದರೆ ಹೆಣ್ಣಿನ ಸಂದರ್ಭದಲ್ಲಿ ಹೆಣ್ಣಿನ ಜೈವಿಕ ಸಹಜ ಕ್ರಿಯೆಯನ್ನಾಧರಿಸಿ ನಡೆಯುತ್ತಿರುವ ಸಂಪ್ರದಾಯ ಆಚರಣೆಗಳು ಹೆಣ್ಣಿನ ಬಗೆಗೆ ಅನೇಕ ರೀತಿಯ 'ಅಪಕಲ್ಪನೆ' ಹುಟ್ಟುಹಾಕಲು ಕಾರಣವಾಗುತ್ತಿವೆ. ಹಾಗೆ ಅವು ಹೆಣ್ಣಿಗೆ ನಿರ್ಬಂಧ ಹಾಗೂ ನಿಷೇಧಗಳ ನಿರ್ದೇಶನವನ್ನು ಮಾಡುತ್ತಿವೆ. ಆ ಮೂಲಕ ಶೋಷಣೆ ಮಾಡುತ್ತಿವೆ.

ಸ್ತ್ರೀ ಸಂಬಂಧ ದೋರಣೆಗಳಾದ ಲಿಂಗತಾರತಮ್ಯ, ಲೈಂಗಿಕ ಶೋಷಣೆ, ಅಸಮಾನತೆ, ಅಧೀನತೆ, 'ಸ್ತ್ರೀ–ವಿಶಿಷ್ಟತೆ', 'ಸ್ತ್ರೀ–ಸಮಾನತೆ', ಪುರುಷ ಪ್ರಧಾನ ವ್ಯವಸ್ಥೆಯಿಂದಾದ ಅಪಾಯಗಳು ಮುಂತಾದ ಋಣಾತ್ಮಕ – ಗುಣಾತ್ಮಕ ಸಮಾಜದಲ್ಲಿನ ಅಂಶಗಳ ಕುರಿತು ಸ್ತ್ರೀವಾದವು ಅಧ್ಯಯನ ಮಾಡುತ್ತಿದೆ. ಇಂತಹ ಅಧ್ಯಯನವು ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುವ ಸಂಪ್ರದಾಯ ಆಚರಣೆಗಳನ್ನು ಪುನರ್ ಪರಿಶೀಲನೆ_ ಅಥವಾ ಪುನರ್‌ವ್ಯಾಖ್ಯಾನಿಸುವ, ಇಲ್ಲವೆ ವೈಜ್ಞಾನಿಕ ವಿಶ್ಲೇಷಣೆಯ ಅಗತ್ಯತೆಯನ್ನು ಮುಂದಿಡುತ್ತದೆ. ಈ ಹಿನ್ನಲೆಯಿಂದ ಜೈವಿಕತೆಯನ್ನಾಧರಿಸಿ ನಡೆಯುವ ಸಂಪ್ರದಾಯ ಆಚರಣೆಗಳು ಅರ್ಥ, ವ್ಯಾಖ್ಯೆಯನ್ನು ನೋಡುವುದರ ಜೊತೆಗೆ ಅವು ಮಾತೃ ಪ್ರಧಾನತೆಯಿಂದ ಪಿತೃಪ್ರಧಾನತೆಯೆಡೆಗೆ ವಿಸ್ತರಿಸಿಕೊಂಡವು ಕುರಿತು ಮಾತ್ರ ಆರಾಧನೆಯಿಂದ ನೋಡುವ ಕೆಲಸವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಹಾಗೆಯೇ 'ಹೆಣ್ಣು', 'ಹೆಣ್ಣಿನ ಜೈವಿಕತೆ'ಯ ಅರ್ಥ ವ್ಯಾಖ್ಯೆ ಕೂಡ ಇದೇ ಅಧ್ಯಾಯದಲ್ಲಿ ಪರಿಶೀಲಿಸಲಾಗಿದೆ.

ಮೊದಲಿಗೆ ಸಂಪ್ರದಾಯ ಆಚರಣೆಗಳ ಅರ್ಥ, ವ್ಯಾಖ್ಯೆಯು ಈ ಕೆಳಗಿನಂತೆ ದೊರೆಯುತ್ತದೆ.

೨.೧. ಸಂಪ್ರದಾಯ ಆಚರಣೆಯ ಅರ್ಥ–ವ್ಯಾಖ್ಯೆ

ಸಂಪ್ರದಾಯ

ನಿಘಂಟುವಿನಲ್ಲಿ ಸಂಪ್ರದಾಯವನ್ನು ಹೀಗೆ ಅರ್ಥೈಸಲಾಗಿದೆ. ಸಂಪ್ರದಾಯ ಪದ್ಧತಿ, ಪರಂಪರೆ, ಶರಣ, ಸಂಪ್ರದಾಯದಂತೆ ನಡೆದುಕೊಳ್ಳುವವನು. ಸಂಪ್ರದಾಯ ಪರಂಪರೆ, ರೂಢಿ, ಪದ್ಧತಿ, ಆಚಾರ–ವಿಚಾರ, ನಂಬಿಕೆ ಸಂಪ್ರದಾಯ ಪದ್ಧತಿ ಕಟ್ಟಳೆ.

ಸಂಪ್ರದಾಯ ಬಳಕೆ, ರೂಢಿ, ಪರಂಪರೆ ನಡತೆ ನಿಯಮ ರೂಢಿಯಿಂದ ಬಂದ ಬಳಕೆಯಲ್ಲಿರುವ ಎಂದು ಕನ್ನಡ ಸಾಹಿತ್ಯ ಪರಿಷತ್ತು ನಿಘಂಟಿನಲ್ಲಿ ಉಲ್ಲೇಖಿತವಾಗಿದೆ.

ಆಚರಣೆ

'ಆಚರಣೆ' ಎನ್ನುವುದಕ್ಕೆ ವಿವಿಧ ಅರ್ಥಕೋಶಗಳಲ್ಲಿನ ಅರ್ಥ ವಿವರಣೆ ಹೀಗಿದೆ. ಆಚರಣೆ, ವಿಧಿವತ್ತಾದ ನಡವಳಿಕೆ, ಮತಕ್ರಿಯಾದಿಗಳ ಅನುಷ್ಠಾನ, ಮಾಮೂಲಿ ಕ್ರಮವಾಡಿಕೆ ರೂಢಿಯಾಗಿದೆ. 'ಆಚರಣೆ' ಹಿಂಬಾಲಿಸುವಿಕೆ, ನಡತೆ, ರೂಢಿ 'ಆಚರಣೆ' ಎನ್ನುವುದಕ್ಕೆ ಆಚರಿಸುವುದು, ಬಳಕೆ ನಡೆಸು, ನೆರವೇರಿಸು, ನಡೆ ಅನುಸರಿಸುವುದು, ವರ್ತಿಸು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಹಾಗೂ ಇಂಗ್ಲೀಷ್ ಡಿಕ್ಸನರಿಯಲ್ಲಿ ಹೇಳಲಾಗಿದೆ. 'ಆಚಾರಾ' ಕಟ್ಟುಪಾಡು, ನಿಯಮ, ಸಂಪ್ರದಾಯ, ಒಳ್ಳೆಯ ನಡೆತೆ 'ಆಚರಣೆ' ಕ್ರಿಯಾವಿಧಿ.

ಧಾರ್ಮಿಕ ವಿಧಿ, ಸಂಸ್ಕಾರ, ಶಾಸ್ತ್ರೋಕ್ರಿಯ ಸಂಪ್ರದಾಯ ನಿರ್ದೇಶಿತವಾದ ಸಂದರ್ಭದಲ್ಲಿ ಆಚರಿಸಲ್ಪಡುವ ಸಾಂಕೇತಿಕ ಪ್ರಾಮುಖ್ಯತೆ ಇರುವ ಸಾಂಸ್ಕೃತಿಕವಾಗಿ ಪ್ರಮಾಣೀಕರಿಸಲ್ಪಟ್ಟ ಆಚರಣೆಗಳು ಎಂದು ಸಮಾಜ ವಿಜ್ಞಾನಿಗಳ ಪಾರಿಭಾಷಿಕ ಪದಕೋಶಗಳಲ್ಲಿ ವಿವರಿಸಲಾಗಿದೆ.

ಸಂಪ್ರದಾಯ ಆಚರಣೆಗಳ ವ್ಯಾಖ್ಯೆ

ಸಂಪ್ರದಾಯ ಎನ್ನುವುದಕ್ಕೆ ಕಿಟ್ಟಲೆ ಕೋಶದಲ್ಲಿ "Traditional Transmitted doctrine Transmifted from on Teachee to another Traditional Flict or asege custom" ಎಂಬರ್ಥಗಳನ್ನು ಸೂಚಿಸಲಾಗಿದೆ. Encyclopadia of Social scienceನಲ್ಲಿ ಈ ರೀತಿಯಾದ "the fatolity of behaviour patterns which are carried by tradition and loged in the groups as constrated which the more random personal activities of the Individual" ಎಂದು ವಿವರಿಸಲಾಗಿದೆ.

ಆರ್.ಎಸ್. ಭಾಗರವರು ಸಂಪ್ರದಾಯ ಎನ್ನುವುದಕ್ಕೆ "ಒಂದು ಸಮೂಹ ಒಪ್ಪಿಕೊಂಡಿರುವ ಮನುಷ್ಯ ಕ್ರಿಯೆಯ ಪರಂಪರೆ, ನಮೂನೆ" ಎಂದು ಹೇಳಬಹುದು ಎಂದಿದ್ದಾರೆ. ಸಂಪ್ರದಾಯ ಕುರಿತಂತೆ 'Standard Dictonary of Falkore' ಕೃತಿಯಲ್ಲಿ ಈ ರೀತಿಯಾಗಿ ವಿವರ ದೊರೆಯುತ್ತದೆ. "Traditional pattern of human action accepted by group individual habit is not included custom is what falke do belief is why they thinks they do it."

ಸಂಪ್ರದಾಯವೆಂಬುದು ವೈಯಕ್ತಿಕವಾದುದಲ್ಲ ಸಾಮೂಹಿಕವಾದುದು, ಜನರು ಏನು ಮಾಡುತ್ತಾರೆ ಎಂಬುದನ್ನು ತಿಳಿಸುವುದು. ಅದೇ ರೀತಿಯಾಗಿ ಇನ್ನೊಂದು ರೀತಿಯಲ್ಲಿ ಆಚರಣೆ ಮತ್ತು ನಂಬಿಕೆಗಳ ಮೊತ್ತವೆ ಸಂಪ್ರದಾಯ ಎಂದು ಕರೆಯಲಾಗಿದೆ. ಹೀಗೆ ಸಂಪ್ರದಾಯ ಕುರಿತಾಗಿ ಹಲವು ರೀತಿಯಲ್ಲಿ ಅರ್ಥ, ವ್ಯಾಖ್ಯೆಯನ್ನು ವಿದ್ವಾಂಸರು ನೀಡಿದ್ದಾರೆ.

'ಆಚರಣೆ' ಎಂದರೆ ಸಮುದಾಯದ ಒಪ್ಪಿಗೆ ಪಡೆದು ತಲೆತಲಾಂತರದಿಂದ ಅನುಸರಿಸಲಾಗುತ್ತಿರುವ ನಡುವಳಿ ಎನ್ನಬಹುದು ಎಂದು ಹೇಳಲಾಗಿದೆ. ಆಚರಣೆ ಎನ್ನುವುದಕ್ಕೆ ಕಿಟ್ಟೆಲರವರ ಕೋಶದಲ್ಲಿ "Customs Tradition usage systems of systems of religion" ಮುಂತಾಗಿ ಅರ್ಥವನ್ನು ನೀಡಿದ್ದಾರೆ.

ಡರ್ಬಿನ್ ಪ್ರಕಾರ "ಧರ್ಮದಲ್ಲಿ ವಿಧಿ ಆಚರಣೆಗಳ ಮುಖ್ಯವಾದ ಅಂಶ. ಆಚರಣೆಯು ಧರ್ಮದ ಒಂದು ಭಾಗವಾಗಿದೆ. ಅಥವಾ ನಂಬಿಕೆಗಳಿಂದ ಭಿನ್ನವಾಗಿದೆ. ಧರ್ಮವು ಚಿಂತನೆಯಾದರೆ ಆಚರಣೆಯು ಅದನ್ನು ಕಾರ್ಯಗತಗೊಳಿಸುವುದೇ ಆಗಿದೆ. ಹೀಗಾಗಿ ಧರ್ಮ ಮತ್ತು ಆಚರಣೆಗಳು ಪ್ರತ್ಯೇಕವಾದವುಗಳಾಗಿದ್ದರೂ ಇವನ್ನು ಪ್ರತ್ಯೇಕಿಸಲು

ಬರುವುದಿಲ್ಲ ಮತ್ತು ಅದೇ ಧರ್ಮದ ಮುಖ್ಯ ಬಂಧವು ಆಗಿರುತ್ತದೆ" ಎಂದು ಶಾಸ್ತ್ರಾಚರಣೆಗಳ ಕುರಿತು ವಿವರಿಸುವಾಗ ಈ ಮೇಲಿನಂತೆ ವಿವರಿಸುತ್ತಾರೆ.

ಈ ರೀತಿಯಾಗಿ ವಿವಿಧ ವಿದ್ವಾಂಸರು ಸಂಪ್ರದಾಯ ಆಚರಣೆಯ ಅರ್ಥ, ವ್ಯಾಖ್ಯೆಯನ್ನು ನೀಡಿರುವುದು ಕಂಡುಬರುತ್ತದೆ. ಅದೇ ರೀತಿಯಾಗಿ ಹೆಣ್ಣಿನ ಮತ್ತು ಜೈವಿಕತೆಯ ಅರ್ಥ, ವ್ಯಾಖ್ಯೆ ಈ ಕೆಳಗಿನಂತೆ ನೀಡಲಾಗಿದೆ.

೨.೨. ಹೆಣ್ಣು, ಜೈವಿಕತೆಯ ಅರ್ಥ-ವ್ಯಾಖ್ಯೆ

'ಹೆಣ್ಣು' ಎನ್ನುವುದಕ್ಕೆ 'ಹೇರಬಲ್ಲ' ಸ್ತ್ರೀ ಆಗು-ದೊಡ್ಡವಳಾಗು, ಮೈನೆರೆ ಎಂದು ಕನ್ನಡ ರತ್ನಕೋಶದಲ್ಲಿ ದೊರೆಯುತ್ತದೆ.

ಹೆಣ್ಣು ಇಂಗ್ಲೀಷ್‌ನಲ್ಲಿ 'women' (ವುಮೆನ್) ಹೆಂಗಸರು, ನಾರಿ ಅಂಗನೆ, ಅಬಲೆ, ಸ್ತ್ರೀ, ಹೆಣ್ಣು ಎಂದು ಅರ್ಥ ನೀಡಲಾಗಿದೆ.

'ಹೆಣ್ಣು' ಹೆಂಗಸ್ಸು, ಸ್ತ್ರೀ, ಮಧುಮಗಳು, ವಧು ಎಂದು ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ ದೊರೆಯುತ್ತದೆ. ಹೆಣ್ಣಿನ ಕುರಿತಾದ ವಿವರಣೆ ಈ ರೀತಿಯಾಗಿ ದೊರೆಯುತ್ತದೆ.

'ಹೆಣ್ಣು' ಎಂದರೆ, ಸ್ತ್ರೀವರ್ಗದ ಸಾಮಾನ್ಯ ಲಕ್ಷಣಗಳನ್ನು ಹೇಳುವ ಪದವಾಗಿ ಬಳಕೆಯಾಗುತ್ತದೆ ಎಂದು ಹೆಚ್.ಎಸ್.ಶ್ರೀಮತಿಯವರು ಅರ್ಥೈಸಿದ್ದಾರೆ. 'ಹೆಣ್ಣು' ಎನ್ನುವುದಕ್ಕೆ ಸಿಮೋನ್ ದ ಬೋವ ಅವರ ಪ್ರಕಾರ 'ಹೆಣ್ಣು ಸರಳ ಸೂತ್ರಕಾರಳು ಅವಳೊಂದು ಗರ್ಭಾಶಯ, ಒಂದು ಅಂಡಾಶಯ, ಅವಳು ಸ್ತ್ರೀ ಪದ ಅವಳನ್ನು ನಿರ್ವಹಿಸಲು ಸಾಕು ಎಂದು ಹೇಳಲಾಗಿದೆ. ಮತ್ತು ಅದೇ ಕೃತಿಯಲ್ಲಿ ಮತ್ತೊಂದು ಕಡೆ ಈ ರೀತಿಯಾಗಿ ವಿವರಿಸಿರುವುದು ದೊರೆಯುತ್ತದೆ. "ಹೆಣ್ಣು ಜೀವ ವ್ಯವಸ್ಥೆಯೊಂದರ ಲೈಂಗಿಕ ನೆಲೆ, ಈ ಜೀವ ವ್ಯವಸ್ಥೆಯು ಅಂಡಾಣುಗಳನ್ನು ಉತ್ಪತ್ತಿ ಮಾಡುತ್ತದೆ. ಹೆಣ್ಣು ಮತ್ತು ಗಂಡು ಬೇರೆ ಬೇರೆ ಆಗಿರುವ ಜೀವ ವ್ಯವಸ್ಥೆಗಳಲ್ಲಿ ಅಂಡಾಣುಗಳು ಗಂಡಸರಲ್ಲಿ ಉತ್ಪತ್ತಿಯಾಗುವ ವೀರ್‍ಯಾಣುಗಳಿಗಿಂತ ದೊಡ್ಡವು. ಅಂಡಾಣುವಾಗಲೀ, ವೀರ್‍ಯಾಣುವಾಗಲಿ ಬಹು ಮಟ್ಟಿಗೆ ಒಂದನ್ನೊಂದು ಆಶ್ರಯಿಸುತ್ತವೆ. ಕೆಲವು ಜೀವಿಗಳಲ್ಲಿ ಲೈಂಗಿಕ ಸಂಪರ್ಕವಿಲ್ಲದೆಯೂ ವಂಶೋತ್ಪಾದನೆ ಸಾಧ್ಯ. ಗಂಡಸಿಗಿಂತ ಭಿನ್ನವಾದ ಎಲ್ಲಾ ಜೈವಿಕ ಅವಸ್ಥೆಗಳನ್ನು 'ಹೆಣ್ಣುತನ' ಎನ್ನಲಾಗುತ್ತದೆ." ಇದು ಬೇರೆ ಬೇರೆ ಸಮಾಜಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಬದಲಾಗುತ್ತಿರುತ್ತದೆ. ಕೆಲವೊಮ್ಮೆ ಭಾಷೆಯಲ್ಲಿರುವ ಲಿಂಗ ವ್ಯವಸ್ಥೆಯು ಸ್ತ್ರೀ ಸೂಚಕ ಅಂಶವನ್ನು ಪ್ರತಿನಿಧಿಸುತ್ತದೆ. ಹೀಗೆ 'ಹೆಣ್ಣು' ಎನ್ನುವುದಕ್ಕೆ ಈ ರೀತಿಯಾದ ಅರ್ಥವಿವರಣೆಯನ್ನು ನೀಡಿರುವುದು ಕಂಡುಬರುತ್ತದೆ. ಇನ್ನು ಜೈವಿಕತೆ ಕುರಿತಾಗಿ ನೋಡುವುದಾದರೆ ಈ ಕೆಳಗಿನಂತೆ ದೊರೆಯುತ್ತದೆ.

ಜೈವಿಕತೆ

'ಜೈವಿಕತೆ' ಎಂದರೆ ಹುಟ್ಟಿನಿಂದ ಬರುವ ದೇಹ ರಚನೆಯ ವ್ಯವಸ್ಥೆ. ಜೈವಿಕತೆ ಜೀವ ಸಂಬಂಧಿಸಿದ ಕ್ರಿಯೆ.

ಜೈವ ಎನ್ನುವುದಕ್ಕೆ ಜೀವಕ್ಕೆ ಸಂಬಂಧಿಸಿದ biological action ಎಂದು, ಜೈವಕ್ರಿಯೆ ಎಂದರೆ ಜೀವನಕ್ಕೆ ಸಂಬಂಧಿಸಿದ ಕ್ರಿಯೆ 'biological process, biological action' ಎಂದು ವಿವರಿಸಲಾಗಿದೆ.

ಜೀವಕ್ಕೆ ಸಂಬಂಧಿಸಿದ ಕ್ರಿಯೆಗಳಾದ ಉಸಿರಾಟ, ವಿಸರ್ಜನೆ, ರಕ್ತ ಪರಿಚಲನೆ ಜೀವನದಲ್ಲಿ ಆಗುವ ಬದಲಾವಣೆ ಮುಂತಾದವುಗಳಿಗೆ 'ಜೈವಿಕ ಕ್ರಿಯೆ' ಎಂದು ಹೇಳಲಾಗಿದೆ. ಈ ಜೈವಿಕ ಕ್ರಿಯೆಗಳು ಜೀವಕೋಶದಲ್ಲಿ ನಡೆಯುತ್ತವೆ. ನಿರ್ಜಿವಗಳಲ್ಲಿ ನಡೆಯುವುದಿಲ್ಲ ಎಂಬುದು ರುಜುವಾತು ಪಡಿಸುತ್ತದೆ ಎಂದು ವಿವರಣೆಯನ್ನು ನೀಡಲಾಗಿದೆ.

ನಿರ್ಜೀವಿಗಳಲ್ಲಿ ಯಾವುದೇ ಜೈವಿಕ ಚಕ್ರವಿಲ್ಲ. ನಿರ್ದಿಷ್ಟ ಅವಧಿಯಲ್ಲಿ ಜೈವಿಕ ಚಕ್ರವಿರುವುದರಿಂದ ಜೀವಿಗಳು ಆ ಅವಧಿಯೊಳಗೆ ಹುಟ್ಟಿ ಸಂತಾನೋತ್ಪತ್ತಿ ಹಾಗೂ ಸಾವು ಈ ಅವಸ್ಥೆಗಳು ಸಂಪೂರ್ಣವಾಗಿ ಪೂರ್ಣಗೊಳಿಸುತ್ತದೆ. ಜೊತೆಗೆ ಈ ಜೈವಿಕ ಕ್ರಿಯೆಯು ನಿರ್ಜೀವಿಗಳಿಗಿಂತ ಭಿನ್ನ ಹೇಗೆ ಎಂಬುದು ಅರಿಯಲು ಸಹಾಯಕವಾಗುತ್ತಿದೆ.

ಒಟ್ಟಾರೆಯಾಗಿ 'ಜೈವಿಕತೆಗೆ' ಸಂಬಂಧಿಸಿದಂತೆ ಹೇಳುವುದಾದರೆ ಒಂದು ಜೀವಿಯಲ್ಲಿ ನಡೆಯುವ ನೈಸರ್ಗಿಕ ಪ್ರಕ್ರಿಯೆಗೆ ಸಂಬಂಧಿಸಿದ್ದು ಎಂದು ಮತ್ತು ಅದು ಜೈವಿಕತೆ ಜೀವವಿರುವ ಜೀವಿಗಳಲ್ಲಿ, ಪೂರ್ವಗಾಮಿಗಳಿಂದ ಮೈದಳೆಯುವುದು. ಜೀವವಸ್ತು ಯಾವಾಗಲೂ ಜೀವ ವಸ್ತುವಿನಿಂದಲೇ ಹುಟ್ಟುವುದು ಎಂಬ ತತ್ವ ಸೃಷ್ಟಿಗೆ ಸಾಬೀತು ಪಡಿಸುವ ಕ್ರಿಯೆಯೇ ಜೈವಿಕತೆ. ಆದರೆ ಇಲ್ಲಿ 'ಹೆಣ್ಣು' ಮತ್ತು 'ಜೈವಿಕತೆ' ಭಿನ್ನವಾಗಿ ನೋಡಿದರೂ ಸಾಮಾನ್ಯ ಜೀವಿ ಮತ್ತು ಜೀವವರ್ಗದಲ್ಲಿ ನಡೆಯಬಹುದಾದ ಜೀವ ಸಂಬಂಧಿ ಕ್ರಿಯೆಯನ್ನು ಸೂಚಿಸುವುದಾಗಿದೆ. ಇದು ಹೆಣ್ಣಿಗೆ ಮಾತ್ರ ಎನ್ನುವುದಕ್ಕಿಂತ ಎಲ್ಲ ಜೀವ ವರ್ಗದಲ್ಲಿ ನಡೆಯಬಹುದಾದ ಜೀವ ಸಂಬಂಧಿ ಪ್ರಕ್ರಿಯೆ ಆಗಿದೆ.

೨೩. ಸಂಪ್ರದಾಯ ಆಚರಣೆಗಳು ಮಾತೃಕೇಂದ್ರದಿಂದ ಪಿತೃಪ್ರಧಾನತೆಯೆಡೆಗೆ

ಸಂಪ್ರದಾಯ ಆಚರಣೆಗಳು ಮಾತೃಕೇಂದ್ರದಿಂದ ಪಿತೃಪ್ರಧಾನತೆಯೆಡೆಗೆ ಸಾಗಿರುವ ಕುರಿತು ಈ ಅಧ್ಯಾಯದಲ್ಲಿ ಹೇಳಲಾಗಿದೆ. ಹಾಗೆ ಸಂಪ್ರದಾಯ ಆಚರಣೆಗಳ ಹುಟ್ಟು ಬೆಳವಣಿಗೆಯನ್ನು ಸಂಕ್ಷಿಪ್ತಗೊಳಿಸಿ ನೋಡಲಾಗಿದೆ. ಮತ್ತು ಮಾತೃ ಆರಾಧನೆಯ ಮುಖಾಂತರ ಹೆಣ್ಣಿನ ಜೈವಿಕತೆಗೆ ಸಂಪ್ರದಾಯ ಆಚರಣೆಗಳು ಮಾತೃಕೇಂದ್ರದಿಂದ ಪಿತೃಪ್ರಧಾನತೆಯೆಡೆಗೆ ಹೋಗಿ ಹೆಣ್ಣನ್ನು ಅಧೀನಗೊಳಿಸಿದ ಬಗೆಯನ್ನು ಇಲ್ಲಿ ಚರ್ಚಿಸಲಾಗಿದೆ.

ಸಂಪ್ರದಾಯ ಆಚರಣೆಗಳ ಹುಟ್ಟು ಬೆಳವಣಿಗೆ

ಯಾವುದೇ ಚಿಂತನೆ, ಆಲೋಚನೆ, ಹುಟ್ಟಬೇಕಾದರೆ ಅದರ ಹಿಂದೆ ಯಾವುದೋ ಒಂದು ದೊಡ್ಡ ಶಕ್ತಿಯು ಕೆಲಸ ಮಾಡಿರುತ್ತದೆ. ಅದರಂತೆ ಮಾನವನ ಪ್ರತಿಯೊಂದು ಕೆಲಸ, ಕಾರ್ಯ, ಆಲೋಚನೆ, ರೂಢಿ, ಸಂಪ್ರದಾಯ ಆಚರಣೆ ಮುಂತಾದವುಗಳ ಹುಟ್ಟಿಗೆ ಕೆಲವೊಂದು ಮೂಲಭೂತ ಶಕ್ತಿಗಳು ಕೆಲಸ ಮಾಡಿವೆ. ಆ ಮೂಲಭೂತ ಶಕ್ತಿಯೇ ನಂಬಿಕೆ ಈ ನಂಬಿಕೆಯು ಸಂಪ್ರದಾಯಗಳ ಮೂಲವಾಗಿ ಕಾಲಕ್ರಮೇಣದಲ್ಲಿ ಅನುಕೂಲ ಸನ್ನಿವೇಶಗಳೊಂದಿಗೆ, ಮೂರ್ತವಾಗಿ ಪ್ರಕಟಗೊಂಡು, ಸಂಪ್ರದಾಯವಾಗಿ ವಿಧಿ–ನಿಷೇಧಗೊಳಿಸಿವೆ. ಸಂಪ್ರದಾಯವು ಮಾತಿನ ಮೂಲಕ ವ್ಯಕ್ತವಾದರೆ ಆಚರಣೆಯು ಕ್ರಿಯೆ ರೂಪದಲ್ಲಿ ಮುಂದುವರೆದು ಯಾವಾಗ ಏನು ಮಾಡಬೇಕೆಂಬುದೇ ಸಂಪ್ರದಾಯವಾಗಿ, ಅದು ಹೇಗೆ ಮಾಡಬೇಕೆಂಬುದು ಉಪಾಸನೆಯಾಗಿ ಮುಂದುವರೆದು ಅವು ಸಂಪ್ರದಾಯ ಆಚರಣೆ ರೂಪಗಳಲ್ಲಿ ಕಾಣಿಸಿಕೊಂಡಿವೆ.

ಸಂಪ್ರದಾಯ ಆಚರಣೆಗಳು ಹುಟ್ಟಿಕೊಂಡು ಮಾತೃಕೇಂದ್ರದಿಂದ ಪಿತೃಪ್ರಧಾನತೆಯೆಡೆಗೆ ಹೆಣ್ಣಿನ ಜೈವಿಕತೆಯನ್ನು ಕೇಂದ್ರವಾಗಿಟ್ಟುಕೊಂಡು ಮುಂದುವರೆಯಲು ಹೇಗೆ ಕಾರಣವಾಯಿತು ಎನ್ನುವುದನ್ನು ಮಾತೃ ಆರಾಧನೆಯ ಮುಖಾಂತರ ನೋಡಿದರೆ ನಮಗೆ ಸಂಪ್ರದಾಯ ಆಚರಣೆಗಳು ಹುಟ್ಟು ಬೆಳವಣಿಗೆ ತಿಳಿಯುತ್ತದೆ.

ಮಾತೃ ಆರಾಧನೆ : ಹೆಣ್ಣಿನ ಜೈವಿಕತೆ

ಪ್ರಾಚೀನ ಮಾನವನ ಮನಸ್ಸಿನಲ್ಲಿ ಸುತ್ತಲಿನ ಪ್ರಕೃತಿಯ ಅದ್ಭುತವೂ, ರಹಸ್ಯಮಯವೂ ಆದ ಶಕ್ತಿಗಳ ಬಗ್ಗೆ, ಭಯ, ಬೆರಗು ಗೌರವಗಳಿರುವಂತೆ ಅದೇ ರೀತಿ ಹೆಣ್ಣಿನ ಜೈವಿಕ ಸಹಜ ಕ್ರಿಯೆಗಳಾದ ಋತುಸ್ರಾವ, ಹೆರಿಗೆ ಪ್ರಕ್ರಿಯೆಗಳು ಆದಿಮಾನವನಲ್ಲಿ ವಿಸ್ಮಯ, ಹೆದರಿಕೆಯನ್ನು ಹುಟ್ಟಿಸುವ ನಿಗೂಢ ಅಂಶಗಳಾದವು. ಈ ಅಂಶಗಳು ಹೊಸ ಜೀವಕ್ಕೆ ಜನ್ಮಕೊಡುವ ಶಕ್ತಿ ಹೆಣ್ಣಿಗಿದೆ ಎನ್ನುವ ಹಂತಕ್ಕೆ ತಲುಪಿತು. ಅದು ಹೇಗೆಂದರೆ ಸಂತಾನೋತ್ಪಾದನೆಯಲ್ಲಿ ಗಂಡಿನ ಪಾತ್ರ ಅರಿವಿಲ್ಲದಿದ್ದುದರ ಕಾಲದಲ್ಲಿ, ಹಾಗೆಯೇ ಸೃಷ್ಟಿಸುವ ಶಕ್ತಿ ಹೆಣ್ಣಿಗಿದೆ ಎಂದು ನಂಬಿದ್ದ ಕಾಲ, ಇವೆಲ್ಲವೂ ಅಂದಿನ ಮಾನವನಲ್ಲಿ (ಆದಿಮಾನವ) ಹೆಣ್ಣಿನ ಶಕ್ತಿಯ (ಜೈವಿಕ) ಬಗ್ಗೆ ಅಪಾರವಾದ ಗೌರವವನ್ನುಂಟುಮಾಡಲಿಕ್ಕೆ ಕಾರಣವಾದವು. ಮುಂದೆ ಗಂಡಿನ ಹೊಣೆ ಬೇಟೆಗಾರಿಕೆಯಾಗುವುದರೊಂದಿಗೆ ಹೆಣ್ಣಿನ ಹೊಣೆ ಆಹಾರ ಸಂಗ್ರಹಣೆಯಾಗಿತ್ತು. ಆ ಮೂಲಕ ಹೆಣ್ಣು ಗೆಡ್ಡೆ ಗೆಣಸುಗಳನ್ನು ಅಗೆದು ತರುವುದರ ಜೊತೆಗೆ ಬೀಜ ಬಿತ್ತಿ ಬೆಳೆ ಬೆಳೆಯುವ ಕಲೆಯನ್ನು ಹೆಣ್ಣು ಕಂಡುಕೊಂಡಳು. ಮುಂದೊಂದು ದಿನ ಹೆಣ್ಣಿನ ಗರ್ಭದಿಂದ ಶಿಶುವೊಂದು ಹೊರಬರುವ ರೀತಿಗೂ,

ಭೂಮಿಯೊಳಗಿರುವ ಸಸ್ಯವೊಂದು ರೂಪಗೊಳ್ಳುವುದಕ್ಕೂ ಇರುವ ಹೋಲಿಕೆಯನ್ನು ಕಂಡುಕೊಂಡನು.

ಇದು ಅಂದಿನ ಮಾನವನಲ್ಲಿ ಆಹಾರೋತ್ಪಾದನೆ ಸಾಮರ್ಥ್ಯ ಜೊತೆಗೆ ಸಂತಾನ ಸೃಷ್ಟಿ ಇವರೆಡೂ ಹೆಣ್ಣಿಗೆ ಇರುವ ಮಾಂತ್ರಿಕ ಶಕ್ತಿ ಎಂದು ಅಂದಿನ ಮಾನವನಲ್ಲಿ ನಂಬಿಕೆ ಬೆಳೆಯಿತು. ಮುಂದೆ ಇದನ್ನು ಆಧರಿಸಿ ನಿಸರ್ಗದ ಸೃಷ್ಟಿ ಗುಣಕ್ಕೂ, ಹೆಣ್ಣಿನ ಸೃಷ್ಟಿಗುಣಕ್ಕೂ ಸಮಾನವಾದ ಸಂಬಂಧವಿದೆ ಎಂದು ಕಲ್ಪಿಸಿಕೊಂಡನು. ಇದು ಮುಂದೆ 'ಭೂಮಿ', 'ಹೆಣ್ಣ'ನ್ನು ಶಕ್ತಿಯಾಗಿ ಪೂಜಿಸಿಕೊಂಡು ಮುಂದುವರೆಯಲು ಕಾರಣವಾಯಿತು. ಮಾನವನಲ್ಲಿ ಜೈವಿಕವಾಗಿ ಶಕ್ತಿ ಪಡೆದಿದ್ದರೆ ಹೆಣ್ಣು ಮಾತ್ರವೇ 'ಶಕ್ತಿ'ಯನ್ನು ಪಡೆದಿದ್ದಾಳೆ ಮತ್ತು ಪುರುಷನಿಗೂ ಮೀರಿದ 'ಶಕ್ತಿ' ಹೆಣ್ಣಿಗಿದೆ ಎನ್ನುವ ನಂಬಿಕೆಯು ಬೆಳೆಯಿತು. ಹೀಗೆ ಹೆಣ್ಣನ್ನೂ ಸೃಷ್ಟಿಗೆ ಹೋಲಿಸಲಿಕ್ಕೆ ಪ್ರಾರಂಭವಾದ ದಿನದಿಂದ ಪ್ರತಿಯೊಂದು ನೈಸರ್ಗಿಕ ಸಂಬಂಧಗಳನ್ನು ಹೆಣ್ಣಿನಲ್ಲಿ ಹುಡುಕುವುದರ ಮುಖಾಂತರ ಫಸಲನ್ನು ನೀಡಬಲ್ಲ, ನೆಲದ ಶಕ್ತಿಯು ಶಿಶುವಿಗೆ ಜನ್ಮ ನೀಡುವ ಹೆಣ್ಣಿನ ಶಕ್ತಿ, ಒಂದೇ ರೀತಿಯಲ್ಲಿ ಕಂಡವು. ಆದುದರಿಂದ ಅಂಥ ಫಲವಂತಿಕೆಯನ್ನು ಆರಾಧಿಸುವ ನಂಬಿಕೆ ಹುಟ್ಟಿಕೊಂಡಿತು.

ತದನಂತರದಲ್ಲಿ ಫಸಲಿಗೆ ಕಾರಣವಾದ ಭೂಮಿ ಹಾಗೆ ಶಿಶುವಿಗೆ ಕಾರಣವಾದ ಹೆಣ್ಣನ್ನು ಒಂದೇ ಆಗಿ ನೋಡುವ ಪರಿಕಲ್ಪನೆಯು ಬೆಳೆಯಿತು. ಹೀಗೆ ನೈಸರ್ಗಿಕ ಶಕ್ತಿಯ ಬಗ್ಗೆ ಹೊಂದಿದ ನಂಬಿಕೆಯು ಆರಾಧನೆಯ ಮೂಲಕ ಮುಂದುವರೆದು ಬಂತು ಹಾಗೇ ನೈಸರ್ಗಿಕ ಕ್ರಿಯೆಯನ್ನು ನಡೆಸುವ ಶಕ್ತಿ ಭೂಮಿ, ಹೆಣ್ಣಿಗಿದೆ ಎಂದು ನಂಬಿ ಸಂಪ್ರದಾಯ ಆಚರಣೆಗಳನ್ನು ನಡೆಸಿಕೊಂಡು ಬರಲಾಗಿದೆ. ನೈಸರ್ಗಿಕ ಪ್ರಕ್ರಿಯೆ ಹಾಗೂ ಹೆಣ್ಣಿನ ಜೈವಿಕ ಪ್ರಕ್ರಿಯೆಗಳು ಕಂಡುಬಂದಿದ್ದರಿಂದಲೇ, ನಿಸರ್ಗವನ್ನು ಹಾಗೂ ಹೆಣ್ಣನ್ನು ಆರಾಧಿಸುವ ಕ್ರಮ ಬೆಳೆದುಕೊಂಡು ಬಂದಿತು. ಭೂಮಿ ಅನ್ನಕೊಡುವ ದೈವವಾದರೆ, 'ಹೆಣ್ಣು' ಜೀವ ಸೃಷ್ಟಿಸುವ 'ದೈವ' ಎಂದು ತಿಳಿದು ಮಾತೃ ಆರಾಧನೆಗೆ ದಾರಿಯಾಯಿತು. ಇದಕ್ಕೆ ಆಧಾರವಾಗಿ "ತಾನು ದಿನವೂ ನೋಡುತ್ತಿದ್ದ, ಅನುಭವಿಸುತ್ತಿದ್ದ ಸೃಷ್ಟಿಯ ವ್ಯಾಪಾರಗಳನ್ನು ತನಗೆ ಪರಿಚಿತವಿದ್ದ ವಾತಾವರಣದಲ್ಲಿ ಆದಿಮಾನವನು ಅರ್ಥೈಸಿ ಕಂಡುಕೊಳ್ಳಲು ಯತ್ನಿಸಿದ. ಕ್ರಮೇಣ ಮಳೆ-ಬೆಳೆ ಸಮೃದ್ಧಿಯನ್ನು ಕೊಡಮಾಡುವ ಅದೃಶ್ಯ ಶಕ್ತಿಯನ್ನು ರೂಪಿಸಲು ಶ್ರಮಪಟ್ಟ. ಸಂತತಿ ಬರಲು ಆಹಾರಾಧಿಗಳನ್ನು ಪಡೆದು ಬೆಳೆಯಲು ಕಾರಣವಾದ ಜನನಿಯನ್ನೇ ಬೃಹತ್ ಸೃಷ್ಟಿ ರೂಪದಲ್ಲಿ ಕಂಡು ಪೂಜಿಸಿದ. ಸಫಲತೆಗೆ ಅವಳನ್ನು ಪ್ರಾರ್ಥಿಸಿದ. ಸೃಷ್ಟಿ-ಪುಷ್ಟಿ(ಜನನ ಹಾಗೂ ಪೋಷಣೆ)ಗೆ ಹೆಣ್ಣೆ ಕಾರಣಳಾದಳು ಅದರಂತೆ ಕಾಳು, ಬೆಳೆಗೆ ಕಾರಣವಾದ ಭೂಮಿಯನ್ನು ಹೆಣ್ಣುದೇವತೆ ಎಂಬ ಕಲ್ಪನೆ

ಅವನಲ್ಲಿ ಸ್ಥಿರವಾಯಿತು. ಅದನ್ನು ಈ ವಿಗ್ರಹಗಳ ಮೂಲಕವೂ ಹುಡುಕಬಹುದು. ಚರಿತ್ರೆ ಹಾಗೂ ಉತ್ಖನನಗಳ ದೃಷ್ಟಿಯಿಂದ ಪ್ರಾಗ್ಯೈತಿಹಾಸ ಕಾಲದಿಂದಲೂ ಇಂಥ ವಿಗ್ರಹಗಳು ಕಂಡುಬರುತ್ತಿವೆ.

ನಮ್ಮಲ್ಲಿ ಮೂರು ಸಹಸ್ರ ವರ್ಷಗಳಿಂದಲೂ ಸೃಷ್ಟಿಗೆ ಕಾರಣವಾದ ಭೂಮಾತೆಯ ಪೂಜೆ ಬಳಕೆಯಲ್ಲಿರುವುದನ್ನು ಗುರುತಿಸಬಹುದು. ಯೋನಿ ಹಾಗೂ ಸ್ತನಗಳಿಗೆ ಪ್ರಾಧಾನ್ಯತೆ ಕೊಟ್ಟ ಈ ವಿಗ್ರಹಗಳು ಸಫಲತೆ, ಸಮೃದ್ಧಿಗಳ ಆರಾಧ್ಯ ದೇವತೆಯ ರೂಪ ಆಗಿದೆ. ಕೆಲವು ಪ್ರಾದೇಶಿಕ ಬದಲಾವಣೆಗಳನ್ನು ಹೊಂದಿದ್ದರೂ, ಇಷ್ಟ ಫಲದಾಯನಿಯ ರೂಪದಲ್ಲಿ ಭಾವುಕರಿಂದ ಪೂಜಿಸಲ್ಪಡುವ ಜಗಜ್ಜನನಿಯ ಪ್ರತೀಕವಾಗಿ ಮುಂದುವರೆದು, ಪ್ರಾಚೀನ ಸಂಪ್ರದಾಯವನ್ನು ಪ್ರತಿನಿಧಿಸುತ್ತವೆ. ಇಂದಿಗೂ ಇದೇ ರೂಪದಲ್ಲಿ ಪೂಜಿಸಲ್ಪಡುವ ಕೆಲವು ಸ್ತ್ರೀ ವಿಗ್ರಹಗಳು ಅಲ್ಲಲ್ಲಿ ಗುಡಿಗಳಲ್ಲಿದ್ದು, ವ್ರತೋಪಾಸನೆಗಳನ್ನು ಕೈಗೊಂಡು ವಿಗ್ರಹದ ಯೋನಿ, ಸ್ತನಗಳಿಗೆ ಬೆಣ್ಣೆ ಸಿಂಧೂರಗಳ ಲೇಪದ ಅರ್ಚನೆಯ ವಿಧಾನಕೈಗೊಳ್ಳುತ್ತಾರೆ. ಉತ್ತರ ಕರ್ನಾಟಕದ ಕೆಲವೆಡೆಯಲ್ಲಿ 'ಲಜ್ಜಾಗೌರಿ'ಯೆಂದೇ ಈ ದೇವತೆಯನ್ನು ಗುರುತಿಸುತ್ತಾರೆ." (ಜ್ಯೋತ್ಸ್ನಾಕಾಮತ್, ೧೯೯೧ ಪುಟ.೧೧) ಭೂಮಿ, ಹೆಣ್ಣು ನೈಸರ್ಗಿಕ ಕ್ರಿಯೆಗಳು 'ಶಕ್ತಿ' 'ದೈವದ' ನೆಲೆಯಲಿ ಪೂಜಿಸಿಕೊಂಡು ಬಂದಿರುವುದು ಸ್ಪಷ್ಟವಾಗಿ ಮಾತೃ ಆರಾಧನೆಯಲ್ಲಿ ಕಂಡುಬರುತ್ತದೆ.

ಆದರೆ ನೈಸರ್ಗಿಕ ಸಹಜ ಕ್ರಿಯೆಯ ಅದು ಯಾವುದೇ 'ದೈವದ' ಭಾಗವಾಗಿ ಬಂದದ್ದಲ್ಲ ಮತ್ತೆ ಅದು ಯಾವುದೇ ಶಕ್ತಿಯು ಅಲ್ಲ, ಆದರೆ ಅದನ್ನು ಆಧಾರಿಸಿ 'ಶಕ್ತಿ', ದೈವ' ಎಂದು ಪೂಜಿಸಿಕೊಂಡು ಬಂದಿರುವುದು ಪುರುಷ ಕಲ್ಪಿತ ರಚನೆಯಾಗಿದೆ. ಯಾಕೆಂದರೆ ನೈಸರ್ಗಿಕ ಕ್ರಿಯೆಯು ಭೂಮಿ, ಹೆಣ್ಣಿಗೆ ಇರುವಂತೆ ಇತರ ಜೀವಿಗಳಿಗೆ ಇದೆ. ಆದರೆ ಅದನ್ನು ಹೆಣ್ಣಿಗೆ ಮಾತ್ರ 'ಶಕ್ತಿ', 'ದೈವ' ಎಂದು ಪೂಜಿಸಿಕೊಂಡು ಬಂದಿರುವುದು ಪುರುಷ ಕಲ್ಪಿತ ತಂತ್ರವಾಗಿದೆ. ಇದಕ್ಕೆ ಆಧಾರವೆನ್ನುವಂತೆ ಶೈಲಜ ಹಿರೇಮಠರವರು ಮಾತೃ ಪ್ರಧಾನ ಪರಿಕಲ್ಪನೆಯನ್ನು ನಿರ್ವಚಿಸುವಾಗ "ಮಾತೃ ಆರಾಧನೆಯನ್ನು ಸ್ತ್ರೀ-ನಿಷ್ಠ ನೆಲೆಯಲ್ಲಿ ನಿರ್ವಚಿಸಲಾಗದು ಮತ್ತು ಪುರುಷರು ಹೆಣ್ಣಿನ ಬಗೆಗೆ ಕುತೂಹಲ ಬೆಳೆಸಿಕೊಂಡದ್ದೆ ಆಕೆಯಲ್ಲಿನ ಪ್ರಜನನ ಶಕ್ತಿ ಕಾರಣಕ್ಕಾಗಿ. ಪುರುಷನ ಕುರಿತು ಸ್ತ್ರೀ ಯಾವುದೇ ಕುತೂಹಲವನ್ನು ಹೊಂದಿರಲಿಲ್ಲವೇ? ಎನ್ನುವ ಪ್ರಶ್ನೆಗೆ ಉತ್ತರ ಇದುವರೆಗಿನ ಅಧ್ಯಯನಗಳಲ್ಲಿ ಉತ್ತರ ದೊರೆಯುವುದಿಲ್ಲ. ಮಾತೃ ಪ್ರಧಾನತೆಯ ಕುರಿತಿರುವ ವ್ಯಾಖ್ಯಾನಗಳು ಕೇವಲ ಪುರುಷನ ಕುತೂಹಲ ಮತ್ತು ಪ್ರಯೋಗ ಶೀಲತೆಯನ್ನು ಪ್ರತಿಬಿಂಬಿಸುವಂತೆ ತೋರುತ್ತವೆ. ಭಾರತೀಯ ಸಂಸ್ಕೃತಿಗಳು ಭೂಮಿಯನ್ನು ಉಪಭೋಗದ ನೆಲೆಯಲ್ಲಿಯೇ ಕಂಡಿವೆ. ಫಲ ಕೊಡುವ ಭೂಮಿಯನ್ನು ಸಂತಾನ ಕೊಡುವ ಹೆಣ್ಣನ್ನು ಉಪಭೋಗದ ತಕ್ಕಡಿಯಲ್ಲಿಟ್ಟು

ಆಲೋಚಿಸುವ ಪ್ರಕ್ರಿಯೆಯು ಪುರುಷ ಪ್ರಧಾನ ನಿಲುವೆ ಆಗಿದೆ" ಎಂದು ಶೈಲಜಾ ಹಿರೇಮಠರವರು ಹೇಳುತ್ತಾರೆ. ಹಾಗೆಯೇ ನೈಸರ್ಗಿಕ ಕ್ರಿಯೆಯನ್ನಾಧರಿಸಿ ಹೆಣ್ಣನ್ನು, "ಮನುಷ್ಯಳನ್ನಾಗಿ ಗ್ರಹಿಸದೆ 'ಮಾತೆ'ಯನ್ನಾಗಿ ಅಂದರೆ ಪ್ರಜೋತ್ಪಾದಕ ಸರಕನ್ನಾಗಿ ಮಾತೃತ್ವವು ಗುರುತಿಸುತ್ತದೆ. 'ಮಾತೆ'ಯಾಗಿ ಸಾಮಾಜಿಕ ಸ್ಥಾನಮಾನ ಪಡೆಯುವ ಪ್ರಕ್ರಿಯೆಯೇ ಪಿತೃಪ್ರಧಾನತೆಯ ಪ್ರಾಬಲ್ಯವನ್ನು ಧ್ವನಿಸುತ್ತದೆ. 'ಮಾತೃ' ಎನ್ನುವುದು ಹೆಣ್ಣಿನ ಮಾತೃತ್ವವನ್ನು ಮಾತ್ರ ಧ್ವನಿಸುತ್ತದೆ. 'ಮಾತೃ' 'ತಾಯಿ', 'ಹೆತ್ತವ್ವ', 'ಭೂಮಿ', 'ಮಾತೆ' ಎನ್ನುವ ಅರ್ಥದಲ್ಲಿ ಮಾತ್ರ ಬಳಕೆಗೊಂಡಿವೆ" (ಶೈಲಜ ಹಿರೇಮಠ, ೨೦೦೪, ಪುಟ.೬,೮) ನೈಸರ್ಗಿಕ ಪ್ರಕ್ರಿಯೆಯನ್ನು ಆಧರಿಸಿ ಸಮಾಜದಲ್ಲಿ ಹೆಣ್ಣಿಗೆ ಗೌರವ ಸ್ಥಾನಮಾನ ಲಭ್ಯವಿದೆ ಹೊರತು ಅವಳನ್ನು ಯಾವುದೇ 'ವ್ಯಕ್ತಿ' ವ್ಯಕ್ತಿತ್ವ ಹೊಂದಿರುವ ಜೀವಿ ಎನ್ನುವಂತ ಅಂಶಗಳು ಕಂಡುಬರುವುದಿಲ್ಲ. ಅಲ್ಲದೇ ಜೈವಿಕ ಸಹಜ ಪ್ರಕ್ರಿಯೆಯ ಹೆಣ್ಣಿನಲ್ಲಿ ವಿಶೇಷವಾಗಿ ಪರಿಗಣಿಸಿ ನೋಡಿದ್ದರಿಂದಲೇ ಹೆಣ್ಣಿಗೆ ಗೌರವ, ಜೊತೆಗೆ ಗುಣಗಳನ್ನು, ನಿರ್ಬಂಧಗಳನ್ನು ಆರೋಪಿಸಲು ಕಾರಣವಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ.

ಅದೇ ರೀತಿಯಾಗಿ ಹೆಣ್ಣಿನ ಪ್ರತಿಯೊಂದು ಜೈವಿಕ ಅಂಗವನ್ನು ಸೃಷ್ಟಿಯ (ದೈವ) ಸಂಕೇತವೆಂದು ತಿಳಿದು ಹಲವು ನೆಲೆಯಲ್ಲಿ ನಿರ್ವಚಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಅದೇನೆಂದರೆ ಕೈಗಳಿಂದ ಸ್ತನಗಳನ್ನು ಹಿಡಿದುಕೊಂಡು ಹಾಲನ್ನುಣಿಸುವ ದೇವತೆ(ಹೆಣ್ಣು)ಯನ್ನು 'ಪೋಷಕ ದೇವತೆ' ಎಂದು, ನಗ್ನವಾಗಿ ಇರುವ ದೇವತೆಗಳನ್ನು(ಹೆಣ್ಣು) ಮಾನವರ 'ಮಾತೆ'ಯೆಂದು ಮತ್ತು ದೇವತೆಗಳೆಲ್ಲರನ್ನು 'ತಾಯಿ' ಎಂದು ಅರಣ್ಯ, ಪ್ರಾಣಿ, ಧ್ಯಾನ, ಪಕ್ಷಿ ಇವುಗಳನ್ನು ರಕ್ಷಿಸುವ ಮಾತೃವೆಂದು ಪೂಜಿಸಿರುವುದು ಮಾತೃ ಆರಾಧನೆಯಲ್ಲಿ ದೊರೆಯುತ್ತದೆ. ಇದಕ್ಕೆ "ಪುರಾತತ್ವದ ಉತ್ಖನನಗಳಲ್ಲಿ ಪ್ರಾಚೀನ ನಾಗರೀಕತೆಗೆ ಸಂಬಂಧಪಟ್ಟ ಸ್ತ್ರೀ ಮೂರ್ತಿಗಳು ಮತ್ತು ಈ ಮೂರ್ತಿಗಳು ಜಗತ್ತಿನ ಅನೇಕ ಭಾಗಗಳಲ್ಲಿ ದೊರೆತಿರುವುದು ಹಾಗೂ ಅವುಗಳಲ್ಲಿ ಹೆಣ್ಣಿನ ಜೀವದಾಯಕ ಜೀವಪೋಷಕ ಶಕ್ತಿಯನ್ನು ಎತ್ತಿತೋರಿಸುವಂತೆ ದಪ್ಪವಾದ ಸ್ತನಗಳು, ದೊಡ್ಡ ನಿತಂಬಗಳು, ದಪ್ಪ ತೊಡೆಗಳು, ಉಬ್ಬಿದ ಹೊಟ್ಟೆಗಳು, ಢಾಳಾಗಿ ರೂಪಗೊಂಡಿವೆ. ಆಸ್ಟ್ರಿಯಾ, ಫ್ರಾನ್ಸ್ ಇತರ ದೇಶಗಳಲ್ಲಿ ಕೂಡಾ ದೊರೆತಿವೆ. ಅವುಗಳನ್ನು 'ವಿನಸ್' ಎಂದು ಕರೆಯುತ್ತಾರೆ". (ಚಟ್ಟೋಪಾಧ್ಯಾಯ ಉದ್ಧೃತ, ಬಿ.ಎನ್. ಸುಮಿತ್ರಾಬಾಯಿ, ೨೦೦೪, ಪು.೪೯೮)

ನೈಸರ್ಗಿಕ ಕ್ರಿಯೆಗಳನ್ನು ನಡೆಸುವ ಪ್ರತಿಯೊಂದು ಅಂಗಗಳನ್ನು ಹಲವಾರು ರೀತಿಯಲ್ಲಿ ಹೆಣ್ಣನ್ನು ಮಾತೃ ದೇವತೆಯೆಂದು ಪೂಜಿಸಿಕೊಂಡು ಬಂದಿರುವುದು ನೈಸರ್ಗಿಕ ಸಂಗತಿಯಿಂದಲೆ. ಆದರೆ ಈ ಜೈವಿಕ ಪ್ರಕ್ರಿಯೆಯು ಜೀವವಿರುವ ಯಾವುದೇ ಜೀವಿಯಲ್ಲಿ ಆಗುವ ಜೀವ ಸಂಬಂಧಿ ಸಹಜ ಕ್ರಿಯೆ ಅಷ್ಟೇ. ಅದನ್ನು ಯಾರು ಬದಲಾಯಿಸಲು

ಸಾಧ್ಯವಿಲ್ಲ. ಅಂತಹ ಜೈವಿಕ ಪ್ರಕ್ರಿಯೆಯನ್ನು ಸೃಷ್ಟಿಸುವ ಶಕ್ತಿ ಎಂದು ತಿಳಿದು ಹೆಣ್ಣಿನ ಪ್ರತಿಯೊಂದು ಅಂಗಗಳನ್ನು ಅಂದರೆ ಸ್ತನ, ಯೋನಿ, ಗರ್ಭ ಇವುಗಳನ್ನು ಒಟ್ಟುಗೂಡಿಸಿ 'ಶಕ್ತಿ' 'ದೈವ' ಮುಂದುವರೆದು 'ಮಾತೃ' ಎಂದು ಆರಾಧನೆಗೆ ಒಳಪಡಿಸಲಾಗಿದೆ. ಜೊತೆಗೆ ಹೆಣ್ಣಿನ ಜೈವಿಕತೆಯನ್ನಾಧರಿಸಿ ಸಂಪ್ರದಾಯ ಆಚರಣೆಗಳನ್ನು ನಡೆಸಿಕೊಂಡು ಬರಲಾಗಿದೆ. ಅವು ಇಂದು ಹೆಣ್ಣಿಗೆ ಹಲವು ರೀತಿಯಲ್ಲಿ ಪಾಲನೆ, ಪೋಷಣೆ, ರಕ್ಷಣೆ ಮುಂದುವರೆದು ಹೆಣ್ಣಿಗೆ ಜವಾಬ್ದಾರಿಯನ್ನು ಹಾಕುವ ಮೂಲಕ ಜೊತೆಗೆ ನಿರ್ಬಂಧ, ನಿಯಂತ್ರಣ ನಿಷೇಧ, ನಿರ್ದೇಶನ ಮಾಡುತ್ತಿವೆ. ಉದಾ: ಹೆಣ್ಣು ಹೊರಗಡೆ ಹೋಗಬಾರದು, ಮನೆಯಲ್ಲಿ ಇರಬೇಕು ಎಂದು ಹೇಳುವುದರ ಮೂಲಕ ಹೆಣ್ಣಿಗೆ ಸಂಪ್ರದಾಯ ಆಚರಣೆಗಳನ್ನು ರೂಪಿಸಿ, ರೂಢಿಸುತ್ತಾ ಹೆಣ್ಣನ್ನು ಏಕಕಾಲದಲ್ಲಿ ವೈಭವೀಕರಿಸುತ್ತಾ, ತುಚ್ಚಕರಿಸುತ್ತಾ ಬಂದಿವೆ. ವೈಭವೀಕರಣದಿಂದಲೂ, ತುಚ್ಚೀಕರಣದಿಂದಲೂ ಹೀಗೆ ದ್ವಿಮುಖ ನೆಲೆಯಲ್ಲಿ ಶೋಷಣೆಗೆ ಒಳಪಡಿಸಿರುವುದು ಕಂಡುಬರುತ್ತದೆ. ಅದಕ್ಕೆ 'ಹೆಣ್ಣು ಒಂದು ಜನಾಂಗದ ಸಂಕೇತವಷ್ಟೆ ಅಲ್ಲ ಜವೋತ್ಪತ್ತಿಯ ಮೂಲಶಕ್ತಿಯಾಗಿರುವಳು. ಆಕೆಯ ಅಂಗಗಳಿಗೆ ಮತ್ತು ಗುಣಶಕ್ತಿಗಳಿಗೆ ಸೃಷ್ಟಿಸುವ ಶಕ್ತಿ ಸಾಮರ್ಥ್ಯವಿದೆ' ಎಂದು ಮುಂತಾಗಿ ವೈಭವೀಕರಿಸಲಾಗಿದೆ.

ಜೈವಿಕ ಕ್ರಿಯೆಯನ್ನು ಆಧರಿಸಿಯೇ ಶಕ್ತಿ, ದೈವ ಎಂದು 'ಭೂಮಿ''ಹೆಣ್ಣ'ನ್ನು ಆರಾಧಿಸಿರುವಲ್ಲಿ ಪುರುಷ ಪ್ರಧಾನ ತಂತ್ರ ಅಡಗಿರುವುದು ಕಂಡುಬರುತ್ತದೆ. ಇದಕ್ಕೆ ಆಧಾರವೆಂದರೆ ಇಲ್ಲಿಯವರೆಗೆ ಹೆಣ್ಣನ್ನು ಕಾಣುವ ಪುರುಷ ದೃಷ್ಟಿಕೋನದಿಂದ ತಿಳಿಯಬಹುದು. 'ಹೆಣ್ಣು'–'ಭೂಮಿ' ಇವುಗಳ ಬಳಕೆ ಇರುವ ವಸ್ತುಗಳೆಂದು ಮತ್ತು ಇವು ಯಾವಾಗಲೂ ಉಪಯೋಗಕ್ಕೆ ಬರುವಂತವುಗಳು ಎಂದು ಇಲ್ಲಿಯವರೆಗೆ 'ಹೆಣ್ಣು' 'ಭೂಮಿ'ಯನ್ನು ಗೌರವಿಸುತ್ತ ಆರಾಧನೆಗೆ ಒಳಪಡಿಸುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಶೈಲಜ ಹಿರೇಮಠರವರು ಸ್ತ್ರೀಯರನ್ನು ಪ್ರಕೃತಿಯನ್ನಾಗಿ, ಪುರುಷರನ್ನು ಸಂಸ್ಕೃತಿಯನ್ನಾಗಿ ಭಾರತೀಯ ಪರಂಪರೆಗಳು ನಿರ್ವಚಿಸುತ್ತವೆ. ಬನದಮ್ಮ, ಒಳಕಲವ್ವ, ಹುಲಿಗೆಮ್ಮ, ಬನಶಂಕರಿ, ಬಾದುಬ್ಬೆ ಮೊದಲಾದ ಸ್ತ್ರೀ ದೇವತೆಗಳು ಕೃಷಿ ಸಮೃದ್ಧಿ ನೆಲೆಯಲ್ಲಿ ನಿರ್ವಚಿಸಲ್ಪಟಿವೆ. ಎಲ್ಲಮ್ಮ, ಲಜ್ಜಾಗೌರಿ ಮೊದಲಾದವರು ಸಂತಾನಶಕ್ತಿಯ ಅಡಿಯಲ್ಲಿ ವ್ಯಾಖ್ಯಾನಿಸಲ್ಪಟ್ಟಿದ್ದಾರೆ. ಆದರೆ ಇಂಥವರು ಕೃಷಿ ಸಮೃದ್ಧಿ ದೈವಗಳು ಇವರು ಸಂತಾನ ಶಕ್ತಿಯ ದೇವರು ಎಂದು ಸ್ತ್ರೀ ದೇವತೆಗಳನ್ನು ಗೆರೆಕೊರೆದು ವಿಂಗಡಿಸಲಾಗುವುದಿಲ್ಲ.(ಶೈಲಜ ಹಿರೇಮಠ, ೨೦೦೪, ಪುಟ.೧೭) ಪುರುಷನು ನಿರ್ವಚಿಸಿಕೊಂಡ ರೀತಿಯಿಂದ ಸ್ಪಷ್ಟವಾಗುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು 'ಸಂತಾನ'ಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದರಿಂದ ಗೌರವ ಆಧಾರಗಳಿಗೆ ಪಾತ್ರಗಳನ್ನಾಗಿ ಹೆಣ್ಣನ್ನು ತಾಳ್ಮೆ, ಸಹನೆಯಲ್ಲಿ ನೋಡಲಾಗಿದೆ

ಹೊರತು, 'ವ್ಯಕ್ತಿ' ಎಂದು ಪರಿಗಣಿಸಿರುವುದು ಕಂಡುಬರುವುದಿಲ್ಲ. ಹೀಗಾಗಿ ಹೆಣ್ಣಿಗೆ ಇಂದು ಹಲವು ರೀತಿಯಲ್ಲಿ ಸಂಪ್ರದಾಯ ನಿರ್ಬಂಧಗಳು ಕಂಡುಬರುತ್ತಿವೆ.

ಸಂಪ್ರದಾಯ ಆಚರಣೆಗಳು ಹೆಣ್ಣಿನ ಜೈವಿಕತೆಯನ್ನು ಆಧರಿಸಿ ಸೃಷ್ಟಿ ಮಾಡಿರುವ ಸಂಕೋಲೆಗಳಿಂದಾಗಿ ಹೆಣ್ಣಿಗೆ ತಾರತಮ್ಯ, ಅಸಮಾನತೆ, ಅನ್ಯಾಯಗಳು ಮತ್ತು ಹೆಣ್ಣನ್ನು ಎರಡನೆ ದರ್ಜೆಯ ಪ್ರಜೆಯಾಗಿ ಕಾಣಲಾಗಿದೆ. ಈ ಕುರಿತು ಸ್ತ್ರೀವಾದಿ ಚಿಂತಕರು ಹೆಣ್ಣಿನ ಲಿಂಗಾಧಾರಿತ ತಾರತಮ್ಯ ಅಸಮಾನತೆ ಕುರಿತು ಹಲವು ನೆಲೆಯಲ್ಲಿ ಅಧ್ಯಯನ ಮಾಡಿ ಹೆಣ್ಣಿನ ಜೈವಿಕತೆಯನ್ನು ಆಧಾರವಾಗಿಟ್ಟುಕೊಂಡೆ ಸಂಪ್ರದಾಯಿಕ ಮೌಲ್ಯಗಳನ್ನು ಹೇರಿರುವುದರಿಂದ ಹೆಣ್ಣು ಎರಡನೆಯ ದರ್ಜೆಯ ಪ್ರಜೆಯಾಗಿರುವಳು ಎನ್ನುವುದನ್ನು ವಿಶ್ಲೇಷಿಸುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಗಂಡು ಹೆಣ್ಣನ್ನು ಹೇಗೆ ಕಾಣುತ್ತಾರೆ ಎನ್ನುವ ಕುರಿತು ಮಾಹಿತಿಯನ್ನು ನೀಡುತ್ತಾರೆ. ಅದು "ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಟ್ಟ ಮೇರಿವುಲ್‌ಸ್ಟನ್‌ಕ್ರಾಪ್ಟ್, ಸಿಮೋನ ದ ಬೋವಾನಿಂದ ಹಿಡಿದು ಇವತ್ತಿನವರೆಗಿನ ಎಲ್ಲ ಸ್ತ್ರೀವಾದಿಗಳು ಹೆಣ್ಣನ್ನು (ಜೈವಿಕ) ಪ್ರಕೃತಿ ನೆಲೆಯಲ್ಲಿ, ಗಂಡನ್ನು ಸಂಸ್ಕೃತಿ(ಬೌದ್ಧಿಕ)ಯಲ್ಲಿ ಗುರುತಿಸುವ ನೆಲೆ ವಿರೋಧಿಸುತ್ತಾರೆ. ಇದರಲ್ಲಿ ಭಾರತೀಯ ಹಾಗೂ ಕರ್ನಾಟಕ ಸ್ತ್ರೀವಾದಿ ಚಿಂತನಕಾರರು ಇದಕ್ಕೆ ಹೊರತಾಗಿಲ್ಲ. ಸ್ತ್ರೀವಾದಿ ಚಿಂತಕರು ಕುಟುಂಬದಲ್ಲಿ, ಸಮಾಜದಲ್ಲಿ ಹೆಣ್ಣು ಜೈವಿಕ ಕಾರಣದಿಂದಾಗಿಯೇ ಎರಡನೆಯ ದರ್ಜೆ ಪ್ರಜೆಯಾಗಿರುವವಳು ಎನ್ನುವುದನ್ನು ವಿಶ್ಲೇಷಿಸುತ್ತಾರೆ. ಜೈವಿಕ ಸಹಜವಾದ ಲೈಂಗಿಕ ಭಿನ್ನತೆಯನ್ನೇ ಆಧಾರವಾಗಿಟ್ಟುಕೊಂಡು ಶ್ರೇಷ್ಠ–ಕನಿಷ್ಠ, ಸಂಸ್ಕೃತಿ–ಪ್ರಕೃತಿ ಎಂಬ ತಾರತಮ್ಯವನ್ನು ಸೃಷ್ಟಿಸಿದ ಪುರುಷ ಪ್ರಧಾನ ಮೌಲ್ಯಗಳ ಹಿಂದಿರುವ ರಾಜಕಾರಣವನ್ನು ಪ್ರಶ್ನಿಸುತ್ತಾರೆ".(ಉದ್ಧೃತ: ಶೈಲಜ ಹಿರೇಮಠ, ೨೦೦೪, ಪುಟ.೧೪)

ಸಂಪ್ರದಾಯ ಆಚರಣೆಗಳು ಹೆಣ್ಣಿನ ಜೈವಿಕತೆಯನ್ನಾಧರಿಸಿ ಸೃಷ್ಟಿಗೊಂಡಿದ್ದರಿಂದಲೇ ಹೆಣ್ಣು ಪ್ರಕೃತಿಯಲ್ಲಿ ಗುರುತಿಸುತ್ತಿರುವುದು, ಗಂಡನ್ನು ಬೌದ್ಧಿಕ ನೆಲೆಯಲ್ಲಿ ಗುರುತಿಸುತ್ತಿರುವುದು, ಆ ಮೂಲಕ ಲಿಂಗತಾರತಮ್ಯವನ್ನು ಹುಟ್ಟು ಹಾಕುತ್ತಿರುವುದು ಕಂಡುಬರುತ್ತದೆ. ಸಮಾಜ ವ್ಯವಸ್ಥೆಯಲ್ಲಿ ಇಂದಿಗೂ ಹೆಣ್ಣಿನ ಜೈವಿಕ ಸಹಜ ಕ್ರಿಯೆಯನ್ನು ಆಧರಿಸಿ ಹೆಣ್ಣನ್ನು 'ಸಂತಾನ'ಕ್ಕಾಗಿ ಇರುವವಳು ಎನ್ನುವ ಚಿಂತನೆಗಳು ಉಳಿದಿರುವುದು ಇದೆ. ಜೊತೆಗೆ ಹೆಣ್ಣಿನ ಜೈವಿಕ ಕ್ರಿಯೆಗಳನ್ನು ಆಧರಿಸಿ ಹೆಣ್ಣಿಗೆ ಪಾಲನೆ, ಪೋಷಣೆ, ರಕ್ಷಣೆಯಂತಹ ಮತ್ತು (ಗೃಹಕೃತ್ಯಗಳು) ಜವಾಬ್ದಾರಿಗಳನ್ನು ಹೇರಿದೆ. ಆದರೆ ಗಂಡಿಗೆ ಗೃಹಕೃತ್ಯಗಳಂತಹ ಜವಾಬ್ದಾರಿಗಳಿಂದ ಮುಕ್ತಗೊಳಿಸಿ ಸ್ವತಂತ್ರ, ಸ್ವಾಯತತೆ, ಸಾರ್ವಭೌಮತೆ, ದೊರೆಯಲು ಕಾರಣವಾಗಿವೆ. ಇದು ಇಂದಿಗೂ ಕಂಡುಬರುವ ಮಾತೃ ಆರಾಧನೆ ದೇವತೆಗಳಿಂದ ಹಿಡಿದು ಪ್ರಸ್ತುತ ಸಮಾಜ ವ್ಯವಸ್ಥೆಯವರೆಗೂ ಕಂಡುಬರುತ್ತದೆ.

ಹೆಣ್ಣಿನ ಜೈವಿಕ ಕ್ರಿಯೆಯಾದ ಸಂತಾನ, ಮಾತೃತ್ವಕ್ಕೆ ಮಾತ್ರ ಮಹತ್ವ ನೀಡುತ್ತವೆ. ಉದಾ: ಎಲ್ಲಮ್ಮ, ಹುಲಿಗೆಮ್ಮ, ಗಾಳೆಮ್ಮ, ಧ್ಯಾನಮ್ಮ, ದುರುಗವ್ವ, ಮೊದಲಾದ ಹೆಣ್ಣು ದೇವತೆಗಳ ಕೊನೆಯಲ್ಲಿ, ಬರುವ ಅಮ್ಮ, ಅವ್ವ ಎಂಬ ಪದಗಳು ಮಾತೃ ಸಂಸ್ಕೃತಿಯಿಂದ ಬಂದವುಗಳು. ಇದನ್ನೇ ಸ್ತ್ರೀವಾದಿಗಳು ಸ್ತ್ರೀತ್ವ ಅಂತಕರೆಯುತ್ತಿದ್ದಾರೆ. ಈ ಮಾತೃತ್ವದ ಪದಗಳು 'ದೈವದ' ವೈಭವೀಕರಣದಲ್ಲಿ ಮೂಡಿ ಬಂದಿರುವುದರೊಂದಿಗೆ ಕೆಲವೊಂದು ಗುಣಗಳನ್ನು ನಿರೀಕ್ಷಿಸಿದೆ. ಅದೇನೆಂದರೆ ಸಂತಾನಫಲ, ಪಾಲನೆ, ಪೋಷಣೆ, ರಕ್ಷಣೆ, ಸಹನೆ, ತಾಳ್ಮೆ ಈ ಎಲ್ಲ ಗುಣಗಳನ್ನು ಹೊಂದಿರುವವಳು ಮಾತ್ರ 'ಮಾತೃ' (ತಾಯಿ/ಹೆಣ್ಣು) ಎನ್ನುವ ಕಲ್ಪನೆಯನ್ನು ಮಾತೃ ಆರಾಧನೆ ನೆಲೆಯಲ್ಲಿಯೇ ಜೈವಿಕತೆಯನ್ನಾಧರಿಸಿ ಮುಂದುವರೆಸಿಕೊಂಡು ಬರಲಾಗಿದೆ. ಜೊತೆಗೆ ಹೆಣ್ಣಿಗೆ ಹಲವು ಜವಾಬ್ದಾರಿಗಳನ್ನು ಹೇರಲು ಕಾರಣವಾಗಿದೆ. ಹಾಗೆ ಹೆಣ್ಣಿಗೆ ವಿವಾಹ, ತಾಯ್ತನ, ಮಕ್ಕಳ ಪಾಲನೆ, ಪೋಷಣೆ, ರಕ್ಷಣೆ ಇವುಗಳು ಹೆಣ್ಣಿಗೆ ಇರುವ ಮುಖ್ಯ ಕರ್ತವ್ಯಗಳು ಎಂದು ನಿಗಧಿಗೊಳಿಸಿವೆ. ಇದನ್ನು ಮಾತೃ ಆರಾಧನೆಯ ಮುಖಾಂತರ ತಿಳಿಯಬಹುದಾಗಿದೆ. ಹೆಣ್ಣಿನ ಜೈವಿಕತೆಯ ಕಾರಣದಿಂದಾಗಿ ಆಕೆಯು ಶಿಶುಜನನ ಹಾಗೂ ಶಿಶುವಿನ ಪಾಲನೆ, ಪೋಷಣೆ, ರಕ್ಷಣೆಯಂತಹ ಜವಾಬ್ದಾರಿಯನ್ನು ಆಕೆಗೆ ವಹಿಸಿಕೊಡಲಾಗಿದೆ. ಆದರೆ ಜೈವಿಕ ಸಹಜ ಕ್ರಿಯೆಯು 'ತಾಯ್ತನ' ನೈಸರ್ಗಿಕ ಕ್ರಿಯೆಗೆ ಸಂಬಂಧಿಸಿದ್ದು, ಪಾಲನೆ, ಪೋಷಣೆ, ರಕ್ಷಣೆ, ಜವಾಬ್ದಾರಿ ಕೇವಲ ಹೆಣ್ಣಿನ ಹೊಣೆಗಾರಿಕೆಗೆ ಸಂಬಂಧಿಸಿದ್ದಲ್ಲ ಅದನ್ನು ಯಾರಾದರೂ ಮಾಡಬಹುದು. ಆದರೆ ಹೆಣ್ಣಿಗೆ ಮಾತ್ರ ಇವುಗಳ ಮೂಲಕ ಗೃಹಬಂಧನದಲ್ಲಿಡುವ ತಂತ್ರಗಳನ್ನು ಮಾಡುತ್ತ ಬಂದಿರುವುದು ಕಾಣುತ್ತದೆ. ಇದು ಪಿತೃಪ್ರಧಾನ ವ್ಯವಸ್ಥೆ ಪುರುಷ ರಾಜಕಾರಣವಾಗಿದೆ. ಯಾಕೆಂದರೆ ಸಂಪ್ರದಾಯ ಸಂಗತಿಗಳಲ್ಲಿ ಹೆಣ್ಣಿಗೆ ಪಾಲನೆ, ಪೋಷಣೆ, ರಕ್ಷಣೆ ಹೆಣ್ಣಿನ ಕರ್ತವ್ಯಗಳೆಂಬಂತೆ ಬಿಂಬಿಸಿರುವುದು ಕಂಡುಬರುತ್ತದೆ. ಇದು ಮಾತೃ ಆರಾಧನೆ ನೆಲೆಯಲ್ಲಿ ಕಂಡುಬರುವ ಸಂಪ್ರದಾಯ ಆಚರಣೆ ಬಹುತೇಕವಾಗಿ ಈ ತೆರನಾದ ಜವಾಬ್ದಾರಿಯನ್ನು ಹೊತ್ತುಕೊಂಡಿದೆ. ಇದರಿಂದಾಗಿ ಪೂಜೆಗೆ ಅಥವಾ ಆರಾಧನೆಗೆ ಒಳಪಟ್ಟಿರುವುದು ಕಂಡುಬರುತ್ತದೆ. ಆದುದರಿಂದಲೇ 'ಮಾತೃ' ದೇವತೆ ಸ್ತ್ರೀನಿಷ್ಠ ನೆಲೆಯಲ್ಲಿ ಸ್ವೀಕರಿಸಲಾಗದು ಎಂದಿರುವುದು ಸ್ಪಷ್ಟವಾಗುತ್ತಿದೆ.

ಸಮಾಜದಲ್ಲಿ ಹೆಣ್ಣಿನ ಜೈವಿಕ ಕ್ರಿಯೆಯನ್ನು ಪುರುಷ ಪ್ರಧಾನತೆಯು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡಿದೆ. ಅದು ಹೇಗೆಂದರೆ ಪಿತೃಪ್ರಧಾನ ಸಮಾಜವು ಪುರುಷ ಇಷ್ಟಪಡುವ ರೀತಿಯಲ್ಲಿ ಹೆಣ್ಣು ಸಂತಾನವನ್ನು ಹೊಂದಬೇಕು. ಮತ್ತು ಪುರುಷ ಪ್ರಧಾನತೆ ಇಷ್ಟಪಡುವ 'ಮಗು'ವನ್ನು ಹೆರಬೇಕೆಂಬ ಒತ್ತಾಯವನ್ನು ಹೆಣ್ಣಿನ ಜೈವಿಕ ಸಹಜ ಕ್ರಿಯೆ ಮೇಲೆ ಹೇರಿರುವುದು ಇದೆ. ಆದರೆ ನೈಸರ್ಗಿಕ ಕ್ರಿಯೆಯಾದ ಸಂತಾನವು ಯಾರೋ ಹೇಳಿದಂತೆ ಸೃಷ್ಟಿಯಾಗುವುದಿಲ್ಲ. ಆದರೆ ಅದನ್ನು ಮರೆಮಾಚಿ ತನ್ನ ಸ್ವಾರ್ಥಕ್ಕಾಗಿ ನೀರು,

ಭೂಮಿಯಂತೆ ಹೆಣ್ಣನ್ನು ಉಪಭೋಗದ ನೆಲೆಯಲ್ಲಿ ಕಂಡಿದ್ದಾನೆ. ಮತ್ತು ಫಲಕೊಡುವ ಭೂಮಿಯನ್ನು ಸಂತಾನಕೊಡುವ ಹೆಣ್ಣನ್ನು ಒಂದೇ ಆಕೃತಿಯಲ್ಲಿ ಆಲೋಚಿಸಿ ಇವುಗಳನ್ನು ವಸ್ತುವಿನಂತೆ ಬಳಸಿಕೊಂಡು ಹೊರಟಿರುವುದು ಕಂಡುಬರುತ್ತದೆ. ಇದನ್ನು ಹೇಗೆ ಹೆಚ್ಚು ಹೆಣ್ಣು ಮಕ್ಕಳನ್ನು ಹೆತ್ತಂತ ಹೆಣ್ಣಿಗೆ ನೀಡುವ ಹಿಂಸೆಯಿಂದ ಮತ್ತು ಹೆಣ್ಣನ್ನು ಹೆಣ್ಣು ಹೆತ್ತದ್ದಕ್ಕೆ ಬೇರೊಂದು ಹೆಣ್ಣನ್ನು ಮದುವೆಯಾಗುವ ಸಾಂದರ್ಭಿಕ ಸಂಗತಿಗಳಿಂದ ತಿಳಿದುಬರುತ್ತದೆ.

ಆರಾಧನೆಗೆ ಒಳಪಡುವ ದೇವತೆಗಳಲ್ಲಿ ಪಾತಿವ್ರತ್ಯದ ಬಂಧನದಲ್ಲಿ ಇರಿಸಿರುವುದು ಮತ್ತು ತಾಯ್ತನಕೋಸ್ಕರ ಆರಾಧನೆಗೆ ಒಳಪಡುವ ಮಾತೃದೇವತೆಗಳು ಕಂಡುಬರುತ್ತವೆ. ಅದು ಹೇಗೆಂದರೆ ಹೆಣ್ಣಿನ ಜೈವಿಕತೆಗೆ ಸಂಬಂಧಿಸಿದಂತೆ ಅಂಗಗಳಿಗೆ ಶೀಲ, ಪಾತವ್ರತ್ಯ ಕಾಪಾಡಿಕೊಂಡು ಹೋಗಬೇಕೆಂದು ಮತ್ತು ಶೀಲ ಪಾತಿವ್ರತ್ಯೆ ಕಾಪಾಡಿಕೊಂಡು ತಾಯ್ತನ ಪಡೆದಂತಹ, ಇಲ್ಲವೆ ಪಾತಿವ್ರತ್ಯ ಕಾಪಾಡುವುದಕ್ಕಾಗಿ ಪ್ರಾಣಕಳೆದುಕೊಂತಂಹ ಹೆಣ್ಣನ್ನು ಮಾತ್ರ 'ದೇವತೆ' ಎಂದು ಕರೆದು ಪೂಜಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಹಾಗೆ ಅಂತಹ ಹೆಣ್ಣು, ಮಾತ್ರ 'ಆರಾಧನೆ' 'ಗೌರವ'ಕ್ಕೆ ಪಾತ್ರಳಾಗುತ್ತಾಳೆ. ಶೀಲಕ್ಕಾಗಿ ಪ್ರಾಣ ಕಳೆದುಕೊಂಡ ಸ್ತ್ರೀಯರು ಹಾಗೆ ಪಾತಿವ್ರತ್ಯವನ್ನು ಕಾಪಾಡುವುದಕ್ಕಾಗಿ ಪತಿಯು ಮರಣವನ್ನಪ್ಪಿದಾಗ ಅವನ ಜೊತೆಯಲ್ಲಿ ಸಹಗಮನ ಮಾಡಿದ ಸತಿಯರ ಮಾಸ್ತಿ ಕಲ್ಲುಗಳನ್ನು ದೇವತೆಗಳೆಂದು ಪೂಜಿಸಲಾಗುತಿದೆ. ಹಾಗೆ ಕಥನಗೀತೆಗಳು, ಹಾಡು, ಪುರಾಣ, ಸಂಪ್ರದಾಯಿಕ ಮೌಲ್ಯಗಳು ಬಹುತೇಕವಾಗಿ ಹೆಣ್ಣಿನ ಜೈವಿಕತೆಯನ್ನಾಧರಿಸಿ ನಿರ್ಬಂಧಗಳು ಹೇರಿರುವುದು ದೊರೆಯುತ್ತದೆ.

ಹೆಣ್ಣಿನ ಜೈವಿಕತೆಯನ್ನು ಆಧಾರವಾಗಿಟ್ಟುಕೊಂಡು ಉಗಮಗೊಂಡ ಸಂಪ್ರದಾಯ ಆಚರಣೆಗಳು ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗೆ ಹಲವು ನೆಲೆಯಲ್ಲಿ ಶೋಷಣೆ ಮಾಡುತ್ತಾ ಹೋಗುವುದು ಕಂಡುಬರುತ್ತದೆ. ಅದು ಹೇಗೆಂದರೆ ಹೆಣ್ಣನ್ನು 'ಬಂಜೆ' ಎಂದು ಹಿಯ್ಯಾಳಿಸುವ ಮೂಲಕ ಹೆಣ್ಣಿನ 'ತಾಯ್ತನ'ವನ್ನು (ಸಂತಾನ, ಪ್ರಜನನ) ಎತ್ತಿ ಹಿಡಿಯಲಾಗಿದೆ. ತಾಯಿಯಾಗುವುದಕ್ಕಾಗಿ ಹೆಣ್ಣು ವಿವಿಧ ರೀತಿಯಲ್ಲಿ ದೇವತೆಯ ಪೂಜೆ, ದೇವರ ಪೂಜೆ, ವ್ರತ, ಆರಾಧನೆ ಎನ್ನುವ ಸಂಪ್ರದಾಯ ಆಚರಣೆಗಳನ್ನು ಮಾಡುವಂತಹ ಒತ್ತಡ ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ದೇಹದ ಒಳಗಡೆ ನಡೆಯುವ ಜೈವಿಕ ಸಂಬಂಧಿ ಕ್ರಿಯೆಗಳು ಕೆಲವೊಮ್ಮೆ ಸರಿಯಾಗಿ ನಿರ್ವಹಿಸಬಹುದು ಇಲ್ಲವೆ ವಿಫಲವಾಗಬಹುದು. ಇಲ್ಲವೆ ದೇಹದಲ್ಲಿ ಆರೋಗ್ಯದ ದೋಷವು ಇರಬಹುದು ಅಥವಾ ಯಾವುದೋ ಕಾರಣಕ್ಕಾಗಿ ಗರ್ಭಧಾರಣೆ ಹೊಂದದೆ ಇರಬಹುದು. ಹೀಗೆ ಜೀವ ಸಂಬಂಧಿ ಕ್ರಿಯೆಗಳು ವಿಫಲವಾಗಿರುವ ಸಂದರ್ಭ ಕಂಡುಬಂದರು. ಅದನ್ನು ನೋಡದೆ ಸಂಪ್ರದಾಯಿಕ ಹಿನ್ನೆಲೆಯಲ್ಲಿ ಹೆಣ್ಣಾದವಳು ಹೆರಲೇಬೇಕು ಎನ್ನುವ ಒತ್ತಾಯಗಳ ಹಿನ್ನೆಲೆಯಲ್ಲಿ ಪೂಜೆ, ಆರಾಧನೆಯಂತಹ ಸಂಪ್ರದಾಯ ಆಚರಣೆಗೆ ಒಳಪಡಿಸುತ್ತಿರುವುದು ಕಂಡುಬರುತ್ತದೆ.

ಯಾಕೆಂದರೆ ಭಾರತೀಯ ಪುರುಷ ಪ್ರಧಾನ ಸಂಸ್ಕೃತಿಗಳು ಹೆಣ್ಣಿನ ಬಂಜೆತನವನ್ನು ಒಂದು ಕೊರತೆಯನ್ನಾಗಿಸಿ ಪ್ರತಿನಿಧಿಸಿವೆ ಮಕ್ಕಳಾಗದಿದ್ದರೆ ಹೆಣ್ಣನ್ನು ಹೊಣೆಗಾರಳನ್ನಾಗಿ ಮಾಡಿ ಪುರುಷನಿಗೆ ಮರುಮದುವೆಗೆ ಅವಕಾಶ ಕಲ್ಪಿಸಲಾಗಿದೆ, ಇಲ್ಲಿ ಗಂಡಿನ ದೈಹಿಕ ನ್ಯೂನತೆಯನ್ನು ಮರೆಮಾಚಿ ಹೆಣ್ಣಿನ ದೈಹಿಕ ನ್ಯೂನತೆಯನ್ನು ಮಾತ್ರ ಕಲ್ಪಿಸಿಕೊಂಡು ಹೆಣ್ಣಿಗೆ ಹಲವು ರೀತಿಯಲ್ಲಿ ಶೋಷಣೆಗೆ ಒಳಪಡಿಸುತ್ತಿರುವುದು ಕಂಡುಬರುತ್ತದೆ. ಅದು ಹೇಗೆಂದರೆ ಪಾತಿವ್ರತ್ಯವನ್ನು ಮೀರಿ ಮಕ್ಕಳನ್ನು ಪಡೆದರೆ ಅಂತಹ ಹೆಣ್ಣಿಗೆ, ಮಕ್ಕಳಿಗೆ ಸಮಾಜದಲ್ಲಿ ಗೌರವ ಮರ್ಯಾದೆ ಇಲ್ಲದಂತ ಸ್ಥಿತಿ ಉಂಟು ಮಾಡುವುದರ ಮೂಲಕ ಒಬ್ಬ ಪುರುಷನಿಗೆ ಒಂದು ಹೆಣ್ಣು ಅದು ವಿವಾಹ ಸಂಬಂಧದಲ್ಲಿ ಮಾತ್ರ ಇರಬೇಕು ಎನ್ನುವ ಮೌಲ್ಯವನ್ನು ಹಾಕುವುದರ ಮೂಲಕ ಹೆಣ್ಣನ್ನು ಗಂಡಿಗೆ (ಗಂಡನಿಗೆ) ಅಧೀನಳಾಗಿಯೇ ಇರಬೇಕೆಂದು ಮೌಲ್ಯವನ್ನು ಈ ಮೂಲಕ ಬಿತ್ತಿರುವುದು ಕಂಡುಬರುತ್ತದೆ.

ಜೈವಿಕತೆಯನ್ನು ಆಧರಿಸಿ ಉಗಮಗೊಂಡ ಸಂಪ್ರದಾಯ ಆಚರಣೆಗಳು ಹೆಣ್ಣಿಗೆ ಮೌಲ್ಯಗಳನ್ನು ಹೇರುವುದರ ಜೊತೆಗೆ ಜೈವಿಕ ಕ್ರಿಯೆಯಾದ ಸಂತಾನವನ್ನು ಹೊಂದುವುದು ಖಡ್ಡಾಯವೆನ್ನುವಂತೆ ಮಾಡಿರುವುದು ಕಂಡುಬರುತ್ತದೆ ಇದಕ್ಕೆ ಜನಪದ ಸಾಹಿತ್ಯದಲ್ಲಿ ನೋಡುವುದಾದರೆ ಈ ರೀತಿಯಾಗಿ ದೊರೆಯುತ್ತದೆ. 'ಗಂಡನಿಗೆ ತೆತ್ತಲ್ಲದೆ ಬುದ್ಧಿಯಿಲ್ಲ ಹೆಂಗಸ್ಸಿಗೆ ಹೆತ್ತಲ್ಲದೆ ಬುದ್ಧಿ ಇಲ್ಲ' ಎನ್ನುವ ಗಾಧೆ ಇದನ್ನು ವಿಶ್ಲೇಷಿಸಿದರೆ ಗಂಡನಿಗೆ ತೆತ್ತಲದೆ ಬುದ್ದಿಯಿಲ್ಲ ಎನ್ನುವುದು ಪುರುಷನ ಆರ್ಥಿಕ ಉತ್ಪಾದನಾ ಸ್ಥಿತಿಯನ್ನು ಪ್ರಧಾನವಾಗಿಟ್ಟಿರುವುದೇ ಆಗಿದೆ. ಹೆಂಗಸ್ಸಿಗೆ ಹೆತ್ತಲ್ಲದೆ ಬುದ್ದಿಯಿಲ್ಲ ಎನ್ನವುದು ಹೆಣ್ಣಿನ ಜೈವಿಕ ಕ್ರಿಯೆಯಾದ ಸಂತಾನ (ಪ್ರಜನನ ತಾಯ್ತನ) ಪಡೆಯಲೇಬೇಕೆಂದು ತಿಳಿಸಿರುವುದು ಕಂಡುಬರುತ್ತದೆ. ಈ ತೆರನಾದ ಗಾದೆಗಳನ್ನು ಪರಿಶೀಲಿಸಿದರೆ ಒತ್ತಾಯ ಮಕ್ಕಳನ್ನು ಅನಿವಾರ್ಯವಾಗಿ ಪಡೆಯಬೇಕೆಂದು ಪರೋಕ್ಷವಾಗಿ ಸೂಚಿಸುತ್ತಿರುವುದು ಕಾಣುತ್ತದೆ.

ಇನ್ನು ಹೆಣ್ಣಿನ ಬಗೆಗೆ ಹಲವು ಬಗೆಯಲ್ಲಿ ನಂಬಿಕೆ, ಮಿಥ್ ಕಲ್ಪನೆಯನ್ನು ಸೃಷ್ಟಿ ಮಾಡಿಕೊಂಡು ಬಂದಿರುವುದು ಮಾತೃ ಆರಾಧನೆಯ ಸಂದರ್ಭದಿಂದಲ್ಲೂ ದೊರೆಯುತ್ತದೆ. ಅದನ್ನು ಉದಾಹರಣೆಯಾಗಿ ಚಾಮುಂಡಿ, ದುರ್ಗೆ, ಕಾಳಿ ಮುಂತಾದ ಹೆಣ್ಣು ದೇವತೆಗಳನ್ನು ಹಲವು ಬಗೆಯಲ್ಲಿ ನಿರ್ವಚಿಸಿಕೊಂಡು ಬಂದಿರುವಲ್ಲಿಂದ ನೋಡಬಹುದಾಗಿದೆ ಹಾಗೆ ಪ್ರಸ್ತುತ ಸಮಾಜದಲ್ಲಿ ಹೆಣ್ಣಿಗೆ ಹೆಮ್ಮಾರಿ, ನಾಶಮಾಡುವವಳು ಸಂಹಾರಿಸಿ, ರಾಕ್ಷಸಿ, ಹೀಗೆ ನಾನಾತರನಾಗಿ ಕರೆದುಕೊಂಡು ಬರುತ್ತಿರುವುದು ಕಂಡುಬರುತ್ತಿದೆ. ಹೆಣ್ಣು 'ಮಾತೃ'ವಾಗಿ ಕಾಪಾಡುವವಳಾಗಿ, ಪೋಷಕಿಯಾಗಿ, ರಕ್ಷಕಿಯಾಗಿ ಹಲವಾರು ರೀತಿಯಲ್ಲಿ ಸೃಷ್ಟಿಗೊಂಡು ಕೊನೆಗೆ ಹೆಣ್ಣು ನಕಾರಾತ್ಮಕವಾಗಿ ಚಿತ್ರಿತಗೊಂಡಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಪುರುಷ ಪ್ರಧಾನವಾದ ತಂತ್ರವಾಗಿದೆ. ಏಕೆಂದರೆ ಇದೇ ಮಾನವ ಮೂಲದಲ್ಲಿ ಹೆಣ್ಣಿನ

ಜೈವಿಕ ಸಹಜ ಕ್ರಿಯೆಯನ್ನು ಸೃಷ್ಟಿ ಶಕ್ತಿ ಎಂದು ಪೂಜಿಸಿಕೊಂಡು ಬಂದು ನಂತರದಲ್ಲಿ ಸೃಷ್ಟಿಶಕ್ತಿಯಾದ ಹೆಣ್ಣಿಗೆ ಹಲವಾರು ನಕಾರಾತ್ಮಕ ಗುಣಗಳನ್ನು ಆರೋಪಿಸಿರುವುದು ಪುರುಷ ಪ್ರಧಾನ ತಂತ್ರವಾಗಿದೆ ಇದಕ್ಕೆ ಉದಾಹರಣೆಯಾಗಿ ಪುರುಷ ಪ್ರಧಾನತೆಯು ಇಂದಿಗೂ ಹೆಣ್ಣನ್ನು ತನಗೆ ಬೇಕಾದಂತೆ ನೆಡೆಸಿಕೊಂಡು, ಬಳಸಿಕೊಂಡು ಹೊರಟಿರುವುದು ಮತ್ತು ಹಲವು ನೆಲೆಯಲ್ಲಿ ನಿರ್ವಚಿಸಿಕೊಂಡು ಹೊರಟ್ಟಿರುವುದು ಕಂಡುಬರುತ್ತಿದೆ. ಜೊತೆಗೆ ಹೆಣ್ಣಾದವಳು ಯಾವಾಗಲೂ ಪುರುಷನ ಸೇವೆಗೆ ಬದ್ದಳಾಗಿರುವವಳು ಮತ್ತು ಪುರುಷನ ರಕ್ಷಣೆಗೆ, ಶ್ರೇಯಸ್ಸು ಬಯಸುತ್ತಿರಬೇಕು ಅಂದಾಗ ಮಾತ್ರ ಒಳ್ಳೆಯ ಹೆಣ್ಣಾಗುತ್ತಾಳೆ ಎಂದು ಹೆಂಡತಿಯಂತಹ ಪಾತ್ರಗಳ ಮೂಲಕ ಸಮಾಜದಲ್ಲಿ ಹೆಣ್ಣಿಗೆ ನಿರ್ಬಂಧ ಹಾಕಿರುವುದು ಕಂಡುಬರುತ್ತದೆ. ಹೀಗೆ ಹೆಣ್ಣಿನ ಜೈವಿಕತೆಯನ್ನು ಕೇಂದ್ರವಾಗಿಟ್ಟುಕೊಂಡಿರುವ ನಂಬಿಕೆ ಸಂಪ್ರದಾಯ ಆಚರಣೆಗಳು ಹೆಣ್ಣನ್ನು ಹಲವು ರೀತಿಯಲ್ಲಿ ಕಾಣಲು, ನಿರ್ವಚಿಸಲು ಕಾರಣವಾಗಿವೆ. ಇನ್ನು ಪುರುಷ ಪ್ರಧಾನತೆ ಸೃಷ್ಟಿ ಮಾಡಿರುವ ಮೌಲ್ಯಗಳಿಗೆ ವಿರುದ್ಧವಾಗಿ ಹೆಣ್ಣು ವರ್ತಿಸಬಾರದು ವರ್ತಿಸಿದರೆ ಅಂತಹ ಹೆಣ್ಣನ್ನು ಹೆಣ್ಣಾಗಿ ನೋಡದಂತಹ ಸ್ಥಿತಿಯನ್ನು ಹುಟ್ಟುಹಾಕಿರುವುದು ಕಂಡುಬರುತ್ತದೆ. ಇದಕ್ಕೆ ಉದಾಹರಣೆಯಾಗಿ ಗ್ರಾಮದೇವತೆಗಳಿಂದ ತಿಳಿದುಬರುತ್ತದೆ. ಹೆಣ್ಣು ಸಂತಾನದ ಜೊತೆಗೆ 'ಅನ್ನ'ವನ್ನು ನೀಡುವವಳಾಗಿ, ರಕ್ಷಕಿಯಾಗಿ, ತ್ಯಾಗಿಯಾಗಿ, ಆದಿಶಕ್ತಿ ಎಲ್ಲವನ್ನೂ ನೀಡುವವಳಾಗಿ ಪೂಜೆ, ಆರಾಧನೆಗೆ ಸಂಪ್ರದಾಯ ಆಚರಣೆಗೆ ಒಳಗಾಗುತ್ತಿದ್ದಾಳೆ, ಅದೇ ಹೆಣ್ಣು ಪುರುಷ ನಿಷ್ಟ ಮೌಲ್ಯಗಳಿಗೆ ವಿರುದ್ಧ ನಿಂತರೆ ಹೆಣ್ಣಿಗೆ, ವಿನಾಶಿನಿ, ಉಗ್ರರೂಪಿಣಿ, ಹೆಮ್ಮಾರಿ, ಮಾಯೇ, ಮಾಯಗಾತಿ ಹೀಗೆ ನಕಾರಾತ್ಮಕವಾಗಿ ಹೆಣ್ಣನ್ನು ಕರೆಯಲಾಗುತ್ತಿದೆ.

ಇದಕ್ಕೆ ದೇವತೆಯನ್ನು ನಿರ್ವಚಿಸುವ ಸಂದರ್ಭದಲ್ಲಿ 'ಪೊಲಂಕಿ ರಾಮಮೂರ್ತಿ'ಯವರು "ವಿಶ್ವರೂಪಿ ಮಹಾಮಾತೆ, ಭಾರತದ ಆಧಿದೇವತೆಯಾದ ಶಕ್ತಿ, ಕಾಳಿ, ದುರ್ಗ, ಗರ್ಭದಂತೆ, ಮಹಾಂಧಕಾರಳಾದ ಕಾಪಾಡುವ ಕಾಳಿ, ಗರ್ಭದಂತೆ, ಆಗಮ್ಯಳಾದ, ದುರ್ಗಮಳಾದ ದುರ್ಗೆ, ಹುಲಿಯನ್ನೋ ಸಿಂಹವನ್ನೋ, ಕೋಣವನ್ನೋ, ಸವಾರಿ ಮಾಡಿದ ರಾಕ್ಷಸನನ್ನು ಸಂಹಾರ ಮಾಡುವ ಭಾಗಿಯಲ್ಲಿರುವ ಅನೇಕ ಕೈಗಳು, ಅನೇಕಾಯುಧಗಳು, ರುಂಡಮಾಲೆಯ, ರಕ್ತನಾಲಿಗೆಯ, ಕೋರೆಹಲ್ಲಿನ, ಬಿರುಗಣ್ಣಿನ ಭೀಕರ ಮಾತೆ, ಶಕ್ತಿ, ಕಾಳಿ, ದುರ್ಗೆ ಇವಳು ಶಕ್ತದಲ್ಲಿ ಮೂಲದೇವತೆ, ಬಂಗಾಳದಲ್ಲಿ ರಾಜ್ಯಮಾತೆ, ಭಾರತದಾದ್ಯಂತ ತಾಯಿದೇವತೆ, ಈ ದೇವತೆಗೆ ಹಿನ್ನೆಲೆಯಾಗಿ ಪ್ರೌಢವಾದ ತಾತ್ವಿಕ ಚಿಂತನೆ ಇದೆ. ಗಾಢವಾದ ಆಧ್ಯಾತ್ಮಿಕತೆ ಇದೆ. ಪ್ರಖರವಾದ ಧರ್ಮವಿದೆ, ಸಂಪ್ರದಾಯದ ಪರಂಪರೆ, ಸಾಂಸ್ಕೃತಿಕ ಆಚಾರವಿಧಿಗಳಿವೆ". (ಪೊಲಂಕಿ ರಾಮಮೂರ್ತಿ, ೧೯೯೯, ಪುಟ.೩೭) ಹಾಗೇ "ಜನಸಾಮಾನ್ಯರ ಮಟ್ಟದಲ್ಲಿ ಅತ್ಯಂತ ಜನಪ್ರಿಯವಾದ ಗ್ರಾಮದೇವತೆಯಾಗಿ, ಭಾರತದ್ಯಂತವೂ ಸಾರ್ವತ್ರಿಕವಾದ ಸಾಂಕ್ರಮಿಕ

ರೋಗ ರುಜಿನುಗಳಿಂದ ಮರಣಭಯಳಾದ ರಕ್ತಬಲಿಗಳಿಂದ ಸಂತೃಪ್ತಳಾಗುವ ಮಾರಿ ಅಮ್ಮಕಾಳಿ, ದುರ್ಗ, ಚಂಡಿ ಇತ್ಯಾದಿ ದೇವತೆಯಾಗಿದ್ದಾಳೆ ಈ ರೀತಿಯಾಗಿ ಹರಿಜನರಿಂದ ಬ್ರಾಹ್ಮಣದವರೆಗೂ ಸುಶಿಕ್ಷಿತರಿಂದ ಅನಕ್ಷರಸ್ಥರವರೆಗೂ ಸಾರ್ವತ್ರಿಕವಾಗಿ ಪೂಜೆಗೊಳ್ಳುವ ಇಡೀ ಭಾರತದ ದೇಶಮಾತೆಯಾದ ಶಕ್ತಿ ವಿಶ್ವದ ಸಂಸ್ಕೃತಿಗಳಲ್ಲೆ ವಿಶಿಷ್ಟವಾದ ವಿಭಿನ್ನವಾದ, ಭಯಾನಕವಾದ ಹೆಣ್ಣು ದೇವತೆ ತಾಯಿದೇವತೆ. ಹೀಗಾಗಿ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು ಮೂಲಭಯಳಾಗಿದ್ದಾಳೆ. ಈ ಮೂಲ ಭೀತಿ ನಮ್ಮ ಸಂಸ್ಕೃತಿಯಲ್ಲಿ ಹೆಣ್ಣು ಮೂಲಭಯ ಈ ಮೂಲಭೂತ ನಮ್ಮ ಸಂಸ್ಕೃತಿಯ ಆದಿಯಾದ ಋಗ್ವೇದದಿಂದಲೇ ಹುಟ್ಟಿಕೊಳ್ಳುತ್ತದೆ. ಋಗ್ವೇದದಲ್ಲಿ 'ಕಿರುಬನ ಹೃದಯದವಳು', ಐತರೇಯ ಬ್ರಹ್ಮಣದಲ್ಲಿ 'ದಾರಿಕಾ ಹೃದಯದಾರಿಕಾ,' ಅಂದರೆ ಹೆಣ್ಣು ಹೃದಯವನ್ನು ಬೇಧಿಸುವವಳು ತೈತ್ರಾಯ ಸಂಹಿತೆವೆನ್ನಿಸುತ್ತದೆ. ಒಳ್ಳೆಯ ಹೆಂಗಸು, ಕೆಟ್ಟ ಗಂಡನಿಗಿಂತ ಕಡೆ ಎಂದು ಮೈತ್ರೇಯ ಸಂಹಿತೆ ಸಾರುತ್ತದೆ. ಹೆಣ್ಣು ಅಸತ್ಯ". (ಉದ್ಧೃತ: ಪೊಲಂಕಿ ರಾಮಮೂರ್ತಿ, ಪುಟ-೩೭, ೧೯೯೯). ಹೀಗೆ ಹೆಣ್ಣನ್ನು ನಿರ್ವಚಿಸಿಕೊಂಡು ಬಂದಿರುವ ಮಾಹಿತಿಯಲ್ಲಿ ಹೆಣ್ಣಿನ ಜೈವಿಕ ಸಹಜ ಕ್ರಿಯೆಯೂ ಕೇವಲ ಸಹಜ ಕ್ರಿಯೆಯಾಗಿರದೇ ಅದೊಂದು 'ಶಕ್ತಿ'ಯೆಂದು ಬಿಂಬಿತಗೊಂಡು ನಂತರದಲ್ಲಿ ಹೆಣ್ಣನ್ನು ಹಲವು ರೀತಿಯಲ್ಲಿ ನಿರ್ವಚನೆಗೊಳಪಡಿಸಿರುವುದು ಕಂಡುಬರುತ್ತದೆ.

ಹೆಣ್ಣಿನ ಕುರಿತಾಗಿ ವಿಶೇಷವಾಗಿ ಕಲ್ಪಿಸಿಕೊಂಡು ನಿರ್ವಚಿಸಿಕೊಂಡು ಬಂದಿದ್ದರಿಂದಲೇ ಹೆಣ್ಣಿನ ಜೈವಿಕ ಕ್ರಿಯೆ ಸಹಜ ಕ್ರಿಯೆಯಾಗಿರದೇ ಅದು ಭಯ, ರಕ್ಷಣೆ, ಪಾಲನೆ, ಪೋಷಣೆ ಹೀಗೆ ನಾನಾತೆರವಾಗಿ ನಿರ್ವಚನೆಗೆ ಕಾರಣವಾಗಿದೆ. ಆದರೆ ಜೈವಿಕ ಕ್ರಿಯೆಯೂ ಯಾವುದೇ ಭಯ ಸೃಷ್ಟಿ ಮಾಡುವುದಾಗಲಿ, ಉಗ್ರರೂಪ ತಾಳುವುದಾಗಲಿ, ಸಂಹಾರ ಮಾಡುವುದಾಗಲಿ, ಪೋಷಣೆ, ಪಾಲನೇ, ರಕ್ಷಣೆ ಮಾಡುವುದಲ್ಲ. ಆದರೆ ಆರಾಧನೆ, ಸಂಪ್ರದಾಯ ಆಚರಣೆಗಳ ಮುಖಾಂತರ ಹೆಣ್ಣನ್ನು ಹಲವು ನೆಲೆಯಲ್ಲಿ ನಿರ್ವಚಿಸಿಕೊಂಡು ಬಂದಿದ್ದರಿಂದಲೇ ಇಂದು ಹೆಣ್ಣು ಹಲವು ಸಂಪ್ರದಾಯ ಆಚರಣೆಗಳಿಗೆ, ಮೌಲ್ಯಗಳಿಗೆ ಒಳಗಾಗಿ ಹಲವು ಬಗೆಯಲ್ಲಿ ನಿರ್ವಚನೆಗೊಂಡಿದ್ದಾಳೆ ಹಾಗಾಗಿ ಇಂದು ಹೆಣ್ಣಿಗೆ ಹಿಯ್ಯಾಳಿಸುವ ಸಂದರ್ಭದಲ್ಲಿ ಹೆಣ್ಣನ್ನು ಕಾಳಿ, ದುರ್ಗಿ, ಚಂಡಿ ಮುಂತಾಗಿ ಸಂಭೋಧಿಸಿ ಹೆಣ್ಣಿನ ವ್ಯಕ್ತಿತ್ವವನ್ನು ನಕಾರಾತ್ಮಕ ದೃಷ್ಟಿಕೋನದಲ್ಲಿ ನೋಡುತ್ತಿರುವುದು ಇಂದಿಗೂ ಕಂಡುಬರುತ್ತದೆ. ಹಾಗಾಗಿ ಸಮಾಜದದಲ್ಲಿ ಹೆಣ್ಣಿನ ಬಗ್ಗೆ ಹಲವು ಕಲ್ಪಿತ ಮಿಥ್ ನಂಬಿಕೆ ಅಪಕಲ್ಪನೆ ಉಂಟಾಗಿದೆ.

ಹೆಣ್ಣಿನ ಜೈವಿಕತೆಯನ್ನು ಆಧರಿಸಿದ ನಡೆದಿರುವ ಸಂಪ್ರದಾಯ ಆಚರಣೆಗಳಲ್ಲಿ ಹೆಣ್ಣನ್ನು ಅಷ್ಟಕ್ಕೆ ಬಿಡಲಿಲ್ಲ ಗಂಡಿಗೆ ಪೂರಕವಾಗಿ ಮತ್ತು ಗಂಡಿನ ಕಾಮತೃಷೆಗಾಗಿ ಹೆಣ್ಣನ್ನು ಒಳಪಡಿಸುವ ಸಂಪ್ರದಾಯ ಆಚರಣೆಗಳು ಬೆಳೆದುಕೊಂಡು ಬಂದಿರುವುದು ಇದೆ. ಅದನ್ನು

ಜೈವಿಕ ಸಹಜ ಕ್ರಿಯೆಯಾದ ಋತುಮತಿಯ ನಂತರ ಹೆಣ್ಣನ್ನು ದೇವರಿಗೆ ಅರ್ಪಿಸುವುದರ ಮೂಲಕ ಶೋಷಣೆಗೆ ಒಳಪಡಿಸಿರುವುದು ಇದೆ. ಅದನ್ನು ದೇವದಾಸಿ ಪದ್ಧತಿಯಲ್ಲಿ ಕಂಡುಬರುವ ಹೆಣ್ಣನ್ನು ದೇವರಿಗೆ (ದೇವತೆ) ಅರ್ಪಿಸುವ ಪದ್ಧತಿಯ ಜಾರಿಯಲ್ಲಿರುವುದರಿಂದ ತಿಳಿದುಬರುತ್ತದೆ. ಆದರೆ ಇದನ್ನು ಪರಾಮರ್ಶಿಸಿದರೆ ಈ ಪದ್ಧತಿಯಲ್ಲಿ ಹೆಣ್ಣನ್ನು ಹೆಣ್ಣುದೇವತೆಗೆ ಅರ್ಪಿಸಲು ಸಾಧ್ಯವೇ? ಎನ್ನುವ ಪ್ರಶ್ನೆ ಹಾಕಿಕೊಂಡರೆ ಹೆಣ್ಣನ್ನು ಹೆಣ್ಣಿಗೆ ಅರ್ಪಿಸಲು ಸಾಧ್ಯವಿಲ್ಲ. ಆದರೆ ದೇವರ/ದೇವತೆ ಹೆಸರಿನಲ್ಲಿ ಪುರುಷ ಪ್ರಧಾನ ವ್ಯವಸ್ಥೆಯು ಹೆಣ್ಣನ್ನು ತನ್ನ ಕಾಮತೃಷೆಗಾಗಿ ಬಳಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಇದಕ್ಕೆ ದೇವದಾಸಿ ಪದ್ಧತಿ ಬಗ್ಗೆ ಐತಿಹಾಸಿಕ ಮಾಹಿತಿ ನೋಡಿದರೆ ಈ ರೀತಿಯಾಗಿ ದೊರೆಯುತ್ತಿದೆ.

"ಧಾರ್ಮಿಕವಾಗಿ ದೇವರಿಗೆ ಅರ್ಪಿತವಾದ ಸ್ತ್ರೀಯನ್ನು 'ದೇವದಾಸಿ' ಎಂದು ಕರೆಯುವುದುಂಟು. ಈ ಪದ್ಧತಿ ಪ್ರಪಂಚದ ಎಲ್ಲಾ ಭಾಗಗಳಲ್ಲಿ ಕಂಡುಬರುತ್ತದೆ. ಪಶ್ಚಿಮ ಏಷಿಯಾ, ಮಧ್ಯೆ ಅಮೇರಿಕಾ, ಪಶ್ಚಿಮ ಆಫ್ರಿಕಾ ಸಿರಿಯಾದ ಪೋನೋಷಿಯಾ, ಅರೇಬಿಯಾ, ಈಜಿಪ್ಟ್, ಗ್ರೀಸ್ ಮತ್ತು ರೋಮಗಳಲ್ಲಿ ಈ ಪದ್ಧತಿ ಇದ್ದುದನ್ನು ಪತ್ತೆ ಹಚ್ಚಲಾಗಿದೆ. ಬ್ಯಾಬಿಲೋನಿಯಾ ನಾಗರೀಕತೆಯಲ್ಲಿ ದೇವಾಲಯಗಳಲ್ಲಿ ಮಾನವನ ಚಟುವಟಿಕೆಯ ಕೇಂದ್ರ ಸ್ಥಾನಗಳಾಗಿದ್ದವು. ಊರಿನಲ್ಲಿದ್ದ ಹಿನ್ನೆಲೆ ಅಥವಾ ಮಾತೃದೇವತೆ ಈ ಸ್ತರ ದೇವಾಲಯ ಮುಖ್ಯವಾದದ್ದು, ಈ ದೇವಾಲಯವು ಅನೇಕ ಸೇವಕರನ್ನು ಹೊಂದಿತ್ತು. ಇದರಲ್ಲಿ ಪುರುಷರು, ಸ್ತ್ರೀಯರು ಇದ್ದರು. ದೇವಸ್ಥಾನದ ಭಕ್ತರಾದ ಮಹಿಳೆಯರಲ್ಲಿ ಅನೇಕ ಭೇದಗಳಿದ್ದವು. ನಟೇಟು ಎಂಬ ಪೂಜಾರಿಣಿಯರು, ದೇವಾಲಯಗಳನ್ನು ನೋಡಿಕೊಳ್ಳುತ್ತಿದ್ದು ಇವರೆಲ್ಲಾ ಜಿಕ್ರು ಜರ್ಮಶೀಟು ಎಂಬ ದೇವರಿಗೆ ಅರ್ಪಿತ ಮಹಿಳೆಯರಾಗಿದ್ದರು. ಇಷ್ತರು ಪಂಥ ಬ್ಯಾಬಿಲೋನಿಯದಲ್ಲಿ ಬಹಳ ಜನಪ್ರಿಯವಾಗಿತ್ತು, ಇಷ್ತರ ದೇವತೆಯನ್ನು ತೃಪ್ತಿಪಡಿಸಲು ಅಲ್ಲಿನ ಎಲ್ಲ ಮಹಿಳೆಯರು ಬಲವಂತದ ತಾತ್ಕಾಲಿಕ ವೇಶ್ಯಾವಾಟಿಕೆಗೆ ಒಳಗಾಗುತ್ತಿದ್ದರು. ಸರ್ ಪನಿಟ್ ದೇವಿಯನ್ನು ಪ್ರಸನ್ನಗೊಳಿಸಲು ಬ್ಯಾಬಿಲೋನಿಯದಲ್ಲಿ ಎಲ್ಲ ಹೆಣ್ಣು ಮಕ್ಕಳು ಈ ಪದ್ಧತಿಯನ್ನು ಅನುಸರಿಸಲೇಬೇಕು ಎನ್ನುವ ಒತ್ತಾಯವಿತ್ತು". ಹಾಗೆ "ಪಶ್ಚಿಮ ಆಫ್ರಿಕಾದಲ್ಲಿ ಗಂಡು ಅಥವಾ ಹೆಣ್ಣು ಯಾರೇ ಹದಿಹರೆಯದವರಾಗಿರಲಿ ಅವರನ್ನು ಒಂದು ದೇವರಿಗೆ ಅರ್ಪಿಸುತ್ತಿದ್ದರು. ಅವರನ್ನು ಕೋಸಿಯೇ ಎಂದು ಕರೆಯಲಾಗುತ್ತಿತ್ತು. ಅಂಥವರು ದೇವರಿಗೆ ಹೆಂಡತಿಯರಾಗುತ್ತಾರೆ. ಅವರು ಪೂಜಾರಿಗಳೊಂದಿಗೆ ಲೈಂಗಿಕ ಸಂಬಂಧವನ್ನು ಉಳ್ಳವರಾಗುತ್ತಾರೆ. ಹಾಗೆ ಅವರಿಗೆ ಹುಟ್ಟಿದ ಮಕ್ಕಳು ದೇವರಿಗೆ ಸೇರಿದವರಾಗಿರುತ್ತಾರೆ. ಭಾರತದಲ್ಲಿ ದೇವದಾಸಿಯರು ಮದುವೆಯಿಂದ ವಂಚಿತರಾಗುವಂತೆ ಆಫ್ರಿಕಾದಲ್ಲಿಯೂ ಇದೆ, ಪೇರು, ಮೆಕ್ಸಿಕೋ, ಬೋರ್ಗಿಯೋ, ಜಪಾನ್ ಇತ್ಯಾದಿ ಜಗತ್ತಿನ ಬೇರೆ ದೇಶಗಳಲ್ಲಿ ಈ ಹಿಂದೆ ಈ ಬಗೆಯ ಸಂಸ್ಥೆಗಳು ಇದ್ದ ಬಗ್ಗೆ ಅನೇಕ ನಿದರ್ಶನಗಳು ದೊರೆಯುತ್ತವೆ.

(ಉದ್ಧೃತ: ಸುನಂದಮ್ಮ ಆರ್., ೨೦೦೫, ಪುಟ.೧೨೭) ಹೀಗೆ ಸಂಪ್ರದಾಯ ಆಚರಣೆಗಳಲ್ಲಿ ಹೆಣ್ಣನ್ನು ಲೈಂಗಿಕವಾಗಿ ಶೋಷಿಸುತ್ತ ಪುರುಷನಿಗೆ ತಕ್ಕಂತೆ ಬಳಕೆಯಾಗುವಂತಹ ರೀತಿ ಮತ್ತು ಸಂಪ್ರದಾಯ ಆಚರಣೆಗಳ ಹೆಸರಿನಲ್ಲಿ ಹೆಣ್ಣನ್ನು ಪುರುಷನ ಭೋಗಕ್ಕೆ ಬಳಕೆಯಾಗುವಂತೆ ನಡೆಸಿಕೊಂಡು ಬಂದಿರುವುದು ಕಂಡುಬರುತ್ತದೆ. ಮೂಲದಲ್ಲಿ ಹೆಣ್ಣಿನ ಜೈವಿಕ ಕ್ರಿಯೆಯನ್ನಾಧರಿಸಿ ಹುಟ್ಟಿಕೊಂಡು ಬಂದ ನಂಬಿಕೆ, ಸಂಪ್ರದಾಯ, ಆಚರಣೆಗಳು ಅವು ಮುಂದೆ ಪಿತೃ ಪ್ರಧಾನತೆಗೆ ತಕ್ಕಂತೆ ಬಳಕೆಯಾಗಿ ಅಥವಾ ಮುಂದುವರೆದು ಹೆಣ್ಣನ್ನು ಹಲವು ರೀತಿಯಲ್ಲಿ ಕಾಣಲು, ನಿರ್ವಚಿಸಲು ಮಿಥ್, ಕಲ್ಪನೆಯನ್ನು ಸೃಷ್ಟಿ ಮಾಡಲು ಕಾರಣವಾಗಿವೆ. ಜೊತೆಗೆ ಕೆಲವು ನಿರ್ಬಂಧ, ನಿಯಂತ್ರಣ ನಿಷೇಧಗಳನ್ನು ಹಾಕಲಿಕ್ಕೆ ಕಾರಣವಾಗಿರುವುದು ಸ್ಪಷ್ಟವಾಗುತ್ತದೆ. ಇನ್ನೂ ಹೆಣ್ಣಿಗೆ ಜೈವಿಕತೆಯನ್ನಾಧರಿಸಿ, ಹೆಣ್ಣಿನ, ಹೆಣ್ಣಿನ ದೇಹದ ಕುರಿತಾಗಿ ನಂಬಿಕೆಗಳು ಈವರೆಗೂ ಸ್ಥಿರಗೊಳ್ಳಲು ಕಾರಣವೇನೆಂಬುದು ಖಚಿತವಾಗಿ ಹೇಳಲಾಗಿದಿದ್ದರು ಅಧ್ಯಯನದ ಹಿನ್ನೆಲೆಯಿಂದ ಕೆಲ ಅಂಶಗಳನ್ನು ಇಲ್ಲಿ ಊಹೆ ಮಾಡಬಹುದು. ಅವುಗಳೆಂದರೆ

- ನಿಸರ್ಗ ಸಹಜ ಗುಣಗಳನ್ನು ದೈವವೆಂದು ನಂಬಿದುದು.
- ಸ್ವತಃ ಪುರುಷನಿಂದಲೇ ಹೆಣ್ಣು ಗರ್ಭಧರಿಸುತ್ತಾಳೆ. ಪುರುಷನ ಸಹಯೋಗವಿಲ್ಲದೆ ಹೆಣ್ಣು ಏನನ್ನು ಸೃಷ್ಟಿಸಲಾರಳು ಎಂಬ ನಂಬಿಕೆ.
- ಹೆಣ್ಣು ಕೋಮಲ ಭಾವನೆ ಹಾಗೂ ಸಹನಾ ಸ್ವಭಾವ ಎಂದು ಪುರುಷ ನಂಬಿಕೆ ಇಟ್ಟುಕೊಂಡಿದ್ದರಿಂದ.
- ಕುಟುಂಬ ಪುರುಷ ಪ್ರಧಾನವಾಗಿದ್ದುದು
- ಧರ್ಮ ಪುರುಷ ಪ್ರಧಾನವಾಗಿದ್ದುದು
- ಆಸ್ತಿಯ ಕಲ್ಪನೆ ಬೆಳೆದು ಖಾಸಗಿ ಒಡೆತನ ಗಂಡಸಿನಲ್ಲಿ ಜಾಗೃತವಾದದ್ದು.
- ಪುರುಷ ಪ್ರಧಾನ ಸಾಮಾಜಿಕ ಮೌಲ್ಯಗಳು ಹೆಣ್ಣಿನ ಮೇಲೆ ಆಕ್ರಮಿಸಿಕೊಂಡಿದ್ದುದು
- ಹುಟ್ಟಿದ ಮಕ್ಕಳಿಗೆ ತಂದೆಯ ಮೂಲಕ ಗುರುತು ನೀಡುವ ಕ್ರಮ ಜಾರಿಗೆ ಬಂದದ್ದು.
- ಗಂಡಸೇ ಸರ್ವಶಕ್ತಿ, ಆತನೆ ನೇರವಾಗಿ ದೈವದ ಜೊತೆ ಕಾಣದ ಕೈಯ ಜೊತೆ ಸಂಪರ್ಕ ಸಾಧಿಸಲು ಯೋಗ್ಯ ಎಂಬ ಮೇಲರಿಮೆ ಮೂಡಿದುದು.
- ಹೆಣ್ಣಿನ ಸಂವೇಧನಾಶೀಲ ಗುಣಗಳನ್ನು ದುರ್ಬಲ ಎಂದು ಪುರುಷ ತೀರ್ಮಾನಿಸಿದುದು.
- ಹೆಣ್ಣಿನ ರಕ್ಷಣೆ ಪುರುಷನಿಂದ ಮಾತ್ರ ಸಾಧ್ಯ. ಆಕೆಯ ಪುರುಷನೇ ಆಧಾರ ಎಂಬ ನಂಬಿಕೆಗಳು ಬಲವಾದುದು.

- ಹೆಣ್ಣನ್ನು ಆಸ್ತಿ ಎಂದು ತಿಳಿದದ್ದು.
- ವಾಸಿಸುವ ನೆಲೆ ಗಂಡನ ನೆಲೆಗೆ ಸ್ಥಾನಂತರವಾದುದು.
- ಹೆಣ್ಣಿನ ಶಕ್ತಿ ಸಾಮರ್ಥ್ಯಗಳು ಗಂಡಸಿನ ಶಕ್ತಿ ಸಾಮರ್ಥ್ಯಗಳ ಮುಂದೆ ದುರ್ಬಲ ಎಂದು ನಿರ್ಣಾಯಿಸಿದುದು.
- ಎಲ್ಲ ನಾಗರೀಕತೆಗಳು ಪುರುಷನ ಪ್ರಧಾನವಾಗಿ ಬೆಳೆದುಕೊಂಡು ಬಂದದ್ದು.
- ಹೆಣ್ಣು ಸಮುದಾಯಕ್ಕೆ ನಿಯಂತ್ರಿಸುವ, ನಿರ್ದೇಶಿಸುವ, ನಿಯಮಾವಳಿಗಳನ್ನು ಹೇರುವ ಅಧಿಕಾರ ಪುರುಷ ಸಮುದಾಯ ಮಾಡಿದುದು.
- ಹೆಣ್ಣು ತನಗಿಂತ ಕಡಿಮೆ ತಿಳುವಳಿಕೆಯವಳು ಎಂದು ಗಂಡಸು ಪೂರ್ವಗ್ರಹಕ್ಕೆ ಒಳಗಾದುದು.
- ಎಲ್ಲಾ ಆಸ್ತಿ-ಪಾಸ್ತಿಗಳ ಮೇಲೆ ಪುರುಷನೇ ಒಡೆತನ ಕಾಯ್ದುಕೊಂಡದುದು.
- ಪುರುಷನ ಅನುಭೋಗದ ಪ್ರವೃತ್ತಿ ಏಕಮುಖ ವಿಕಾಸವಾದುದು.
- ಹೆಣ್ಣಿನ ನೈಸರ್ಗಿಕ ಕ್ರಿಯೆಯನ್ನಾಧರಿಸಿ ಹೆಣ್ಣಿಗೆ ಜವಾಬ್ದಾರಿಯನ್ನು ಹೇರಿದ್ದುದು

ಹೀಗೆ ಅನೇಕ ರೀತಿಯಲ್ಲಿ, ಹೆಣ್ಣಿನ ಮೇಲೆ ಪುರುಷನ ಆಕ್ರಮಿಸಿಕೊಂಡದ್ದನ್ನು ಊಹಿಸಬಹುದು. ಮಾತೃ ದೇವತೆಯ ಆರಾಧನೆಯ ಮುಖಾಂತರ ಹೆಣ್ಣನ್ನು 'ದೈವಶಕ್ತಿ'ಯಾದವಳು ಎಂದು ಹೇಳಿದರೂ, ಅದು ಪುರುಷ ಪ್ರಧಾನ ಕಲ್ಪಿತ ರೂಪವೇ ಹೊರತು ಅದು ಯಾವುದೇ ದೈವಶಕ್ತಿಯಾಗಿ ಗೌರವ ಆಧಾರಗಳಿಗೆ ಒಳಗಾಗಿಲ್ಲ. ಅದರ ಬದಲಾಗಿ ಪಿತೃ ಪ್ರಧಾನ ಸಮಾಜದ ಪೋಷಣೆಗಾಗಿ ಬಳಕೆಯಾಗುತ್ತಿದ್ದಾಳೆ. ಇನ್ನು ಹೆಣ್ಣಿನ ದೇಹದ ಬಗ್ಗೆ ಹಲವು ರೀತಿಯಲ್ಲಿ ನಿರ್ವಚಿಸುವುದರ ಮುಖಾಂತರ ಹೆಣ್ಣಿನ ಬದುಕಿಗೆ ನೇತ್ಯಾತ್ಮಿಕವೆನಿಸುವ ನಂಬಿಕೆಯನ್ನು ಸ್ಥಿರಗೊಳಿಸಿರುವುದು ಮತ್ತು ಹೆಣ್ಣನ್ನು, ಹೆಣ್ಣಿನ ವ್ಯಕ್ತಿತ್ವವನ್ನು ದೇಹಕ್ಕಿಳಿಸಿ ನೋಡುವ ದೃಷ್ಟಿಕೋನವನ್ನು ಸೃಷ್ಟಿಸಿವೆ ಇದು ಧರ್ಮಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಆದುದರಿಂದಾಗಿ ಧರ್ಮಗಳಲ್ಲಿ ಹೆಣ್ಣಿನ ಜೈವಿಕ ಸಹಜ ಕ್ರಿಯೆಯನ್ನಾಧರಿಸಿ ಹೆಣ್ಣನ್ನು ಹೇಗೆ ಕಾಣಲಾಗಿದೆ. ಮತ್ತು ಅವುಗಳು ಹಾಕಿರುವ ನಿಯಂತ್ರಣ, ನಿರ್ದೇಶನಗಳ ಹಿನ್ನೆಲೆಯಲ್ಲಿ ಧರ್ಮಗಳಲ್ಲಿ ಹೆಣ್ಣಿನ ಜೈವಿಕತೆ ಎನ್ನುವ ಶೀರ್ಷಿಕೆಯೊಂದಿಗೆ ಧರ್ಮ, ಧರ್ಮ ಗ್ರಂಥಗಳೆನಿಸಿಕೊಂಡವುಗಳಲ್ಲಿ ಹೆಣ್ಣಿನ ಜೈವಿಕತೆಯನ್ನಾಧರಿಸಿ ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು ನೋಡಲಾಗಿದೆ.

ಅಡಿಟಿಪ್ಪಣಿ

೧. ಜ್ಯೋತ್ಸ್ನಾಕಾಮತ್ ೧೯೯೧, **'ಮಹಿಳೆ ಒಂದು ಅಧ್ಯಯನ'**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪುಟ.೧೧

೨. ಶೈಲಜಾ ಹಿರೇಮಠ, ೨೦೦೪, **'ಮಾತೃಪ್ರಧಾನ ಪರಿಕಲ್ಪನೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ.೬

೩. ಅದೇ, ಪುಟ.೬-೮

೪. ಚಟ್ಟೋಪಾಧ್ಯಾಯ ಬಿ.ಎನ್.ಸುಮಿತ್ರಬಾಯಿ, ೨೦೦೪, 'ಹೆಣ್ಣು' **'ಧರ್ಮ ವಿಶ್ವಕೋಶ'**, ಪುಟ.೪೯೫-೪೯೮, .

೫. ಶೈಲಜ ಹಿರೇಮಠ ೨೦೦೪, **'ಮಾತೃಪ್ರಧಾನ ಪರಿಕಲ್ಪನೆ'**, ಪುಟ.೧೭

೬. ಅದೇ, ಪುಟ.೧೪

೭. ಪೋಲಂಕಿ ರಾಮಮೂರ್ತಿ, ೧೯೯೯, **'ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು'**(ಲೇ), **'ವಿಚಾರ ಸಾಹಿತ್ಯ ಮತ್ತು ಹೆಣ್ಣು'**, (ಸಂ)ಅನುಸೂಯ ಕಾಂಬಳೆ, ವೈಚಾರಿಕ ಸಾಹಿತ್ಯ ಪ್ರಕಾಶನ, ರಾಯಭಾಗ, ಪುಟ.೩೬

೮. ಅದೇ, ಪುಟ.೩೭

೯. ಸುನಂದಮ್ಮ ಆರ್., ೨೦೦೫, **'ಮಹಿಳಾ ಸಂಸ್ಕೃತಿ'**, ಸಮತಾ ಅಧ್ಯಯನ ಕೇಂದ್ರ, ಮೈಸೂರು, ಪುಟ.೧೨೬

೧೦. ಅದೇ, ಪುಟ.೧೨೭

* * *

ಅಧ್ಯಾಯ ಮೂರು

ಧರ್ಮಗಳು: ಹೆಣ್ಣಿನ ಜೈವಿಕತೆ

೧. ಜೈವಿಕ

- ಮುಟ್ಟು
- ಹೆರಿಗೆ

೨. ಸಾಮಾಜಿಕ

- ಪುಂಸವನ ಸಂಸ್ಕಾರ
- ಹೆಣ್ಣಿನ ಹುಟ್ಟು
- ವಿವಾಹ ದೈವಿಕ ನಿಯಮ
- ಪಾತಿವ್ರತ್ಯ
- ವಿಚ್ಛೇಧನ
- ವೈದವ್ಯ
- ಗುಣ–ಸ್ವಭಾವ

೩. ಆಧ್ಯಾತ್ಮಿಕ

- ಮೋಕ್ಷ

೩

ಧರ್ಮಗಳು: ಹೆಣ್ಣಿನ ಜೈವಿಕತೆ

ಮಾತೃ ದೇವತೆಯ ಮುಖಾಂತರ ಹೆಣ್ಣನ್ನು ಜಗತ್ತಿನ ಸಕಲ ಸೃಷ್ಟಿಯ ದೈವ ಎಂದು ಆರಾಧನೆಗೆ ಒಳಪಡಿಸಿಕೊಂಡು ಬಂದು ಶೋಷಣೆಗೆ ಒಳಪಡಿಸಲಾಗಿದೆ. ಜಗತ್ತಿನ ಧರ್ಮಗಳು ಮತ್ತು ಚರಿತ್ರೆ ಹೆಣ್ಣಿನ ದೇಹವನ್ನು ಕುರಿತು ಸೃಷ್ಟಿಮಾಡಿರುವ ನಂಬಿಕೆ ಸಂಪ್ರದಾಯ–ಆಚರಣೆಗಳು ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯಾಗಿ ಕಾಣಲು ಕಾರಣಭೂತವಾಗಿವೆ. ಧರ್ಮ, ಧರ್ಮಗ್ರಂಥಗಳಲ್ಲಿ ಹೆಣ್ಣಿನ ಬಗ್ಗೆ ವ್ಯಕ್ತವಾಗಿರುವ, ಹಲವು ಭಾವನೆ ಧೋರಣೆ ನೀತಿ ನಿಯಮಗಳು ಹೆಣ್ಣನ್ನು ಒಬ್ಬ ವ್ಯಕ್ತಿಯೆಂದಾಗಲೀ ಸ್ವತಂತ್ರ್ಯವಾಗಿರುವ ಜೀವಿಯೆಂದಾಗಲಿ ಗುರುತಿಸದೇ ಇರುವುದು ಕಂಡು ಬರುತ್ತದೆ. ಇದಕ್ಕೆ ಮುಖ್ಯ ಕಾರಣ ಹೆಣ್ಣಿನ ಜೈವಿಕತೆಯ ಕುರಿತಾಗಿ ಹೊಂದಿರುವ ಅಪನಂಬಿಕೆಯಾಗಿದೆ. ಹಾಗೇ ಹೆಣ್ಣಿನ ಜೈವಿಕತೆಯನ್ನು ಅಸಹ್ಯ, ಅಪವಿತ್ರ ಅಶುದ್ಧ ಎನ್ನುವ ನಂಬಿಕೆಯೊಂದಿಗೆ ಹೆಣ್ಣನ್ನು ನಿಷೇಧಕ್ಕೆ ಒಳಪಡಿಸಿರುವುದು ಕಂಡುಬರುತ್ತದೆ. ಜೊತೆಗೆ ಪುರುಷ ವರ್ಗವನ್ನು ಶ್ರೇಷ್ಠತೆಯ ನೆಲೆಯಲ್ಲಿ ನಿರ್ವಚಿಸಿದ ಸಂಗತಿ ಕಂಡುಬರುತ್ತದೆ. ಆದ್ದುದರಿಂದ ಧರ್ಮಗಳಲ್ಲಿ ಹೆಣ್ಣಿನ ಜೈವಿಕತೆಯನ್ನು ಈ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ. ಇಲ್ಲಿ ಅಧ್ಯಯನದ ಮಾಹಿತಿಗಾಗಿ ಧರ್ಮದ ಮೂಲ ಕೃತಿಗಳಿಗೆ ಹೋಗಿಲ್ಲವಾದರೂ ಈಗಾಗಲೇ ನಡೆದ ಅಧ್ಯಯನಗಳಲ್ಲಿ ಬಳಸಲಾಗಿರುವ ಮಾಹಿತಿಯನ್ನು ಗಮನಿಸಲಾಗಿದೆ.

ಸ್ತ್ರೀವಾದವು ಹೆಣ್ಣು–ಗಂಡುಗಳಲ್ಲಿರುವ ಜೈವಿಕ ಭಿನ್ನತೆಗಳು ಮನುಷ್ಯರ ಯೋಗ್ಯತೆಗೆ ಅರ್ಹತೆಗೆ ಸ್ವಾಯತ್ತತೆಗಳಿಗೆ ಮಾನದಂಡವಾಗಬಾರದೆಂದು ಪ್ರತಿಪಾದಿಸುತ್ತದೆ. ಆದರೆ ವಿವಿಧ ಧರ್ಮ, ಧರ್ಮಗ್ರಂಥಗಳಲ್ಲಿ ಹೆಣ್ಣನ್ನು, ಹೆಣ್ಣಿನ ಜೈವಿಕತೆಯನ್ನಾಧರಿಸಿ ಹೆಣ್ಣು–ಗಂಡಿಗಿಂತ ಕಡಿಮೆ ದರ್ಜೆಯವಳು ಎಂದು ಹೇಳಿರುವುದು ಕಂಡುಬರುತ್ತದೆ. ಇದಕ್ಕೆ ಆಧಾರವಾಗಿ ಕ್ರೈಸ್ತ ಧರ್ಮದಲ್ಲಿ "ನಿಸರ್ಗದಿಂದಲೇ ಹೆಣ್ಣು ಗಂಡಿಗಿಂತ ದುರ್ಬಲಳು. ದೇವರ ನಿಯಮವೂ ಇದೇ ಆಗಿದೆ ಎನ್ನುವಂತ ತಾತ್ವಿಕ ಕಲ್ಪನೆಯನ್ನು ಸೃಷ್ಟಿಮಾಡಿರುವ ಅಂಶಗಳಿಂದ ತಿಳಿಯಬಹುದಾಗಿದೆ. ಹಲವು ಧರ್ಮಗಳು, ಧರ್ಮಗ್ರಂಥಗಳು, ನಂಬಿಕೆ ಸಂಪ್ರದಾಯ ಆಚರಣೆಗಳ ಮೂಲಕ ಹೆಣ್ಣನ್ನು ಎರಡನೇ ದರ್ಜೆಯವಳನ್ನಾಗಿ ಕಂಡಿವೆ. ಆದುದರಿಂದ ಧರ್ಮದಲ್ಲಿನ ಸಂಪ್ರದಾಯಿಕ ಸಂಗತಿಗಳನ್ನು ಪರಿಶೀಲಿಸಬೇಕಾಗಿದೆ. ಈ ಕಾರಣದಿಂದಾಗಿ ಧರ್ಮದಲ್ಲಿನ ಹೆಣ್ಣಿನ ಜೈವಿಕತೆಯನ್ನು ನೋಡಲಾಗಿದೆ.

ಧರ್ಮಗಳು, ಮೌಲ್ಯಗಳು, ನಂಬಿಕೆಗಳನ್ನು ಸೃಷ್ಟಿಮಾಡುವುದರ ಮುಖಾಂತರ ಗಂಡು–ಹೆಣ್ಣಿನ ಮಧ್ಯ ಅಂತರವನ್ನು ಸೃಷ್ಟಿಗೊಳಿಸಿರುವುದು ಕಂಡುಬರುತ್ತದೆ. ಇದಕ್ಕೆ ಆಧಾರವೆನ್ನುವಂತೆ ಜಗತ್ತಿನ ಧರ್ಮಗಳು, ಧರ್ಮಗ್ರಂಥಗಳು ಹೆಣ್ಣನ್ನು ಹೇಗೆ ಕಂಡಿವೆ ಮತ್ತು ಹೇಗೆ ಸಂಪ್ರದಾಯ ಬದ್ಧಗೊಳಿಸಿವೆ ಎನ್ನುವ ದೃಷ್ಟಿಯಿಂದ ಅಧ್ಯಯನ ಮಾಡಿರುವ ಪ್ರಸಿದ್ಧ ಸಮಾಜ ವಿಜ್ಞಾನಿಯಾದ 'ಉರಸುಲ್ ಕಿಂಗ್' ರವರು ಹೀಗೆ ಹೇಳುತ್ತಾರೆ. "ಪುರುಷನಿಗೆ ಕೆಳಸ್ಥಾನದಲ್ಲಿ ಇಲ್ಲವೆ ಎರಡನೆಯ ದರ್ಜೆಯಾಗಿ ಮಹಿಳೆಯನ್ನು ನಿರ್ಧರಿಸುವ ಪವಿತ್ರ ಗ್ರಂಥಗಳು ನಮ್ಮಲ್ಲಿ ಇವೆ. ಹಾಗೆ ಮಹಿಳೆಯ ಸ್ಥಾನವನ್ನು ಶಾಸನ ಬದ್ಧವಾಗಿ ಕೆಳಸ್ಥರದಲ್ಲಿರಿಸಲು ಈ ಪವಿತ್ರ ಗ್ರಂಥಗಳನ್ನು ಶತ–ಶತಮಾನಗಳಿಂದಲು ಆಗಿಂದಾಗ್ಗೆ ಬಳಸಿಕೊಳ್ಳಲಾಗುತ್ತಿದೆ. ಮಹಿಳೆಯರ ಸ್ಥಾನವು ಪುರುಷರಿಗಿಂತ ಯಾವತ್ತೂ ಕೆಳಮಟ್ಟದ್ದೇ ಎಂಬುವುದಕ್ಕೆ ಈ ಗ್ರಂಥಗಳು ಆಧಾರವಾಗಿವೆ. ಇವುಗಳ ಜೊತೆಗೆ ಕೆಲವು ಧಾರ್ಮಿಕ ಭೋದನೆಗಳಲ್ಲಿ ತಾಯಿ ಮತ್ತು ಹೆಂಡತಿಯ ಪಾತ್ರದಲ್ಲಿ ಆದರ್ಶಿಕೃತ ಮಹಿಳೆಯಾಗಿ ಹೆಣ್ಣನ್ನು ವೈಭವೀಕರಿಸುವ ವಿರೋಧಭಾಸ ಪ್ರಸಂಗಗಳು ನಮಗೆ ದೊರೆಯುತ್ತವೆ. ವಾಸ್ತವವಾಗಿ ಸಾಮಾಜಿಕ ಜೀವನದಲ್ಲಿ ಮಹಿಳೆಯ ಅಧೀನತೆ ಅಪಾರವಾಗಿದ್ದರು ಅಂತಹ ಸತ್ವದಲ್ಲಿ ಆದರ್ಶ ಮಹಿಳೆಯಾಗಿ ಹೆಣ್ಣನ್ನು ಚಿತ್ರಿಸುವ ಕೆಲವು ದೃಷ್ಟಾಂತಗಳು ಇವೆ". (ಉದ್ಧೃತ ಹಾಲತಿ ಸೋಮೇಶ್ವರ ೨೦೦೭, ಪು.೧೩೪) ಎಂದು ಹೇಳುವುದರ ಮೂಲಕ ಧರ್ಮಗಳು ಹೆಣ್ಣನ್ನು ಕಂಡಿರುವುದರ ಬಗ್ಗೆ ತಿಳಿಸಿರುವುದು ಕಂಡುಬರುತ್ತದೆ.

ಸ್ತ್ರೀವಾದದ ಆದಿ ಚಿಂತಕಿಯರು ಕೂಡ ಸಾಮಾಜಿಕ ವ್ಯವಸ್ಥೆಯಲ್ಲಿನ ನೀತಿ ನಿಯಮ ಧೋರಣೆಗಳು ಧರ್ಮ ಕೇಂದ್ರಿತವಾಗಿ ಮೂಡಿ ಬಂದವುಗಳು ಎಂದು ಪರಿಭಾವಿಸುತ್ತಾರೆ. ಜೊತೆಗೆ ಧರ್ಮವು ಹೆಣ್ಣಿನ ಮೇಲೆ ಹೇರಿರುವ ನಿರ್ಭಂದವನ್ನು ಗುರುತಿಸಿ ಹೇಳಿರುವುದು ಕಂಡುಬರುತ್ತದೆ. ಇದಕ್ಕೆ ಫ್ರೆಂಚ್ ಸ್ತ್ರೀವಾದಿ 'ಮೇರಿವುಲ್‌ಸ್ಟೋನ್ ಕ್ರಾಫ್ಟ್' ತಮ್ಮ 'The Vedication of the right of women' ಕೃತಿಯಲ್ಲಿ "ಹೆಣ್ಣು ಪುರುಷರಿಗಿಂತ ಭಿನ್ನಳೇ ಹೊರತು ಕೀಳೆಂದಲ್ಲ ಎಂದು ಹೇಳಿರುವುದು ಮತ್ತು "ಈ ಜಗತ್ತಿನಲ್ಲಿ ಒಳ್ಳೆಯದ್ದು ಮತ್ತು ಕೆಟ್ಟದನ್ನು ನಿರ್ಧರಿಸುವವರು ಗಂಡಸರೇ. ಏಕೆ? ಪುರುಷರಿಗೆ ಮಾತ್ರ ನ್ಯಾಯಾಧಿಪತಿಗಳ ಪಟ್ಟ ಕೊಟ್ಟವರ್‍ಯಾರು? ಅದರಲ್ಲೂ ಹೆಂಗಸರಿಗೆ ಒಳ್ಳೆಯದು ಯಾವುದೂ ಎಂಬುದನ್ನು ನಿರ್ಧರಿಸುವ ಅಧಿಕಾರ ಅವರಿಗೆ ಹೇಗೆ ಬಂತು? ಹೆಂಗಸರ ಬುದ್ದಿ ಮತ್ತೆ ತೀರ ಕೆಳಮಟ್ಟದ್ದೆಂದು ನಿರ್ಧರಿಸುವ ಕಲ್ಪನೆ ಬಂದದ್ದು ಹೇಗೆ? ಇದಕ್ಕೆಲ್ಲಾ ಕಾರಣ ಪುರುಷರ ದಬ್ಬಾಳಿಕೆ ಅವರ ಅಧಿಕಾರ ಯಾವುದೇ ಧ್ವನಿ ಇಲ್ಲದಂತಹ ಸ್ಥಿತಿಗೆ ಹೆಣ್ಣನ್ನು ತಳ್ಳಿರುವುದೇ ಆಗಿದೆ" (ಉದ್ಧೃತ ಎನ್. ಗಾಯತ್ರಿ, ೧೯೯೬, ಪುಟ.೧೫) ಎಂದು ದೊರೆಯುವಲ್ಲಿ ಪುರುಷ ಪ್ರಧಾನ ಧರ್ಮವು ಹೆಣ್ಣಿಗೆ ಕಲ್ಪಿಸಿದ ಬಂಧನದ ಅಂಶಗಳನ್ನು ತಿಳಿಸಿರುವುದು

ಕಂಡುಬರುತ್ತದೆ. ಹಾಗೆಯೇ ರಚಿತಗೊಂಡ ಸಾಹಿತ್ಯದ ಕುರಿತು ಹೇಳುವಾಗ ವರ್ಜಿನಿ ವುಲ್ಫ್ "ಸಾಹಿತ್ಯದಲ್ಲಿ ಪುರಷರ ಚಿತ್ರಣ ಉತ್ಪ್ರೇಕ್ಷಿತವಾಗಿದೆ. "ಪುರುಷತ್ವ", "ಸ್ತ್ರೀತ್ವ", ಎರಡು ನಮ್ಮ ಸಾಮಾಜಿಕ ದೃಷ್ಟಿಗಳನ್ನು ಒಳಗೊಂಡಿವೆ ಹೊರತು ಅವುಗಳು ಪ್ರಾಕೃತಿಕವಾದ ಮೂಲಭೂತ ವ್ಯತ್ಯಾಸಗಳಲ್ಲ" (ಉದ್ಧೃತ ಇಂದಿರಾ ಆರ್., ೧೯೯೫, ಪುಟ.೮೮) ಎಂದು ಹೇಳಿರುವರು. ಸಿಮೋನ್ ದಿ ಬೋವ 'ಮೂಲತಃ ಹೆಣ್ಣು, ಹೆಣ್ಣಾಗಿ ಹುಟ್ಟಲಿಲ್ಲ. ಹೆಣ್ಣನ್ನಾಗಿ ಮಾಡಲಾಯಿತು' ಎಂದಿರುವಲ್ಲಿ ಹಾಗೆ ಹೆಣ್ಣಿನ ಬಗೆಗಿನ ಧರ್ಮಾಧಾರಿತ ಸಾಹಿತ್ಯವು ಪುರುಷರಿಂದ ಪುರುಷರಿಗಾಗಿ ನಿರ್ಮಿಸಲ್ಪಟ್ಟ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣನ್ನು ಓರ್ವ ದಾಸಿಯಂತೆ ಕಾಣಲ್ಪಟ್ಟಿದ್ದಾಳೆ ಎಂದು ಸೂಕ್ಷ್ಮವಾಗಿ ಹೇಳಿರುವುದು ಕಂಡುಬರುತ್ತದೆ. ಹೀಗೆ ಸ್ತ್ರೀವಾದಿ ಚಿಂತಕಿಯರು ಧರ್ಮ, ಧರ್ಮಗಳಲ್ಲಿನ ಸಾಂಪ್ರದಾಯಿಕ ಅಂಶವನ್ನು ಹೊರಗೆಳೆದಿರುವುದು ಸ್ಪಷ್ಟವಾಗುತ್ತದೆ.

ಇನ್ನು ಸ್ತ್ರೀವಾದ ಪಂಥಗಳು ಹೆಣ್ಣಿನ ಅಸ್ತಿತ್ವ ಕುರಿತಾಗಿ, ಧರ್ಮ ಸಾಂಸ್ಕೃತಿಕ, ಸಾಮಾಜಿಕ ವ್ಯವಸ್ಥೆಯಲ್ಲಿನ ತಾರತಮ್ಯ ಕುರಿತು ಹೇಳಿರುವುದು ದೊರೆಯುತ್ತದೆ. ಇದಕ್ಕೆ ತೀವ್ರಗಾಮಿ ಸ್ತ್ರೀವಾದವು "ಸ್ತ್ರೀ-ಪುರುಷರ ಅಸಮಾನತೆಯ ಮೂಲವಾದ ಭಿನ್ನ ಜೈವಿಕತೆಯ ತತ್ವವನ್ನು ತೀವ್ರವಾಗಿ ನಿರಾಕರಿಸುತ್ತಾರೆ. ಜೊತೆಗೆ ವಿಭಿನ್ನ ದೇಹ ರಚನೆಹೊಂದಿದ ಕಾರಣ ಸ್ತ್ರೀ-ಪುರುಷರ ಕಾರ್ಯಗಳು ಗುಣ ಸ್ವಭಾವಗಳು ಭಿನ್ನವಾಗಿದ್ದು, ಸಮಾಜದ ಒಳತಿನ ದೃಷ್ಟಿಯಿಂದ ಅದನ್ನು ಉಳಿಸಿ ಮುಂದುವರೆಸಿಕೊಂಡು ಬಂದಿರುವುದು ಸಾರಸಗಟಾಗಿ ನಿರಾಕರಿಸುತ್ತಾರೆ. ಏಕೆಂದರೆ ಮಹಿಳೆಯನ್ನು ಕೇವಲ ಜೈವಿಕ ನೆಲೆಯಲ್ಲಿ ತನಗೆ ಬೇಕಾದಂತೆ ವಿವರಿಸುವ ಸಿದ್ಧಾಂತಗಳು ಮಹಿಳೆಯ ದೃಷ್ಟಿಯಿಂದ, ಅತ್ಯಂತ ಅಪಾಯಕರವಾದ ತೀರ್ಮಾನಗಳನ್ನು ತಳೆಯುತ್ತವೆ. ಜೀವ ಶಾಸ್ತ್ರೀಯ ನೆಲೆಯು ಸ್ತ್ರೀ-ಪುರುಷರ ಭೇದಗಳು ನೈಸರ್ಗಿಕವಾಗಿದ್ದು, ಚರಿತ್ರೆಯ ಗತಿಯಲ್ಲಿ ಅವು ಶೋಷಣೆಯ ಸಹಾಯಕವಾಗಿ ಬಳಕೆಯಾದ ಬಗೆಯನ್ನು ವಸ್ತು ನಿಷ್ಟವಾಗಿ ಗ್ರಹಿಸುತ್ತದೆ." ಹಾಗೆಯೇ "ಸಾಂಸ್ಕೃತಿಕ ಸ್ತ್ರೀವಾದವೂ ಕೂಡ ಜೈವಿಕ ಭಿನ್ನತೆಯ ನಿರ್ವಚನದ ರಾಜಕಾರಣವು ಪುರಷ ಶ್ರೇಷ್ಠತೆಯನ್ನು ಸ್ಥಾಪಿಸಲು ಎತ್ತಿಹಿಡಿಯುವ ಪ್ರಯತ್ನಕ್ಕೆ ಎದಿರೇಟು ಎನ್ನುವಂತೆ ಹುಟ್ಟಿಕೊಂಡಿತು. "ಪುರುಷ ಪ್ರಧಾನ ಸಂಸ್ಕೃತಿಯು ಹೆಣ್ಣಿನ ಸ್ವಭಾವ ಜನ್ಯ ಗುಣಗಳಾದ ಮೃದುತನ, ಸಹನೆ, ಕ್ಷಮೆ, ಪ್ರೇಮ ಮುಂತಾದ ಭಾವನಾತ್ಮಕ ಗುಣಗಳನ್ನು ದೌರ್ಬಲ್ಯವಾಗಿ ಪರಿಗಣಿಸುತ್ತದೆ. ಅನೇಕ ಸಾಂಸ್ಕೃತಿಕ ಆಚರಣೆ ನಂಬಿಕೆಗಳೆಲ್ಲವನ್ನು ಬಿಟ್ಟು ಹೊಸ ಎಚ್ಚರದಿಂದ ತಮ್ಮ ವ್ಯಕ್ತಿತ್ವವನ್ನು ರೂಢಿಸಿಕೊಳ್ಳಬೇಕೆಂದು ಸಾಂಸ್ಕೃತಿಕ ಸ್ತ್ರೀವಾದಿಗಳು ಕರೆಕೊಟ್ಟರು". (ಉದ್ಧೃತ: ಪ್ರೀತಿ ಶುಭಚಂದ್ರ ೨೦೦೭, ಪುಟ.೯೩)

ಇತ್ತೀಚಿನ ಉದಾರವಾದಿ ಸ್ತ್ರೀವಾದಿಗಳು ಲಿಂಗ ಸಮಾನತೆಯನ್ನು ಕುರಿತಂತೆ ವಿಭಿನ್ನ ನೆಲೆಗಳಲ್ಲಿ ಪ್ರತಿಪಾದಿಸುತ್ತಿರುವುದು ಕಂಡುಬರುತ್ತದೆ. "ಸ್ತ್ರೀ-ಪುರುಷರ ಸಮಾನತೆಯ

ಸ್ಥಾಪನೆಗಾಗಿ 'ದ್ವಿಲಿಂಗ' ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದಕ್ಕೆ ಸಂಬಂಧಿಸಿದ್ದು, ಒರ್ವ ವ್ಯಕ್ತಿಯನ್ನು ಆಕೆ ಸ್ತ್ರೀ ಎಂಬ ಕಾರಣಕ್ಕಾಗಿ ಕೀಳಾಗಿ ಕಾಣುವುದರಿಂದ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಇರುವ ಸ್ತ್ರೀ ಮತ್ತು ಪುರುಷರ ಗುಣಗಳೆರಡನ್ನು ಸ್ತ್ರೀ–ಪುರುಷರಿಬ್ಬರೂ ಬೆಳೆಸಿಕೊಂಡರೆ, ಪುರುಷ ಮೇಲು ಅಥವಾ ಸ್ತ್ರೀ ಕೀಳು ಎಂಬ ಭಾವನೆಗಳು ಸಮಾಜದಲ್ಲಿ ಬೇರೂರಲು ಅವಕಾಶವಿರುವುದಿಲ್ಲ. ಲಿಂಗಾಧಾರಿತ ಅಸಮಾನತೆಯನ್ನು ಕೊನೆಗಾಣಿಸಬೇಕಾದರೆ ಸಾಂಸ್ಕೃತಿಕ ಮೌಲ್ಯಗಳಿಂದ ರಚಿತವಾದ ಪೋಷಿಸಲ್ಪಡುತ್ತಿರುವ 'ಪುರುಷ ಸಂಕೇತ'ವಾದ ಅಥವಾ 'ಸ್ತ್ರೀ' ಸಂಕೇತವಾದ ವ್ಯಕ್ತಿತ್ವವನ್ನು ಬೆಳಸಿಕೊಳ್ಳದೆ 'ದ್ವಿಲಿಂಗ ವ್ಯಕ್ತಿತ್ವ'ವನ್ನು ಬೆಳೆಸಿಕೊಳ್ಳಬೇಕಾಗಿದೆ ಎಂದು ಉದಾರವಾದಿ ಸ್ತ್ರೀವಾದಿಗಳ ನಿಲುವು ಮತ್ತು "ಸ್ತ್ರೀ–ಪುರುಷರ ಅಸಮಾನತೆಯ 'ಜೈವಿಕ ಮೂಲ' ಸಿದ್ಧಾಂತವನ್ನು ಸ್ತ್ರೀವಾದಿಗಳು ತಿರಸ್ಕರಿಸುತ್ತಾರೆ. ಪುರುಷರ ಜೈವಿಕ ರಚನೆ 'ಪುರುಷತ್ವ'ವನ್ನು ಸೃಷ್ಟಿಸಿದರೆ. ಸ್ತ್ರೀಯರ ಜೈವಿಕ ರಚನೆ 'ಸ್ತ್ರೀತ್ವ'ವನ್ನು ಸೃಷ್ಟಿಸುತ್ತದೆ ಎಂಬವಾದ ಹುರುಳಿಲ್ಲದ್ದು. ಏಕೆಂದರೆ 'ಪುರುಷತ್ವ' ಮತ್ತು 'ಸ್ತ್ರೀತ್ವ' ಎಂಬ ಎರಡೂ ಪರಿಕಲ್ಪನೆಗಳು ಮಾನಸಿಕ ಸ್ಥಿತಿಗಳೇ ಹೊರತು ಸಾರ್ವತ್ರಿಕ ವಾಸ್ತವಗಳಲ್ಲ. ನಮ್ಮ ದೌರ್ಬಲ್ಯಗಳು ಅಥವಾ ನಮ್ಮ ಸಾಮರ್ಥ್ಯಗಳು ನಮಗೆ ಜೀವನದಲ್ಲಿ ದೊರೆಯುವ ಅಥವಾ ದೊರೆಯದಿರುವ ಅವಕಾಶಗಳಿಂದ ಪ್ರಭಾವಿತವಾಗಿರುವಂತವು. ಪುರುಷ ಕೇಂದ್ರಿತ ಸಾಮಾಜಿಕ ಮೌಲ್ಯಗಳು ಅನೇಕ ಸ್ತ್ರೀಯರಲ್ಲಿ ಕೀಳಿರಿಮೆಯ ಪರಾಧೀನತೆಯ ಅಥವಾ ದುರ್ಬಲತೆಯ ಭಾವನೆಗಳನ್ನು ಮೂಡಿಸುತ್ತವೆ. ಸ್ತ್ರೀ–ಪುರುಷರು 'ಮೂಲ ಪ್ರಕೃತಿ'ಗಳು ಎಂದು ಗುರುತಿಸಲ್ಪಟ್ಟಿರುವ ಅನೇಕ ಲಕ್ಷಣಗಳು ನಮ್ಮ ಸಾಂಸ್ಕೃತಿಕ ಮೌಲ್ಯವ್ಯವಸ್ಥೆಯಿಂದ ಪ್ರಭಾವಿಸಲ್ಪವೆಯೇ ಹೊರತು ಇವು ಸ್ತ್ರೀಯರಿಗೆ ಸಹಜವಾಗಿ ಬಂದಂತಹ ಗುಣಗಳಲ್ಲ. ಸ್ತ್ರೀಯರಿಗೆ ಸಮಾನ ಅವಕಾಶಗಳನ್ನು ನಿರಾಕರಿಸಲು 'ಸ್ತ್ರೀಯ ಜೈವಿಕತೆ'ಯನ್ನು ಮುಂದೊಡ್ಡಿರುವ ಸಮಾಜ ಇಂದಿಗೂ ಜೈವಿಕವಾದಕ್ಕೆ ಮಾನ್ಯತೆ ನೀಡುತ್ತಾ ಬಂದಿದೆ. "ಮತ್ತು ಸ್ತ್ರೀಯ ಜೈವಿಕ ದೌರ್ಬಲ್ಯ ಒಂದು ಸಾಂಸ್ಕೃತಿಕ ಪೂರ್ವಗ್ರಹದ ಪ್ರತೀಕವೇ ಹೊರತು, ಅದು ಆಕೆಯ ಜೈವಿಕತೆಗೆ ಸಂಬಂಧಿಸಿಲ್ಲ ಎನ್ನುವುದು ಸ್ತ್ರೀವಾದಿಗಳ ಸ್ಪಷ್ಟನಿಲುವಾಗಿದೆ". (ಉಲ್ಲೇಖ ಇಂದಿರಾ ಆರ್., ೧೯೯೫, ಪುಟ.೪೯) ಹೀಗೆ ಪ್ರತಿಪಾದಿಸುತ್ತಿರುವ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಧರ್ಮ, ಧರ್ಮಗ್ರಂಥಗಳನ್ನು ಮರುಮೌಲ್ಯಮಾಪನ ಮಾಡಿದರೆ ನಂಬಿಕೆ ಸಂಪ್ರದಾಯ ಆಚರಣೆಗಳ ರಾಜಕಾರಣ ಅರ್ಥವಾಗುವುದು. ಏಕೆಂದರೆ ಇಂದಿಗೂ ಹೆಣ್ಣು ಮತ್ತು ಹೆಣ್ಣಿನ ದೇಹದ ಕುರಿತಾಗಿ ಹುಟ್ಟಿಕೊಂಡಿರುವ ನಂಬಿಕೆ, ಸಂಪ್ರದಾಯ ಆಚರಣೆಗಳು ಧರ್ಮಕೇಂದ್ರಿತವಾದವುಗಳೇ. ಅವು ಧರ್ಮದಿಂದಲೇ ಮೂಡಿ ಬಂದವುಗಳಾಗಿವೆ ಎನ್ನಬಹುದು.

ಧರ್ಮಕೇಂದ್ರಿತವಾಗಿ ನಡೆದುಕೊಂಡು ಬರುವ ಸಂಪ್ರದಾಯ ಆಚರಣೆಗಳು ಹೆಣ್ಣನ್ನು ನಿಯಂತ್ರಿಸುವುದರ ಜೊತೆಗೆ ನಿರ್ದೇಶಿಸುತ್ತವೆ. ಆದುದರಿಂದಾಗಿ ಮೊದಲಿಗೆ ನಾವು ಧರ್ಮವನ್ನು ನೋಡುವುದು ಮುಖ್ಯವಾಗುತ್ತದೆ.

'ಧರ್ಮ' ಎನ್ನುವುದಕ್ಕೆ "ಯಾವುದು ಸಕಲ ಜೀವಿಯನ್ನು ಉದ್ಧರಿಸುವುದಕ್ಕೆ ಸಹಾಯಕವಾಗುತ್ತದೆಯೋ ಅದನ್ನು ಧರ್ಮವೆಂದು ವಿವರಿಸಲಾಗಿದೆ. ಯಾವುದು "ಜೀವಿಗಳಿಗೆ ಮೋಕ್ಷ, ಕ್ಷೇಮವನ್ನುಂಟು ಮಾಡುತ್ತದೆಯೋ ಅದೇ ಧರ್ಮ"ವೆಂದು ಋಷಿಮುನಿಗಳು ಹೇಳಿರುವುದು ದೊರೆಯುತ್ತದೆ. (ಶಾಂತಿಪರ್ವ ೧೦೧-೯-೧೧ ಉದ್ಧೃತ ರಾಮಜೋಯಿಸ ಮ., ೨೦೦೫, ಪು.೨) 'ಧರ್ಮ' "ಯಾವುದರಿಂದ ಲೌಕಿಕ ಕಲ್ಯಾಣವೂ, ಪರಲೌಕಿಕ ಅಬುಧ್ಯಯವೂ ಸಿದ್ಧಿಸುತ್ತದೆಯೋ ಅಂತಹ ಶಕ್ತಿಯೇ ಧರ್ಮ, ಹಾಗೆಯೇ ಧರ್ಮವು ಜೀವನಕ್ಕೆ ವಿಮುಖವಾಗಿರಬಾರದೆಂದು" (ಉದ್ಧೃತ : ರಾಮಜೋಯಿಸ ಮ., ೨೦೦೫, ಪು.೨,) 'ಧರ್ಮ' "ಯಾವ ಧರ್ಮ ಸಮಾಜವನ್ನು ಕಾಪಾಡುತ್ತದೆಯೋ ಧಾರ್ಮಿಕ ಸಾಮಾಜಿಕ ವ್ಯವಸ್ಥೆಯನ್ನು ಎತ್ತಿ ಹಿಡಿಯುತ್ತದೆಯೋ ಮಾನವ ಸಮಾಜಕ್ಕೆ ಯೋಗಕ್ಷೇಮವನ್ನು ತಂದುಕೊಡುತ್ತದೆ, ಹಾಗೂ ಪ್ರಗತಿಯನ್ನು ಸಾಧಿಸಲು ಸಹಾಯಕವಾಗುತ್ತದೆ ಯಾವುದು ಈ ಎಲ್ಲ ಉದ್ದೇಶಗಳನ್ನು ಪೂರೈಸುತ್ತದೆಯೋ ಅದೇ ನಿಜವಾದ 'ಧರ್ಮ' ಇದು ನಿಶ್ಚಿತ" (ಉದ್ಧೃತ ರಾಮಜೋಯಿಸ ಮ., ೨೦೦೫, ಪು.೨,)'ಧರ್ಮ' "ಅನಾದಿಕಾಲದಿಂದಲೂ ಮಾನವರು ಶಾಂತಿ ಮತ್ತು ಸುಖವನ್ನು ಪಡೆಯಲು ನಿತ್ಯ ಜೀವನದಲ್ಲಿ ಅನುಸರಿಸಬೇಕೆಂದು ನಿರ್ಮಿಸಲಾದ ನಿಯಮಗಳ ಸಮೂಹವೇ 'ಧರ್ಮ' ಎಂದು ಕರೆಯಲಾಗಿದೆ. ಹಾಗೆಯೇ ಮಾನವನು ತನ್ನ ಜೀವನದಲ್ಲಿ ಪ್ರತಿಕ್ಷಣ ಪ್ರತಿಯೊಂದು ವಿಷಯದಲ್ಲಿ ಅನುಸರಿಸಬೇಕಾದ ನ್ಯಾಯವಾದ ನಿಯಮಗಳ ಸಮೂಹವನ್ನು 'ಧರ್ಮ' ಎಂದು ಪದದಲ್ಲಿ ಕ್ರೂಢೀಕರಿಸಲಾಗಿದೆ" ಸಮಾನಾರ್ಥದಲ್ಲಿ 'ಧರ್ಮ' ಎಂದರೆ "ಸನ್ಮಾರ್ಗ" ಎಂದು ಅರ್ಥ. ಅಂದರೆ ಸರ್ವರಿಗೂ ಒಳ್ಳೆಯದನ್ನು ಮಾಡುವಂತಹದ್ದು, ಹೀಗೆ ಧರ್ಮ ಎನ್ನುವುದು ಹಲವು ರೀತಿಯಲ್ಲಿ ನಿರ್ವಚನೆಗೊಂಡಿದೆ. ಆದರೆ 'ಧರ್ಮ' ನಿರ್ವಚನೆಗೊಂಡಂತೆ ಅದು ಜೀವಿ ಮತ್ತು ಜೀವಿಗಳ ಮಧ್ಯೆ ಪರಸ್ಪರ ಸಮಾನತೆ ತರುವ ಕೆಲಸ ನಿರ್ವಹಿಸಬೇಕಾಗಿತ್ತು. ಆದರೆ ಧರ್ಮವೇ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ನೆಲೆಗಳಲ್ಲಿ ಜಾತಿ ಹಾಗೂ ಲಿಂಗಾಧಾರಿತವಾಗಿ 'ಅಸಮಾನತೆ'ಯ ಕೆಲಸ ನಿರ್ವಹಿಸಿದೆ. ಅಲ್ಲದೆ ಭೂಮಿ ಮೇಲೆ ಹುಟ್ಟಿದ ಜೀವಿಗಳಾದ ಹೆಣ್ಣು-ಗಂಡಿನಲ್ಲಿನ ಜೈವಿಕ ಭಿನ್ನತೆಯನ್ನಾಧರಿಸಿ, ಧರ್ಮದ ಮುಖಾಂತರ ಹಲವು ನಂಬಿಕೆ ಆಧಾರವಾಗಿ ಸಂಪ್ರದಾಯ ಆಚರಣೆಯನ್ನು ಸೃಷ್ಟಿಸಿ ಅನುಸರಿಸುವಂತೆ ಮಾಡಿದೆ. ಇದಕ್ಕೆ ಕೇವಲ ಹಿಂಧೂ ಧರ್ಮ ಒಂದೇ ಅಲ್ಲ ಜಗತ್ತಿನ ಧರ್ಮಗಳೆಂದು ಗುರುತಿಸಿಕೊಂಡಿರುವ ಕ್ರೈಸ್ತ, ಇಸ್ಲಾಂ, ಬೌದ್ಧ, ಜೈನಧರ್ಮಗಳೂ ಕೂಡ ಹೆಣ್ಣು, ಹೆಣ್ಣಿನ ಜೈವಿಕತೆಯನ್ನಾಧಾರಿಸಿ ನೀತಿ ನಿರ್ದೇಶನ ನೀಡುತ್ತ ಆ ಮೂಲಕ ಶೋಷಣೆಗೆ ಒಳಪಡಿಸಿರುವುದು ಕಂಡುಬರುತ್ತದೆ.

ಮನುಷ್ಯನ ಜೈವಿಕ ರಚನೆಯು ಯಾವುದೇ ಧರ್ಮದ ಭಾಗವಾಗಿ ವಿಕಾಸವಾಗಿಲ್ಲ. ಸೃಷ್ಟಿಗೆ ಬೇಕಾದ ಕ್ರಮದಲ್ಲಿ ಗಂಡು-ಹೆಣ್ಣಿನ ದೈಹಿಕ ರಚನೆಯಾಗಿದೆ. ಆದರೆ ಈ ಹೆಣ್ಣನ್ನು

ಧರ್ಮಗಳು ತಮಗೆ ಬೇಕಾದ ರೀತಿಯಲ್ಲಿ ನಿರ್ವಚಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಹಿಂದೂ, ಕ್ರೈಸ್ತ, ಇಸ್ಲಾಂ, ಬೌದ್ಧ, ಜೈನಧರ್ಮಗ್ರಂಥಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ನಿರ್ದಿಷ್ಟವಾಗಿ 'ಹಿಂದೂಧರ್ಮ' ಎಂದರೇನು? ಕುರಿತು ಹೇಳುವುದು ಬಹು ಕಷ್ಟದ ಕೆಲಸ. ಆದರೆ ಹಿಂದೂ ಧರ್ಮ ಕುರಿತು ಅನೇಕ ನಿರ್ವಚನಗಳು ಈ ರೀತಿಯಾಗಿ ದೊರೆಯುತ್ತವೆ. "ವೇದಗಳನ್ನು ಅವಲಂಬಿಸಿರುವ ಮತ್ತು ಆರ್ಯರಲ್ಲಿ ಪ್ರಚಲಿತವಾಗಿದ್ದ ಧರ್ಮಕ್ಕೆ 'ಹಿಂದೂಧರ್ಮ' ಎಂದು ಹೆಸರು. ಈ ಧರ್ಮದ ನಿಜವಾದ ಹೆಸರು 'ಸನಾತನ ಧರ್ಮ' ಅಥವಾ 'ಹಿಂದೂ ಧರ್ಮ' ಎನ್ನಬಹುದು. ಜಗತ್ತಿನ ಇತರ ಧರ್ಮಗಳಂತೆ ಹಿಂದೂ ಧರ್ಮವು ಒಬ್ಬ ವ್ಯಕ್ತಿಯಿಂದ ಒಂದು ನಿರ್ದಿಷ್ಟ ಕಾಲದಲ್ಲಿ ಸ್ಥಾಪನೆಗೊಂಡಿಲ್ಲ. ಅದು ಒಬ್ಬ ವ್ಯಕ್ತಿಯ ಆಧ್ಯಾತ್ಮಿಕ ಅನುಭವವನ್ನು ಆಶ್ರಯಿಸದೆ ಹಲವಾರು ಋಷಿಮುನಿಗಳ, ಸಾಧು-ಸಂತರ ಅತಿಂದ್ರೀಯ ದರ್ಶನಗಳ ಮತ್ತು ಆಧ್ಯಾತ್ಮಿಕ ಅನುಭವಗಳ ಆಧಾರದ ಮೇಲೆ ನೆಲೆನಿಂತಿದೆ. ಈ ಹಿಂದೂ ಧರ್ಮಕ್ಕೆ ಮೂಲ ಗ್ರಂಥ ಒಂದೆರಡಲ್ಲ. ಅನೇಕ ವೇದಗಳು ಹಿಂದೂಧರ್ಮದ ಮೂಲ ಗ್ರಂಥಗಳು, 'ವೇದ' ಎಂದರೆ ಜ್ಞಾನ ಋಷಿಮುನಿಗಳು ಧ್ಯಾನದಲ್ಲಿ ತಲ್ಲೀನರಾಗಿದ್ದಾಗ ಈ ವೇದಗಳು ಪರಮಾತ್ಮನ ಅನುಗ್ರಹದಿಂದ ಅವರಿಗೆ ಗೋಚರವಾದವು. ಆದುದರಿಂದಲೇ ಅಪೌರುಷೇಯ ಇವುಗಳಿಗೆ ಶೃತಿ-ನಿಗಮ ಎಂಬ ಹೆಸರುಗಳಿವೆ. ಋಗ್ವೇದ, ಯರ್ಜುವೇದ, ಸಾಮವೇದ ಮತ್ತು ಅಥರ್ವವೇದ ಎಂದು. ಈ ನಾಲ್ಕು ವೇದಗಳು ಪ್ರತಿಯೊಂದು ವೇದಗಳಿಗೆ ಸಂಹಿತೆ ಪ್ರಮಾಣ ಅರಣ್ಯಕ ಮತ್ತು ಉಪನಿಷತ್ತು ಎಂದು ನಾಲ್ಕು ವಿಧಗಳಲ್ಲಿ ವಿಂಗಡಿಸಲಾಗಿದೆ. ಇದಲ್ಲದೆ ಭಗವದ್ಗೀತೆಯ ರಾಮಾಯಣ, ಮಹಾಭಾರತ ಮನು ಯಜ್ಞವಲ್ಕ ಪುರಾಣ ಮೊದಲಾದ ಮತ್ತು ಸ್ಮೃತಿಗಳು, ಭಾಗವತ ೧೮ ಪುರಾಣಗಳು ಉಪಪುರಾಣಗಳು ಆಗಮಗಳು ಮತ್ತು ದರ್ಶನ ಗ್ರಂಥಗಳು ಇವೆಲ್ಲವುಗಳು ಹಿಂದೂ ಧರ್ಮದ ಆಧಾರ ಗ್ರಂಥಗಳಾಗಿವೆ".(ಉದ್ಧೃತ: ಹೆಚ್.ವಿ.ನರಸಿಂಹಮೂರ್ತಿ, ೨೦೦೪ ಪುಟ.೧,೨) ಇನ್ನು ಇತಿಹಾಸದಲ್ಲಿಯೇ ಮೊದಲಬಾರಿಗೆ ಸಂಪ್ರದಾಯ ನಿಯಮಗಳನ್ನು ತಿರಸ್ಕರಿಸಿ ಎಲ್ಲಾ ಹಿಂದೂಗಳಿಗೆ ಏಕರೀತಿಯ ಕಾನೂನುಗಳನ್ನು ೧೯೫೫ ರಲ್ಲಿ ಹಿಂದೂ ವಿವಾಹ ಕಾಯ್ದೆಯನ್ನು ಅಂಗೀಕರಿಸಿರುವಲ್ಲಿ ಹಿಂದೂ ಧರ್ಮದ ಕುರಿತು ಈ ರೀತಿಯಾಗಿ ಹೇಳಿರುವುದು ದೊರೆಯುತ್ತದೆ. "ಈ ಅಧಿನಿಯಮದ ಪ್ರಕಾರ ಹಿಂದೂ ಪದವು ವೀರಶೈವ, ಲಿಂಗಾಯಿತ ಅಥವಾ ಬ್ರಹ್ಮ ಪ್ರಾರ್ಥನಾ ಅಥವಾ ಆರ್ಯರ ಸಮಾಜದ ಅನುಯಾಯಿಗಳನ್ನು ಒಳಗೊಂಡ ಯಾವುದೇ ರೂಪ ಅಥವಾ ವಿಕಾಸಗಳು ಕೂಡಿರುವ ಹಿಂದೂಧರ್ಮದ ಯಾವುದೇ ವ್ಯಕ್ತಿಗೆ 'ಹಾಗೂ ಬೌದ್ಧ, ಜೈನ ಅಥವಾ ಸಿಖ್ ಧರ್ಮದ ಯಾವುದೇ ವ್ಯಕ್ತಿಗೆ ಅನ್ವಯವಾಗುತ್ತದೆ. ಇದನ್ನು ಇನ್ನೂ ಸ್ಪಷ್ಟಪಡಿಸುವ ದೃಷ್ಟಿಯಿಂದ ಈ ಅಧಿನಿಯಮವು

ಮುಂದುವರೆದು' 'ಹಿಂದೂ ವಿಧಿಗೆ ಅಥವಾ ಅಂತಹ ವಿಧಿಯ ಭಾಗವಾಗಿರುವ ಯಾವುದೇ ರೂಢಿಗೆ ಅಥವಾ ಆಚರಣೆಗೆ ಅವನು ಒಳಪಡುತ್ತಿಲ್ಲವೆಂದು ಋಜುವಾತು ಪಡಿಸದ ಹೊರತು ಮುಸ್ಲಿಂ, ಕ್ರೈಸ್ತ, ಪಾರ್ಸಿ ಅಥವಾ ಯಹೂದಿ ಧರ್ಮದವನಲ್ಲದ ಯಾವುದೇ ಇತರೆ ವ್ಯಕ್ತಿಗೆ ಹಿಂದು ಪದವು ಅನ್ವಯವಾಗುತ್ತದೆ ಎಂದು ತಿಳಿಸುತ್ತದೆ. ಹೀಗೆ ಹಿಂದೂ ಧರ್ಮದ ಕುರಿತು ಹೇಳಿರುವುದು ದೊರೆಯುತ್ತದೆ". (ಉದ್ಧೃತ ರಾಜಶೇಖರ್ ಎಸ್., ೨೦೦೧, ಪುಟ. ೪೯೪)

ಈ ಧರ್ಮವು ಹಲವು ಜಾತಿ, ಜನಾಂಗ, ವರ್ಗ, ಭಾಷೆ, ಪ್ರಾದೇಶಿಕತೆ ಹೊಂದುವುದರೊಂದಿಗೆ ಸಾಧು-ಸಂತರು ಋಷಿಮುನಿಗಳು, ದಾರ್ಮಿಕ ಚಿಂತಕರಿಂದ ರೂಪಿತಗೊಂಡಿರುವ ಧರ್ಮವೆಂದು ಹೇಳಿಕೊಂಡಿರುವುದರಲ್ಲಿ ಗೊತ್ತಾಗುತ್ತದೆ. ಧರ್ಮಗಳು ಪುರುಷ ರೂಪಿತವಾದವುಗಳಾಗಿವೆ. ಏಕೆಂದರೆ ಸಾಧು-ಸಂತರು ಋಷಿಮುನಿಗಳು ಪುರುಷರೇ ಆಗಿರುವರು. ಜ್ಞಾನ, ತಪಸ್ಸಿನಂತಹ ಪರಿಕಲ್ಪನೆಗಳು ಹೆಣ್ಣನ್ನು ನಿರಾಕರಿಸುವುದು ಕಂಡುಬರುತ್ತದೆ. ಹಾಗೆಯೇ ಈ ಧರ್ಮವು ಪುರುಷರಿಂದಲೇ ರೂಪಿತಗೊಂಡಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಮತ್ತು ಧರ್ಮಗಳು ಗಂಡಿನ ಶ್ರೇಷ್ಠತೆಯನ್ನು ಸಾರುತ್ತವೆ. ಧಾರ್ಮಿಕ ಗ್ರಂಥಗಳಲ್ಲಿಯೂ ಕೂಡ ಹೆಣ್ಣಿನ ಕುರಿತಾಗಿ ನೀತಿ ನಿರ್ದೇಶನ ಧೋರಣೆಗಳು ಪುರುಷ ಪರವಾಗಿರುವುದು ಕಂಡುಬರುತ್ತದೆ. ಹೆಣ್ಣಿನ ಜೈವಿಕ ಕ್ರಿಯೆಯು ಹಲವು ನಿರ್ದೇಶನ ನಿಯಂತ್ರಣಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಹಾಗೆಯೇ ಸಂಪ್ರದಾಯ ಬದ್ಧವಾಗಿ ಧರ್ಮಗಳ ನೀತಿ ನಿರ್ದೇಶನಗಳ ಅನುಗುಣವಾಗಿ ಹೆಣ್ಣನ್ನು ಆಚರಣೆಗೆ ಒಳಪಡಿಸಿ ಕಡ್ಡಾಯಗೊಳಿಸಿರುವುದು ಈ ಧರ್ಮಗಳಲ್ಲಿ ಕಂಡುಬರುತ್ತದೆ. ಹೆಣ್ಣಿನ ಜೈವಿಕ ಕ್ರಿಯೆಗಳಾದ ಮುಟ್ಟು, ಹೆರಿಗೆಯೊಂದಿಗೆ ವಿವಾಹ, ಪಾತಿವ್ರತ್ಯ, ವಿಚ್ಛೇದನ, ವೈದವ್ಯದಂತಹ ಸಾಮಾಜಿಕ ಸಂತಿಗಳನ್ನು ಹೆಣ್ಣನ್ನು ಸಹಜತೆಯಿಂದ ಅಸಹಜತೆಗೆ ಎಡೆಗೆ ನಡೆಸಿಕೊಂಡಿರುವುದು ಮತ್ತು ನಡೆಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಧರ್ಮವು ಹೆಣ್ಣನ್ನು ಕಂಡ ರೀತಿ ಮತ್ತು ಹೆಣ್ಣಿನ ಜೈವಿಕತೆಯನ್ನು ನಿರ್ವಚಿಸಿದ ಬಗೆ ಈ ಎರಡೂ ಸಂಗತಿಗಳನ್ನು ಅಧ್ಯಯನ ಮೂಲಕ ತಿಳಿಯಬಹುದಾಗಿದೆ.

ಧರ್ಮಗಳು ಹೆಣ್ಣಿನ ಜೈವಿಕತೆಯ ಕುರಿತು ಹೆಣದ ತಾತ್ವಿಕತೆಗಳನ್ನು ಮೂರು ನೆಲೆಗಳಲ್ಲಿ ವಿಶ್ಲೇಷಿಸಲಾಗಿದೆ. ಅವುಗಳೆಂದರೆ ೧. ಜೈವಿಕತೆಗೆ ಸಂಬಂಧಿಸಿದ್ದು, ೨.ಸಾಮಾಜಿಕ ಮೌಲ್ಯಗಳಿಗೆ ಸಂಬಂಧಿಸಿದ್ದು, ೩. ಆಧ್ಯಾತ್ಮಿಕತೆಗೆ ಸಂಬಂಧಿಸಿದ ಸಂಗತಿಗಳನ್ನು ಕುರಿತು ಅಧ್ಯಯನ ನಡೆಸಲಾಗಿದೆ.

೩.೧. ಜೈವಿಕ

- **ಮುಟ್ಟು**

ಹೆಣ್ಣಿನ ದೇಹದಲ್ಲಾಗುವ ಜೈವಿಕ ಕ್ರಿಯೆಯಾದ ಮುಟ್ಟು, ಹೆರಿಗೆಯಂತಹ ಸಂಗತಿಗಳನ್ನು ಆಧರಿಸಿ, ಹೆಣ್ಣನ್ನು 'ಅಸ್ಪೃಶ್ಯತೆ' ನೆಲೆಯಲ್ಲಿ ಕಂಡಿರುವುದು ಇದೆ. ಅದನ್ನು ಧರ್ಮ,

ಧರ್ಮಗ್ರಂಥಗಳಲ್ಲಿ ಮುಟ್ಟು ಕುರಿತಾಗಿ ನೋಡಿದರೆ ಈ ರೀತಿಯಾಗಿ ದೊರೆಯುತ್ತದೆ. ಮುಟ್ಟು ಅಥವಾ ಋತುಸ್ರಾವ ಹೆಣ್ಣಿನ ದೇಹದಲ್ಲಿ ಪ್ರತಿ ತಿಂಗಳಿಗೊಮ್ಮೆ ನಡೆಯುವ ಜೈವಿಕ ಸಹಜ ಕ್ರಿಯೆ. ಈ ಕ್ರಿಯೆ ತಾಯ್ತನದ ಸಿದ್ಧತೆ ಸೂಚಕವಾಗಿದೆ. ಒಂದು ಜೀವಿಯ ಉತ್ಪತ್ತಿಗೆ ಮುಟ್ಟು ಬಹು ಮುಖ್ಯವಾದದ್ದು, ಆದರೆ ಇವನ್ನೇ ಆಧಾರಿಸಿ ಧರ್ಮ, ಧರ್ಮಗ್ರಂಥಗಳು ಸೃಷ್ಟಿಗೊಳಿಸಿದ ಮಿಥ್, ನಂಬಿಕೆಗಳು ಹೆಣ್ಣನ್ನು 'ಅಸ್ಪೃಶ್ಯತೆ' 'ಅಪವಿತ್ರ' ಮುಂತಾದ ಅಪಕಲ್ಪನೆ, ನಂಬಿಕೆಗಳನ್ನ ಸೃಷ್ಠಿ ಮಾಡಿ ಹೆಣ್ಣನ್ನು ಎರಡನೆ ದರ್ಜೆ ಪ್ರಜೆಯಾಗಿ ನೋಡುವುದು ಕಂಡುಬರುತ್ತದೆ. ಹಾಗೇ ಈ ಸಹಜ ಕ್ರಿಯೆಯನ್ನಾಧರಿಸಿ 'ಹೆಣ್ಣು ಕನಿಷ್ಠ' 'ಗಂಡು ಶ್ರೇಷ್ಠ'ನು ಎನ್ನುವ ವಿಚಾರವನ್ನು ಬಿತ್ತಿರುವುದು ಕಂಡುಬರುತ್ತದೆ. ಇದಕ್ಕೆ ಹಿಂದೂ ಧರ್ಮದಲ್ಲಿನ ವೇದಗಳಲ್ಲಿ "ಪ್ರಾಚೀನವಾದ ವೇದಗಳ ಕಾಲಕ್ಕೆ ಹೆಣ್ಣಿಗೆ ಧಾರ್ಮಿಕವಾಗಿ ಉಚ್ಚಾಯ ಸ್ಥಾನವಿತ್ತು, ಮಾಸಿಕ ಮುಟ್ಟು, ಗರ್ಭಧಾರಣೆ ಅವಧಿಯನ್ನು ಬಿಟ್ಟರೆ ಎಲ್ಲ ಕಾಲದಲ್ಲಿ ಆಕೆಯು ಧಾರ್ಮಿಕ ಕ್ರಿಯೆ ನೆಡೆಸಲು ಅರ್ಹಳೆನಿಸಿದ್ದಳು".೧೧(ಉದ್ಧೃತ ಬಿ.ಎನ್.ಸುಮಿತ್ರಬಾಯಿ ೨೦೦೦, ಪು.೫೦೨) ಎಂದು ದೊರೆಯುವ ಮಾಹಿತಿಯಿಂದ ಸ್ಪಷ್ಟವಾಗುತ್ತದೆ. ಯಾಕೆಂದರೆ ಧಾರ್ಮಿಕ ವಿಧಿಕ್ರಿಯೆಗಳಲ್ಲಿ ಮುಟ್ಟಿನ ಹಾಗೂ ಗರ್ಭಧಾರಣೆ ಸಂದರ್ಭವನ್ನು ಬಿಟ್ಟರೆ ಎಲ್ಲ ಕಾಲದಲ್ಲಿ ಉನ್ನತ ಸ್ಥಾನವಿತ್ತು, ಎಂದು ಹೇಳಲಾಗಿದೆ. ಮುಟ್ಟನ್ನು ಗರ್ಭಾಧಾರಣೆ ಕ್ರಿಯೆಯನ್ನು 'ಕನಿಷ್ಠ'ತೆ ನೆಲೆಯಲ್ಲಿ ಕಂಡಿರುವುದು ಗೊತ್ತಾಗುತ್ತದೆ.

ಮುಟ್ಟಿನ ಕುರಿತಾಗಿ ಹೊಂದಿರುವ ಅಪನಂಬಿಕೆ, ಮಿಥ್‌ಗಳು ನೋಡೆದರೆ" ಋತುದರ್ಶನವಾದ (ಮುಟ್ಟಾದಾಗ) ಹೆಂಡತಿಯ ಜೊತೆಗೆ ಸಂಭೋಗ ಮಾಡಬಾರದು, ಅವಳ ಜೊತೆ ಒಂದೇ ಹಾಸಿಗೆಯಲ್ಲಿ ಮಲಗಬಾರದು, ಒಂದು ವೇಳೆ ಮಲಗಿದರೆ ಅದು ಗಂಡಿನ ಬುದ್ದಿ ತೇಜಸ್ಸು, ಆಯುಷ್ಯ ಕುಂದಲು ಕಾರಣವಾಗುತ್ತದೆ. ಹಾಗಾಗಿ ಮುಟ್ಟಿನ ಸಂದರ್ಭದಲ್ಲಿ ಹೆಣ್ಣಿನ ಜೊತೆಗೆ ಸಂಭೋಗ ಮಾಡದೆ ದೂರವಿರುವುದು ಶ್ರೇಯಸ್ಸುಕರ".(ಉದ್ಧೃತ. ಹಾಲತಿ ಸೋಮೇಶ್ವರ ೨೦೦೭ ಪುಟ) ಪ್ರಕೃತಿ ಸಹಜವಾದ ಋತುಸ್ರಾವವು ಯಾವುದೇ ತೇಜಸ್ಸು, ಬುದ್ಧಿ, ಆಯಸ್ಸು ಕಿಣಿಸುವಂತಹದ್ದಲ್ಲ. ಅದು ಒಂದು ಜೀವಿಯ ಉತ್ಪತ್ತಿಗೆ ಕಾರಣವಾಗುವ ಪೂರಕವಾದ ಜೀವಕೋಶ ಪ್ರಕ್ರಿಯೆ, ಈ ಸಂದರ್ಭದಲ್ಲಿ ಹೆಣ್ಣಿನ ದೇಹಕ್ಕೆ ವಿಶ್ರಾಂತಿ, ಅವಶ್ಯಕವಾಗಿರುತ್ತದೆ. ಹಾಗಾಗಿ ಪ್ರತ್ಯೇಕವಾಗಿ ದೇಹ ವಿಶ್ರಾಂತಿ ಬಯಸುತ್ತದೆ ಹೊರತು ಅದು ಮತ್ತ್ಯಾವ 'ಅಸ್ಪಶ್ಯತೆ' 'ಅನಿಷ್ಠತೆ' 'ಅಪಾಯವನ್ನು' ತರುವಂತಹದ್ದಲ್ಲ, ಆದರೆ ಇದನ್ನಾಧರಿಸಿ ಸೃಷ್ಟಿಸಿದ ಅಪಕಲ್ಪನೆ ಹೆಣ್ಣನ್ನು, ಹೆಣ್ಣಿನ ದೇಹವನ್ನು 'ಅಸ್ಪಶ್ಯತೆ' 'ಅನಿಷ್ಠತೆ' 'ಅಪಾಯ'ವೆನ್ನುವ ರೀತಿಯಲ್ಲಿ ನಿರ್ವಚಿಸಿರುವುದು ಕಲ್ಪಿತವೆ ಹೊರತು ಸತ್ಯವಾದುದ್ದಲ್ಲ.

ಇನ್ನು "ಭ್ರೂಣಹತ್ಯೆ ಮಾಡಿದವನು ನೋಡಿದಂಥ, ಮಟ್ಟಾದವಳು ಮುಟ್ಟಿದಂಥ, ಪಕ್ಷಿಗಳ ತಿಂದಂಥ, ನಾಯಿಯು ಮುಟ್ಟಿದಂಥ ಅನ್ನವನ್ನು ಉಣ್ಣಬಾರದು"೨೦೮ (ಉದ್ಧೃತ

ಶೇಷನವರತ್ನ ೨೦೦೫, ಪುಟ.೧೮೩) ಹೀಗೆ ಹೆಣ್ಣನ್ನು 'ಅಸ್ಪೃಶ್ಯ'ತೆ ನೆಲೆಯಲ್ಲಿ ನಿರ್ವಚಿಸಿರವುದು ದೊರೆಯುತ್ತದೆ ಮುಂದೆ ಹೆಣ್ಣಿನ ನೈಸರ್ಗಿಕ ಕ್ರಿಯೆಯನ್ನಾಧರಿಸಿ. ಹಿಂದು ಧರ್ಮವೆಂದನಿಸಿಕೊಂಡ ಮನಸ್ಮೃತಿ, ಯಜ್ಞವಲ್ಕದಲ್ಲಿ ಹೆಣ್ಣಿನ ಋತುಮತಿ ಕುರಿತಾಗಿ ಹೊಂದಿರುವ ಧೋರಣೆಯಲ್ಲಿ, ಹೆಣ್ಣನ್ನು 'ಹೊಲಸು' 'ಪಾಪ'ದವಳು ಎನ್ನುವ ಪರಿಕಲ್ಪನೆಯಲ್ಲಿ ನಿರ್ವಚಿಸಿಕೊಂಡು ಹೊರಟಿರುವುದು ದೊರೆಯುತ್ತದೆ. ಮುಟ್ಟಿನ ಕುರಿತಾಗಿ "ಅಂಗೀರಸನೆಂಬ ಸೂತ್ರಕಾರ ಹೇಳುವ ಮಾಹಿತಿಯಲ್ಲಿ ಹೆಣ್ಣು ಮಕ್ಕಳು ಋತುವಿನ ಕಾಲದಲ್ಲಿ ಎಲ್ಲ ಹೊಲಸನ್ನು ಕಳೆದುಕೊಂಡು ಶುದ್ಧವಾಗುತ್ತಾರೆ. ಒಂದು ವೇಳೆ ಸ್ತ್ರೀಯರು ಬೇರೆ ಪುರುಷನೊಂದಿಗೆ ಸ್ನೇಹ ಬೆಳಸಿದ್ದರೂ ಕೂಡ ಋತುಮತಿಯಾದರೆ ಆಕೆ ಮತ್ತೆ ಪವಿತ್ರಳಾಗುತ್ತಾಳೆ." ಈ ಹೇಳಿಕೆಯು ನಮಗೆ, ಸಮಾಜಕ್ಕೆ ಅಪರಿಚತವಾಗುವಂತೆ ನೋಡಿಕೊಳ್ಳಲಾಗಿದೆ. ಎಲ್ಲ ಧರ್ಮಗಳು, ತತ್ವಜ್ಞಾನಿಗಳು ಮುಟ್ಟನ್ನು ಅಶುದ್ಧವಾಗಿ ನೋಡಿದರೆ, ಅಂಗೀರಸನು ಅದನ್ನು ಶುದ್ಧತೆಯ ನೆಲೆಯಲ್ಲಿ ನಿರ್ವಚಿಸುತ್ತಾನೆ. ಈ ಬಗೆಯ ವಿಚಾರಗಳು ಸಮಾಜದ ಮುಂಚೂಣಿಗೆ ಬರಬೇಕಿದೆ.

"ಯಜ್ಞವಲ್ಕ್ಯನು ಯಾವ ತಂದೆಯು ತನ್ನ ಮಗಳನ್ನು ಋತುಮತಿಯಾಗುವುದರೊಳಗೆ ಮದುವೆ ಮಾಡಿಕೊಡುವುದಿಲ್ಲವೋ ಆತ ಪಾಪವನ್ನು ಅನುಭವಿಸಬೇಕಾಗುತ್ತದೆಂದು ಹೇಳಿದ್ದಾನೆ. ಆಕೆ ಋತುಮತಿಯಾದ ಸಲಕ್ಕೊಮ್ಮೆ, ಶಿಶು ಹತ್ಯೆ ಮಾಡಿದ ಪಾಪ ತಗಲುತ್ತೆದೆಂದು ಹೇಳಿದ್ದಾನೆ. ಇನ್ನೊಬ್ಬ ಶಾಸ್ತ್ರಕಾರ ಹೇಳುವಂತೆ ಯಾವನು ತನ್ನ ಮಗಳು ಮದುವೆಯ ಮೊದಲು ಋತುಮತಿಯಾದುದನ್ನು, ನೋಡಿದ ತಾಯಿ ತಂದೆ ಮತ್ತು ಹಿರಿಯ ಅಣ್ಣ ಮೂರು ಜನರು ನರಕಕ್ಕೆ ಹೋಗುವುದು ಖಂಡಿತವೆಂದು ಹೇಳಿದ್ದಾನೆ. ಅಷ್ಟೆ ಅಲ್ಲ ಋತುಮತಿಯಾದ ಮೇಲೆ ಮದುವೆಯಾಗುವ ಕನ್ಯೆಯನ್ನು ಕೈ ಹಿಡಿದ ಬ್ರಾಹ್ಮಣ ಶೂದ್ರಳನ್ನು ವರಿಸಿದಂತೆ ಎಂದಿದ್ದಾನೆ." (ಉದ್ಧೃತ. ಹಾಲತಿ ಸೋಮೇಶ್ವರ ೨೦೦೭, ಪುಟ.೧೦೧) ಈ ತರನಾದ ಸಂಗತಿಗಳಲ್ಲಿ ಹೆಣ್ಣಿನ ಸಹಜ ಕ್ರಿಯೆಯಾದ ಋತುಮತಿಯಯಾಗುವುದನ್ನು ಆಧರಿಸಿ ಹೆಣ್ಣನ್ನು ಬಾಲ್ಯ ವಿವಾಹಕ್ಕೆ ಎಡೆ ಮಾಡಿದೆ. ಹಾಗೆಯೇ ಹೆಣ್ಣಿನ ಶೋಷಣೆಗೆ ಕಾರಣವಾಗಿದೆ. ವಿವಾಹ ಪೂರ್ವದಲ್ಲಿ ಋತುಮತಿಯಾವುದರಿಂದಾಗಿ ತಂದೆ, ತಾಯಿ, ಅಣ್ಣಂದಿರು, ನರಕಕ್ಕೆ ಹೋಗುತ್ತಾರೆ ಎನ್ನುವುದನ್ನು ಪ್ರಶ್ನೆ ಹಾಕಿ ಕೊಂಡರೆ ಇದು ಎಷ್ಟು ಸರಿಯಾದದ್ದು? ಯಾಕೆಂದರೆ ಗಂಡಿನಲ್ಲಿ ವಯಸ್ಸಿಗೆ ಅನುಗುಣವಾಗಿ ವೀರ್ಯ ಉತ್ಪತ್ತಿಗೊಂಡಂತೆ, ಹೆಣ್ಣಿನಲ್ಲಿ ಸಾಮಾನ್ಯವಾಗಿ ೮ ರಿಂದ ೧೬ರ ವರ್ಷದ ಒಳಗೆ ಜೀವ ಉತ್ಪತ್ತಿ ಸಂಬಂಧಿಗಾಗಿ ಅಂಡಾಣು ಉತ್ಪತ್ತಿಗೊಳ್ಳುತ್ತದೆ. ಇದು ಹೆಣ್ಣಿನ ದೇಹದಿಂದ ಹೊರಬರುವ ಒಂದು 'ಅಂಡಾಣು' ಮಾತ್ರ, ಈ ಅಂಡಾಣು ಒಂದು ಜೀವ ಉತ್ಪಾದನೆ ಮಾಡುವ ಸಾಮರ್ಥ್ಯ ಹೊಂದಿರುವಂತಹದ್ದು ಮತ್ತು ಹೆಣ್ಣಿನ ದೇಹದಲ್ಲಿ ತಿಂಗಳಿಗೊಮ್ಮೆ ಕಾಣಿಸಿಕೊಳ್ಳುವ ಜೀವ

ಸಂಬಂಧಿ ಸಹಜ ಪ್ರಕ್ರಿಯೆ ಅಷ್ಟೆ. ಆದರೆ ಇದನ್ನು ಆಧರಿಸಿ ಸೃಷ್ಠಗೊಳಿಸಿದ ಮಿಥ್‌ನಿಂದಾಗಿ ಹೆಣ್ಣಿಗೆ 'ಹೊಲಸು' 'ಪಾಪ' 'ನರಕ' 'ಅಶುದ್ದ'ತೆ ಎನ್ನುವಂತಹ ನಂಬಿಕೆ ಸೃಷ್ಠಿಗೊಂಡಿರುವುದು ಮತ್ತು ಇದನ್ನು ಆಧರಿಸಿ ಪುರುಷ ಪ್ರದಾನತೆ ಹೆಣ್ಣನ್ನು ಎರಡನೆ ದರ್ಜೆಯಾವಳಾಗಿ ಕಾಣಲು ಕಾರಣವಾಗಿದೆ. ಇನ್ನು ಮನಸ್ಮೃತಿಯಲ್ಲಿ "ಕ್ಷೌರಿಕ, ರಜಸ್ವತಿ, ಜಾತಿಭ್ರಷ್ಟೆ, ಪ್ರಸೂತೆ ಹೆಣ್ಣು ಮತ್ತು ಹೆಣ ಹೊತ್ತು ಬಂದವನು ಇವರೆಲ್ಲರನ್ನು ಮುಟ್ಟಿದಾಗ ಸ್ನಾನ ಮಾಡಿದರೆ ಸಾಕು ಶುದ್ದಿಯಾಗುತ್ತದೆ". (ಶೇಷನವರತ್ನ ೨೦೦೫, ಪುಟ.೨೧೨) ಎಂದು ಹೆಣ್ಣನ್ನು ಮುಟ್ಟಿಸಿಕೊಳ್ಳಲು ಯೋಗ್ಯಳಲ್ಲದಂತಹ ಸ್ಥಿತಿಯನ್ನು ನಿರ್ಮಾಣ ಮಾಡಿರುವುದು ಧರ್ಮ, ಧರ್ಮಗ್ರಂಥಗಳಿಂದಲೆ ದೊರೆಯುತ್ತವೆ. ಈತರನಾದ 'ಮಿಥ್'ಗಳು ಇಂದಿಗೂ ಹೆಣ್ಣನ್ನು 'ಅಸಹ್ಯ'ವಾಗಿ ಕಾಣಲು ಕಾರಣವಾಗಿವೆ. ಇದು ಕೇವಲ ಹಿಂದೂ ಧರ್ಮದಲ್ಲಿ ಒಂದೇ ಅಲ್ಲ ಇತರೆ ಧರ್ಮವಾದ ಇಸ್ಲಾಂ ಧರ್ಮದಲ್ಲಿ ಹೇಳಿರುವ ಮಾಹಿತಿ ನೋಡಿದರೆ "ಸ್ತ್ರೀಯರು ಮುಟ್ಟಾದಾಗ ಅಸಹ್ಯಕರ ಮತ್ತು ಮಲಿನಳಾಗಿರುತ್ತಾಳೆ' (ಕುರಾನ್ ೨೮-೨೨ ಉದ್ಧೃತ: ಷಣ್ಮುಖಯ್ಯ ಅಕ್ಕೂರಮಠ ೧೯೯೪, ಪುಟ.೧೨೭) ಎಂದು ದೊರೆಯುವ ಮಾಹಿತಿಯೂ ಜಗತ್ತಿನ ಧರ್ಮಗಳು ಹೆಣ್ಣಿನ ನೈಸರ್ಗಿಕ ಕ್ರಿಯೆಯಾದ ಮುಟ್ಟನ್ನು 'ಅಸಹ್ಯ', 'ಮಲಿನತೆ', 'ಅಸ್ಪೃಸ್ಯತೆ' ನೆಲೆಯಲ್ಲಿ ಕಂಡಿರುವುದು ಸ್ಪಷ್ಟವಾಗುತ್ತದೆ.

ಧರ್ಮ, ಧರ್ಮಗ್ರಂಥಗಳು ಹೆಣ್ಣು, ಹೆಣ್ಣಿನ ದೇಹ ಜೈವಿಕ ಕ್ರಿಯೆಯನ್ನಾಧರಿಸಿದರಿಂದಲೆ 'ಅಸ್ಪಶ್ಯತೆ'ಗೆ 'ಅಸಹ್ಯ' ಅಶುದ್ಧ 'ಅಪಾಯ' ಎನ್ನುವಂತ ಅಪಕಲ್ಪನೆಯನ್ನು ಸೃಷ್ಠಿ ಮಾಡಿರುವುದರಿಂದಲೇ ಹೆಣ್ಣು, ಹೆಣ್ಣಿನ ದೇಹ ಶೋಷಣೆ ಒಳಗಾಗಿದೆ. ವೈಜ್ಞಾನಿಕ ಸಂಗತಿಯಲ್ಲಿ ಈ ಜೈವಿಕ ಸಹಜ ಕ್ರಿಯೆ ಜೀವ ಉತ್ಪತ್ತಿಗೆ ಪೂರಕವಾದ ಪ್ರಕ್ರಿಯೆ ಎಂದು ಈಗಾಗಲೆ ಸಾರಿ ಹೇಳಿದೆ. ಆದರೆ ಧರ್ಮ, ಧರ್ಮಗ್ರಂಥ ವೆನಿಸಿಕೊಂಡವುಗಳು ಸಾರಿದ ನೀತಿಯಿಂದಾಗಿ ಹೆಣ್ಣಿನ ನೈಸರ್ಗಿಕ ಕ್ರಿಯೆಯಾದ ಮುಟ್ಟು ಅಥವಾ ಋತುಸ್ರಾವ ಅದು ಯಾವುದೇ ಅಸ್ಪೃಶ್ಯತೆ ಅಪವಿತ್ರವಲ್ಲ. ಅದು ಜೀವಿಯಲ್ಲಿನ ಸಹಜ ಕ್ರಿಯೆ ಈ ಕ್ರಿಯೆಯನ್ನು ನಾವು ಮನ್ನಿಸಿ ಗೌರವಿಸುವುದು ಸಹಜವಾದ ಧರ್ಮದ ಭಾಗವಾಗಬೇಕು ಆದರೆ ಇದಕ್ಕೆ ತದ್ವಿರುದ್ದ ವಾತಾವರಣವನ್ನು ಸೃಷ್ಠಿ ಮಾಡಲಾಗಿದೆ.

- **ಹೆರಿಗೆ**

"ಪ್ರಾಚೀನ ವೇದಗಳ ಕಾಲಕ್ಕೆ ಹೆಣ್ಣಿಗೆ ಧಾರ್ಮಿಕ ಉಪ್ಪಾಯ ಸ್ಥಾನವಿತ್ತು. ಮಾಸಿಕ ಮುಟ್ಟು ಗರ್ಭಾಧಾರಣೆ ಅವಧಿಯನ್ನು ಬಿಟ್ಟರೆ ಎಲ್ಲ ಕಾಲದಲ್ಲಿ ಆಕೆಯು ಧಾರ್ಮಿಕ ಕ್ರಿಯೆಗೆ ಅರ್ಹಳೆನಿಸಿದ್ದಳು, ಉಪನಯನ, ವೇದಾಭ್ಯಾಸ ವೈದಿಕ ಸೂಕ್ತ ರಚನೆ ಮಂತ್ರಘೋಶ ಹವನ-ಹೋಮಗಳ ಕರ್ತೃತ್ವವೇ ಮುಂತಾದ ಗಂಡಿಗೆ ಲಭ್ಯವಿದ್ದ ಅವಕಾಶಗಳಲ್ಲಿ ಹೆಣ್ಣಿಗೂ

ಲಭ್ಯವಿತ್ತು ಸನ್ಯಾಸಕ್ಕಿಂತ ವಿವಾಹವೆ ಮುಖ್ಯವಾಗಿದ್ದ ಆ ಕಾಲದಲ್ಲಿ ಧಾರ್ಮಿಕ ಕ್ರಿಯೆಗಳಲ್ಲಿ ಗಂಡಿಗೆ ಹೆಣ್ಣು ಅವಶ್ಯಕ ಸಹಚಾರಣಿಯಾಗಿದ್ದಾಳೆ ಹೊರತು ತೋಡಕಾಗಿರಲ್ಲಿಲ್ಲ. ಸ್ತ್ರೀಯರಿಗೆ ಹಲವು ಯಜ್ಞ ವಿಧಿಗಳನ್ನು ರೂಪಿಸುತ್ತಿದ್ದರೂ ಸೀತಾಯಜ್ಞ, ರುದ್ರಬಲಿ, ರುದ್ರಯಾಗ, ಮುಂತಾದ ಯಜ್ಞಗಳನ್ನು ಸ್ತ್ರೀಯರು ಮಾತ್ರವೇ ನಡೆಸಬೇಕಿತ್ತು. ಇವೆಲ್ಲ ಮುಖ್ಯವಾಗಿ 'ಫಲವಂತಿಕೆ'ಗಾಗಿ ಭೂಮಿ ಸಂಪತ್ತಿನ ವರ್ಧನೆಗಾಗಿ ನಡೆಸುತ್ತಿದ್ದ ವಿಧಿಗಳು".(ಉದ್ಧೃತ ರಾಜಶೇಖರ ಎಸ್., ೨೦೦೧, ಪುಟ.೧೨೫) ಎಂದು ದೊರೆಯುವಲ್ಲಿ ಸ್ತ್ರೀಯರೇ ಮಾತ್ರ ನಡೆಸುತ್ತಿದ್ದ ಯಜ್ಞಯಾಗಾದಿಗಳಲ್ಲಿ ಹೆಣ್ಣು ಪ್ರತ್ಯೇಕವಾಗಿ ವಿಧಿಗಳನ್ನು ನಡೆಸಬೇಕಿತ್ತು ಎಂದಿದೆ. ಹೆಣ್ಣನ್ನು ಪ್ರತ್ಯೇಕ ಮತ್ತು ತಾರತಮ್ಯದ ಅಡಿಯಲ್ಲಿಯೆ ಇಟ್ಟುಕೊಂಡು ಬಂದಿರುವುದು. ಗರ್ಭಾಧಾರಣೆ ಹೆರಿಗೆ ಇವುಗಳು ಹೆಣ್ಣಿನಲ್ಲಿ ನಡೆಯುವ ಜೀವ ಸಂಬಂಧಿ ಚಟುವಟಿಕೆಗಳು, ಆದರೆ ಈ ಚಟುವಟಿಕೆಗಳೇ 'ತಾರತಮ್ಯ ನೆಲೆಯಲ್ಲಿ ನಿರ್ವಚನೆಗೆ ಕಾರಣವಾಗಿವೆ. ಇದಕ್ಕೆಲ್ಲ ಕಾರಣ ಪುರುಷ ನಿರ್ವಚಿಸಿದ ಕಲ್ಪಿತ ನಂಬಿಕೆಗಳು ಯಾಕೆಂದರೆ ಈ ಕುರಿತಾಗಿ ಬ್ರಾಹ್ಮಣಕಗಳು, ಉಪನಿಷತ್ತುಗಳು, ಅರಣ್ಯಕಗಳು ನೀತಿ ಸಂಹಿತೆಗಳೆಂದು ಕರೆಸಿಕೊಂಡವುಗಳಲ್ಲಿ". ವರ್ಣಶ್ರಮದೊಂದಿಗೆ ಶ್ರೇಷ್ಠತೆಯನ್ನು ಕಾಯ್ದುಕೊಳ್ಳಲು ಮತ್ತು ಶ್ರಮಿಕರ ಸೇವೆಯನ್ನು ಪಡೆಯಲು ಉಚ್ಚ – ನೀಚ, ಪವಿತ್ರ ಅಪವಿತ್ರ, ಶ್ರೇಷ್ಠ – ಹೀನ, ಎಂಬ ವಿಚಾರಗಳನ್ನು ತಂದರು. ಲಿಂಗಗಳ ವಿಷಯದಲ್ಲಿ ಪುರುಷ 'ಶ್ರೇಷ್ಠ', ಸ್ತ್ರೀ 'ನೀಚಳು' ಎಂಬುದು ರೂಢಿಗೆ ಬಂತು, ಋತುಕಾಲದಲ್ಲಿ, ಗರ್ಭಿಣಿ ಬಾಣಂತನ ಕಾಲದಲ್ಲಿ ಸ್ತ್ರೀಯರು ಅಪವಿತ್ರರೆಂದು ಪರಿಗಣಿಸುವುದು ಆರಂಭವಾಯಿತು. ಜೊತೆಗೆ ಹೆಣ್ಣಿನ ಜೈವಿಕತೆಯ ಸಹಜ ಕ್ರಿಯೆಯಾದ ಋತುಕಾಲ, ಗರ್ಭಧರಿಸುವ ಸಮಯದಿಂದ ಹಿಡಿದು ಬಾಣಂತನ ಕಾಲದವರೆಗೆ ಹೆಣ್ಣನ್ನು ಅಪವಿತ್ರವೆಂದು ಪರಿಗಣಿಸುವುದು ಆರಂಭವಾಯಿತು. ಹೆಣ್ಣನ್ನು ಯಜ್ಞಯಾಗದಿಗಳಂಥ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವುದಕ್ಕೆ ಅರ್ಹಳಲ್ಲ ಎಂಬ ವಿಚಾರವನ್ನು ಮುಂದಿಟ್ಟಿತು".(ಉದ್ಧೃತ ಹಾಲತಿ ಸೋಮೇಶ್ವರ, ೨೦೦೭, ಪುಟ.೪೪) ಎಂದಿರುವಲ್ಲಿಂದ ಸ್ಪಷ್ಟವಾಗುತ್ತದೆ.

ಹೆಣ್ಣಿನ ಜೈವಿಕ ಕ್ರಿಯೆಯನ್ನು ತಾರತಮ್ಯತೆಯಿಂದ ನೋಡಿರುವುದು ಹಾಗೆ ಈ ಕ್ರಿಯೆಯನ್ನು ನಡೆಸುವ ಹೆಣ್ಣು ದೇಹವನ್ನು ನೇತ್ಯಾತ್ಮಕವಾಗಿ ಚಿತ್ರಿಸಿರುವುದು. ಶುಚಿ ಅಶುಚಿ, ಮಡಿ–ಮೈಲಿಗೆಯಂತಹ ಕಲ್ಪನೆಗಳು ಈತರನಾದ ಧರ್ಮ ಧರ್ಮಗ್ರಂಥಗಳು ಸೃಷ್ಟಿಹಾಕಿದ ಕಲ್ಪನೆಯಿಂದಾಗಿ ಇಂದಿಗೂ ಹೆಣ್ಣನ್ನು ಅದೇ ರೀತಿಯಲ್ಲಿ ಸಮಾಜ ಕಾಣಲು ಕಾರಣತ್ವವಾಗಿದೆ. ಇಂಥ ಕಲ್ಪಿತ ರಾಜಕಾರಣದ ಹುನ್ನಾರಗಳಿಂದ ಹೆಣ್ಣಿನ ಬದುಕು ಪುರುಷನ ಕಲ್ಪಿತ ಲೋಕದಲ್ಲಿ ಬದುಕುವಂತಾಗಿದೆ. ಜೈವಿಕ ಸಹಜ ಕ್ರಿಯೆಯಾದ ಹೆರಿಗೆ ಜೀವ ಉತ್ಪತ್ತಿಗೆ ಕಾರಣವಾಗುವ ಪ್ರಕ್ರಿಯೆಗಳು. ಈ ಪ್ರಕ್ರಿಯೆಗಳಲ್ಲಿ ಹೆಣ್ಣಿನಲ್ಲಿ ಶಕ್ತಿ ಕೇಂದ್ರಗಳಾಗಿ

ನಿರ್ವಚನೆಗೊಳಬೇಕಾಗಿತ್ತು ಆದರೆ ಅದು 'ಜೈವಿಕ ನೆಲೆ'ಯಲ್ಲಿ 'ಫಲವಂತಿಕೆ' ನೆಲೆಯಲ್ಲಿ ನಿರ್ವಚನೆಗೊಂಡಿದೆ ಪುರುಷನು ನಿರ್ವಚಿಸಿಕೊಂಡು ಬಂದಿರುವ ಮೌಲ್ಯದಿಂದಲೇ ಎನ್ನಬಹುದು ಇದರಿಂದಾಗಿ ಇಂದು ಹೆಣ್ಣು ಕೇವಲ ಹೇರಲಿಕ್ಕೆ ಇರುವವಳು ಮತ್ತೊಂದು ಕಡೆ ಹೆಣ್ಣು ಎಂದರೆ 'ಹೊಲಸು ದೇಹ', ಅವಳು ಧಾರ್ಮಿಕ ಕ್ರಿಯೆಯಿಂದ ದೂರವಿರಬೇಕು ಎನ್ನುವಂತ ಕಲ್ಪನೆಗಳೊಳಗಾಗಿ ಜೀವನ ಸಾಗಿಸುವಂತಾಗಿರುವುದು ಕಂಡುಬರುತ್ತಿದೆ ಇದು ಹೆಣ್ಣಿಗೆ ಸಂಪ್ರದಾಯ ಆಚರಣೆಯ ಮೂಲಕ ಖಡ್ಡಾಯವಾಗಿ ಜಾರಿಗೊಂಡು ಉಳಿದುಕೊಂಡು ಬಂದಿರುವುದು ಕಂಡುಬರುತ್ತದೆ.

೩.೨. ಸಾಮಾಜಿಕ

- **ಪುಂಸವನ ಸಂಸ್ಕಾರ**

ತಾಯ್ತನಕ್ಕೆ ಸಂಬಂಧಿಸಿದಂತ ಸಂಗತಿಗಳಿಂದ ನೋಡಿದರೆ ಗಂಡು ಮಗುವನ್ನು ಹೇರಬೇಕೆಂದು ಪ್ರಾರ್ಥನೆ, ಪೂಜೆ, ಯಜ್ಞ, ಯಾಗಾದಿಗಳನ್ನು ಮಾಡುತ್ತಿದ್ದರು ಎಂದು ಮಾಹಿತಿ ದೊರೆಯುತ್ತದೆ. ಜೈವಿಕ ಸಹಜ ಕ್ರಿಯೆಯಾದ 'ಸಂತಾನ'ವು ಪ್ರಕೃತಿದತ್ತದ್ದಕ್ಕೆ ಸಂಬಂಧಿಸಿದ್ದು, ಮಗು(ಗಂಡು)ವನ್ನು ಹೆರಬೇಕೆಂಬ ಒತ್ತಡ ಹೇರಿರುವುದು ಧರ್ಮಗಳಿಂದ ಕಂಡುಬರುತ್ತದೆ. ಇದಕ್ಕೆ "ಪುತ್ರ ಸಂತಾನಕ್ಕಾಗಿ ದೇವತೆಗಳನ್ನು ಪ್ರಾರ್ಥಿಸುತ್ತಿದ್ದರು, ಯಜ್ಞಯಾಗದಿಗಳನ್ನು ಆಚರಿಸುತ್ತಿದ್ದರು. ಹೊಸದಾಗಿ ಮದುವೆಯಾದ 'ವಧು'ವನ್ನು ಹತ್ತು ಗಂಡು ಮಕ್ಕಳ ತಾಯಿಯಾಗೆಂದು, ಹರಸುತ್ತಿದ್ದರು, ಅಷ್ಟೆ ಅಲ್ಲ ಗಂಡು ಮಗುವನ್ನು ಪಡೆಯುವುದಕ್ಕಾಗಿ, ವಿಶೇಷವಾದ ಆಚರಣೆಯನ್ನು ಗೊತ್ತುಪಡಿಸಿದ್ದರೂ, ಅದನ್ನ "ಪುಂಸವನ' ಸಂಸ್ಕಾರ ಎಂದು ಕರೆಯುತ್ತಾರೆ ಇದನ್ನು ಹೆಣ್ಣಿಗೆ ಮೂರು ತಿಂಗಳ ಗರ್ಭಿಣಿ ಇರುವಾಗ ಮಾಡುವ ಸಂಸ್ಕಾರವಾಗಿದೆ. ಹಾಗೆಯೇ ಈ ಗರ್ಭದಿಂದ ಗಂಡು ಸಂತಾನ ಜನಿಸಲ್ಲಿ ಹೆಣ್ಣು ಸಂತಾನ ಎಲ್ಲಿಯಾದರು ಜನಿಸಲ್ಲಿ ಎಂದು ಹೇಳಿ ಪೂಜಿಸಿಕೊಂಡು"(ಉದ್ಧೃತ. ಸಂ. ಪುಟ.)[೧೯] ಬರುತ್ತಿದ್ದರು. ಎಂದಿರುವುದು ದೊರೆಯುತ್ತದೆ. ಜೈವಿಕ ಸಹಜ ಕ್ರಿಯೆಯಾದ ತಾಯ್ತನ ಒತ್ತಾಯದ ಮೂಲಕ ಪಡೆಯುವ ಪ್ರಯತ್ನ ಮಾಡಿರುವುದು ಮತ್ತೊಂದು ಕಡೆ 'ಗಂಡು' ಮಗುವನ್ನು ಪಡೆಯುವುದಕ್ಕೆ ವಿಶೇಷವಾದ ಆಚರಣೆ, ಆರ್ಶಿವಾದ ಮಾಡುತ್ತಿದ್ದರು ಎಂದು ದೊರೆಯುವ ಮಾಹಿತಿ ಆಧಾರಿಸಿದರೆ, ಧರ್ಮ ಲಿಂಗಾಧಾರಿತ ತಾರತಮ್ಯಯನ್ನು ಮತ್ತು ಭಿನ್ನ ಜೈವಿಕತೆ ಮಧ್ಯೆ ಶ್ರೇಷ್ಠ – ಕನಿಷ್ಠತೆಯನ್ನು ಹುಟ್ಟು ಹಾಕಿದೆ ಎನ್ನುವುದು ಗೊತ್ತಾಗುತ್ತದೆ. ದೇಹಕ್ಕೆ ತನ್ನದೇ ಆದ ಪ್ರಕೃತಿ ಸಹಜವಾದ ನೀತಿ ಸಂಹಿತೆಗಳೂ ಇರುತ್ತವೆ ಈ ಸಂಹಿತೆಗಳಲ್ಲಿ ಸ್ತ್ರೀ – ಪುರುಷ ತಾರತಮ್ಯವಿರುವುದಿಲ್ಲ. ಆದರೆ ದೇಹಗಳ ಮೇಲೆ ಪುರುಷ ಸಮಾಜವು ಹೇರಿದ ನೀತಿ ಸಂಹಿತೆಗಳು ಮಾತ್ರ ಪಕ್ಷಪಾತದಿಂದ ಕೂಡಿವೆ ಮತ್ತು

ಸಾಮಾಜಿಕ ನೀತಿ ಸಂಹಿತೆಗಳು ಸ್ತ್ರೀ–ಪುರುಷರು ದೇಹಗಳಿಗೆ ಭಿನ್ನವಾಗಿ ಅನ್ವಯವಾಗುತ್ತಿವೆ. ಹೆಣ್ಣನ್ನು ಜೈವಿಕ ನೆಲೆಯಲ್ಲಿ ಅಂದರೆ 'ಹೆಣ್ಣು' ಸಂತಾನ ಕೊಡುವವಳು. ಫಲವಂತಿಕೆ ಸಂಕೇತದ ಹಿನ್ನಲೆಯಲ್ಲಿ ನೋಡಲಾಗಿದೆ ಹೊರತು. ಅದೇ ಮಾನವರಲ್ಲಿ ಸಹಜೀವಿಯಾದವಳು ಎಂದು ನೋಡಿದ ಸಂಗತಿ ದೊರೆಯುವುದಿಲ್ಲ ದೊರೆತರು ಅದು ಜೈವಿಕ ಕಾರಣವನ್ನು ಇಟ್ಟು ನಿರ್ವಚಿಸಿಕೊಂಡ ಕಲ್ಪನೆಗಳೆ ಹೆಚ್ಚು.

- **ಹೆಣ್ಣಿನ ಹುಟ್ಟು**

ಭೂಮಿಯ ಮೇಲೆ ಜೀವಿಯ ಹುಟ್ಟು ಸಹಜವಾದುದು ಮತ್ತು ನೈಸರ್ಗಿವಾದುದು. ಆದರೆ ಈ ಹುಟ್ಟನ್ನು ಆಧರಿಸಿ ಹೆಣ್ಣಿಗೆ ಸೃಷ್ಟಿಗೊಳಿಸಿದ ಸಂಗತಿಗಳು ನೋಡಿದರೆ ಹೆಣ್ಣು ಹುಟ್ಟುವುದೇ 'ಅಪರಾಧ' 'ಅಸಾದುವಾದುದು' ಮತ್ತು 'ಯೋಗ್ಯ'ವಾದುದಲ್ಲ ಎನ್ನುವಂತಹ ಸಂಗತಿಯನ್ನು ಧರ್ಮ, ಧರ್ಮಗ್ರಂಥಗಳು ಉಪದೇಶಿಸಿರುವುದು ಕಂಡುಬರುತ್ತದೆ. ಇದಕ್ಕೆ ವೇದಗಳ ಕಾಲದಲ್ಲಿ ಹೆಣ್ಣಿನ ಹುಟ್ಟಿನ ಬಗ್ಗೆ ಹೊಂದಿರುವ ಮನೋಭಾವನೆಯಲ್ಲಿನ ಸಂಗತಿಯಿಂದ ನೋಡಿದರೆ "ವೇದಕಾಲದ ಜನರಲ್ಲಿ ಸಾಮಾನ್ಯವಾಗಿ ಮಗಳ ಜನನಕ್ಕಿಂತ ಮಗನ ಜನನವೇ ಹೆಚ್ಚು ಬಯಸುತ್ತಿದ್ದರು ಜನಿಸುವ ಮಗುವು ಗಂಡಾಗಲ್ಲೆಂದು ಮಾಡಬಹುದಾದ ಎಷ್ಟೋ ವಿಧಿಗಳಿವೆ" ಮತ್ತು "ಅದೇ ಕಾಲದಲ್ಲಿ ಉದಾಹರಣೆಯಾಗಿ ಪುಂಸವನ ಸಂಸ್ಕಾರ ಗಂಡು ಮಗುವನ್ನು ಪಡೆಯುವುದಕ್ಕಾಗಿ ವೇದಗಳ ಕಾಲದಲ್ಲಿ ಒಂದು ವಿಶೇಷ ಆಚರಣೆಗಳನ್ನು ಗೊತ್ತುಪಡಿಸಿದ್ದು, ಇದನ್ನು ಮೂರು ತಿಂಗಳ ಗರ್ಭಿಣಿ ಇದ್ದಾಗ ಮಾಡುವ ಒಂದು ಸಂಸ್ಕಾರವು ಆಚರಣೆಯಲ್ಲಿತ್ತು. ಹಾಗೆ ಪ್ರಾರ್ಥನೆಯ ಸಂದರ್ಭದಲ್ಲಿ ಪ್ರಜಾಪತಿಯೇ ನೀನು ಈ ಗರ್ಭವನ್ನು ಸೃಷ್ಟಿಸಿದ್ದಿಯೇ ಈ ಗರ್ಭದಿಂದ. ಗಂಡು ಸಂತಾನ ಜನಿಸಲಿ ಹೆಣ್ಣು ಸಂತಾನ ಇನ್ನೆಲ್ಲಿಯಾದರೂ ಆಗಲಿ ಪತಿಯೇ ಹುಟ್ಟುವ ಮಗುವನ್ನು ಗಂಡು ಮಗುವನ್ನಾಗಿಮಾಡು ಅವನನ್ನು ಹೆಣ್ಣನ್ನಾಗಿ ಮಾಡಬೇಡ". (ಉದ್ಧೃತ ವೀಣಾ ಕುಲಕರ್ಣಿ ೨೦೦೮, ಪು.೮೨) ಇಲ್ಲಿ ಹೆಣ್ಣಿನ ಹುಟ್ಟುವಿನ ಬಗ್ಗೆ ನಿರಾಕರಣೆ ಮಾಡಿರುವುದು ಕಂಡುಬರುತ್ತದೆ. ನೈಸರ್ಗಿಕ ಕ್ರಿಯೆಯಾದ ಹುಟ್ಟು ಯಾವುದೇ ವಿಧಿಪೂಜೆ, ಆಚರಣೆ ನೆರವರಿಸುವುದರಿಂದ ಸೃಷ್ಟಿಗೊಳ್ಳುವಂತಹದ್ದಲ್ಲ ಹಾಗೇ 'ಲಿಂಗ'ವೆನ್ನುವುದು ಆಚರಣೆಯಿಂದ ಉತ್ಪತ್ತಿಯಾಗುವಂತಹದ್ದಲ್ಲ ಆದರೆ ಹೆಣ್ಣೆನ್ನುವ ಕಾರಣವನ್ನಾಧಾರಿಸಿ ಹೆಣ್ಣನ್ನು ನಿರಾಕರಿಸಿರುವುದು 'ಪುರುಷ ರಾಜಕಾರಣ' ಎನ್ನುವುದು ಅರ್ಥವಾಗುತ್ತದೆ.

ಹೆಣ್ಣಿನ ಹುಟ್ಟಿನ ಬಗ್ಗೆ ಕೇವಲ ನಿರಾಕರಣೆ ಒಂದೇ ಅಲ್ಲ 'ಪಾಪದ ಫಲ' ಎಂದು ಜರದಿರುವ ಸಂಗತಿ ದೊರೆಯುತ್ತದೆ. "ಸೃಷ್ಟಿಗೆ ಬ್ರಹ್ಮನೇ ಅದಿಪತಿ ಈ ಸೃಷ್ಟಿಕರ್ತ ಸೃಷ್ಟಿಸುವಾಗಲೇ ಹೆಣ್ಣಿಗೊಂದು, ಗಂಡಿಗೊಂದು ಬರೆದಿರುವುದರಿಂದ ಹೆಣ್ಣಿನ ಕರ್ಮಫಲ ಇದನ್ನು ಹೆಣ್ಣಾದವಳೇ ಅನುಭವಿಸಬೇಕು, ಹಿಂದಿನ ಜನ್ಮದಲ್ಲಿ ಹೆಣ್ಣು ಮಾಡಿರುವ

'ಪಾಪ'ದಿಂದಾಗಿ ಈ ಜನ್ಮದಲ್ಲಿ ಹೆಣ್ಣಾಗಿ ಹುಟ್ಟಿರುವಳು"(ಉದ್ಧೃತ ಹಾಲತಿ ಸೋಮೇಶ್ವರ ೨೦೦೭ ಪು.೫೩) ಧರ್ಮದಲ್ಲಿ 'ಹೆಣ್ಣನ್ನು 'ಪಾಪ'ದ ಮೃತ್ಯು ಕೂಪಕ್ಕೆ ತಳ್ಳಿರುವುದು ಕಂಡುಬರುತ್ತದೆ. ಭೂಮಿಯ ಮೇಲೆ ಹುಟ್ಟುವ ಪ್ರತಿಯೊಂದು ಜೀವಿಗೆ 'ಪಾಪ-ಪುಣ್ಯ' 'ಫಲ' ಎನ್ನುವ ಯಾವುದೇ ಚಿಂತನೆಗಳು ಇರುವುದಿಲ್ಲ ಆದರೆ ಬುದ್ಧಿವಂತನೆನಿಸಿಕೊಂಡ ಮಾನವ ಅದರಲ್ಲಿ 'ಪುರುಷ' ತನ್ನ ಸಹ ಜೀವಿಯಾದ ಹೆಣ್ಣಿಗೆ 'ಪಾಪ'ದ ಲೇಪ ಹಚ್ಚಿದ್ದಾನೆ. ಏಕೆಂದರೆ ಎಷ್ಟೋ ಸಲ ಹೆಣ್ಣು ತನ್ನನ್ನ ತಾನೇ ಜರಿದುಕೊಳ್ಳುವಂತ ಸಂದರ್ಭದಲ್ಲಿ 'ನನ್ನ ಕರ್ಮದಿಂದಲೇ ನನಗೆ ಈ ಕಷ್ಟ ಒದಗಿತು'. 'ದೇವರು ನನ್ನನ್ನು ಯಾಕೆ ಹೆಣ್ಣಾಗಿ ಹುಟ್ಟಿಸಿದನೋ ಏನೋ' ಎಂದು ಮನನೊಂದುಕೊಂಡು ಮಾತನಾಡುವ ಮಾತುಗಳಿಂದ ತಿಳಿಯಬಹುದು. ಹೆಣ್ಣಿನ ಹುಟ್ಟಿನ ಬಗ್ಗೆ. ಇದು ಕೇವಲ ಹಿಂದೂ ಧರ್ಮಗ್ರಂಥಗಳಲ್ಲಿ ಮಾತ್ರವಲ್ಲ ಇತರ ಧರ್ಮವಾದ ಕ್ರೈಸ್ತ ಧರ್ಮದಲ್ಲಿ ಕಂಡುಬರುತ್ತದೆ. ಇದಕ್ಕೆ "ದೇವರು ಮೊದಲು 'ಅದಮ್'ನನ್ನು ಸೃಷ್ಟಿಸಿದ ಅನಂತರ ಸ್ತ್ರೀಯನ್ನು ಅಂದರೆ 'ಈವ್'ಳನ್ನು ಸೃಷ್ಟಿಸಿದ್ದಾನೆ. ಅವಳು ಅತನ ಎಲುಬಿನಿಂದ ರೂಪಿಸಲ್ಪಟ್ಟಿದ್ದಾಳೆ. ಆದುದರಿಂದ ನನಗೀಗ ಇವಳು ನನ್ನಲುಬಿನ ಎಲುಬು, ನನ್ನೊಡಲಿನ ಒಡಲು ನರನಿಂದ ಉತ್ಪತ್ತಿಯಾದ ಇವಳನ್ನು ನಾರಿಯೆಂದೇ ಕರೆದರು". (ಆದಿ ೨;೨೭ ಉದ್ಧೃತ: ಹಾಲತಿ ಸೋಮೇಶ್ವರ ೨೦೦೭, ಪು.೧೨೫) ಎಂದು ಹೆಣ್ಣಿನ ಹುಟ್ಟಿನ ಕುರಿತಾಗಿ ಹೊಂದಿರುವ ನಂಬಿಕೆ ನೋಡಿದರೆ ನೈಸರ್ಗಿಕ ಕ್ರಿಯೆಯಾದ ಹುಟ್ಟನ್ನು 'ಲಿಂಗಭೇದ'ದ ಮೂಲಕ ಹೆಣ್ಣಿಗೆ ಹುಟ್ಟಿನ ಅಸ್ತಿತ್ವ ಇಲ್ಲದಂತೆ ಮಾಡಿರುವುದು ಕಂಡುಬರುತ್ತದೆ. ಏಕೆಂದರೆ 'ಡಾರ್ವಿನ್ ವಿಕಾಸ'ವಾದದ ಅಡಿಯಲ್ಲಿ ಹುಟ್ಟು ನಿಸರ್ಗ ಸಹಜವಾದ ಕ್ರಿಯೆ ಮತ್ತು ಜೀವವಿರುವ ಜೀವಿಯಿಂದಲೇ ಮೈದಳಿಯುವಂತಹದ್ದು ಎನ್ನುವ ಸಂಗತಿ ಇದೆ ಆದರೆ ಧರ್ಮ ಧರ್ಮಗ್ರಂಥಗಳು ಸಹಜವಾದ ಹುಟ್ಟನ್ನು ಲಿಂಗರಾಜಕಾರಣಕ್ಕೆ ಒಳಪಡಿಸಿ ಹುಟ್ಟನ್ನು ಲಿಂಗಭೇಧದ ಹಿನ್ನೆಲೆಯಲ್ಲಿ ನಿರ್ವಚಿಸಿವುದು ಕಂಡುಬರುತ್ತದೆ.

ಧರ್ಮ, ಧರ್ಮಗ್ರಂಥಗಳಲ್ಲಿ ಹೆಣ್ಣಿನ ಹುಟ್ಟನ್ನು ಅಲ್ಲೆಗಳೆದಿರುವ ಸಂಗತಿಯು ಪುರಷನ ಶ್ರೇಷ್ಠತೆಗಾಗಿ ಹೆಣ್ಣನ್ನು ನಿಯಂತ್ರಿಸಲು ಮಾಡಿರುವ ತಂತ್ರವಾಗಿ ಕಂಡುಬರುತ್ತದೆ. ಇದಕ್ಕೆ ಕ್ರೈಸ್ತಧರ್ಮದಲ್ಲಿ "ಪ್ರತಿ ಪುರುಷನಿಗೂ ಕ್ರಿಸ್ತನ ತಲೆ, ಸ್ತ್ರೀಗೆ ಪುರುಷನ ತಲೆ, ಕ್ರಿಸ್ತನಿಗೆ ದೇವರ ತಲೆ ಆಗಿದ್ದಾನೆ. ತಲೆಯನ್ನು ಮುಚ್ಚಿಕೊಂಡು ಪ್ರಾರ್ಥನೆಯನ್ನು ಮಾಡುವ ಪುರುಷನು ತನ್ನ ತಲೆಯನ್ನು ಅವಮಾನ ಪಡಿಸಿದಂತೆ, ತಲೆಯ ಮೇಲೆ ಮುಸುಕು ಹಾಕಿಕೊಳ್ಳದೆ ಪ್ರಾರ್ಥನೆಯನ್ನು ಮಾಡುವ ಸ್ತ್ರೀಯು ತನ್ನ ತಲೆಯನ್ನು ಅವಮಾನ ಪಡಿಸುತ್ತಾಳೆ. ಸ್ತ್ರೀಯರಿಗೆ ತಲೆಯ ಮೇಲೆ ಮುಸುಕಿಲ್ಲದಿರುವುದು ತಲೆ ಬೋಳಿಸಿಕೊಂಡಿರುವುದು ಎರಡು ಒಂದೇ, ಸ್ತ್ರೀಯು ಮುಸುಕು ಹಾಕಿಕೊಳ್ಳದಿದ್ದರೆ ಕೂದಲು ತೆಗೆಸಿಬಿಡಬೇಕಷ್ಟೆ. ತಲೆ

ಬೋಳಿಸಿಕೊಳ್ಳುವುದು ಸ್ತ್ರೀಗೆ ಅವಮಾನಕಾರವಾಗಿದ್ದರೆ, ಆಕೆಯು ಮುಸುಕನ್ನು ಹಾಕಿಕೊಳ್ಳಲಿ ಪುರುಷನು ದೇವರ ಪ್ರತಿರೂಪನು ಪ್ರಭಾವಿಯಾಗಿರುವುದರಿಂದ ತಲೆಯನ್ನು ಮುಚ್ಚಿಕೊಳ್ಳಕೂಡದು, ಸ್ತ್ರೀಯಾದರೆ ಪುರುಷನ ಪ್ರಭಾವಿಯಾಗಿದ್ದಾಳೆ. ಮೂಲದಲ್ಲಿ ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು, ಪುರುಷನ ನಿಮಿತ್ಯವಾಗಿ ಉತ್ಪತ್ತಿಯಾದಳು ಪುರುಷನು ಸ್ತ್ರೀ ನಿಮಿತ್ಯವಾಗಿ ಉತ್ಪತ್ತಿಯಾಗಲಿಲ್ಲ. ಆದ್ದರಿಂದ ಸ್ತ್ರೀಯು ಪುರುಷನ ಅಧಿಕಾರ ಸೂಚಿಸುವ ಮುಸುಕನ್ನು ತಲೆಯ ಮೇಲೆ ಹಾಕಿಕೊಂಡಿರಬೇಕು ಎಂದು ಕ್ರೈಸ್ತಧರ್ಮ ಆದೇಶಿಸುತ್ತದೆ".(ಉದ್ಧೃತ ಹಾಲತಿ ಸೋಮೇಶ್ವರ ೨೦೦೭, ಪು.೧೨೭) ಎಂದಿರುವಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಹೆಣ್ಣನ್ನು ನಿಯಂತ್ರಣಕ್ಕೆ ಒಳಪಡಿಸುವ ತಂತ್ರ.

ಹೆಣ್ಣಿನ ಹುಟ್ಟಿನ ಕುರಿತಂತೆ ಅಪನಂಬಿಕೆ ಮತ್ತು ಕನಿಷ್ಟತೆಗೆ ಒಳಪಡಿಸಿರುವುದು ಕಂಡುಬರುತ್ತದೆ. ಅದು "ಧಾರ್ಮಿಕ ನಾಯಕರ, ಮೇರಿಯ ವೈಭವೀಕರಣಕ್ಕೆ ವಿರೋಧಿಗಳಾಗಿದ್ದುದೂ ಇತ್ತು. ನಿಸರ್ಗದಿಂದಲೇ ಹೆಣ್ಣು-ಗಂಡಿಗಿಂತ ದುರ್ಬಲಳು, ದೇವರ ನಿಯಮವು ಕೂಡ ಇದೇ ಆಗಿದೆ. ವರ್ಜಿನ್ ಮೇರಿ ಕೂಡ ಇದಕ್ಕೆ ಅಪವಾದವಲ್ಲ. ಅವಳು ತನ್ನ ಪುತ್ರನಿಂದಾಗಿ ಉದ್ಧಾರಗೊಂಡಳು ಎಂದು ಥಾಮಸ್ ಸಾರಿದ್ದನು".(ಉದ್ಧೃತ ಸುಮಿತ್ರಬಾಯಿ ಬಿ.ಎನ್., ೨೦೦೭, ಪು.೫೦೭)[೨೨] ಈ ಪಠ್ಯವು ಹೆಣ್ಣಿನ ಹುಟ್ಟನ್ನು ಅಲ್ಲೆಗಳೆಯುವುದರ ಜೊತೆಗೆ ಸೃಷ್ಟಿಸುವ ಜೀವಿಯಾದ ಹೆಣ್ಣಿಗೆ ಕನಿಷ್ಟತೆಯ ಪಟ್ಟ ಕಟ್ಟುತ್ತದೆ. ಮೊದಲು 'ಸೃಷ್ಟಿದೈವ' ಹೆಣ್ಣು ಎಂದು ಸಾರಿಕೊಂಡಿರುವುದು ಮತ್ತು ಸ್ತ್ರೀ ಮಾನವ ಕುಲದ ತಾಯಿ, ಸೃಷ್ಟಿಯಲ್ಲಿ ಅಗ್ರಮಾನ್ಯ ಸ್ಥಾನ ಆಕೆಯದು, ಹೀಗಿರುವಾಗ ಸೃಷ್ಟಿಗೆ ಕಾರಣಳಾದ ಹೆಣ್ಣನ್ನು ಕನಿಷ್ಟಳೆಂದು ಗುರುತಿಸಿರುವುದು. ಪುರುಷ ಮಾಡಿರುವ ತಂತ್ರವಾಗಿದೆ ಈ ಕಾರಣದಿಂದಾಗಿ ಹೆಣ್ಣಿಗೆ ಇಂದಿಗೂ ಧರ್ಮದಲ್ಲಿ ಧರ್ಮಾಧಿಕಾರಿಗಳು ಹೆಣ್ಣಿಗೆ ಸರಿ ಸಮಾನತೆ ನೀಡಲಿಲ್ಲದಿರುವುದು ಕಂಡುಬರುತ್ತದೆ. ಹಾಗೆ ಸ್ತ್ರೀಗೆ ದೀಕ್ಷಾ ಸಂಸ್ಕಾರ (Baptism) ಪಡೆದುಕೊಂಡು ತಾನು ಭಕ್ತಳಾಗುವ ಅವಕಾಶವಿದೆಯೇ ವಿನಃ ಗುರುವಾಗುವ ಹಕ್ಕು (Priestand Bishop) ಆಕೆಗೆ ಬಂದಿಲ್ಲ, ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪಾದ್ರಿ ಸಿಗದಿದ್ದಾಗ ಸ್ತ್ರೀಯಳು ಧಾರ್ಮಿಕದಲ್ಲಿ ಉನ್ನತ ಸ್ಥಾನ ಪಡೆಯುತ್ತಾಳೆ. ಎಂದು ಧರ್ಮ, ಧರ್ಮಗ್ರಂಥಗಳ ಮೂಲಕ ನಂಬಿಕೆ ಸೃಷ್ಠಿ ಮಾಡಿದ ಸಂಪ್ರದಾಯ ಆಚರಣೆಗಳ ಮೂಲಕ ಹೆಣ್ಣಿಗೆ ಬದ್ಧಗೊಳಿಸಿ ಹೆಣ್ಣಿಗೆ ಮಾತ್ರ ಆಚರಣೆ ರೂಪದಲ್ಲಿ ಮುಂದುವರೆಯುತ್ತಿರುವುದು ಕಂಡುಬರುತ್ತದೆ.

"ಇಸ್ಲಾಂ ಧರ್ಮದ ಆರಂಭಕ್ಕೆ ಮುನ್ನ ಅರಬ್ ದೇಶದಲ್ಲಿ ಹೆಣ್ಣಿನ ಸ್ಥಿತಿ ಹೀನಾಯವಾಗಿತ್ತು. ಹೆಣ್ಣಿನ ಅಸ್ತಿತ್ವವನ್ನು ಅಪಮಾನವೆಂದು ಭಾವಿಸಿದ್ದರು. ಹೆಣ್ಣು ಮಗುವಿನ ಸುದ್ದಿ ಕೇಳಿದರೆ ಶೋಕ ಸಂದೇಶ ಕೇಳಿದವರಂತೆ ದು:ಖತಪ್ತರಾಗುತ್ತಿದ್ದರು. ಗಂಡು ಮಕ್ಕಳು ಹುಟ್ಟಿದ ಸುದ್ದಿ ಕೇಳಿದರೆ ಹೆಮ್ಮೆ ಪಡುತ್ತಿದ್ದರು. ಹಾಗೂ ಪವಿತ್ರ ಕುರಾನ್‌ನಲ್ಲಿ ಹೇಳಿರುವಂತೆ

ಅರಬರಲ್ಲಿ ಯಾರಿಗಾದರೂ ಹೆಣ್ಣು ಶಿಶುವಿನ ಜನನದ ಸುದ್ದಿ ಕೇಳಿದವನ ಮುಖ ಕಪ್ಪಿಡುತ್ತದೆ. ದು:ಖದಿಂದ ಇಳಿದು ಹೋಗುತ್ತದೆ. ಈ ಸುದ್ದಿ ಅವನು ಕೆಟ್ಟದೆಂದು ಭಾವಿಸುತ್ತಾ ಮಗುವನ್ನು ಉಳಿಸಬೇಕೆ ಅಥವಾ ಮಣ್ಣಿನಲ್ಲಿ ಊತುಬಿಡಬೇಕೆ ಎಂದು ಯೋಚಿಸುತ್ತಿರುತ್ತಾನೆ". (ಪವಿತ್ರ ಕುರಾನ್ ೧೬:೫೮-೫೯ ಉದ್ಧೃತ ಹಾಲತಿ ಸೋಮೇಶ್ವರ ೨೦೦೭ ಪುಟ.೧೦೫) ಇಸ್ಲಾಂ ಧರ್ಮದಲ್ಲಿ ಹೆಣ್ಣಿನ ಹುಟ್ಟು ಅಪೇಕ್ಷಿತವಾದುದ್ದಲ್ಲ ಎಂದು ತಿಳಿದಿರುವುದು ಕಂಡುಬರುತ್ತದೆ. ಹೀಗಾಗಿ ಹೆಚ್ಚು ಭ್ರೂಣ ಹತ್ಯೆಗಳು ನಡೆಯುತ್ತಿವೆ. ಮತ್ತು ಹೀಗಾಗಿ ಹೆಣ್ಣು ಸಂಕುಲ ಅಪಾಯದಲ್ಲಿದೆ. ಇದಕ್ಕೆ "ನನಗೆ ಒಬ್ಬ ಮಗಳಿದ್ದಳು ಆಕೆ ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದಳು ನಾನು ಕರೆದಾಗಲೆಲ್ಲಾ ಸಂತೋಷದಿಂದ ನನ್ನ ಬಳಿ ಬರುತ್ತಿದ್ದಳು ಒಂದು ದಿನ ನಾನು ಆಕೆಯನ್ನು ಕರೆದೆ ಆಕೆ ಓಡೋಡಿ ಬಂದಳು ನಾನು ಆಕೆಯನ್ನ ಕರೆದುಕೊಂಡು ಸಮೀಪದ ಬಾವಿಯೊಂದಕ್ಕೆ ದೂಡಿಬಿಟ್ಟೆ. ಆಗಲೂ ಆಕೆ ಅಪ್ಪ, ಅಪ್ಪ, ನನ್ನನ್ನು ದೂಡಬೇಡಿ ಎನ್ನುತ್ತಿದ್ದಳು". (ಕುರಾನ್ ಭಾಗ-೨ ಉದ್ಧೃತ ಹಾಲತಿ ಸೋಮೇಶ್ವರ ೨೦೦೭, ಪುಟ ೧೦೬,) ಎಂದು ಕುರಾನ್ ಹೇಳುತ್ತದೆ. ಇಸ್ಲಾಂ ಧರ್ಮದಲ್ಲಿ ಮಾತ್ರವಲ್ಲ ಇದೇ ಆಶಯಗಳು ಇತರ ಧರ್ಮಗಳಲ್ಲೂ ಕಂಡುಬರುತ್ತದೆ. ಬೌದ್ಧಧರ್ಮದಲ್ಲಿ ಹೆಣ್ಣಿನ ಹುಟ್ಟು ತಾಯ್ತನ ಜೈವಿಕ ಸಹಜ ಕ್ರಿಯೆಗಳ ಕುರಿತಾಗಿ ಅಷ್ಟಾಗಿ ಮಾಹಿತಿ ದೊರೆಯದ್ದಿದ್ದರು ಕೆಲವು ಹೆಣ್ಣನ್ನು ಕಂಡ ಬುದ್ಧನ ದೃಷ್ಟೀಕೋನದಲ್ಲಿ ನೋಡಿದರೆ ಹೆತ್ತ ತಾಯಿಯನ್ನು ಧರ್ಮದಲ್ಲಿ ಸೇರಿಸಿಕೊಳ್ಳುವುದಕ್ಕೆ ಹಿಂದೇಟು ಹಾಕಿ ನಂತರ ಸೇರಿಕೊಳ್ಳಲು ಸಮ್ಮತ್ತಿಸಿರುವುದು ಮತ್ತು "ಹೆಣ್ಣು ಮಕ್ಕಳು ನಾವು ನಮ್ಮ ಸಂಘಕ್ಕೆ ಸೇರಿಸಿಕೊಳ್ಳದಿದ್ದ ಪಕ್ಷದಲ್ಲಿ ಈ ಧರ್ಮವು ಸಾವಿರ ವರ್ಷಗಳವರೆಗೆ ಈಗ ಅದು ೫೦೦ ವರ್ಷಗಳವರೆಗೆ ಬಾಳುವುದು ಕಷ್ಟ". (ಉದ್ಧೃತ ಷಣ್ಮುಖಯ್ಯ ಅಕ್ಕೂರು ಮಠ ೧೯೯೪ ಪುಟ.೧೯೯) ಎಂದು ದೊರೆಯುವ ಮಾಹಿತಿಯಲ್ಲಿ ಬೌದ್ಧ ಧರ್ಮದಲ್ಲಿ ಹೆಣ್ಣನ್ನು ಕಂಡ ಬಗ್ಗೆ ಹಾಗೂ ಹೆಣ್ಣಿಗೆ ನೀಡಿದ್ದ ಪ್ರಾತಿನಿಧ್ಯ ಎಂತಹದೆನ್ನುವುದು ಗೊತ್ತಾಗುತ್ತದೆ. ಮತ್ತು ಈ ಧರ್ಮದಲ್ಲಿ, ಧರ್ಮನಾಶಕ್ಕೆ ಹೆಣ್ಣೆ ಕಾರಣ ಎನ್ನುವಂತಹ ಸಂಗತಿಗಳು ದೊರೆಯುತ್ತವೆ. ಅದನ್ನು ಈ ಮೇಲೆ ದೊರೆಯುವ ಆಧಾರದಿಂದ ತಿಳಿಯಬಹುದಾಗಿದೆ.

- **ವಿವಾಹ ದೈವ ನಿಯಾಮಕ**

ವಿವಾಹವು ಗಂಡು - ಹೆಣ್ಣಿನ ಮಧ್ಯೆ ಮಾಡಿಕೊಂಡಿರುವ ಒಪ್ಪಂದ. ಈ ಒಪ್ಪಂದಕ್ಕೆ ಅನೇಕ ರೀತಿಯ ನೀತಿ, ನಿಯಮಗಳನ್ನು ವಿಧಿ ನಿಷೇಧಗಳನ್ನು ಸೃಷ್ಠಿ ಮಾಡಿರುವುದು ಕಂಡುಬರುತ್ತಿದೆ. ವಿವಾಹ ಮೌಲ್ಯಗಳು ಭಿನ್ನ ಜೈವಿಕತೆಯನ್ನಾಧರಿಸಿಯೇ ಸೃಷ್ಠಿಯಾಗಿವೆ. "ಸೋದರನಿಲ್ಲವೇ ಅಥವಾ ಕನ್ಯೆಗೆ ತಂದೆ ಯಾರೆಂದು ತಿಳಿಯದೋ ಅವಳ ಹುಟ್ಟಿನ ಬಗ್ಗೆ ಸಂಶಯವುಂಟಾಗುವುದೊ ಇಂಥ ಹೆಣ್ಣನ್ನು ಮದುವೆಯಾಗಕೂಡದು". (ಉದ್ಧೃತ ಶೇಷನವರತ್ನ ೨೦೦೫, ಪುಟ.೮೫) "ನಿರ್ದೋಷಿವಾದ ಅವಯವಗಳುಳ್ಳ, ಸುಂದರವಾದ ಹೆಸರುಳ್ಳ,

ಹಂಸದಂತೆ, ಗಜದಂತೆ, ಗಂಭೀರವಾಗಿ ನಡೆಯುವ, ಸುಂದರ ಕೇಶರಾಶಿಯುಳ್ಳ ಸುಭಗವಾದ ದಂತ ಪಂಕ್ತಿಯುಳ್ಳ ಕೋಮಲಾಂಗಿಯನ್ನು ಆಯ್ದು ವಿವಾಹ ಮಾಡಿಕೊಳ್ಳಬೇಕು". (ಉದ್ಧೃತ ಶೇಷನವರತ್ನ, ೨೦೦೫, ಪುಟ.೮೨) ಹಾಗೇ "ಸಂಸ್ಕಾರಗಳನ್ನು ಹೊಂದದೆ ಇದ್ದ, ಗಂಡು ಸಂತಾನವಿಲ್ಲದ, ವೇದಾಧ್ಯಾನಯವನ್ನು ಮಾಡದಿರುವ, ಉದ್ದವಾದ ಒರಟು ರೋಮಗಳನ್ನು ಹೊಂದಿದ, ಮೂಲವ್ಯಾಧಿ, ಅಪಸ್ಮಾರ, ಕ್ಷಯರೋಗ, ಅಗ್ನಿಮಾಂದ್ಯ ತೊನ್ನುರೋಗ, ಕುಷ್ಠರೋಗ ಈ ದೋಷಗಳಿರುವ ಮನೆತನಗಳ ಜೊತೆಗೆ ವಿವಾಹ ಸಂಬಂಧ ಬೆಳೆಸಿಕೊಂಡು." (ಉದ್ಧೃತ: ಶೇಷನವರತ್ನ, ೨೦೦೫, ಪುಟ.೮೧) "ಕೆಂಚಕೂದಲುಗಳುಳ್ಳ ಸ್ಥೂಲವಾದ ಗಾತ್ರವುಳ, ರೋಗವುಳ್ಳ, ಮೈಮೇಲೆ ಕೂದಲುಗಳೇ ಇರದ, ಅಥವಾ ಮೈತುಂಬ ಅತಿಯಾದ ಕೂದಲುಗಳಿರುವ, ವಾಚಾಳಿಯಾದ ಪಿಂಗಲವರ್ಣದ ಹೆಣ್ಣನ್ನು ಮದುವೆಯಾಗಬಾರದು". (ಉದ್ಧೃತ: ಶೇಷನವರತ್ನ, ೨೦೦೫, ಪುಟ.೮೧) "ನಕ್ಷತ್ರಗಳ ವೃಕ್ಷಗಳ ನದಿಗಳ, ಕಿರಾತಕಾಲೆಗಳು ವಾಸಿಸುವ ಚಿತ್ರಗಳ ಪಕ್ಷಿಗಳ, ಹಾವುಗಳ, ದಸ್ಯುಗಳ ಹೆಸರುಗಳನ್ನು ಹೊಂದಿದ ಹಾಗೂ ಕ್ರೂರವಾದ ಭೀಷಣ ಹೆಸರುಗಳುಳ್ಳ ಹೆಣ್ಣನ್ನು ಮದುವೆಯಾಗಬಾರದು". (ಉದ್ಧೃತ: ಶೇಷ ನವರತ್ನ, ೨೦೦೫, ಪುಟ.೮೧,೮೩) ಹೀಗೆ ಯಾವ ಮಹಿಳೆಯನ್ನು ಮದುವೆಯಾಗಬೇಕು. ಯಾವ ಮಹಿಳೆಯನ್ನು ಮದುವೆಯಾಗಬಾರದು ಎನ್ನುವ ಕುರಿತೂ ನಿರ್ವಚನಗಳು ಚರ್ಚೆಗಳು ನಡೆದಿವೆ. ಆದರೆ ಪುರುಷನಿಗೆ ಸಂಬಂಧಿಸಿದಂತೆ ಈ ತೆರನಾಗಿ ಚರ್ಚೆಗಳಾಗಲಿ, ನಿರ್ವಚನಗಳಾಗಲಿ ನಡೆದಿಲ್ಲ.

ದೇಹದ ಪ್ರಕೃತಿಯಲ್ಲಿ ಸಹಜ ಕ್ರಿಯೆಗಳು ಮೂಲ ಜೀವಕ್ಕೆ ಅನುಗುಣವಾಗಿ ಇರುತ್ತವೆ. ಮತ್ತು ಜೀವಿಯ ದೇಹದ ಪ್ರಕೃತಿಗೆ ಸಂಬಂಧಿಸಿದ ಸಂಗತಿಗಳಾದ 'ಸುಂದರವಾದ ಹೆಸರುಳ್ಳ' ಹಂಸದಂತ, ಗಜದಂತೆ, ಗಂಭೀರವಾಗಿ ನಡೆಯುವ ಸುಂದರ ಕೇಶರಾಶಿಯುಳ್ಳ, ಸುಲಭಗವಾದ ದಂತ ಪಂಕ್ತಿಯುಳ್ಳ, ಕೋಮಲಾಂಗಿಯನ್ನು ವಿವಾಹ ಮಾಡಿಕೊಳ್ಳಬೇಕು ಎನ್ನುವುದು ಪುರುಷನ ಆಸೆ, ಆಕಾಂಕ್ಷೆ ಅದಕ್ಕನುಗುಣವಾಗಿ ಯಾವ ಮಹಿಳೆ ವಿವಾಹಯೋಗ್ಯಳು ಎನ್ನುವುದನ್ನು ಅರ್ಥೈಸಲಾಗಿದೆ. ಅಲ್ಲದೆ ಈ ಮೇಲಿನವುಗಳಲ್ಲಿ ಯಾವುದಾದರೂ ಕಡಿಮೆ ಇದ್ದರೆ ಅವಳೂ ಹೆಣ್ಣು ಅಲ್ಲವೇ ಅಲ್ಲ ಎಂದು ಹೇಳಲಾಗಿದೆ. ರೋಮ, ಮೂಲವ್ಯಾಧಿ, ಕ್ಷಯರೋಗ, ತೊನ್ನುರೋಗ, ಕುಷ್ಠರೋಗ, ಇವುಗಳು ಅಂಟುರೋಗಗಳು ಆದರೂ ಇವುಗಳಿಂದ ಸುರಕ್ಷಿತವಾಗಿರಬಹುದಾಗಿದೆ, ಆದರೆ, ಇಂತಹ ರೋಗವಿದ್ದ, ಮನೆತನಗಳ ಜೊತೆಗೆ ವಿವಾಹ ಸಂಬಂಧ ಬೆಳಸಿಕೊಂಡು ಬಂದಿರುವ ಉದಾಹರಣೆಗಳು ದೊರೆಯುತ್ತವೆ ದೇಹದಲ್ಲಿನ ಅನಾರೋಗ್ಯವನ್ನು ಹೆಣ್ಣಿಗೆ ಮಾತ್ರ ಆರೋಪಿಸಿ, ಪುರುಷ ತನ್ನ, ಆಸೆ ಆಕಾಂಕ್ಷೆಗೆ ಬೇಕಾದಂತೆ ಹೆಣ್ಣನ್ನು ಬೋಗಿಸುವ ಆಸೆ ಹೊಂದಿರುವುದರಿಂದಲೇ ವಿವಾಹ ಪೂರ್ವದಲ್ಲಿ ಹೆಣ್ಣಿನ ಬಗ್ಗೆ. ನಕ್ಷತ್ರ, ಜಾತಕ, ವೃಕ್ಷ, ಪಕ್ಷಿ, ಹಾವುಗಳಂಥ ಜೀವಿಗಳ ಹೆಸರುಗಳನ್ನು

ಕಲ್ಪಿಸಿಕೊಂಡ ಅಪಕಲ್ಪನೆಗಳಾಗಿವೆ. ಇಂತಹ ಕಲ್ಪಿತ ಜಾತಕವನ್ನು ಆಧರಿಸಿ ಹೇಳುವ ಸಂದರ್ಭದಲ್ಲಿ ಹೆಸರುಗಳುಳ್ಳ ಹೆಣ್ಣನ್ನು ಮದುವೆಯಾಗ ಕೂಡದು, ಎಂದು ಹೆಣ್ಣನ್ನು ಮದುವೆ ಆಗುವ ಗಂಡಿಗೆ ಹೇಳುವುದು ಕಂಡು ಬರುತ್ತದೆ. ಆದರೆ ಇದೇ ಗಂಡಿಗೆ ಯಾವುದೇ ರೀತಿಯಾದ ಜಾತಕ ದೋಷಗಳು ಇಲ್ಲ. ಇಲ್ಲಿ ಪುರುಷನು ತನ್ನ ವೈಯಕ್ತಿಕ ದೋಷವನ್ನು ಮುಚ್ಚಿಟ್ಟಿರುವುದು ಪುರುಷ ರಾಜಕಾರಣ ಎನ್ನುವುದು ಅರ್ಥವಾಗುತ್ತದೆ.

ಇಂದು ವಿವಾಹ ಪೂರ್ವದಲ್ಲಿ ಹೆಣ್ಣನ್ನು ಮಾತ್ರ ಸಂಪ್ರದಾಯ ಬದ್ಧವಾಗಿ ನೋಡುವುದು (ಪರೀಕ್ಷೆಗೆ ಒಳಪಡಿಸುವುದು) ಕಂಡುಬರುತ್ತದೆ. ಯಾಕೆಂದರೆ "ಮನೋಶಾಸ್ತ್ರಜ್ಞರ ಪ್ರಕಾರ ವಿವಾಹ ಎನ್ನುವುದು ಗಂಡು, ಹೆಣ್ಣಿನ ನಡುವೆ ಏರ್ಪಡುವ ಲೈಂಗಿಕ ಶಾಶ್ವತ ಸಂಬಂಧ. ಮಕ್ಕಳ ಸೃಷ್ಠಿ ಹಾಗೂ ಅವುಗಳ ಪೋಷಣೆಗಾಗಿ ಮಾಡಿಕೊಂಡಿರುವ ಒಪ್ಪಂದ". (ಉದ್ಧೃತ ಶೈಲಜ ಹಿರೇಮಠ ೨೦೦೩, ಪುಟ.೩) ಎಂದು ದೊರೆಯುವಲ್ಲಿನ ಮಾಹಿತಿ ಪ್ರಕಾರ ಶಾಶ್ವತ ಒಪ್ಪಂದವಾಗಿ ಉಳಿದಿಲ್ಲ. ಅದೊಂದು ದೈವಿಕ ನಿಯಮವೆನ್ನುವ ರೀತಿಯಲ್ಲಿ ಮುಂದುವರೆದು ಬಂಧನವಾಗಿ ಮಾರ್ಪಡಿರುವುದು ಕಂಡುಬರುತ್ತದೆ. ಇದಕ್ಕೆ "ಮೊದಲು ಕಾಲದಲ್ಲಿ ವಿವಾಹವೊಂದು ಜಗತ್ತಿನ ನಿಯಮ ಅದು ದೈವ ನಿಯಮಕ ಯಾರನ್ನು ಯಾರಿಗೆ ವಧುವರರನ್ನಾಗಿ ಮಾಡಬೇಕೆಂದು ಭಗವಂತನೇ ನಿರ್ಧರಿಸಿದ್ದಾನೆ". (ಉದ್ಧೃತ: ಹಾಲತಿ ಸೋಮೇಶ್ವರ,೨೦೦೭ ಪುಟ.೪೩) ಎಂದು ಹೇಳುವುದರ ಮೂಲಕ ಬಂಧನ ಉಂಟುಮಾಡಿ ಮುಂದುವರೆದು "ಜಗತ್ತಿನ ರೂಪ ನಿರ್ಮಾಪಕನು, ಸರ್ವಪ್ರೇರಕನ್ನು ಸಾರ್ವತ್ಮನು, ದೇವಾತ್ಮನು, ಸರ್ವಜನಕನೂ, ಆದ ಪ್ರಜಾಪತಿಯು ನಮ್ಮನ್ನು ನಾವು ಗರ್ಭದಲ್ಲಿರುವಾಗಲೇ ಗಂಡ ಹೆಂಡರನ್ನಾಗಿ ಮಾಡಿದ್ದಾನೆ. ಈ ಪ್ರಜಾಪತಿಯು ಕರ್ಮಗಳನ್ನು ಯಾರೂ ಕೂಡ ತಡೆಯಲಾರರು ನಮ್ಮ ಈ ದಾಂಪತ್ಯ ಸಂಬಂಧವನ್ನು ಧ್ಯಾವಾಪೃಥಿಗಳಿಬ್ಬರೂ ಅರಿತಿದ್ದಾರೆ ಎಂಬ ಅಭಿಪ್ರಾಯ ಬರುವುದರಿಂದ ಸ್ತ್ರೀಯರು ಪುರುಷನ ವಿರುದ್ಧ (ತಮಗೆ ಶೋಷಣೆಯಾಗುತ್ತಿದ್ದರೂ) ಪ್ರತಿಭಟಿಸಿದ್ದು ಕಡಿಮೆಯೇ ಎಲ್ಲವೂ ಪರಮಾತ್ಮನ ಲೀಲೆ ಎಂಬಂತೆ ತಿಳಿದು ಮೌನವಾಗಿ ಅನುಭವಿಸಿದ್ದು ಹೆಚು". (ಉದ್ಧೃತ ಹಾಲತಿ ಸೋಮೇಶ್ವರ ೨೦೦೭ ಪುಟ.೪೩) ಎಂದು ಹೇಳುವುದರ ಮುಖಾಂತರ ಹೆಣ್ಣನ್ನು ಗಂಡಿಗೆ ಪುರುಷನ ಭೋಗಕ್ಕೆ ಮಾತ್ರ ಇರುವವಳು ಎನ್ನುವಂತಹ ಸಂಗತಿಯನ್ನು ದೈವದ ಅಡಿಯಲ್ಲಿ ಬಂಧನವನ್ನು ಸೃಷ್ಠಿ ಮಾಡಿರುವುದು ಕಂಡು ಬರುತ್ತದೆ. ಜೀವಿಯ ಮುಖ್ಯ ಪ್ರವೃತ್ತಿಯಲ್ಲಿನ ಲೈಂಗಿಕ ಆಕಾಂಕ್ಷೆ ಸಹಜವಾದಂಥಹದ್ದು ಇಂಥ ಸಹಜ ಆಕಾಂಕ್ಷೆಯನ್ನು ನೆರವೇರಿಸಿಕೊಳ್ಳಲು ವಿವಾಹ ಸಂಜೀವಿನಿಯ ಮೂಲಕ ಹೆಣ್ಣಿಗೆ ಬಂಧನ ಜೊತೆಗೆ ಪಾತಿವ್ರತ್ಯದಂತಹ ಸಂಗತಿಯನ್ನು 'ನಿಷ್ಠೆ'ಯಂತ ಮೌಲ್ಯವನ್ನು ಹೇರಿರುವುದು ಕಂಡುಬರುತ್ತದೆ.

ಇಂದಿಗೂ ವಿಧಿವತ್ತಾಗಿ ನಂಬಿಕೆ ಮುಖಾಂತರ ಸಂಪ್ರದಾಯ ಬದ್ಧವಾಗಿ ಜಾರಿಗೆ ಬಂದು ಹೆಣ್ಣಿಗೆ ಆಚರಣೆರೂಪದಲ್ಲಿ ಕ್ರಿಯಾತ್ಮಕವಾಗಿ ನಿಯಂತ್ರಣಕ್ಕೆ ಒಳಪಡಿಸಿರುವುದು ಕಂಡುಬರುತ್ತದೆ. ಹೀಗೆ ಧರ್ಮಗಳು ಹೆಣ್ಣಿನ ಜೈವಿಕತೆಯನ್ನಾಧರಿಸಿ ಹೆಣ್ಣಿಗೆ ವಿವಾಹ, ಪಾತಿವ್ರತ್ಯದ ಮೂಲಕ ಹೆಣ್ಣನ್ನು ನಿಯಂತ್ರಣಕ್ಕೆ ಒಳಪಡಿಸಿದ ಸಂಗತಿಗಳು ಇವೆ. ಸ್ಪಷ್ಟವಾಗಿ ಕಂಡುಬರುತ್ತವೆ.

- **ಪಾತಿವ್ರತೆ**

ಹೆಣ್ಣು ಯಾವಾಗಲೂ 'ನಿಷ್ಠೆ' ಪಾವಿತ್ರತೆಯಿಂದ ಕೂಡಿರಬೇಕು. ವಿವಾಹಗೊಂಡ ನಂತರ ಯಾವುದೇ ಪರಪುರುಷನೊಂದಿಗೆ ಮಾತನಾಡುವುದು, ನೋಡುವುದು. ಬೇರೆಯವರನ್ನು ಕೂಡುವುದು ಮಾಡಬಾರದು ಹಾಗೆ ಮಾಡಿದರೆ ಆ ಹೆಣ್ಣು 'ಪವಿತ್ರಳಲ್ಲ' ಆಕೆ ಗಂಡನಿಗೆ ನಿಷ್ಠೆಯವಳಲ್ಲ ಎನ್ನುವಂತಹ ಸಂಗತಿಯನ್ನು ಧರ್ಮಗ್ರಂಥಗಳ ಮೂಲಕ ಬಿತ್ತಿರುವುದು ಕಂಡುಬರುತ್ತದೆ. ಇದಕ್ಕೆ ಮಹಾಭಾರತದಲ್ಲಿ "ಮಾದ್ರಿಯು ತನ್ನ ಇಡಿ ಯೌವ್ವನವನ್ನು ಸ್ವಯಂವಯದಲ್ಲಿಯೇ ಕಳೆದಿದ್ದಾಳೆ" ಮತ್ತು "ಗಂಡ ಸತ್ತನೆಂದರೆ ಹೆಂಡತಿಯಾದವಳು ಸಹಗಮನ ಮಾಡಿಯೇತಿರಬೇಕು". (ಉದ್ಧೃತ ಹಾಲತಿ ಸೋಮೇಶ್ವರ ೨೦೦೭, ಪುಟ.೫೩) ಎಂದು ಧರ್ಮಗ್ರಂಥಗಳ ಮೂಲಕ ಹೆಣ್ಣಿಗೆ ಮಾತ್ರ ಪಾತಿವ್ರತ್ಯ 'ಪಾವಿತ್ರತೆ'ಯನ್ನು ಬಿತ್ತಿರುವುದು ಇದೆ. ಈ ಕುರಿತಾಗಿ ಹಿಂದೂ ಧರ್ಮದ ಪುರಾಣ ಮಹಾಕಾವ್ಯಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಇದಕ್ಕೆ ಉದಾಹರಣೆಯಾಗಿ ಮಹಾಭಾರತದಲ್ಲಿ ಗಾಂಧಾರಿ ಗಂಡ ಹುಟ್ಟು ಕುರುಡನಾಗಿರುವುದರಿಂದ ಆತ ಜಗತ್ತಿನ ಸೌಂದರ್ಯವನ್ನು ನೋಡಲಾರನು. ಅದಕ್ಕಾಗಿ ಕಣ್ಣಿಗೆ ಪಟ್ಟಿ ಕಟ್ಟಿಕೊಳ್ಳುವ ಹೆಣ್ಣು ಗಾಂಧಾರಿ ಹೆಣ್ಣಿನ ಚಿತ್ರಣ ಪಾವಿತ್ರ್ಯ ಕಾಪಾಡುವವಳಾಗಿ, ನೋಡಿದಂತಹ ಪಾತ್ರ ಪಾವಿತ್ರ್ಯವನ್ನು ಗೆದ್ದಂತಹ ಚಿತ್ರಣ ಹೇರಳವಾಗಿ ದೊರೆಯುವಂತೆ ಚಿತ್ರಿಸಲಾಗಿದೆ. ಹೆಣ್ಣಿನ ಪಾತಿವ್ರತ್ಯವನ್ನು ಸದ್ದಿಲ್ಲದೆ ಈತರನಾದ ಧಾರ್ಮಿಕ ಗ್ರಂಥಗಳ ಮೂಲಕ ಹೇಳಲಾಗಿದೆ. ಹಾಗೆ ವಿವಾಹ, ಪಾತಿವ್ರತ್ಯದಂತಹ ಸಂಗತಿಗಳು ಹೆಣ್ಣಿಗೆ ಕಡ್ಡಾಯವೆನ್ನುವಂತೆ ಬಿಂಬಿಸಿರುವುದು ಕಂಡುಬರುತ್ತದೆ. ವಿವಾಹ ಪಾತಿವ್ರತ್ಯದ ಮೌಲ್ಯಗಳು ಅಷ್ಟಾಗಿ ಪುರಷನಿಗೆ ಹೇರಿರುವುದು ಕಂಡುಬರುವುದಿಲ್ಲ.

ಪುರುಷನ ವಿಷಯದಲ್ಲಿ ಶ್ರೇಷ್ಠನೆ ಎಂದು ಚಿತ್ರಿಸಿರುವುದು ಕಂಡುಬರುತ್ತದೆ. ಅದು ಹೇಗೆಂದರೆ ಉದಾಹರಣೆಯಾಗಿ ಕೃಷ್ಣ ಆತ ಹದಿನಾರು ಸಾವಿರ ಹೆಂಡತಿಯರನ್ನು ಹೊಂದಿದ್ದನು, ಭರತನಿಗೆ ೯೬,೦೦೦ ಹೆಂಡತಿಯರಿದ್ದರು ದಶರಥನಿಗೆ ಮೂವರು ಹೆಂಡತಿಯರಿದ್ದರೆಂದು, ಪುರುಷನ ಜೈವಿಕ್ಷತೆಯನ್ನು ಶ್ರೇಷ್ಠತೆ ನೆಲೆಯಲ್ಲಿ ಸಾರಿರುವುದು ಕಂಡುಬರುತ್ತದೆ. ಮತ್ತು ಈ ಮೂಲಕ ಪುರುಷ ಶ್ರೇಷ್ಠತೆಯನ್ನು ಪ್ರತಿಯೊಂದು ಧರ್ಮಗಳ

ಗ್ರಂಥ, ಕಾವ್ಯ, ಪುರಾಣದಲ್ಲಿ ಅವನು ಬಹು ಹೆಂಡತಿಯರನ್ನು (ಹೆಣ್ಣನ್ನು) ಹೊಂದಿರಬಹುದೆಂದು ಹೇಳುವ ಗ್ರಂಥಗಳು ಕಂಡುಬರುತ್ತವೆ. ಹೀಗೆ ಹೆಣ್ಣಿನ ಸಹಜವಾದ ಲೈಂಗಿಕತೆ 'ಬಂಧನ'ವು ಕಂಡುಬರುತ್ತದೆ. ಪಾತಿವ್ರತ್ಯವನ್ನು ಹೆಣ್ಣಾದವಳೂ ಏಕೆ ಪಾಲಿಸಬೇಕು? ಎನ್ನುವಂತಹ ಸಂಗತಿಗೆ ಕಾರಣ ಹುಡುಕುತ್ತಾ ಹೋದರೆ ಪುರುಷ ರೂಪಿತ ಧರ್ಮ, ಧರ್ಮಗ್ರಂಥಗಳು ಹೆಣ್ಣಿನ ಜೈವಿಕತೆಯನ್ನಾಧರಿಸಿ ಕಲ್ಪಿಸಿದ ಮತ್ತು ನಿರೂಪಿಸಿದ ಸಂಗತಿಗಳು ಅದನ್ನು ಯಥವತ್ತಾಗಿ ಜಾರಿಗೆ ತಂದ ಪಿತೃ ಪ್ರಧಾನ ವ್ಯವಸ್ಥೆ ನೇರವಾಗಿ ಕಾರಣವಾಗಿರುವುದು ಕಂಡು ಬರುತ್ತದೆ.

ವಿವಾಹ ಪಾತಿವ್ರತ್ಯದ ಕುರಿತಾಗಿ ನೋಡಿದರೆ ಈ ಧರ್ಮದಲ್ಲಿ ವಿವಾಹ ಬಂಧನದಲ್ಲಿ ಬಂಧಿಯಾದ ಹೆಣ್ಣಿಗೆ ಗಂಡನೇ ಶ್ರೇಷ್ಠ ಎನ್ನುವಂತ ವಿಚಾರವನ್ನು ಬಿತ್ತಿರುವುದು ಕಂಡುಬರುತ್ತದೆ. "ಸ್ತ್ರೀಯರೇ ನಿಮ್ಮ ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ಗಂಡಂದರಿಗೆ ಅಧೀನರಾಗಿರಿ, ಸಭೆಯು ಕ್ರಿಸ್ತನಿಗೆ ಹೇಗೆ ಅಧೀನವಾಗಿದೆಯೇ ಹಾಗೆಯೇ ಸ್ತ್ರೀಯರು ತಮ್ಮ ಗಂಡಂದಿರರಿಗೆ ಎಲ್ಲಾ ವಿಷಯಗಳಲ್ಲಿ ಅಧೀನರಾಗಿರಬೇಕು, ಪ್ರತಿ ಹೆಂಡತಿಯು ತನ್ನ ಗಂಡನಿಗೆ ಭಯ ಭಕ್ತಿಯಿಂದ ನಡೆದುಕೊಳ್ಳಬೇಕು". (ಉದ್ಧೃತ ಹಾಲತಿ ಸೋಮೇಶ್ವರ ೨೦೦೭ ಪುಟ ೧೨೮) ಎಂದು ಹೆಣ್ಣಿಗೆ ಹೇಳಿರುವ ಸಂದೇಶದಲ್ಲಿ 'ಗಂಡನೆನ್ನುವ' ಪುರಷನು ಶ್ರೇಷ್ಠ' ಅವನು ದೇವರ ಸಮಾನ ಅವನಿಗೆ ಭಯ ಭಕ್ತಿಯಿಂದ ನಡೆದುಕೊಳ್ಳಬೇಕು, ಎಂದು ಬೋಧಿಸಿರುವಲ್ಲಿ ಹೆಣ್ಣಿಗೆ ಹಲವು ರೀತಿಯಲ್ಲಿ ಮೌಲ್ಯ ನಿಯಂತ್ರಣವನ್ನು ಹಾಕಿರುವುದು ಕಂಡು ಬರುತ್ತದೆ ಮತ್ತು ವಿವಾಹವೆನ್ನುವ ಬಂಧನದಲ್ಲಿ ಹೆಣ್ಣಿನ ಸಹಜ ಬದುಕಿಗೆ ನಿಯಂತ್ರಣವಾಗಿರುವುದು ಮತ್ತು ಹೆಣ್ಣು ಅಧೀನಳಾಗಿರಬೇಕು ಎನ್ನುವುದು ಸಂದೇಶ ಬಿತ್ತಿರುವುದು ಕಂಡುಬರುತ್ತದೆ. 'ಅಧೀನತೆ ಎನ್ನುವುದು ಸ್ವತಂತ್ರವನ್ನು ಕಳೆಯುವ ಕೆಲಸ ಮಾಡುತ್ತದೆ.

ಇಸ್ಲಾಂ ಧರ್ಮದಲ್ಲಿ "ವಿವಾಹ ಒಂದು ಧಾರ್ಮಿಕ ಬಂಧನವಲ್ಲ ಅದೊಂದು ಪರಸ್ಪರ ನಡುವಿನ ತಿಳುವಳಿಕೆ ಪ್ರಕಾರ ಒಂದು ಒಪ್ಪಿಗೆ". (ಉದ್ಧೃತ ಷಣ್ಮುಖಯ್ಯ ಅಕ್ಕೂರ ಮಠ ೧೯೯೪ ಪುಟ.೧೨೭) ಎಂದು ಹೇಳಿದ್ದರು ವಿವಾಹ ನಂತರ ಹೇಳುವ ಮಾತುಗಳಲ್ಲಿ ಹೆಣ್ಣಿಗೆ "ಕುರಾನ್ ಮೂರನೆ ಭಾಗದಲ್ಲಿ ಸೂಕಿ: ಅನ್ನೂರ್‌ನಲ್ಲಿ ಹೆಣ್ಣೀಗೆ ಗೌರವ ಗಾಂಭಿರ್ಯದೊಂದಿಗೆ ಮನೆಯಲ್ಲಿ ಕುಳಿತಿರಿ, ಸಲ್ಲದ ಶೃಂಗಾರ ಮಾಡಿ ಬೀದಿಗಿಳಿಯಬೇಡಿ, ಪುರಷರ ಜೊತೆ ಮಾತನಾಡಬೇಡಿ ಒಂದು ವೇಳೆ ಮಾತನಾಡಬೇಕಾಗಿ ಬಂದರೆ ಆತನ ಮನದಲ್ಲಿ ನಿಮ್ಮ ಕುರಿತು ಆಸೆಗಳು ಅಂಕುರಿಸುವ ರೀತಿಯಲ್ಲಿ ಮೋಹಕ ಧ್ವನಿಯಲ್ಲಿ ಮಾತನಾಡಬೇಡಿ ಎಂದು ಪ್ರವಾದಿ ತನ್ನ ಪತ್ನಿಯರಿಗೆ ಆಜ್ಞಾಪಿಸಲಾಗಿದೆ (ಆಯುತ್ ೨೩-೨೨) ಮತ್ತು ಪ್ರವಾದಿವರ್ಯರು ಪತ್ನಿಯರೊಂದಿಗೆ ಏನಾದರೂ ಕೇಳಲಿಕ್ಕಿದ್ದರೆ ಪರದೆಯ ಹೊರಗಿನಿಂದ ಕೇಳಬೇಕೆಂದು

ಆದೇಶಿಸಲಾಯಿತು. "(ಆಯುತ: ೫೩)" ಮನೆಯ ಹೊರಗಡೆ ಹೋಗಬೇಕಾದರೆ ಸರಿಯಾಗಿ ಚದ್ದರ ಹೊದ್ದು ಮುಸುಕು ಹಾಕಿಕೊಂಡು ಹೋಗಬೇಕೆಂದು ಎಲ್ಲ ಮುಸ್ಲಿಂ ಮಹಿಳೆಯರಿಗೆ ಆಜ್ಞೆ ಕೊಡಲಾಯಿತು" (ಆಯುತ್ ೫೯. ಉದ್ಧೃತ ಹಾಲತಿ ಸೋಮೇಶ್ವರ, ೨೦೦೭ ಪುಟ.೧೦೭) ವಿವಾಹದ ಒಳಗಡೆ ಹೆಣ್ಣಿಗೆ ಬಂಧಿಸಿ ಪಾತಿವ್ರತ್ಯದ ಕಲ್ಪನೆಯನ್ನು ಬಿತ್ತಿರುವುದು ಕಂಡುಬರುತ್ತದೆ. ಯಾಕೆಂದರೆ ಪ್ರತಿಯೊಂದು ಮಾತನ್ನು ಹೆಣ್ಣಿನ ಕುರಿತು ಹೇಳಿರುವುದು ಇದೆ. ಮತ್ತು ಪತ್ನಿಯರಿಗೆ, ಪಾತಿವ್ರತ್ಯದ ಕುರಿತಾಗಿ ಕಂಡುಬರುವ ಮೌಲ್ಯಗಳಾದ ಪರ ಪುರುಷನ ಜೊತೆ ಮಾತನಾಡಬಾರದು, ಮೋಹಕ ಧ್ವನಿಯಲ್ಲಿ ಮಾತನಾಡಬಾರದು, ಮನೆಯ ಹೊರಗಡೆ ಚದ್ದರ ಹೊದ್ದುಕೊಂಡು ಹೋಗಬೇಕು, ಎಂದು ಹೆಣ್ಣಿಗೆ ಹಾಕುವ ಮೌಲ್ಯಗಳು ಪಾತಿವ್ರತ್ಯದ ಮೌಲ್ಯಗಳೇ ಆಗಿವೇ. ಇದನ್ನು ಇಂದಿಗೂ ಮುಸ್ಲಿಂ ಹೆಣ್ಣಿಗೆ ಸಂಪ್ರದಾಯವಾಗಿ ಪಾಲಿಸಿಕೊಂಡು ಬರಬೇಕು ಎನ್ನುವ ಹಿನ್ನಲೆಯಿಂದ ಮುಸ್ಲಿಂ ಹೆಣ್ಣಿನ ದೇಹದ ಮೇಲೆ ಕೆಲವು ವಸ್ತ್ರ ಸಂಹಿತೆಯನ್ನು ಹಾಕಿರುವುದು ಕಂಡುಬರುತ್ತದೆ. "ಗಂಡಸು ಎದುರಿಗೆ ಬಂದಾಗ ಹೆಂಗಸರು ದೃಷ್ಟಿ ಕೆಳಗೆ ಮಾಡಿ ನಡೆಯಬೇಕು ಮುಂಗೈ ಪಾದ ಮತ್ತು ಮುಖ ಇವುಗಳನ್ನು ಹೊರತುಪಡಿಸಿ ಬೇರೆ ಯಾವುದೆ ಅಂಗಗಳನ್ನು ಪ್ರದರ್ಶಿಸಕೂಡದು.(ಕುರಾನ್ ೨೪-೩೧ ಉದ್ಧೃತ ಷಣ್ಮುಖಯ್ಯ ಅಕ್ಕೂರ ಮಠ, ೧೯೯೪, ಪುಟ.೧೨೯) ಎಂದು ಹೇಳುವುದರ ಮೂಲಕ ಹೆಣ್ಣಿನ ಸಹಜ ನಡತೆಗೆ ಪಾವಿತ್ರತೆಯ ಸಂಹಿತೆಯನ್ನು ಬಿತ್ತಿ ಹೆಣ್ಣನ್ನು ನಾಲ್ಕು ಗೋಡೆಯ ಮಧ್ಯೆ ಉಳಿಯುವಂತೆ ಮಾಡಿರುವುದು ಈ ಧರ್ಮ, ಧರ್ಮ ಗ್ರಂಥಗಳ ನೀತಿ ನಿಯಮಗಳೆ ಎನ್ನಬಹುದಾಗಿದೆ.

- **ವಿಚ್ಛೇಧನ**

ವಿಚ್ಛೇಧನ, ವೈಧವ್ಯ ಎನ್ನುವುದು ಹೆಣ್ಣಿನ ಬದುಕಿನಲ್ಲಿ 'ಕರ್ಮ' 'ಪಾಪ' 'ಕಳಂಕ' ಅಪವಾದ 'ಅನಿಷ್ಠ'ವಾಗಿ ಮಾರ್ಪಟಿರುವುದು ಕಂಡುಬರುತ್ತದೆ. ಯಾಕೆಂದರೆ ಇವುಗಳು ಹೆಣ್ಣಿಗೆ 'ಮಾತ್ರ' ಸಂಬಂಧಿಸಿದವುಗಳು ಎನ್ನುವಂತ ಹುಸಿ ನಂಬಿಕಯನ್ನು ಧರ್ಮದಲ್ಲಿ ಬಿತ್ತಿರುವುದರಿಂದಾಗಿದೆ. ನನ್ನ ಅಧ್ಯಯನ ಸಂದರ್ಭದಲ್ಲಿ ವಿಚ್ಛೇದನೆಯನ್ನು ಹೆಣ್ಣು ಮತ್ತು ಗಂಡು ಇಬ್ಬರನ್ನು ಕೇಂದ್ರವಾಗಿಟ್ಟು ಚರ್ಚಿಸಲಾಗಿದೆ. ವೈವಾಹಿಕ ಜೀವನದಲ್ಲಿ ಹೆಣ್ಣಿಗೆ ಹಲವು ರೀತಿಯಲ್ಲಿ, ವಿಧಿ, ನಿಷೇಧ ನಿರ್ಬಂಧಗಳನ್ನು ಹಾಕುವುದರ ಮೂಲಕ ಹೆಣ್ಣಿನ ಜೀವನ ಪುರುಷನ ಆಸೆ, ಆಕಾಂಕ್ಷೆಗೆ ಅನುಗುಣವಾಗಿ ಜೀವನ ನೆಡಸಬೇಕು, ಎನ್ನುವಂತ ನಂಬಿಕೆಗಳನ್ನು ಹುಟ್ಟು ಹಾಕಿರುವುದು ಧರ್ಮ, ಧರ್ಮಗ್ರಂಥಗಳಲ್ಲಿ ಕಂಡುಬರುತ್ತದೆ. ಹಾಗೆ ಗಂಡನೆನ್ನುವ ಪುರುಷ ದೇವರ ಸಮಾನ ಏನಿದ್ದರೂ ಗಂಡನೇ 'ಶ್ರೇಷ್ಠ' ಎನ್ನುವಂತ ಪುರುಷ ಶ್ರೇಷ್ಠತೆಯನ್ನು ಬಿತ್ತಿರುವುದು ಕಂಡುಬರುತ್ತದೆ. ಅದು ಎಲ್ಲಿಯವರೆಗೆ ಎಂದರೆ ಹೆಣ್ಣಿಗೆ

ಗಂಡನು ಹಿಂಸೆ ನೀಡುತ್ತಿದ್ದರೂ, ಅವನಿಂದ ನಿತ್ಯವು ಶೋಷಣೆಯಾಗುತ್ತಿದ್ದರು, ಗಂಡನೆ ದೇವರೆಂದು ಪೂಜಿಸಿ ಅವನ ಆಸೆಗೆ ತಕ್ಕಂತೆ ಬದುಕು ನಡೆಸಬೇಕೆನ್ನುವ ನಂಬಿಕೆಯವರೆಗೆ ಇದಕ್ಕೆ. "ತನ್ನ ಪತಿ ಗುಣ ಹೀನನಾಗಿದ್ದರೂ, ಕಾಮುಕನಾಗಿದ್ದರೂ, ಸದ್ಗುಣ ರಹಿತನಾಗಿದ್ದರೂ, ಸತಿ ಅವನನ್ನು ಸದಾ ದೇವರೆಂದೆ ಭಾವಿಸಬೇಕು". !! ೫೪ !! ಎನ್ನುವ ಸಂದೇಶಗಳನ್ನು ಹೆಣ್ಣಿಗೆ ಅನ್ವಯಿಸುವುದರ ಮೂಲಕ ಹೆಣ್ಣಿಗೆ ಗಂಡನೇ ಶ್ರೇಷ್ಠ, ಹೆಣ್ಣು ಕನಿಷ್ಠ ಎಂದು ಸಾರಿರುವುದು ಕಂಡುಬರುತ್ತದೆ.

ಹೆಣ್ಣಿನ ನೋವು-ನಲಿವುಗಳಿದ್ದರೆ ಅದು ಅವಳ ವೈಯಕ್ತಿಕ ಎಂದು ಹೇಳುವ ಮೂಲಕ ಹೆಣ್ಣಿಗೆ ಅಧೀನತೆಯನ್ನು ಸೃಷ್ಠಿ ಮಾಡಿರುವುದು ಕಂಡುಬರುತ್ತದೆ. ಇನ್ನು "ಸಂತಾನದ ಆಸೆಯಿಂದ ಹೆಂಡತಿ ಗಂಡನನ್ನು ಮೀರಿ ನಡೆದರೆ ಅವಳು ತಪ್ಪಿಸ್ಥಳು. ಗಂಡನ ದೃಷ್ಠಿಯಲ್ಲಿ ಅವಳು ಪತಿತಳು". (ಉದ್ಧೃತ ಶೇಷ ನವರತ್ನ ೨೦೦೫) ಎನ್ನುವ ಮೂಲಕ ಹೆಣ್ಣಿನ ಸಹಜತೆಗೆ ಬಂಧನ ಹಾಕಿರುವುದು ಕಂಡುಬರುತ್ತದೆ. ಇನ್ನು "ಹೆಣ್ಣಿನ ಲೈಂಗಿಕ ಸ್ವಾತಂತ್ರವೂ ಇಲ್ಲ, ಆದ್ದರಿಂದ ಅವಳಿಗೆ ಪುನರ್ವಿವಾಹವಿಲ್ಲ". (ಉದ್ಧೃತ ಆರ್.ಡಿ. ಹೆಗಡೆ ಆಲ್ಮನೆ ೨೦೦೧, ಪುಟ.೩೯-೩೫) ಎನ್ನುವ ಮೂಲಕ ಮರುವಿವಾಹಕ್ಕೆ ಅವಕಾಶ ಆಗದಂತೆ ಮಾಡಿರುವುದು ಕಂಡುಬರುತ್ತದೆ. ಧರ್ಮಗ್ರಂಥಗಳು ಸೃಷ್ಠಿಸಿದ ನಂಬಿಕೆಗಳಿಂದಾಗಿ ಹೆಣ್ಣಿಗೆ ಎಷ್ಟು ಶೋಷಣೆಯಾಗುತ್ತಿದ್ದರು ಸಹಿಸಿಕೊಂಡು ಇರುವುದೇ ಹೆಣ್ಣಿನ 'ಧರ್ಮ' ಎನ್ನುವಂತ ಅಂಶವನ್ನು ಈ ಮೇಲಿನ ಧರ್ಮಗ್ರಂಥಗಳು ನೀಡಿರುವಂತ ಅಂಶದಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ಭೂಮಿ ಮೇಲೆ ಹುಟ್ಟಿದ ಪ್ರತಿಯೊಂದು ಜೀವಿಗೆ ವೈಯಕ್ತಿಕ ಸ್ವತಂತ್ರ, ಹಾಗೂ ಸ್ವಂತವಾಗಿ ನಿರ್ಧಾರ ತೆಗೆದುಕೊಂಡು ಸ್ವತಂತ್ರವಾಗಿ ಜೀವಿಸುವ ಹಕ್ಕು ಇದೆ. ಮತ್ತು ಈ ಕುರಿತಾಗಿ ಕಾನೂನು, ನೀತಿ ನಿಯಮಗಳಿವೆ ಆದರೆ ಹೆಣ್ಣಿಗೆ ಮಾತ್ರ ಧರ್ಮಗ್ರಂಥಗಳು ಸೃಷ್ಠಿ ಮಾಡಿರುವ ನೀತಿ ನಿಯಮ ನಂಬಿಕೆಗಳು ಹೆಣ್ಣಿನ್ನು ಅನೇಕ ರೀತಿಯ ಶೋಷಣೆಗೆ ಒಳಗಾಗಿಸಿರುವುದು ಕಂಡುಬರುತ್ತದೆ. ಮತ್ತು ನಿಯಮಗಳಲ್ಲಿ ಹೆಣ್ಣು ಇರಬೇಕು. ಗಂಡನನ್ನು ಬಿಟ್ಟು ಹೆಣ್ಣು ಹೋಗಬಾರದು. ಒಂದು ಹೆಣ್ಣಿಗೆ ಗಂಡ ಇರಲೇಬೇಕು. ಹೀಗೆ ಹೆಣ್ಣಿಗೆ ಗಂಡನ್ನು ('ಪುರಷ')ನನ್ನು ಬಿಟ್ಟು ಹೋಗಬಾರದು ಎಂದು ಹೇಳುವ ಮೂಲಕ ಹೆಣ್ಣಿಗೆ ಹಿಂಸೆ, ಶೋಷಣೆಯಾಗುತ್ತಿದ್ದರೂ ಗಂಡನೇ ಮುಖ್ಯವೆಂದು ಸಾರಿ ಹೆಣ್ಣಿಗೆ ವಿಚ್ಛೇಧನದಿಂದ ಮುಕ್ತಿ ಇಲ್ಲದಂತೆ ಮಾಡಿರುವುದು ಕಂಡುಬರುತ್ತದೆ.

ಒಂದು ವೇಳೆ ಹೆಣ್ಣು, ಗಂಡನ ಹಿಂಸೆಗೆ ಬೇಸತ್ತು ಗಂಡನಿಂದ ವಿಚ್ಛೇದನೆ ಪಡೆದರೆ ಆ ಹೆಣ್ಣನ್ನು 'ಕೆಟ್ಟ' ಹೆಣ್ಣು ಕಳಂಕಿತಳು 'ಗಂಡ ಬಿಟ್ಟವಳು' ಗಂಡನನ್ನು 'ದೂರ ಮಾಡಿದವಳು' ಗಂಡನಿಗೆ ಮೋಸ ಮಾಡಿದವಳು ಎಂದು ಜರಿಯಲಾಗುತ್ತದೆ. ಎಲ್ಲಿಯೂ ಹೆಣ್ಣನ್ನು ಹಿಂಸಿಸಿದ ಶೋಷಣೆಗೆ ಒಳಪಡಿಸಿದ ಗಂಡಿಗೆ ಬಯ್ಯುವುದಾಗಲೀ ನಿಂದಿಸುವುದಾಗಲಿ,

ಬುದ್ಧಿ ಮಾತು ಹೇಳುವುದಾಗಲಿ ಕಂಡು ಬರುವುದಿಲ್ಲ, ಮತ್ತು ಈ ಸಂಗತಿಗಳಲ್ಲಿ ಹೆಣ್ಣನ್ನೆ ಅಪರಾಧಿಯಾಗಿ ಕಾಣುತ್ತಿರುವುದು ಕಂಡು ಬರುತ್ತದೆ. ಅದು ಹೇಗೆಂದರೆ ಈ 'ಹೆಣ್ಣು' ಸರಿಯಾಗಿಲ್ಲ ಈಕೆಯ ನಡತೆ, ವರ್ತನೆ ಸರಿಯಾಗಿಲ್ಲ, ಇವಳು ಹೆಂಡತಿಯಾಗಲು ಅನರ್ಹಳು ಎನ್ನುವ ಸಂಗತಿಯನ್ನು ಬಿತ್ತುವುದರ ಮೂಲಕ ಹೆಣ್ಣನ್ನು 'ಪಕಳಂಕಿತಳಾಗಿ ಅಪರಾಧಿಯನ್ನಾಗಿ ಮಾಡಿರುವುದು ದೊರೆಯುತ್ತದೆ. ಇದಕ್ಕೆ "ಧರ್ಮ ಶಾಸ್ತ್ರಜ್ಞರಲ್ಲಿ ಒಬ್ಬರಾಗಿದ್ದ ಬೌದ್ಧಯಣನು ಪುರುಷನು ತನ್ನ ಬಂಜೆಯಾದ ಹೆಂಡತಿಯನ್ನು ೧೦ನೇ ವರ್ಷದಲ್ಲೂ ಕೇವಲ ಹೆಣ್ಣು ಮಕ್ಕಳನ್ನು ಹೆತ್ತಿದ ಹೆಂಡತಿಯನ್ನು ೧೨ನೇ ವರ್ಷದಲ್ಲಿ ತ್ಯಜಿಸಬಹುದು ಎನ್ನುತ್ತಾ 'ಜಗಳಗಂಟಿ' ಹೆಂಡತಿಯನ್ನು ಮಾತ್ರ ತಕ್ಷಣವೇ ತ್ಯಜಿಸಿ ಬೇರೆ ವಿವಾಹವಾಗಬಹುದೆಂದು ತಿಳಿಸುತ್ತಾನೆ. ಆದರೆ ಹೆಂಡತಿ ಗಂಡನನ್ನು ಬಿಡುವುದಕ್ಕೆ ಬೇಕಾದ ಕಾರಣಗಳ ಕುರಿತು ಎಲ್ಲಿಯೂ ತಿಳಿಸಿಲ್ಲ. ಹಾಗೆ ಹೆಣ್ಣಿನಿಂದ ವಿಚ್ಛೇಧನಕ್ಕೆ ಕಾರಣವನ್ನು ತಿಳಿಸುವಾಗ. "ವಿಧಿವತ್ತಾಗಿ ಮದುವೆ ಮಾಡಿಕೊಂಡಿದ್ದರೂ. ಅವಳು ಅಮಂಗಲೆಯಾಗಿದ್ದರೆ, ವ್ಯಾಧಿಗ್ರಸ್ಥಳಾಗಿದ್ದರೆ, ವ್ಯಭಿಚಾರದ ಅಪವಾದ ಹೊತ್ತಿದ್ದರೆ, ಅಂಗವಿಕಲತೆಯನ್ನು ಮುಚ್ಚಿಟ್ಟಿದ್ದರೆ ಅಂಥಹ ಕನ್ಯೆಯನ್ನು ತ್ಯಜಿಸಬಹುದು". (ಶೇಷನವರತ್ನ ೨೦೦೮ ಪುಟ.೩೫) ಎಂದು ಹೇಳಲಾಗಿದೆ.

ಗಂಡು ನಿತ್ಯ ವ್ಯಭಿಚಾರ ಮಾಡಿದರೂ ಅದು ಸರಿ ಮತ್ತು ಸಹಜ ಎನ್ನುವ ರೀತಿಯಲ್ಲಿ ಗಂಡಿಗೆ ಸ್ವತಂತ್ರ ಹೆಣ್ಣಿಗೆ ಮಾತ್ರ ನಿರ್ಬಂಧ ಹಾಕಿರುವುದು ಮತ್ತು ಅಂತಹ ಹೆಣ್ಣನ್ನು ತೊರೆದು ಮರು ಮದುವೆಗೆ ಅವಕಾಶ ಮಾಡಿಕೊಡದಂತ ನಿಯಮವನ್ನು ಹೇಳಿರುವುದು ಕಂಡುಬರುತ್ತದೆ. ಅದು ಹೆಣ್ಣಿನ ಜೈವಿಕ ಕ್ರಿಯೆಯಾದ ತಾಯ್ತನವನ್ನಾಧರಿಸಿ, "ಹೆಂಡತಿಯಯ ಗರ್ಭಧರಿಸಿದಿದ್ದರೆ ಕಾದು ನಂತರ ಎಂಟನೇ ವರ್ಷದಲ್ಲಿ ಮರು ಮದುವೆಯಾಗಬಹುದು, ಹಡೆದ ಮಕ್ಕಳೆಲ್ಲವು ಸಾಯುತ್ತಿದ್ದರೆ ಒಂಬತ್ತು ವರ್ಷ ಕಾದು ಹತ್ತನೆಯ ವರ್ಷದಲ್ಲಿ ಮರು ಮದುವೆಯಾಗಬಹುದು. ಮೊದಲನೆ ಹೆಂಡತಿಯು ಬರಿ ಹೆಣ್ಣನ್ನು ಹಡೆಯುತ್ತಿದ್ದರೆ ಹನ್ನೊಂದನೆ ವರ್ಷದಲ್ಲಿ ಇನ್ನೊಂದು ಮದುವೆಯಾಗಬಹುದು,ಕೆಟ್ಟ ಮಾತನ್ನಾಡುವ ಹೆಂಡತಿಯನ್ನು, ಒಂದು ವೇಳೆ ಅವಳಿಗೆ ಸಂತಾನ ವಿರದಿದ್ದರೆ ತಕ್ಷಣವೆ ಬಿಡತಕ್ಕದ್ದು (ಉದ್ಧೃತ ಶೇಷ ನವರತ್ನ, ೨೦೦೮, ಪುಟ.೩೭) ಎಂದು ಜೈವಿಕ ಸಹಜ ಕ್ರಿಯೆಯಾದ ತಾಯ್ತನವನ್ನು ಆರೋಪಿಸಿ ಹೆಣ್ಣನ್ನು ವಿಚ್ಛೇದನಕ್ಕೆ ಒಳಪಡಿಸುವುದು ಕಂಡುಬರುತ್ತದೆ. ಹೀಗೆ ಜೈವಿಕ ಸಹಜ ಕ್ರಿಯೆಯನ್ನಾಧರಿಸಿ ತಾಯ್ತನವನ್ನು 'ಅಸಹಜ'ವಾಗಿ ನೋಡಿ ಹೆಣ್ಣಿಗೆ ಮಾತ್ರ ಜೈವಿಕ ದೋಷವನ್ನು ಆರೋಪಿಸಿ ಗಂಡಿನ ದೋಷ ಮುಚ್ಚಿ ಹಾಕಿರುವುದು ಕಂಡುಬರುತ್ತದೆ. ಹಾಗೆ ಹೆಣ್ಣು ಅರ್ಹಳಲ್ಲ ಎನ್ನುವ ಹುಸಿ ನಂಬಿಕೆಯ ಮೂಲಕ ಗಂಡಿಗೆ ಸಮಾಜದಲ್ಲಿ ಮಾನ್ಯತೆ ಕೊಟ್ಟಿರುವುದು ಕಂಡುಬರುತ್ತದೆ. ಅದು ಹೆಗೆಂದರೆ ಅಧಿಕೃತ ರೀತಿಯಲ್ಲಿ ವಿವಾಹದ

ಮೂಲಕ ಗಂಡಿಗೆ ಎರಡು ರೀತಿಯ ಸ್ವತಂತ್ರ, ಒಂದು ಮೊದಲ ಹೆಂಡತಿಯನ್ನು ಬಿಟ್ಟು ಎರಡನೆ ಹೆಂಡತಿಯನ್ನು ಮಾಡಿಕೊಳ್ಳಬಹುದು.

ಇನ್ನೂ ಎರಡನೆ ಸ್ವತಂತ್ರವೆಂದರೆ ಹೆಂಡತಿ ಸತ್ತರೆ ಎರಡನೆ ಮದುವೆ ಮಾಡಿಕೊಳ್ಳಬಹುದೆಂದು ಹೇಳುವ ಮೂಲಕ ಪುರುಷನಿಗೆ ಲೈಂಗಿಕ ಸ್ವಾತಂತ್ರ್ಯ ನೀಡಿ ಅವನನ್ನು ಶ್ರೇಷ್ಠತೆಯ ನೆಲೆಯಲ್ಲಿ ನಿರ್ವಚಿಸಿಕೊಂಡು ಬಂದಿರುವುದು ಅದೇ ಈ ಸಂಗತಿಯನ್ನು ಗಂಡು ಬದಲಾಗಿ ಹೆಣ್ಣಿಗೆ ಬದಲಾಯಿಸಿದರೆ ಅದು ಸಮಾಜದಲ್ಲಿ ಕಳಂಕವಾಗಿ ಮಾರ್ಪಡುತ್ತದೆ. ಹೀಗೆ ಹೆಣ್ಣಿನ ಜೈವಿಕತೆಯನ್ನಾಧರಿಸಿ ಹೆಣ್ಣಿಗೆ ವಿಚ್ಛೇದನೆಗೊಳಿಸಿ ಹೆಣ್ಣನ್ನು ಕಳಂಕಳೆಂದು ಬಿರುದು ನೀಡಿರುವುದು ಕಂಡುಬರುತ್ತದೆ. ಇದು ಇಂದಿಗೂ ವಿಚ್ಛೇದಿತ ಹೆಣ್ಣಿಗೆ ಸಮಾಜದಲ್ಲಿದೆ ಅವಳಿಗೆ ಪ್ರತ್ಯೇಕ ಸ್ಥಾನಮಾನವಿಲ್ಲ.

ಇಸ್ಲಾಂ ಧರ್ಮದಲ್ಲಿ ವಿಚ್ಛೇಧನಕ್ಕೆ ಸಂಬಂಧಿಸಿದಂತೆ ಪುರುಷನಿಗೆ ಪರಮಾಧಿಕಾರ ಕೊಟ್ಟು ಹೆಣ್ಣನ್ನು 'ವಸ್ತು'ವಿನಂತೆ ಹೆಣ್ಣನ್ನು ಕಂಡಿರುವುದು ಕಂಡುಬರುತ್ತದೆ. ಇದಕ್ಕೆ "ಪುರುಷನು ತಾನು ಯಾರ ಜತೆ ಸಹ ಬಾಳ್ವೆ ನಡೆಸಲು ಅಸಾಧ್ಯವೋ ಆಕೆಗೆ ತಲಾಕ್ ನೀಡುವುದು "(ಉದ್ಧೃತ ಹಾಲತಿ ಸೋಮೇಶ್ವರ ೨೦೦೮, ಪುಟ.೧೧) ಎಂದು ಪುರುಷನಿಗೆ ವಿಚ್ಛೇದನಕ್ಕೆ ಪರಮಾಧಿಕಾರ ಕೊಟ್ಟು ಅದೇ ಹೆಣ್ಣಿಗೆ ವಿಚ್ಛೇದನ ಕುರಿತು ಹೇಳುವಾಗ "ವಿಚ್ಛೇಧನ ಹಕ್ಕು ಪತ್ನಿಗೆ ತಲಾಕ್‌ನ ಹಕ್ಕು ನೀಡಲ್ಪಟರೆ ಪುರುಷರ ಹಕ್ಕು ಚ್ಯುತಿ ಮಾಡಲು ಆಕೆ ಸ್ವತಂತ್ರಳಾಗುತ್ತಾಳೆ. ಆದ್ದರಿಂದ ಪುರುಷನಿಗೆ ತಲಾಕನ ಅಧಿಕಾರ ನೀಡಿರುವುದು ಆತನ ಧರ್ಮ ಸಮ್ಮತ ಹಕ್ಕು ಎಂದು ಇಸ್ಲಾಂ ಮಾನ್ಯತೆ ಮಾಡುತ್ತದೆ". (ಉದ್ಧೃತ ಹಾಲತಿ ಸೋಮೇಶ್ವರ ೨೦೦೭, ಪುಟ.೧೧೧) ಇಲ್ಲಿ ಪುರುಷನಿಗೆ ಸ್ವತಂತ್ರ ನೀಡಿರುವುದು ಪುರುಷಕೇಂದ್ರಿತ ಧಾರ್ಮಿಕ ಚಿಂತನೆಗಳಾಗಿವೆ ಈತರನಾದ ಚಿಂತನೆಗಳು ಧರ್ಮಗಳಲ್ಲಿ ಬಿತ್ತಿರುವುದರಿಂದಲೇ ಹೆಣ್ಣನ್ನು ಗಂಡು ವಸ್ತುವಿನಂತೆ ಕಾಣಲು ಹಾಗೂ ಹಲವು ಪತ್ನಿಯರನ್ನು ಹೊಂದುವುದಕ್ಕೆ ಪುರುಷನಿಗೆ 'ಅವಕಾಶಕ್ಕೆ ಕಾರಣವಾಗಿದೆ.

ಅದೇ ಹೆಣ್ಣಿನ ಸಂದರ್ಭಕ್ಕೆ ಬಂದರೆ ಕಾರಣವಿಲ್ಲದೆ ಹೆಂಡತಿಯನ್ನು ಶಿಕ್ಷಿಸುವ ಮತ್ತು ಹಿಂಸಿಸುವ ಉದ್ದೇಶದಿಂದ ಪತ್ನಿಯ ಲೈಂಗಿಕ ಬಯಕೆಯನ್ನು ಈಡೆರಿಸದೆ ಇರುವುದನ್ನು 'ಈಲಾ' ಎನ್ನುತ್ತಾರೆ. ಇದಕ್ಕೆ ಇಸ್ಲಾಮಿ ಸಮಾಜ ನಾಲ್ಕು ತಿಂಗಳ ಅವಧಿ ಗೊತ್ತುಪಡಿಸಿದೆ. ಈ ಅವಧಿಯೊಳಗಡೆ ಪತ್ನಿಯೊಂದಿಗೆ ರಾಜಿ ಮಾಡಿಕೊಂಡು ದಾಂಪತ್ಯ ಸಂಬಂಧವನ್ನು ಪುನಃ ಸ್ಥಾಪಿಸುವುದು ಪತಿಯ ಮೇಲೆ ಕಡ್ಡಾಯ, ಅನ್ಯಥಾ ಅವಧಿ ಕಳೆದುಹೋದ ಬಳಿಕ ಆಕೆಯನ್ನು ವಿಚ್ಛೇಧನಗೊಳಿಸುವಂತೆ ಅವನನ್ನು ನಿರ್ಬಂಧಿಸಲಾಗುವುದು." ತಮ್ಮ ಪತ್ನಿಯನ್ನು ಸಮೀಪಿಸಲಾರವೆಂದು ಶಪಥ ಹಾಕುವವರಿಗೆ ನಾಲ್ಕು ತಿಂಗಳುಗಳ ಅವಧಿಯುಂಟು ಅದರೊಳಗೆ ಅವರು ಮರಳಿದರೆ. ನಿಶ್ಚಯವಾಗಿಯೂ ಅಲ್ಲಾಹನು ಕ್ಷಮಾಶೀಲನಾ,

ಕರುಣಾನಿಧಿಯೂ ಆಗಿರುತ್ತಾನೆ. ಆದರೆ ಅವರು ವಿವಾಹ ವಿಚ್ಛೇಧನವನ್ನು ತೀರ್ಮಾನಿಸಿದರೆ ಅಲ್ಲಾಹನು ಸರ್ವ ಶ್ರೂತನ, ಸರ್ವಜ್ಞನು ಆಗಿರುತ್ತಾನೆ". (ಅಲ್‌ಬಕರ್ ೨೨೬-೨೨೭ ಉದ್ಧೃತ ಹಾಲತಿ ಸೋಮೇಶ್ವರ ೨೦೦೭, ಪುಟ.೧೧೧) ಎಂದು ಹೇಳಲಾಗಿದೆ. ಆದರೆ ಹೆಣ್ಣಿಗೆ 'ಖುಲಾ'ದ ಹಕ್ಕು ನೀಡಿದೆ. ತನಗೆ ಇಷ್ಟವಿಲ್ಲದ ಮತ್ತು ಯಾವ ರೀತಿಯಿಂದಲೂ ತಾನು ಸಹಬಾಳ್ವೆಯಿಂದ ಬದುಕು ನಡೆಸಲು ಸಾಧ್ಯವಿಲ್ಲದ ಸಂದರ್ಭದಲ್ಲಿ ಪುರುಷನಿಂದ ಬೇರ್ಪಡಲು ಸ್ತ್ರೀಗೆ ಖುಲಾದ ಹಕ್ಕು ನೀಡಿದೆ ಹೊರತು, ಇದು ಹೆಣ್ಣಿಗೆ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಂಡು ಜೀವನ ನಡೆಸಲ್ಲಿಕ್ಕೆ ಯಾವುದೇ ಸ್ವತಂತ್ರವಿಲ್ಲವೆಂದಿರುವುದು ಇದೆ. ಈತರನಾದ ಸಂಗತಿಗಳು ಹೆಣ್ಣಿಗೆ ಪರಿಹಾರವೆಂದೆನಿಸುವುದಿಲ್ಲ. ಪುರುಷ ಪ್ರಧಾನ ಸಮಾಜವು ಹೆಣ್ಣನ್ನು ವಸ್ತುವಿನಂತೆ ಕಾಣುವುದಕ್ಕೆ ಧರ್ಮ, ಧರ್ಮಗ್ರಂಥಗಳು ಈತರನಾದ ಲಿಂಗಭೇದ ನಂಬಿಕೆ ನೀತಿಗಳನ್ನು ಬಿತ್ತಿದೆ.

ಆಧುನಿಕ ಮತ್ತು ವೈಜ್ಞಾನಿಕ ಆಲೋಚನೆಗಳು ಲಿಂಗಾಧಾರಿತ ಸಂಕುಚಿತ ದೃಷ್ಟಿಕೋನದಿಂದ ಸ್ತ್ರೀ- ಪುರುಷನನ್ನು ಮಾಪನ ಮಾಡುವುದನ್ನು ತಿರಸ್ಕರಿಸುತ್ತವೆ. ಭೂಮಿಯ ಮೇಲೆ ಹುಟ್ಟಿದ ಪ್ರತಿ ಹೆಣ್ಣು, ಗಂಡಿಗೂ ಸಮಾನ ಅವಕಾಶಗಳನ್ನು ಒದಗಿಸಿ ಕೊಡಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳುತ್ತವೆ.

ಈ ತೆರನಾದ ಕಟ್ಟುಪಾಡುಗಳು ಹಿಂದೂ ಧರ್ಮದಲ್ಲಿ ಅಷ್ಟೇ ಅಲ್ಲ, ಕ್ರೈಸ್ತ ಧರ್ಮದಲ್ಲಿ ಕೂಡ ಕಂಡು ಬರುತ್ತವೆ. ಕ್ರೈಸ್ತರಲ್ಲಿ ವಿವಾಹವು 'ಪವಿತ್ರ ಸಂಸ್ಕಾರ' ಮತ್ತು ವಿವಾಹವೆಂಬುದು ಬದುಕಿನ 'ಅಮೋಘ ಸಂಬಂಧ', ಬಿಡಿಸಲಾಗದ್ದು. ಆದ್ದರಿಂದ ವಿವಾಹ ವಿಚ್ಛೇಧನಕ್ಕೆ ಅವಕಾಶವಿಲ್ಲ ಆದರೂ ಪರಸ್ಪರ ಕೂಡಿ ಬದುಕಲು ಸಾಧ್ಯವಾಗದೆ ಹೋದರೆ ವಿಚ್ಛೇಧನ ಪಡೆಯಬಹುದೆಂದು ಹೇಳುತ್ತದೆ. ಆದರೆ ವಿಧವೆಯರ ಮತ್ತು ಮದುವೆಯಾಗದವರನ್ನ ಕುರಿತು ಹೇಳುವಾಗ "ಅಂಥವರು ಮದುವೆಯಾಗದೇ ಉಳಿಯುವುದು ಶ್ರೇಯಸ್ಕರ. ಒಂದು ವೇಳೆ ಇಂದ್ರಿಯ ನಿಗ್ರಹವಿಲ್ಲದಿದ್ದರೆ ಮದುವೆ ಮಾಡಿಕೊಳ್ಳಲ್ಲಿ ಕಾಮತಾಪ ಪಡುವುದಕ್ಕಿಂತ ಮದುವೆ ಮಾಡಿಕೊಳ್ಳುವುದು ಉತ್ತಮ ಎಂದು ಹೇಳುತ್ತಾನೆ. ಮದುವೆ ಮಾಡಿಕೊಂಡಿರುವವರಿಗೆ ನನ್ನ ಅಪ್ಪಣೆ ಮಾತ್ರವಲ್ಲದೆ ಕಿರ್ತನ ಆಜ್ಞೆಯು ಏನೆಂದರೆ ಹೆಂಡತಿಯು ಗಂಡನನ್ನು ಬಿಟ್ಟು ಅಗಲಬಾರದು, ಒಂದು ವೇಳೆ ಅಗಲಿದರೂ ಪುರುಷನ ಸಹವಾಸವಿಲ್ಲದೆ ಇರಬೇಕು, ಇಲ್ಲವೆ ಗಂಡನ ಸಂಗಡ ಸಮಾಧಾನವಾಗಿರಬೇಕು ಮತ್ತು ಗಂಡನು ಹೆಂಡತಿಯನ್ನು ಬಿಡಬಾರದು". (ಉದ್ಧೃತ ಹಾಲತಿ ಸೋಮೇಶ್ವರ ೨೦೦೭, ಪುಟ.೧೨೯) ಎಂದು ಹೇಳಲಾಗಿದೆ.

- **ವೈಧವ್ಯ**

ವೈಧವ್ಯ ಕುರಿತಾಗಿ ನೋಡಿದರೆ ಸಮಾಜ ಸಂಸ್ಕೃತಿ, ಧಾರ್ಮಿಕ ವಲಯಗಳಲ್ಲಿ ವೈಧವ್ಯಕ್ಕೆ ಒಳಗಾದ ಹೆಣ್ಣನ್ನು ಕೀಳಾಗಿ ಕಾಣುತ್ತಿರುವುದು ಕಂಡುಬರುತ್ತದೆ. ಬಳೆ,

ಕಾಲುಂಗುರ, ಕುಂಕುಮ, ಹೂವು, ಅಲಂಕಾರಕ ವಸ್ತುಗಳನ್ನು ತೆಗೆದು 'ವಿಧವೆ' ಎನ್ನುವ ಪಟ್ಟಕಟ್ಟಿ ಆಕೆಯನ್ನು ಧಾರ್ಮಿಕ ವಲಯದಿಂದ ದೂರವಿಟ್ಟು ಗಂಡ ಸತ್ತ 'ಮುಂಡೆ' ಎನ್ನುವ ಮೂಲಕ ಹಣೆಪಟ್ಟಿ ಬರೆದು ಯಾವುದಕ್ಕೆ ಉಪಯೋಗ ಇಲ್ಲದವಳು ಎನ್ನುವಂತ ಸಂಗತಿಯನ್ನು ಬಿತ್ತಿರುವುದು ಕಂಡುಬರುತ್ತದೆ. ವೈಧವ್ಯಕ್ಕೆ ಒಳಗಾದ ಹೆಣ್ಣಿಗೆ ನಿಯಮ ನಿರ್ಬಂಧಗಳನ್ನು ಹಾಕಿ ಆ ಮೂಲಕ ಪಾಲಿಸಿಕೊಂಡ ಹೋಗಬೇಕೆಂದು ಹಾಳಿ ಹೆಣ್ಣಿನ ಸಹಜವಾದ ಬದುಕಿಗೆ ಅನೇಕ ರೀತಿಯಾದ ಕಟ್ಟುಪಾಡು, ನಿಷ್ಠೆಗಳನ್ನು ಹೇಳಿರುವುದು ದೊರೆಯುತ್ತದೆ. "ಪತಿವ್ರತೆಯಾದ ಸ್ತ್ರೀಯು ತನ್ನ ಗಂಡನ ಮರಣ ನಂತರ ತಾನು ಸಾಯುವ ತನಕ ನಿರಂತರ ಬ್ರಹ್ಮಚಾರಿಯಾಗಿಯೇ ಉಳಿದು ಪರಪುರುಷನ ಸಂಗ ಮಾಡದೆ ವ್ರತಾಚಾರಣೆ ಮಾಡಿದ ಹೆಣ್ಣು ಧರ್ಮವನ್ನು ಸಂಪಾದಿಸುತ್ತಾಳೆ (ಸಂಪಾದಿಸಬೇಕು)" ಎಂದು "ಗಂಡ ಸತ್ತ ಮೇಲೆಯೂ ಬ್ರಹ್ಮಚಾರ್ಯವನ್ನು ಪಾಲಿಸುವ ಪತಿವ್ರತೆಯಾದದವರ ಧರ್ಮ ಹೆಂಡತಿಯಾದವಳು ಬ್ರಹ್ಮಚಾರಿಗಳಂತೆ ತಾನು ಅಪುತ್ರಳಾದರೂ ಮಕ್ಕಳಿಲ್ಲದಿದ್ದರೂ ಸ್ವರ್ಗಕ್ಕೆ ಹೋಗುತ್ತಾಳೆ".(ಉದ್ಧೃತ ಶೇಷನವರತ್ನ, ೨೦೦೫, ಪುಟ.೨೨೯) ಎಂದು ನೀತಿ ಭೋದನೆಯನ್ನು ಮಾಡಿರುವುದು ಕಂಡುಬರುತ್ತದೆ ಅದೇ ಪುರುಷನಿಗೆ ಹೆಂಡತಿ ಸತ್ತರೆ ಹೇಳುವ ನೀತಿಯಲ್ಲಿ "ಪತ್ನಿಯು ತನಗಿಂತ ಮೊದಲು ಮೃತಳಾದರೆ ಅವಳ ಅಂತ್ಯ ಕರ್ಮಗಳಲ್ಲಿ ಅಗ್ನಿಗಳನ್ನು ಸಮರ್ಪಿಸಿದ (ಉತ್ತರ ಕ್ರಿಯೆಗಳನ್ನು ಮಾಡಿ) ನಂತರ ಯೋಗ್ಯ ಕಾಲದಲ್ಲಿ (ಪುತ್ರೇಚ್ಛೇಯದಲ್ಲಿ–ಯೌವ್ವನವಿದ್ದಲ್ಲಿ) ಪುನರ್‌ವಿವಾಹ ಮಾಡಿಕೊಳ್ಳಬೇಕು ಪುನಃ ಶ್ರಾತ – ಸ್ಮಾರ್ತಾಗ್ನಿಗಳನ್ನು ಸಂಪಾದಿಸಬೇಕು" (ಉದ್ಧೃತ ಶೇಷ ನವರತ್ನ ೨೦೦೫, ಪುಟ.೨೨೯) ಎಂದು ಗಂಡಿಗೆ ಪುನರ್ವಿವಾಹ ಮಾಡಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಟ್ಟಿರುವ ಸಂಗತಿ ಕಂಡುಬರುತ್ತದೆ. ಈ ರೀತಿಯಾಗಿ ಗಂಡು ಹೆಣ್ಣಿನ ಮದ್ಯೆ ಸೃಷ್ಟಿಸಿರುವ ಧಾರ್ಮಿಕ ನಿಯಮಗಳೆ ತಾರತಮ್ಯ ಸೃಷ್ಟಿಸುತ್ತವೆ. 'ವಿಧವೆ' ಎಂದು ಗುರುತಿಸಲ್ಪಟ್ಟ ಹೆಣ್ಣಿಗೆ ಕೇವಲ ವ್ರತ, ಪೂಜೆ, ಬ್ರಹ್ಮಚಾರ್ಯ, ಮಿತಆಹಾರ ನಿಯಂತ್ರಣದಲ್ಲಿ ಬದುಕುವಂತೆ ನಿರ್ದೇಶನ ಮಾಡಿದರೆ ಅದೇ ವಿಧುರನಿಗೆ ಮರು ಮದುವೆಯಾಗಿ ಬದುಕು ನಡೆಸಲು ಯೋಗ್ಯ ಎನ್ನುವ ಚಿಂತನೆ ಹುಟ್ಟು ಹಾಕಿರುವುದೇ ಪುರುಷ ರಾಜಕಾರಣ.

- ***ಗುಣ–ಸ್ವಭಾವ***

ಗುಣ ಸ್ವಭಾವಗಳು ಲಿಂಗಾಧಾರವಾಗಿ ಹುಟ್ಟು ಬರುವಂತಹದ್ದಲ್ಲ. ಆದರೆ ಹೆಣ್ಣಿಗೆ ಆರೋಪಿಸಲಾಗಿರುವ ಗುಣ ಸ್ವಭಾವಗಳಲ್ಲಿ ಎಲ್ಲವೂ ಸಾಮಾಜೀಕರಣಕ್ಕೊಳಪಡಿಸಿದವುಗಳೇ ಹೊರತು ಅವು ಸಹಜ ಗುಣಗಳಲ್ಲ. 'ಹೆಣ್ಣು' ಎಂದರೆ ಇದೇ ಗುಣ, ಇದೇ ಸ್ವಭಾವ, ಇದೇ ನಡೆತೆ ಹೊಂದಿರಬೇಕು ಎನ್ನುವಂತ ಪೂರ್ವ ನಿರ್ಧಾರಿತವಾದ ಕಲ್ಪನೆಗಳನ್ನು ಹೆಣ್ಣಿಗೆ ಹೇರಿ ಆ ಮೂಲಕ ಹೆಣ್ಣಿನ ಸಹಜ ಮತ್ತು ಅಭಿವ್ಯಕ್ತಿಗೆ ಕಡಿವಾಣ ಹಾಕಿದೆ. ಉದಾಹರಣೆಗೆ

ಮಾತನಾಡುವುದು, ನಡೆದಾಡುವುದು, ನೋಡುವುದು ನಡೆ–ನುಡಿ ಮುಂತಾದ ಚಲನಶೀಲತೆಗೆ ಸಂಬಂಧಪಟ್ಟ ಅಂಶಗಳನ್ನು ಗಮನಿಸುವುದು ಸೂಕ್ತ. ಸಿಮೋನ ದ ಬೋವಾ ಹೇಳುವಂತೆ 'ಹೆಣ್ಣು' ಮೂಲತಃ ಹೆಣ್ಣಾಗಿ ಹುಟ್ಟಲಿಲ್ಲ ಹೆಣ್ಣಾನ್ನಾಗಿ ರೂಪಿಸಲಾಯಿತು' ಎಂದಿರುವುದು ಈ ಪುರುಷ ರೂಪಿತ ಧರ್ಮ, ಧರ್ಮಗ್ರಂಥಗಳಿಂದಾಗಿ ಹೇಳಿರುವುದು ಅಕ್ಷರ ಸಹ ಸತ್ಯವಾದಂತಿದೆ. ಯಾಕೆಂದರೆ ಧರ್ಮವೆಂದು ಹೇಳಿಕೊಂಡು ಬಂದಿರುವ ವೇದ ಉಪನಿಷತ್ತು, ಮಹಾಕಾವ್ಯಗಳು, ಭಗವದ್ಗೀತೆ, ಪುರಾಣಗಳಲ್ಲಿ, ಮನಸ್ಮೃತಿ, ಮಿತಾಕ್ಷರ ಸಂಹಿತೆ, ಧಾರ್ಮಿಕವಾಗಿ ರಚಿತಗೊಂಡ ಧರ್ಮ, ಧರ್ಮಗ್ರಂಥಗಳಲ್ಲಿ ಜೈವಿಕಭಿನ್ನತೆಯನ್ನಾಧರಿಸಿ, ಲಿಂಗಾಧಾರಿತವಾದ ಗುಣ ಸ್ವಭಾವವನ್ನು ನಿರ್ವಚಿಸಿರುವುದು ಕಂಡುಬರುತ್ತದೆ. ಇದಕ್ಕೆ 'ಹೆಣ್ಣಿಗೆ ದಾರಿಕಾ ಹೃದಯದಾರಿಕಾ', ಅಂದರೆ ಹೆಣ್ಣು ಹೃದಯವನ್ನು ಬೋಧಿಸಿವವಳು ತೈತ್ರೇಯಿ ಸಂಹಿತವೆನ್ನುತ್ತದೆ. 'ಒಳ್ಳೆಯ ಹೆಂಗಸು ಕಟ್ಟ ಗಂಡಸಿಗಿಂತ ಕಡೆ' ಎಂದು ಮೈತ್ರೀಯ ಸಂಹಿತೆ ಸಾರುತ್ತದೆ. 'ಹೆಣ್ಣು ಅಸತ್ಯ'. ರಾಮಾಯಣ ಹೇಳುತ್ತವೆ 'ಹೆಣ್ಣು ಖಡ್ಗದ ಅಲಗಿಗಿಂತಲೂ ಹರಿತವಾದವಳು, ಚಂಚಲೆ, ಬಿರುಗಾಳಿಯ ಬೀಸಿನಂತೆ ಅಸ್ಥಿರಳು ಎಂದು ಮಹಾಭಾರತ ಹೇಳುತ್ತದೆ' ಹೀಗೆ ಹೆಣ್ಣಿನ ಕುರಿತಾಗಿ ಅಪಗ್ರಹಿಕೆಗಳು ಸೃಷ್ಟಿಗೊಂಡಿವೆ.

ಹೆಣ್ಣನ್ನು ನಿರ್ವಚಿಸಿದ ರೀತಿಯಲ್ಲಿ "ಹೆಣ್ಣು ಶೂದ್ರ ನಾಯಿಗಳ ಮತ್ತು ಕಾಗೆಗಳ ಗುಂಪಿಗೆ ಸೇರುತ್ತಾಳೆ. ಸುಳ್ಳು ಪಾಪ ಮತ್ತು ಕತ್ತಲೂ ಹೆಣ್ಣಿನಲ್ಲಿ ಮನೆ ಮಾಡಿರುತ್ತವೆ. ಹೆಣ್ಣು ಪ್ರಾಣಿ ಜೊತೆಗೆ ಸಂಭೋಗ ಮಾಡಲು ಬಯಸುತ್ತಾಳೆ ಈ ಕಾರಣಕ್ಕಾಗಿ ಹೆಣ್ಣು ಕನಿಷ್ಠ." (........................ ....) ಎಂದು ಹೇಳಿರುವ ಮಾಹಿತಿಯನ್ನಾಧರಿಸಿ ವಿಶ್ಲೇಷಣೆಗೆ ಒಳಪಡಿಸಿದರೆ, ನಾಯಿ, ಮನೆ ಕಾಯುವುದು, ಕಾಗೆ ಒದರುವುದು, ಸುಳ್ಳು – ಪಾಪ, ಮತ್ತು ಕತ್ತಲೂ ಇವು ಹೆಣ್ಣಿನಲ್ಲಿ ಮನೆ ಮಾಡಿರುತ್ತವೆ ಎಂದಿರುವುದು ಹೆಣ್ಣನ್ನು ಅಜ್ಞಾನ, ಮತ್ತು ಪ್ರಾಣಿ, ಪಕ್ಷಿಗಳ ಗುಣವನ್ನು ಆರೋಪಿಸಿರುವುದು ಹೆಣ್ಣಿನ ಕುರಿತಾಗಿ ಸೃಷ್ಠಿ ಮಾಡಿರುವ ಮಿಥ್‌ಗಳಾಗಿವೆ. ಯಾಕೆಂದರೆ ಈ ತೆರನಾದ ಗುಣ ನಡತೆಗಳ ಸಂಬಂಧಪಟ್ಟಂತೆ ಕೇವಲ ಹೆಣ್ಣಿಗೆ ಮಾತ್ರ ಹೇಳಿರುವುದು ಮತ್ತು ಪುರುಷನ ಕುರಿತಾಗಿ ಎಲ್ಲಿಯೂ ಗುಣ ಸ್ವಭಾವಗಳ ಕುರಿತಾಗಿ ಹೇಳದಿರುವುದು ಕಂಡುಬರುತ್ತದೆ. ನೈಸರ್ಗಿಕ ಗುಣಗಳನ್ನು ಅಪವ್ಯಾಖಾನ ಮಾಡಿರುವುದು ಮಿಥ್‌ಗಳೇ ಎನ್ನುವುದು ಗೊತ್ತಾಗುತ್ತದೆ.

ಇನ್ನು ಭಿನ್ನ ಜೈವಿಕತೆಯನ್ನಾಧರಿಸಿ ನಂಬಿಕೆಯನ್ನು ಬಿತ್ತಿರುವುದು ಇದಕ್ಕೆ ಮೈತ್ರಿಯ ಸಂಹಿತೆಯಲ್ಲಿ "ಹೆಣ್ಣು ಜೂಜು ಮತ್ತು ಕುಡಿತಗಳು ಒಂದೆ ತರಹದವು" ತೈತ್ತ್ರೀಯ ಸಂಹಿತೆಯಲ್ಲಿ "ಆಕೆ ಒಬ್ಬ ದೃಷ್ಟ ಗಂಡಿಗಿಂತಲೂ ಕೀಳು ಸಮಾಜದ ಅನಿಷ್ಟ" (ಉದ್ಧೃತ ಹಾಲತಿ ಸೋಮೇಶ್ವರ, ೨೦೦೭, ಪುಟ.೪೫) ಎಂದು ಹೆಣ್ಣನ್ನು ಹಲವು ನೆಲೆಯಲ್ಲಿ ಅಪವ್ಯಾಖ್ಯಾನ ಮಾಡಲಾಗಿದೆ. ಇಂದಿಗೂ ಸಮಾಜದಲ್ಲಿ ಹೆಣ್ಣು ಎಂದರೆ ಬಹಳ 'ಕೆಟ್ಟವಳು'

ಎನ್ನುವಂತೆ ನಂಬಿಕೆಯನ್ನು ಸ್ಥಿರಗೊಳಿಸಿರುವುದು ಕಂಡುಬರುತ್ತದೆ. ಉಪನಿಷತ್ತಿನಲ್ಲಿ ಹೆಣ್ಣಿನ ಕುರಿತಾಗಿ ಹೇಳಿರುವಲ್ಲಿ "ಸ್ತ್ರೀಯೊಡನೆ ಸ್ನೇಹವೆಂಬುದಿಲ್ಲ, ಅವಳು ತೋಳದಂಥ ಕ್ರೂರ ಹೃದಯದವಳೂ ಹೆಣ್ಣು ಎಂದರೆ ಸುಳ್ಳು, ಹೆಣ್ಣು ಸುಳ್ಳನೇ ಆಚರಿಸುವವಳು, ಹಾಗೇ ಸ್ತ್ರೀಯರಲ್ಲಿ ಅಸೂಯೇ ಹೆಚ್ಚು ಒಬ್ಬರೊಬ್ಬರನ್ನು ಶೋಷಿಸುತ್ತಾ ಗಂಡಿನ ಕಾಮಕ್ಕಾಗಿ ಸ್ಪರ್ಧಿಸುತ್ತ ಬಡಿದಾಡುವ ಹಪಾಹಪಿಗಳು" (ಉದ್ಧೃತ ಹಾಲತಿ ಸೋಮೇಶ್ವರ ೨೦೦೭, ಪುಟ.೪೨) ಎಂದು ಮೈತ್ರಿಯೇ ಮತ್ತು ಉಪನಿಷತ್ತುಗಳಲ್ಲಿ ಉಲ್ಲೇಖಿತವಾಗಿರುವುದು ಕಂಡುಬರುತ್ತದೆ. ಈ ತೆರನಾದ ಅಂಶಗಳು ಹೆಣ್ಣಿನ ವ್ಯಕ್ತಿತ್ವವನ್ನು ಅಲ್ಲೆಗಳೆಯಲು ಮತ್ತು ಹೆಣ್ಣು ಎಂದರೆ 'ದೇಹ' ಮಾತ್ರ, ವ್ಯಕ್ತಿತ್ವ ಇಲ್ಲದವಳು ಯಾವ ಮೌಲ್ವೀಕ ಗುಣಗಳು ಅವಳಲ್ಲಿ ಇಲ್ಲ ಎನ್ನುವಂತಹ ಸಂದೇಹವನ್ನು ಸಮಾಜದಲ್ಲಿ ಬಿತ್ತಲು ಕಾರಣವಾಗುತ್ತವೆ. ಈ ಎಲ್ಲ ಸಂಗತಿಗಳು ಕಲ್ಪಿತಗೊಂಡಿವೆ ಹೊರತು, ಹುಟ್ಟಿನಿಂದ ಅಥವಾ ಜೈವಿಕ ದತ್ತವಾಗಿ ಬರುವಂತಹವುಗಳಲ್ಲ ಮತ್ತು ಈ ತೆರನಾದ ಗುಣ ಸ್ವಭಾವಗಳು ಧರ್ಮ, ಪುರುಷ ನಿರ್ದೇಶಿತ ಅಂಶಗಳಂತ ನಂಬಿಕೆಗಳಿಂದ ರೂಪಿಸಲ್ಪಟ್ಟಿವೆ ಹೊರತು, ಹೆಣ್ಣಿಗೆ ನೈಸರ್ಗಿಕವಾದದ್ದಲ್ಲ ಎನ್ನುವಂತದ್ದು ಸ್ಪಷ್ಟವಾಗುತ್ತದೆ. ಇದಕ್ಕೆ ಹಿಂದು-ಧರ್ಮದ ಮಹಾನ್ ಗ್ರಂಥಗಳೆಂದು ಕರೆಸಿಕೊಳ್ಳುವ ರಾಮಾಯಣ, ಮಹಾಭಾರತರಲ್ಲಿ ಬರುವ ಹೆಣ್ಣಿನ ಪಾತ್ರಗಳಲ್ಲಿ ಗುಣಗಳಿಗೆ ಸಂಬಂಧಪಟ್ಟಂತೆ ಪಾತ್ರಗಳನ್ನು ಗೌರವಿಸಿರುವುದು, ಹಿಯಾಳಿಸಿರುವುದು ಕಂಡುಬರುತ್ತದೆ.

ರಾಮಯಾಣದ ಸೀತೆಯ ಪಾತ್ರದಲ್ಲಿ ಪತಿಗೆ ವಿಧೆಯತೆ, ತಾಳ್ಮೆ ಸಹನೆ, ಪರಾಧೀನತೆ, ಪತಿಯ ಬಗ್ಗೆ ಪ್ರಶ್ನೀತವಾದ ನಂಬಿಕೆ ಮೊದಲಾದ 'ಆದರ್ಶನಾರಿ'ಯಾಗಿ ನಿರ್ವಚಿಸಲಾಗಿದೆ. ಹೆಣ್ಣು ಮಮತಾಮಯಿಯಾಗಿರಬೇಕು, ದಯಾಮಯಿ, ತ್ಯಾಗಮೂರ್ತಿ, ಕಷ್ಟ ಸಂಹಿಷ್ಣುತೆ, ಪತಿಯ ಅನುಯಾಯಿ, ಸದ್ಗುಣಿ ಸಂಪನ್ನಾಳಾಗಿರಬೇಕು. ಹೀಗೆ ಹತ್ತು ಹಲವು ಅಂಶಗಳು ಹೆಣ್ಣಾದವಳಿಗೆ ಇರಬೇಕು ಮತ್ತು ಹೀಗೆ ಇದ್ದರೆ ಮಾತ್ರ ಹೆಣ್ಣು ಎನ್ನುವಂತ ಸಂಗತಿಯನ್ನು ಒತ್ತಾಯದ ಮೂಲಕ ಹೇರಿರುವುದು ಇದೆ ಆದುದರಿಂದಾಗಿ ರಾಮಾಯಣದಲ್ಲಿ 'ಸೀತೆ'ಯಂತಹ 'ಆದರ್ಶ' ಹೆಣ್ಣಿನ ಚಿತ್ರಣವನ್ನು ಉದಾಹರಿಸಿರುವುದು ಕಂಡುಬರುತ್ತದೆ. ಅದು ಹೇಗೆಂದರೆ ಸೀತೆ ತರ ಹೆಣ್ಣು ಇರಬೇಕು ಎನ್ನುವ ಮೌಲ್ಯವನ್ನು ಸಮಾಜದಲ್ಲಿ ಬಿತ್ತಿ ಹೆಣ್ಣಾದವಳು ಈ ಮೌಲ್ಯವನ್ನು ಅನುಸರಿಸಿಕೊಂಡೋಗಬೇಕು ಇದು ಹೆಣ್ಣಿನ ಸಹಜ ಧರ್ಮ ಎಂದು ಹೇಳುವುದರ ಮೂಲಕ ಹೆಣ್ಣಿಗೆ ಮೌಲ್ಯಗಳನ್ನು ಸಹಜಗೊಳಿಸಿರುವುದು ಕಂಡುಬರುತ್ತದೆ. ಒಂದು ವೇಳೆ ಹೆಣ್ಣು ಪುರುಷ ಧರ್ಮವು ಸೃಷ್ಟಿ ಮಾಡಿರುವ ಮೌಲ್ಯಗಳ ವಿರುದ್ಧ ವರ್ತಿಸಿದರೆ ಅಥವಾ ಪ್ರತಿಭಟಿಸಿದರೆ ಆ ಹೆಣ್ಣಿಗೆ ಕೆಲವು ಗುಣಗಳನ್ನು ಆರೋಪಿಸಿರುವುದು ಕಂಡುಬರುತ್ತದೆ. ಇದಕ್ಕೆ ಮನಸ್ಮೃತಿಯಲ್ಲಿ "ಪುರುಷನನ್ನು ಮೋಹಗೊಳಿಸುವುದೇ ಸ್ತ್ರೀಯ ಸ್ವಭಾವ ಆದ್ದರಿಂದಲೇ ವಿವೇಕಿಗಳು ಹೆಣ್ಣಿನ ಜೊತೆಗೆ ಏಕಾಂಗಿಯಾಗಿರುವುದಿಲ್ಲ. ಮೂರ್ಖನಷ್ಟೆ

ಅಲ್ಲ ವಿದ್ವಾಂಸನನ್ನು ಕೂಡ, ಹೆಂಗಸರು ಅಡ್ಡದಾರಿಗಳೆಯಬಲ್ಲರು. ಕಾಮ ಕ್ರೋಧಕರನ್ನಾಗಿ ಮಾಡಬಲ್ಲರು. ಪುರುಷರ ಬಗೆಗಿರುವ ಅವರ ಕಾಮುಕತನದಿಂದ ಅವರ ಚಂಚಲ ಸ್ವಭಾವದಿಂದ, ಸ್ವಭಾವಹೃದಯ ಹೀನತೆಯಿಂದ ಅವರು ತಮ್ಮ ಗಂಡಂದಿರ ಮೇಲೆ ನಿಷ್ಠೆಯಿಲ್ಲದವರಾಗುತ್ತಾರೆ. ಎಷ್ಟು ಸುರಕ್ಷಿತವಾಗಿಟ್ಟರೂ ಅವರು ತಮ್ಮ ಬುದ್ಧಿಯನ್ನು ಬಿಡುವುದಿಲ್ಲ. ಅವರಿಗೆ ಹುಟ್ಟಿನಿಂದಲೇ ಇಂಥ ಸ್ವಭಾವವನ್ನು ಬ್ರಹ್ಮ ನೀಡಿರುವನು. ಹೀಗಾಗಿ ಹೆಂಗಸರನ್ನು ಜತನವಾಗಿಡುವುದನ್ನು ಗಂಡಸರು ಮಾಡಬೇಕು ಎಂದು ಹೇಳಲಾಗಿದೆ.

ಮಲಗುವುದು, ಕುಳಿತುಕೊಳ್ಳುವುದು, ಅಲಂಕಾರಗಳಲ್ಲಿ ಪ್ರೀತಿ, ಕಾಮ, ಕ್ರೋಧ, ಕಪಟ, ದ್ರೋಹ, ದುರ್ವರ್ತನೆ ಮನೋವಿಕಾರಗಳನ್ನು ಸ್ತ್ರೀಯ ಜನ್ಮ ಸಿದ್ಧವುಗಳೆಂದು ಮನು ಹೇಳುತ್ತಾನೆ." (ಉದ್ಧೃತ: ಅಂಬೇಡ್ಕರ, ೧೯೯೯, ಪುಟ.೧,೨) ಹೀಗೆ ಹೆಣ್ಣಿನ ಕುರಿತಾಗಿ ಮಿಥ್‌ಗಳನ್ನು ಹೇಳುತ್ತಾ ಹೋಗಿರುವುದು ಕಂಡುಬರುತ್ತದೆ. ಇವೆಲವು ಪುರುಷನ ರಚಿತ ತಂತ್ರಗಳೆನ್ನುವುದು ಸ್ಪಷ್ಟವಾಗುತ್ತದೆ. ಯಾಕೆಂದರೆ ಹೆಣ್ಣನ್ನು ವಸ್ತುವಾಗಿ ಮತ್ತು ಸ್ವತಂತ್ರವಿಲ್ಲದ ಜೀವಿಯಾಗಿ ನಿರ್ವಚಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇದಕ್ಕೆ ಹಗಲೂ ರಾತ್ರಿ ತಮ್ಮ ಹೆಂಗಸರನ್ನು ಗಂಡಸರು ತಮ್ಮ ಅಧೀನದಲ್ಲಿಟ್ಟುಕೊಳ್ಳಬೇಕು ಅವಳು ಬೋಗಸ್ತಕರಾದರೆ ಅವಳನ್ನು ಹದ್ದು ಬಸ್ತಿನಲ್ಲಿಡಬೇಕು". ಮತ್ತು "ಬಾಲ್ಯದಲ್ಲಿ ಸ್ತ್ರೀಯು ತಂದೆಯ ವಶದಲ್ಲಿ, ಯೌವನದಲ್ಲಿ ಗಂಡನ ಅಧೀನದಲ್ಲಿ, ಗಂಡ ಸತ್ತನಂತರ ಮಕ್ಕಳ ಅಧೀನದಲ್ಲಿ ಬಾಳಬೇಕಲ್ಲದೆ ಹೆಣ್ಣು ಸ್ವತಂತ್ರವಾಗಿ ವ್ಯವಹರಿಸಬಾರದು. (೧೪೮) ಮುಂದುವರೆದು ತಂದೆ ಗಂಡ ಹಾಗೂ ಮಕ್ಕಳನ್ನು ಬಿಟ್ಟು ಒಬ್ಬಳೇ ಇರಬಾರದು, ಇವರನ್ನು ಬಿಟ್ಟು ಒಬ್ಬಳೆ ಇದ್ದರೆ ಸ್ತ್ರೀಯು ತಂದೆಯ ಹಾಗೂ ಗಂಡನ ಮನೆಗಳೆರಡಕ್ಕೆ ಕೆಟ್ಟ ಹೆಸರು ತರುತ್ತಾಳೆ (೧೪೯)". "ಹುಡುಗಿಯಾಗಲಿ ಹೆಂಗಸಾಗಲೀ, ಮುದುಕಿಯಾಗಲಿ, ತನ್ನ ಮನೆಯಲ್ಲಾದರೂ ಏನನ್ನು ಸ್ವತಂತ್ರವಾಗಿ ಮಾಡಕೂಡದು (೯. ೪೭). ತನ್ನ ತಂದೆ, ಗಂಡ ಅಥವಾ ಪುತ್ರರಿಂದ ಅವಳು ಬೇರೆ ಇರಲು ಆಶಿಸಬಾರದು; ಹಾಗೆ ಮಾಡಿದರೆ ಅವಳು ಎರಡು ಕುಟುಂಬಗಳಿಗೆ ತಿರಸ್ಕೃತಳಾಗುತ್ತಾಳೆ. (೫. ೧೪೯) (ಉದ್ಧೃತ: ಅಂಬೇಡ್ಕರ್, ೧೯೯೯, ಪುಟ.೨).

ದೇಹದ ಮತ್ತು ಹೆಣ್ಣಿನ ಕುರಿತಾಗಿ ಚಾಣುಕ್ಯನ ನೀತಿಯಲ್ಲಿ "ನದಿ ಶಶಸ್ತ್ರ, ಸೈನಿಕ, ಪಂಜ ಮತ್ತು ಕೊಂಬಿರುವ ಪ್ರಾಣಿ, ದೊರೆ ಹಾಗೂ ಸ್ತ್ರೀಯನ್ನು ನಂಬಬಾರದು" (ಚಾಣಕ್ಯ ನೀತಿ ೧೨-೧೫)" ಸುಳ್ಳು ಹೇಳುವುದು ಯೋಚಿಸದೆ ಕೆಲಸ ಮಾಡುವುದು, ವಂಚನೆ, ಮೂರ್ಖತನ, ದುರಾಸೆ, ಅಶುದ್ಧತೆ. ನಿಷ್ಕರಣೆ, ಇವು ಸ್ತ್ರೀಯ ಹುಟ್ಟು ಗುಣಗಳೂ (ಚಾಣುಕ್ಯ ನೀತಿ, ಭಾಗ-೨) "ರಾಜಕುಮಾರರಿಂದ ಉತ್ತಮ ಚಾರಿತ್ಯ, ವಿದ್ವಾಂಸರಿಂದ, ಸಿಹಿ ಮಾತು, ಜೂಜಾಡುವವರಿಂದ, ಸುಳ್ಳು ಮತ್ತು ಸ್ತ್ರೀಯಿಂದ ಮೋಸ ಕಲಿಯಬೇಕು" (ಚಾಣಕ್ಯ ನೀತಿ ೨:೮:೧೨) ಅಗ್ನಿ ಜಲ, ಅಜ್ಞಾನಿ, ಸರ್ಪ, ರಾಜಮನೆತನ ಮತ್ತು ಸ್ತ್ರೀ ಇವೆಲ್ಲವು

ವಿನಾಶಕಾರಿಯಾಗಿವೆ. ಅವುಗಳಿಂದ ಸದಾ ಜಾಗೃತವಾಗಿರಬೇಕು, ಚಾಣಕ್ಯ ನೀತಿ "(ಭಾಗ ೨:೧೪:೨)" ಮಿತ್ರ, ಸೇವಕ, ಮತ್ತು ಸ್ತ್ರೀಯು ಮನುಷ್ಯನನ್ನು ತೊರೆಯುತ್ತಾರೆ. ಅವನು ಶ್ರೀಮಂತನಾದ ಮೇಲೆ ಅವನ ಬಳಿ ಪುನಃ ಬರುತ್ತಾರೆ" (ಚಾಣುಕ್ಯ ನೀತಿ ೨:೧೩:೫)" (ಉದ್ಧೃತ ಇಬ್ರಾಹಿಂ ಈಸದ್ ೧೯೯೭, ಪುಟ.೧೬) ಎಂದು ಹೆಣ್ಣಿನ ಗುಣ-ಸ್ವಭಾವಗಳನ್ನು ಹೇಳಿಕೊಂಡು ಬರಲಾಗಿದೆ.

ಹೀಗೆ ಧರ್ಮ, ಧರ್ಮಗ್ರಂಥಗಳಲ್ಲಿ ಭಿನ್ನ ಜೈವಿಕತೆಯನ್ನಾಧರಿಸಿ ಅಪಕಲ್ಪನೆ, ಮಿಥ್‌ಗಳನ್ನು ಆರೋಪಿಸಿರುವುದನ್ನು ನೋಡಿದರೆ ಹೆಣ್ಣನ್ನು ನಿಯಂತ್ರಣದಲ್ಲಿಡುವ ಕ್ರಮಕ್ಕಾಗಿ ಈ ಮೇಲಿನ ಧರ್ಮ, ಧರ್ಮಗ್ರಂಥಗಳಲ್ಲಿನ ವಿಷಯಗಳನ್ನು ಪುರುಷನೇ ಸೃಷ್ಟಿಸಿದ್ದಾನೆ ಎನ್ನುವುದು ಸ್ಪಷ್ಟವಾಗಿದೆ. ಈ ತೆರನಾದ ಸಂಗತಿಗಳು ಹಿಂದೂ ಧರ್ಮದಲ್ಲಿ ಒಂದೇ ಇಲ್ಲ ಇತರೆ ಧರ್ಮ, ಧರ್ಮಗ್ರಂಥಗಳಲ್ಲಿಯೂ ಕಂಡುಬರುತ್ತದೆ. ಇದಕ್ಕೆ ಕ್ರಿಶ್ಚಿಯನ್ನು ಧರ್ಮದಲ್ಲಿ 'ಪಾಪ'ಕ್ಕೆ ಮೂಲ ಕಾರಣ 'ಹೆಣ್ಣು' ಎನ್ನುವಂತ ಸಂಗತಿಗಳನ್ನು ಬಿತ್ತುವುದರ ಮೂಲಕ ಹೆಣ್ಣನ್ನು ಪಾಪಕ್ಕೆ ಮೂಲಕಾರಣರನ್ನಾಗಿ ಮಾಡಲಾಗಿದೆ. ಇದಕ್ಕೆ "ಸೈತಾನನ ಮಾತಿಗೆ ಮರುಳಾಗಿ ನಿಷೇಧಿಸಲ್ಪಟಿದ ಮರದ ಹಣ್ಣನ್ನು ತಿಂದು ಅದನ್ನು ತನ್ನ ಗಂಡನಿಗೂ ತಿನ್ನಲು ಕೊಡುತ್ತಾಳೆ. ಆಕೆಯ ಮಾತಿಗೆ ಮರುಳಾಗಿ ಆಕೆಯ ಗಂಡ ತಿನ್ನುತ್ತಾನೆ. ತಿನ್ನಬಾರದ್ದನ್ನು ತಿಂದು ಪಾಪಕ್ಕೆ ಬೀಳುತ್ತಾನೆ. ಅಪರಿಚಿತ ಸೈತಾನನೊಂದಿಗೆ ಮಾತುಕತೆ ನಡೆಸಿದ ಪರಿಣಾಮದಿಂದಾಗಿ ತಿಂದರೆ ಏನಾಗುತ್ತದೆ ಎಂಬ ಕುತೂಹಲದಿಂದ ಹಣ್ಣನ್ನು ತಿಂದ್ದದರಿಂದ 'ಆಡಮ್' ಮತ್ತು 'ಈವ್' ಇಬ್ಬರು ಪಾಪ ಕಟ್ಟಿಕೊಂಡರು ಅದು ಪ್ರಾರಂಭವಾದದ್ದು 'ಈವ್'ಳಿಂದಲೆ ಆದ್ದರಿಂದ ಸ್ತ್ರೀಯನ್ನು 'ಪಾಪದ ಮೂಲವೆಂದು ಪರಿಗಣಿಸಿದೆ". (ಆದಿ ೨೫-೨೪ ಉದ್ಧೃತ ಹಾಲತಿ ಸೋಮೇಶ್ವರ ೨೦೦೭, ಪು.೧೨೫) ಎಂದು ದೊರೆಯುವಲ್ಲಿನ ಮಾಹಿತಿಂದ ಸ್ಪಷ್ಟವಾಗುತ್ತದೆ, ಹೆಣ್ಣು ಪಾಪಕ್ಕೆ ಮೂಲವೆನ್ನುವುದು ಧರ್ಮಗ್ರಂಥಗಳ ಸಂದೇಶದಿಂದಾಗಿಯೇ ಮತ್ತು ಇದು ಹಾಗೇ ಉಳಿದಿಲ್ಲ. ಅದು ಆಚರಣೆಯನ್ನುವ ಕ್ರೀಯಾತ್ಮಕ ರೂಪದಲ್ಲಿ ಹೆಣ್ಣನ್ನು ಬೈಯ್ಯುವ, ಬೈಗುಳಂತಹ ಸಂದರ್ಭಗಳಲ್ಲಿ ಹೆಣ್ಣನ್ನು ಪಾಪದವಳೆಂದು ನಿಂದಿಸುವಂತ ಸಂಗತಿಳು ಇವೆ.

ಇಸ್ಲಾಂ ಧರ್ಮದಲ್ಲಿ ಹೆಣ್ಣಿನ ಗುಣ ಸ್ವಭಾವ ನಡವಳಿಕೆ, ನಡತೆಗಳ ಕುರಿತಾಗಿ ನೀತಿ ನಿರ್ದೇಶನಗಳೂ ನೋಡಿದರೆ ಹೆಣ್ಣಿಗೆ ಪ್ರತ್ಯೇಕತೆ ಸೂಚಿಸಿರುವುದು ಕಂಡುಬರುತ್ತದೆ. ಮತ್ತು ಈ ಪ್ರತ್ಯೇಕತೆಯನ್ನೆ ಅನುಸರಿಸುವಂತೆ ಉಪದೇಶಗಳಲ್ಲಿ ಹೇಳಿರುವುದು ದೊರೆಯುತ್ತದೆ. "ಕುರಾನ್ ಮೂರನೆ ಭಾಗದಲ್ಲಿ ಸೂಕಿ: ಅನ್ನೂರ್‌ನಲ್ಲಿ ಹೆಣ್ಣಿಗಾಗಿ ಈ ಕೆಳಕಂಡಂತೆ ಸಾಮಾಜಿಕ ನಿಯಮಗಳು ದೊರೆಯುತ್ತವೆ. ಗೌರವ ಗಾಂಭಿರ್ಯದೊಂದಿಗೆ ಮನೆಯಲ್ಲಿ ಕುಳಿತಿರಿ, ಸಲ್ಲದ ಶೃಂಗಾರಗಳನ್ನು ಮಾಡಿ ಬೀದಿಗಿಳಿಯಬೇಡಿ, ಪರಪುರುಷನ ಜೊತೆ,

ಮಾತನಾಡಬೇಡಿ, ಒಂದು ವೇಳೆ, ಪರ ಪುರುಷನ ಜೊತೆ ಮಾತನಾಡಬೇಕಾಗಿ ಬಂದರೆ ಆತನ ಮನದಲ್ಲಿ ಸಲ್ಲದ ಆಸೆಗಳು ಅಂಕುರಿಸುವ ರೀತಿಯಲ್ಲಿ, ಮೋಹಕ ಧ್ವನಿಯಲ್ಲಿ ಮಾತನಾಡಬೇಡಿ ಎಂದು ಪ್ರವಾದಿ ಪತ್ನಿಯರಿಗೆ ಆಜ್ಞಾಪಿಸಲಾಯಿತು". ಆಯತ್ ೩೨-೩೩ (ಉದ್ಧೃತ ಹಾಲತಿ ಸೋಮೇಶ್ವರ ೨೦೦೭ ಪುಟ ೧೦೭). ಹಾಗೆ ಹೆಣ್ಣಿಗೆ "ಮನೆಯಿಂದ ಹೊರಗಡೆ ಹೋಗಬೇಕಾದಾಗ ಸರಿಯಾಗಿ ಮುಸುಕು ಹಾಕಿಕೊಂಡು ಹೋಗಬೇಕೆಂದು ಎಲ್ಲಾ ಮುಸ್ಲಿಂ, ಮಹಿಳೆಯರಿಗೆ ಆಜ್ಞೆ ಕೊಡಲಾಯಿತು. (ಆಯತ್ ೫೯)". (ಉದ್ಧೃತ ಹಾಲತಿ ಸೋಮೇಶ್ವರ ೨೦೦೭, ಪುಟ.೧೦೭) ಎಂದು ಹೆಣ್ಣಿನ ನಡತೆಗೆ ಹಾಗೂ ವಸ್ತ್ರ ಸಂಹಿತೆಯನ್ನು ಹೇರಿರುವುದು ಮತ್ತು ಈ ತೆರನಾದ ಮೌಲ್ಯಗಳನ್ನು ಹೆಣ್ಣೆ ಪಾಲಿಸಬೇಕೆಂದು ಒತ್ತಡ ಹಾಕಿರುವುದು. ಧರ್ಮಗ್ರಂಥಗಳ ಮುಖಾಂತರ ಹೆಣ್ಣಿಗೆ ಮಾಡಿರುವ ಅನ್ಯಾಯವಾಗಿದೆ. ಏಕೆಂದರೆ ಈ ತೆರನಾದ ವಸ್ತ್ರ ಸಂಹಿತೆ ಮೌಲ್ಯಗಳ ಪರಿಪಾಲನೆ, ಒತ್ತಾಯ ಹೇರಿರುವ ಸಂಗತಿಗಳು ಗುಂಡಿಗೆ ಕಂಡುಬರುವುದಿಲ್ಲ. ಇದಕ್ಕೆ "ಪುರುಷ ದೌರ್ಬಲ್ಯವನ್ನು ತಡೆಯಲು ಹೆಣ್ಣಿಗೆ ಕಟ್ಟು ಪಾಡುಗಳನ್ನು ರೂಪಿಸಿರುವ ಧರ್ಮ ಧರ್ಮವೂ ನಿಷೇಧಗಳನ್ನು ಹೇರಿರುವುದರಿಂದ ತಿಳಿದುಬರುತ್ತದೆ. ಪುರುಷರು ಪರಸ್ತ್ರೀಯತ್ತ ದುರ್ನೋಟ ಬೀರುವುದನ್ನು ಮತ್ತು ಸ್ತ್ರೀಯೂ ತನ್ನ ಪತಿಯ ಆಪ್ತ ಬಂಧುಗಳ ಹೊರತು, ಇತರರ ಮುಂದೆ ತನ್ನ ಸೌಂದರ್ಯ ಪ್ರದರ್ಶಿಸುವುದನ್ನು, ತನ್ನ ಸ್ವರ ಮಾಧುರ್ಯದಿಂದ ಪರಪುರುಷರನ್ನು ಆಕರ್ಷಿಸುವುದು, ಹಾಗೂ ಕಾಮ ಪ್ರಚೋದಕ ಗಾಯನ, ಸಂಗೀತಗಳನ್ನು ಇಸ್ಲಾಂ ನಿಷೇಧಿಸಿದೆ. ಸ್ತ್ರೀಯೂ ಪರ ಪುರುಷರೆದುರು ನೃತ್ಯ ಮಾಡುವಂತಿಲ್ಲ. ಕೈ ಬಳೆ, ಕಾಲ್ಗೆಜ್ಜೆಗಳಂತಹ ಆಭರಣಗಳಿಂದ ಸದ್ದು ಮಾಡಿ ನಡೆಯುವುದನ್ನು, ಸುಗಂಧ ದ್ರವ್ಯಗಳನ್ನು ಲೇಪಿಸಿಕೊಂಡು ಮಾರ್ಗದಲ್ಲಿ ನಡೆದಾಡುವುದನ್ನು ಮತ್ತು ಪುರುಷ ಸಮೂಹದ ಮಧ್ಯೆ ಹೋಗುವುದನ್ನು ಇಸ್ಲಾಂ ಅನುಮತಿಸಿಲ್ಲ. ಅಲ್ಲದೆ ಪುರುಷರಲ್ಲಿ ಚಿತ್ತ ಚಾಂಚಲ್ಯವನ್ನುಂಟು ಮಾಡುವ ಸ್ತ್ರೀಯರ ಅಂಗಗಳನ್ನು ಮುಚ್ಚಲೇಬೇಕೆಂದು ಕಡ್ಡಾಯಗೊಳಿಸಿದೆ". (ಉದ್ಧೃತ ಹಾಲತಿ ಸೋಮೇಶ್ವರ ೨೦೦೭ ಪುಟ ೧೧೪)

ಬೌದ್ಧ ಧರ್ಮದಲ್ಲೂ ಹೆಣ್ಣಿನ ಕುರಿತು ಕೆಲವು ಕಲ್ಪಿತ ಕಥೆಗಳಿವೆ. ಬುದ್ಧನು ತನ್ನ ಶಿಷ್ಯನಾದ ಆನಂದನಿಗೆ ಹೇಳಿದನೆನ್ನಲಾದ ನುಡಿಗಳು ಹೀಗಿವೆ. "ಹೆಂಗಸಿನತ್ತ ನೋಡಬೇಡ ಅವರ ಜೊತೆ ಮಾತನಾಡಬೇಡ, ಅವರು ಶೀಘ್ರಕೋಪಿಗಳು ಅವರಲ್ಲಿ ರಾಗೋದ್ರೇಕವು ತೀವ್ರವಾಗಿರುತ್ತವೆ. ಅವರು ಅಸೂಯೆಪರರು, ಮುರ್ಖರೂ, ಆದ್ದರಿಂದ ಸಾರ್ವಜನಿಕ ಸಭೆಗಳಲ್ಲಿ ಸ್ತ್ರೀಯರಿಗೆ ಸ್ಥಾನವಿಲ್ಲ ಅವರು ವ್ಯವಹಾರ ನಡೆಸಲಾರರು ಯಾವುದೇ ವೃತ್ತಿಯಿಂದ ತಮ್ಮ ಜೀವನ ನಿರ್ವಹಣೆ ಮಾಡಲಾರರು". (ಉದ್ಧೃತ ಇಬ್ರಾಹಿಂ ಈಸದ್) ಎಂದು ಹೆಣ್ಣಿನ ಕುರಿತಾಗಿ ತಪ್ಪು ಗ್ರಹಿಕೆಗಳನ್ನು ಸಮಾಜಕ್ಕೆ ಬಿತ್ತರಿಸುವುದು ಕಂಡುಬರುತ್ತದೆ.

ಜೊತೆಗೆ ಹೆಣ್ಣಿಗೆ ನೀತಿ ಭೋದನೆ ಎನ್ನುವ ಅಂಶಗಳಲ್ಲಿ ಪುರುಷ ಪೂರಕವಾಗಿ ಹೆಣ್ಣು ವರ್ತಿಸಬೇಕೆನ್ನುವ ಮತ್ತು ಗುಣಗಳನ್ನು, ನೀತಿ ನಿರ್ದೇಶನಗಳನ್ನು ಮಾಡಿರುವುದು ಕಂಡುಬರುತ್ತದೆ. "ಧಾರ್ಮಿಕ, ಭಕ್ತಿ, ಲಜ್ಜೆಯ ಪ್ರಜ್ಞೆ, ಮತ್ತು ಭಯ ಕೋಪ, ದ್ವೇಷಗಳಿಗೆ ಎಡೆಗೊಡದೆ ಇರುವುದು ಸಂಶಯ ಸ್ವಭಾವವಾಗಿರದೆ ಉದಾರ ಹೃದಯಯಾಗಿರುವುದು, ಶುದ್ದ ಚಾರಿತ್ರ ಗುಣವಂತಳು, ನೀತಿವಂತಳ್ಳಾಗಿದ್ದು, ಜ್ಞಾನಿಯಾಗಿ ಸದೃಡ ಮತ್ತು ಉತ್ಸಾಹ ಮಾನಸಿಕ ಜಾಗೃತಿ ಹಾಗೂ ಚುರಕ ಬುದ್ಧಿವಂತಿಕೆಯಾಗಿರಬೇಕೆಂದು". (ಉದ್ಧೃತ ಮಧು ವೆಂಕಟಾರೆಡ್ಡಿ, ೧೯೯೬, ಪುಟ.೨೧) ಎಂದು ಹೆಣ್ಣನ್ನು ಪುರುಷನಿಗೆ ಪೂರಕವಾಗಿ ಧರ್ಮ, ಧರ್ಮಗ್ರಂಥಗಳು ಉಪದೇಶ ನೀಡಿರುವುದು ಕಂಡುಬರುತ್ತದೆ.

೩. ಆಧ್ಯಾತ್ಮಿಕ

- **ಮೋಕ್ಷ**

ಹೆಣ್ಣಿನ ಜೈವಿಕತೆಯನ್ನು ಆಧರಿಸಿ ಧರ್ಮ, ಧರ್ಮಗ್ರಂಥಗಳು ಹೆಣ್ಣಿಗೆ ಮೋಕ್ಷ ಸಿದ್ಧಿಸದು ಎಂದು ಹೇಳಿರುವುದು ದೊರೆಯುತ್ತದೆ. ಇದಕ್ಕೆ ಜೈನ ಧರ್ಮದಲ್ಲಿ ಬರುವ ಪಂಥಗಳಾದ ಶ್ವೇತಾಂಬರ ಮತ್ತು ದಿಗಂಬರ ಪಂಥಗಳಲ್ಲಿ ಹೆಣ್ಣಿನ ಹುಟ್ಟಿನ ಕುರಿತಾಗಿ ಹೊಂದಿರುವ ಮನೋಭಾವನೆಯಲ್ಲಿ ಸಂಗತಿ ನೋಡಿದರೆ ಈ ಧರ್ಮದ ದಿಗಂಬರ ಪಂಥದಲ್ಲಿ ಹೆಣ್ಣು 'ಮೋಕ್ಷ' ಪಡೆಯಬೇಕಾದರೆ ಪುರುಷರಾಗಿ ಹುಟ್ಟಬೇಕು ಅಂದಾಗ ಮಾತ್ರ ಹೆಣ್ಣಿಗೆ 'ಮೋಕ್ಷ' ಸಾಧ್ಯ ಇಲ್ಲದಿದ್ದರೆ ಮೋಕ್ಷ ಸಾಧ್ಯವಿಲ್ಲ ಎನ್ನುವುದು ದಿಗಂಬರ ಪಂಥದ ವಾದವಾಗಿದೆ. ಆದರೆ ಶ್ವೇತಾಂಬರರಲ್ಲಿ ಇದಕ್ಕೆ ವೀರೋಧವಿದೆ. ದಿಗಂಬರರಲ್ಲಿ ಮುನಿಗಳು ಬಟ್ಟೆ ಹಾಕಬಾರದು ಎಂದು ಹೇಳಿದರೆ ಶ್ವೇತಾಂಬರರು ಬಿಳಿ ಬಟ್ಟೆ ಹಾಕಬೇಕೆಂದು ವಾಧಿಸುತ್ತಾರೆ. ಹೀಗೆ ಹೆಣ್ಣಿನ, ಹೆಣ್ಣಿನ ದೇಹದ ಕುರಿತಾಗಿ ಹೊಂದಿರುವ ಮನೋಭಾವನೆಯಲ್ಲಿ ಹೆಣ್ಣಿನ ಸ್ವೀಕರಣೆ, ನಿರಾಕರಣೆಗಳು ಹೆಣ್ಣಿನ ಕನಿಷ್ಠತೆಯ ಅಧೀನತೆಯ ಚಿತ್ರಣವನ್ನು ಅನಾವರಣಗೊಳಿಸುತ್ತವೆ. ಯಾಕೆಂದರೆ ಭೂಮಿ ಮೇಲೆ ಹುಟ್ಟಿದ 'ಜೀವಿಗೆ' ಅಥವಾ 'ವ್ಯಕ್ತಿಗೆ' ಯಾವುದೇ 'ಸಂಹಿತೆ'ಗಳಿಲ್ಲ. ಅದರಲ್ಲಿ ಸ್ವತಂತ್ರ ಆದರೆ ಇದನ್ನು ಹೆಣ್ಣಿಗೆ ಮಾತ್ರ ಆರೋಪಿಸಿರುವುದು ಕಂಡುಬರುತ್ತದೆ.

ಅದೇ ಮಾನವರ ವ್ಯಕ್ತಿಯಲ್ಲಿ ಒಬ್ಬರಾದ ಪುರುಷನಿಗೆ ಈತರನಾದ ಕಟ್ಟುಪಾಡುಗಳೂ ಮೋಕ್ಷ ಸಾಧನೆಗೆ ಅಡ್ಡಿಯಾಗುವುದಿಲ್ಲ ಎನ್ನುವ ಚಿಂತನೆಯೂ ಪುರುಷ ನಿಷ್ಠವಾದುದ್ದಾಗಿದೆ. ಹೆಣ್ಣಿಗೆ ಮೋಕ್ಷ ಸಾಧ್ಯವಿಲ್ಲ ಎನ್ನುವಂತ ವಿಚಾರವನ್ನು ಪರಿಶೀಲಿಸಿದರೆ ಹೆಣ್ಣಿನ ದೇಹಕ್ಕೆ ಮಾತ್ರ ಆರೋಪಿಸಿರುವುದು ಕಂಡುಬರುತ್ತದೆ. ಇದು ಭಿನ್ನ ಜೈವಿಕತೆಯನ್ನಾಧರಿಸಿ ಲಿಂಗ ಭೇಧವನ್ನುಂಟು ಮಾಡಿರುವುದು ಕಂಡುಬರುತ್ತದೆ. ಈ ಕುರಿತಾಗಿ "ಜೈನ ಸಾಹಿತ್ಯದಲ್ಲಿ

ಸ್ತ್ರೀಯನ್ನು ಕುರಿತು ಅಪಾರ್ಥ ನೀಡುವ ಸನ್ಯಾಸಿಗಳ ಉಲ್ಲೇಖಗಳು ಇವೆ. ಉದಾಹರಣೆಗೆ ಸ್ತ್ರೀಯರನ್ನು ನಾರಿ, ಮಹಿಳಾ, ಅಂಗನಾ, ವನಿತಾ, ರಮಾ ಎಂದು ಕರೆಯುತ್ತಾರೆ. ಇವುಗಳನ್ನು ಕರೆಯುವುದಕ್ಕೆ ಶಬ್ದೋತ್ಪತ್ತಿಯ ಸಹಾಯದಿಂದ ನಾರಿ (ನಾ-ನರಿ) ಅಂದರೆ ಅವನಿಗಿಂತ ಹೆಚ್ಚಿನ ವೈರಿ ಪುರುಷನಗಿಲ್ಲವೆಂದು ಅಂಗನಾ ಅಂದರೆ ಪುರುಷನ ದೇಹಕ್ಕೆ ಆಸೆ ಪಡುವವಳಾದ್ದರಿಂದ ಆಕೆ ಅಂಗನಾ, ಆಕೆ 'ರಮಾ' ಎಂದು ಶಬ್ದಗಳಿಗೆ ತಪ್ಪು ಅರ್ಥ ನೀಡಿ ಸ್ತ್ರೀಯರು ಪುರುಷನ ಅಧಃಪತನಕ್ಕೆ ಕಾರಣವೆಂದು ಹೇಳುತ್ತಾರೆ". (ಉದ್ಧೃತ ಷಣ್ಮುಖಯ್ಯ ಅಕ್ಕೂರ ಮಠ ೧೯೯೪, ಪುಟ.೧೨೫) ಎಂದು ದೊರೆಯುವ ಮಾಹಿತಿಯಿಂದ ಹೆಣ್ಣಿನ ಬಗ್ಗೆ ಅಪಕಲ್ಪನೆಗಳನ್ನು ಹುಟ್ಟುಹಾಕಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಹೆಣ್ಣಿನ ಸಹಜ ದೈಹಿಕ ರಚನೆಗೆ ವಿಶೇಷವಾಗಿ ಅರ್ಥ ಕಲ್ಪಿಸಿಕೊಂಡು ಹೆಣ್ಣನ್ನು ನಿರಾಕರಿಸುವ ತಂತ್ರ ಹೂಡಿರುವುದು ಇದೆ. ಹಾಗೆಯೇ ಜೈನ ಧರ್ಮದ ಇನ್ನೊಂದು ಪಂಥವಾದ ದಿಗಂಬರ ಪಂಥದಲ್ಲಿ ಹೆಣ್ಣು ಸ್ತ್ರೀ ದೇಹವನ್ನು ಪಡೆದಿದ್ದರಿಂದ ಮತ್ತು ಕೆಲವು ನೈಸರ್ಗಿಕ ಧರ್ಮದಿಂದಾಗಿ ಹೆಣ್ಣು ಸಂಪೂರ್ಣ ದಿಗಂಬರಾಚಾರವನ್ನು ನಡೆಸಲಾರಳು. ಈ ಕಾರಣಕ್ಕಾಗಿ ಸ್ತ್ರೀಯರಿಗೆ ಮೋಕ್ಷ ಸಾಧ್ಯವಾಗದೆಂದು ಹೇಳಲಾಗಿದೆ. ಅದೇ ಇನ್ನೊಂದು ಪಂಥವಾದ ಶ್ವೇತಾಂಬರರ ಪ್ರಕಾರ ಹೆಣ್ಣಿಗೆ ಮೋಕ್ಷ ಸಿದ್ಧಿಸಿದೆ ಎನ್ನುವ ವಿಚಾರ ಹೇಳಿರುವುದು ಕಂಡುಬರುತ್ತದೆ. ಇದಕ್ಕೆ "ಹೆಣ್ಣು ಸ್ವಭಾವದಿಂದ ಊರ್ಧ್ವಾಗಾಮಿಯಾದ ಜೀವಿ ತನ್ನ ಸಂಸಾರವಸ್ಥೆಯಿಂದ ಮುಕ್ತಿ ಪಂಥವನ್ನು ಮುಟ್ಟಬೇಕಾದರೆ ಅದು ಹದಿನಾಲ್ಕು ಗುಣಸ್ಥಾನಗಳೆಂಬ ಮೆಟ್ಟಿಲುಗಳನ್ನು ಏರಿದಾಟಬೇಕು" ಎಂದು ಹೇಳಲಾಗಿದೆ. ಅದೇ ಪುರುಷನಿಗೆ ಈ ತೆರನಾದ ನಿರ್ಬಂಧಗಳಿಲ್ಲ.

ಬೌದ್ಧ ಧರ್ಮದಲ್ಲಿ ಬುದ್ದನು ತನ್ನ ತಾಯಿಯೂ ಬೌದ್ದ ಬಿಕ್ಷುಣಿಯಾಗಿ ತನ್ನನ್ನು ಸ್ವೀಕರಿಸಿಕೊಳ್ಳುವಂತೆ ಮನವಿ ಇಟ್ಟಾಗ ಮೊದಲು ನಿರಾಕರಿಸುತ್ತಾನೆ. ಆನಂತರ ಸ್ವೀಕರಿಸುತ್ತಾನೆ. ಈ ಬಗೆಯ ಸಂಗತಿಯಿಂದ ಬೌದ್ಧ ಧರ್ಮವು ಹೆಣ್ಣನ್ನು ಧರ್ಮಕ್ಕೆ ಸೇರ್ಪಡೆಯ ಕುರಿತು ಹೊಂದಿರುವ ಮನೋಭಾವನೆ ತಿಳಿಯುತ್ತದೆ. ಹಾಗೆಯೇ ಹೆಣ್ಣು ಬೌದ್ಧ ಧರ್ಮವನ್ನು ಸ್ವೀಕರಿಸಬೇಕಾದರೆ ಕೆಲವು ವಿಧಿ-ವಿಧಾನಗಳನ್ನು ಅನುಸರಿಸಬೇಕೆಂದು ಹೇಳಿರುವುದು ಕಂಡುಬರುತ್ತದೆ. ಅವುಗಳು ಮೋಕ್ಷ, ದೀಕ್ಷೆ ಯನ್ನು ನೀಡುವಾಗಲು ಪುರುಷನ ಅದೀನದಲ್ಲಿ ಇದ್ದು, ಮೋಕ್ಷ, ದೀಕ್ಷೆಯನ್ನು ಪಡೆಯಬಹುದೆಂದು ತಿಳಿಸಿರುವುದು ಕಂಡುಬರುತ್ತದೆ.

೧. "ಉಚ್ಚ ಮಟ್ಟದ ಧೀಕ್ಷೆಯನ್ನು ಬಹು ಹಿಂದೆಯೇ ಪಡೆದ ಭಿಕ್ಷುಣಿಯಾದರು ಅದೇ ಆಗ ದೀಕ್ಷೆ ಪಡೆದ ಭಿಕ್ಷುನೊಬ್ಬನ್ನು ಕಂಡಾಗಿ ಎದ್ದು ನಿಂತು ನಮಸ್ಕರಿಸಿ. ತಾನು ಅವನಿಗೆ ಮಾಡಬೇಕಾದ ಕರ್ತವ್ಯಗಳನ್ನು ಮಾಡಬೇಕು.

೨. ಭಿಕ್ಷುಗಳು ಇದ್ದ ಕಡೆಗೆ ಭಿಕ್ಷುಣಿಯರು ಮಳೆಗಾಲದಲ್ಲಿ ವಾಸಿಸಬಾರರು.

೩. ಪ್ರತಿ ೧೫ ದಿನಗಳಿಗೊಮ್ಮೆ ಭಿಕ್ಷುಣಿಯರು ತಮಗೆ ಭಿಕ್ಷುವಿನಿಂದ ಉಪದೇಶ ಪಡೆಯಲು 'ಉಪೋಸಥ' ಸಭೆಯ ಸಮಯ ಯಾವಾಗೆಂದು ಕೇಳಿ ತಿಳಿಯಬೇಕು.

೪. ಮನೋವಚನ ಕಾರ್ಯಗಳಿಂದ ಏನಾದರೂ ಅಪರಾಧವಾಗಿಯೇ ಎಂದು ವಿಚಾರಿಸಿ ತಿಳಿಯುವ 'ಪವಾರಣಾ' ಕಾರ್ಯಕ್ರಮವೂ ಭಿಕ್ಷುವಿನ ಸಮ್ಮುಖದಲ್ಲಿ ಭಿಕ್ಷುವಿನಿಂದ ನಡೆಯಲ್ಪಡಬೇಕು.

೫. ಗಂಭೀರ ಅಪರಾಧವನ್ನು ಮಾಡಿದ ಭಿಕ್ಷುನಿಯು ಭಿಕ್ಷು ಹಾಗೂ ಭಿಕ್ಷುನಿಯರ ಸಂಘದ ಎದುರ 'ಮನತ್ತ್' ಎಂಬ ಶಿಸ್ತಿನ ಕ್ರಮಕ್ಕೆ ಬೇಕು ಇದು ಹದಿನೈದು ದಿನಗಳ ಕಾಲ ಜಾರಿಯಲ್ಲಿರುತ್ತದೆ. ಇದು ಒಂದು ಶಿಸ್ತಿನ ಕ್ರಮ.

೬. ಈ ಐದು ನಿಯಮಗಳು ಎರಡು ವರ್ಷ ತರಬೇತಿ ಪಡೆದು ಭಿಕ್ಷುನಿಯು ಭಿಕ್ಷುಗಳ ಹಾಗೂ ಭಿಕ್ಷುನಿಯರ ಸಂಘದಿಂದ ಉನ್ನತ ದೀಕ್ಷೆ ಪಡೆಯಬೇಕು.

೭. ಯಾವ ಕಾರಣದಿಂದಲೂ ಭಿಕ್ಷುನಿಯೊಬ್ಬಳು. ಭಿಕ್ಷುಕನನ್ನು ನಿಂದಿಸಕೂಡದು.

೮. ಭಿಕ್ಷುನಿಯರು ಭಿಕ್ಷುಗಳಿಗೆ ದೀಕ್ಷೆ ಕೊಡಬಾರದು. ಆದರೆ ಭಿಕ್ಷುಗಳಿಂದ ಭಿಕ್ಷುಣಿಯರು ದೀಕ್ಷೆ ಪಡೆಯಬಹುದು, ಹೀಗೆ ಸಂಘವನ್ನು ಆರಂಭಿಸಲು ಅನುಮತಿ ಪಡೆದು ಸಾಧಕರಾದ ಬಳಿಕ ಅವರಲ್ಲಿ ಹೊಸ ಶಕ್ತಿ ಅನುಭವವನ್ನು ಹಾಡಿಕೊಂಡರು ಅದೇ 'ಥೇರಿಗಾಥ' ಎಂಬ ಗೀತೆ ಗುಚ್ಚವಾಗಿ ಸಂಕಲಿತವಾದವು". (ಉದ್ಧೃತ ಮಧು ವೆಂಕಟರೆಡ್ಡಿ ೧೯೯೭, ಪುಟ.೨೪-೨೫).

ಈ ಮೇಲಿನ ಅಂಶಗಳಲ್ಲಿ ಭಿಕ್ಷು, ಎನ್ನುವ ಪುರುಷ ಮೊದಲು ಭಿಕ್ಷುಣಿ ಎನ್ನುವ ಹೆಣ್ಣು ನಂತರ ಹಾಗೆ ಹೆಣ್ಣನ್ನೆನ್ನುವ ಕಾರಣ ಗೋಚರವಾಗುವ ಸಂಗತಿಗಳನ್ನು ಪರೋಕ್ಷ ನೆಲೆಯಲ್ಲಿ ಹೇಳಿರುವ ಸಂಗತಿ ಕಂಡುಬರುತ್ತದೆ. ಹಾಗೆಯೇ ಎಲ್ಲವೂ ಪುರುಷನಿಂದಲೇ ಜಾರಿ, ಪುರುಷನೇ ಮೊದಲು ಎನ್ನುವಂತ ಸಂಗತಿಗಳಲ್ಲಿ ಭಿನ್ನ ಜೈವಿಕತೆಯನ್ನಾಧರಿಸಿ ವಿಭಾಗವನ್ನು ಮಾಡಿರುವುದು ಧರ್ಮಗ್ರಂಥಗಳಿಂದಲೇ ಎನ್ನುವುದು ಸ್ಪಷ್ಟವಾಗುತ್ತದೆ.

ಧರ್ಮಗಳಲ್ಲಿನ ನಂಬಿಕೆಗಳು ಸಂಪ್ರದಾಯ ಆಚರಣೆಗಳ ಮೂಲಕ ಬದ್ಧಗೊಳಿಸಿ ಅದನ್ನು ಆಚರಣೆಯ ರೂಪದಲ್ಲಿ ತರಲಾಗಿದೆ. ಈ ಮೇಲಿನ ಹೆಣ್ಣಿನ ಜೈವಿಕತೆಯನ್ನಾಧರಿಸಿ ಸೃಷ್ಟಿ ಮಾಡಿರುವ ಧರ್ಮ, ಧರ್ಮಗ್ರಂಥಗಳಲ್ಲಿನ ನಂಬಿಕೆಗಳು ಪುರುಷ ಪರವಾಗಿ ನಿರ್ವಚನವಾಗಿ ಕಂಡುಬರುತ್ತವೆ. ಹಾಗೆಯೇ ಭಿನ್ನ ಜೈವಿಕತೆಯನ್ನಾಧರಿಸಿ ತಾರತಮ್ಯವನ್ನು ಸೃಷ್ಟಿಮಾಡಿರುವುದು ಕಂಡುಬರುತ್ತದೆ.

ಈ ಮೇಲಿನ ವಿಶ್ಲೇಷಣೆಗೊಳಪಡಿಸಿದ ಸಂಗತಿಗಳಿಂದ ತಿಳಿದು ಬರುವುದೇನೆಂದರೆ ಧರ್ಮಪುರುಷ ಕೇಂದ್ರಿತವಾದವುಗಳು, ಪುರುಷ ಪ್ರಧಾನವಾದವುಗಳು, ಪುರುಷ ಪರವಾದವುಗಳು ಎನ್ನುವುದು ತಿಳಿದುಬರುತ್ತದೆ. ಇದಕ್ಕೆ ಈ ಕೆಲವು ಅಂಶಗಳನ್ನು ಗುರುತಿಸಬಹುದಾಗಿದೆ.

ಸ್ತ್ರೀ ದೇಹದ ಮೇಲೆ ಪುರುಷ ತನ್ನ ಲೈಂಗಿಕನದ ಪಾರಮ್ಯಸ್ಥಾಪಿಸುವುದಕ್ಕಾಗಿಯೇ ಧಾರ್ಮಿಕ ಮೌಲ್ಯಗಳನ್ನು ಹೇರಿರುವುದು. ಪುರುಷ ನಾಗರೀಕತೆಯು ತನಗೆ ಬೇಕಾದ ರೀತಿಯಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಸ್ಥಾಪಿಸಿಕೊಂಡು ಅದರಲ್ಲಿ ಮಹಿಳೆಯ ದೇಹ ಮತ್ತು ಮನಸ್ಸನ್ನು ನಿರ್ಭಂಧಿಸಿರುವುದುದು. ಧರ್ಮಗಳಲ್ಲಿನ ಮೌಲ್ಯಗಳೆಲ್ಲವನ್ನು ಪುರುಷ ಪ್ರಧಾನ ಸಮಾಜದ ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಿ ಹೆಣ್ಣನ್ನು ಸಂತಾನಕ್ಕಾಗಿ ಬಳಸಿಕೊಳ್ಳಲಾಗಿದುದು.

ಹೀಗೆ ಅಂಶಗಳನ್ನು ಪಟ್ಟಿ ಮಾಡುತ್ತ ಹೋಗಬಹುದು ಮತ್ತು ದೈವ ಪುರುಷರು, ಪವಾಡ ವೀರರು ಧರ್ಮ ಸಂಸ್ಥಾಪಕರು. ಪುರುಷರೇ ಇವರೆಲ್ಲರೂ ದೈವನ ಅನುಗ್ರಹದಿಂದ ಹುಟ್ಟಿ ಬಂದವರು, ಎಂದು ಸಾರಿಹೇಳುವ ಧರ್ಮಗ್ರಂಥಗಳು ಪುರುಷನ ಶ್ರೇಷ್ಠತೆಯನ್ನು ಸಾರುತ್ತವೆ. ಇದಕ್ಕೆ ಆಧಾರವೆನ್ನುವಂತೆ "ವರ್ಣಾಶ್ರಮ ಪದ್ಧತಿಯ ಮೂಲಕ ಯಾರೊಬ್ಬರೂ ಯೋನಿ ಮೂಲಕ ಜನಿಸಿದವರೇ ಅಲ್ಲ, ಅವರೆಲ್ಲರೂ ಪುರಾಣ ಧರ್ಮಗ್ರಂಥಗಳ ಪ್ರಕಾರ ತಲೆ, ತೋಳು, ತೊಡೆ, ಪಾದಗಳಿಂದ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಜನಿಸಿದರೆಂದು ಹೇಳಲಾಗಿದೆ. ಅದು ಬ್ರಹ್ಮನ ದೇಹದಿಂದ ಈ ನಾಲ್ಕು ಚತುರ್ವಣಗಳು ಹುಟ್ಟಿದವೆಂಬುದು ಪುರುಷಾಧಿಪತ್ಯದ ರೀತಿಗೆ ಸೂಕ್ತ ಉದಾಹರಣೆಯಾಗಿದೆ. ಇಷ್ಟೆ ಅಲ್ಲದೆ ದೇವರುಗಳ ಬೆವರಿನಿಂದ, ಕೊಳವೆಯಿಂದ ಕೂಡ ಕೆಲವರು ಜನಿಸಿದ್ದಕ್ಕೆ ಪುರಾಣಗಳು ಸಾಕ್ಷ್ಯ ನೀಡುತ್ತವೆ. ಇನ್ನು ಪಂಚಮರು ಅಂತಹ ಪುರಾಣಗಳ ಪ್ರಕಾರ ಎಲ್ಲರೂ ಹೇಗೆ ಹುಟ್ಟಿದರೆಂಬುದಕ್ಕೆ ಪುರಾವೆ ನೀಡುವುದಿಲ್ಲ. ಬ್ರಹ್ಮನ ಅಂಶದಿಂದ ಸ್ತ್ರೀ ಜನಿಸಿದಳೆಂತಲೂ ಹೇಳಲಾಗುತ್ತದೆ. ಲಿಂಗ ಶ್ರೇಷ್ಠತೆಯ ಪರಾಕಾಷ್ಠೆ ಮೆರೆಯಲು ಇಂತಹ ಪುರಾಣಗಳನ್ನು ಕಟ್ಟಿಕೊಳ್ಳಲಾಗಿದೆ". (ಉದ್ಧೃತ: ಗೀತಾ .ಎಸ್. ೨೦೦೮. ಪುಟ.೧೫) ಹೆಣ್ಣಿನ ಜೈವಿಕತೆಯನ್ನು ನಿರಾಕರಿಸುವ ಹಂತದವರೆಗೆ ಪುರುಷ ಶ್ರೇಷ್ಠತೆಯನ್ನ ಧರ್ಮ. ಧರ್ಮಗ್ರಂಥಗಳು ಬಿತ್ತಿರುವುದು. ಇದು ಕೇವಲ ಹಿಂದೂ ಧರ್ಮ ಒಂದೆ ಇಲ್ಲ. ಇತರೆ ಧರ್ಮ, ಧರ್ಮಗ್ರಂಥಗಳಲ್ಲಿ ಕಾಣಿಸಿಕೊಳ್ಳುವ ಪುರಾಣ, ಕಥೆಗಳಲ್ಲಿ ಹೆಣ್ಣಿನ ಅಧೀನತೆಯನ್ನು ಬಿತ್ತುವ ಕೆಲಸ ಮಾಡಿರುವುದು ಕಂಡುಬರುತ್ತದೆ. ಯಾಕೆಂದರೆ ಹೆಣ್ಣಿನ ಪ್ರಜನನ ಶಕ್ತಿಯನ್ನು ನಿರಾಕರಿಸಲಾಗಿದೆ. ಈ ಬಗೆಯ ನಿರಾಕರಣಯ ಹಿಂದೆ ಸ್ತ್ರೀ ಪ್ರಜನನ ಶಕ್ತಿಯ ಕುರಿತು ಪುರುಷನೊಳಗಿರುವ ಭಯ, ಕೀಳರಿಮೆಗಳೇ ಕಾರಣವಾಗಿವೆ.

ಅಡಿ ಟಿಪ್ಪಣಿ

೧. ಹಾಲತಿ ಸೋಮೇಶ್ವರ ೨೦೦೭, **'ಮಹಿಳಾ ಚಳುವಳಿಗಳು (ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'**, ವಿಸ್ಮಯ ಪ್ರಕಾಶನ, ಮೈಸೂರು, ಪುಟ.೧೩೪

೨. ಗಾಯತ್ರಿ ಎನ್., ೧೯೯೬, **'ಸ್ತ್ರೀವಾದಿ ಪ್ರವೇಶಿಕೆ'**, ನವಕೋರಿಕೆ ಪ್ರಕಾಶನ, ಪುಟ.೧೫

೩. ಇಂದಿರಾ ಆರ್. ೧೯೯೫, **'ಸ್ತ್ರೀವಾದಿ ದಿಕ್ಸೂಚಿ'**, ಸಮತಾ ಅಧ್ಯಯನ ಕೇಂದ್ರ, ಮೈಸೂರು, ಪು.೮

೪. ಪ್ರೀತಿ ಶುಭ ಚಂದ್ರ ೨೦೦೭ **'ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ, ಪುಟ.೯೩

೫. ಇಂದಿರಾ ಆರ್. ೧೯೯೫, **'ಸ್ತ್ರೀವಾದಿ ದಿಕ್ಸೂಚಿ'**, ಸಮತಾ ಅಧ್ಯಯನ ಕೇಂದ್ರ, ಮೈಸೂರು, ಪು.೮–೯

೬. ರಾಮಜೋಯಿಸ್ ಮ., ೨೦೦೫, **'ಮನಸ್ಮೃತಿಯಲ್ಲಿ ಶಾಶ್ವತ ಜೀವನ ಮೌಲ್ಯಗಳು'**, ಸಪ್ನ ಬುಕ್‌ಹೌಸ್, ಬೆಂಗಳೂರು ಪು.೨

೭. ಅದೇ, ಪು.೩

೮.

೯. ಹೆಚ್.ವಿ. ನರಸಿಂಹಮೂರ್ತಿ, ೨೦೦೪, **'ಹಿಂದೂ ಧರ್ಮ ಮತ್ತು ಸಂಸ್ಕೃತಿ ಪ್ರಶ್ನೋತ್ತರ ರೂಪದಲಿ'**, ವಿಕಾಸ ಪ್ರಕಾಶನ, ಕೋಟೇಶ್ವರ, ಉಡುಪಿ ಜಿಲ್ಲೆ, ಪುಟ.೧–೨

೧೦. ರಾಜಶೇಖರ್ ಎಸ್., ೨೦೦೧, **'ಭಾರತೀಯ ಸಮಾಜ'**, ಪುಟ.೪೯೪

೧೧. ಸುಮಿತ್ರಾಬಾಯಿ ಬಿ.ಎನ್., ೨೦೦೦, **'ಹೆಣ್ಣು' (ಧರ್ಮ ವಿಶ್ವಕೋಶ) (ಸಂ) ರಹಮತ್ ತರೀಕೆರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫೦೨

೧೨. ಹಾಲತಿ ಸೋಮೇಶ್ವರ ೨೦೦೭, **'ಮಹಿಳಾ ಚಳುವಳಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'**, ವಿಸ್ಮಯ ಪ್ರಕಾಶನ, ಮೈಸೂರು, ಪುಟ.

೧೩. ಶೇಷ ನವರತ್ನ ೨೦೦೫, **'ಮನಸ್ಮೃತಿ'**, ಸಮಾಜ ಪುಸ್ತಕಲಾಯ, ಧಾರವಾಡ, ಪು.೧೮೩

೧೪. ಹಾಲತಿ ಸೋಮೇಶ್ವರ ೨೦೦೭, **'ಮಹಿಳಾ ಚಳುವಳಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'**, ವಿಸ್ಮಯ ಪ್ರಕಾಶನ, ಮೈಸೂರು, ಪುಟ.೧೦೧

೧೫. ಶೇಷ ನವರತ್ನ ೨೦೦೫, **'ಮನಸ್ಮೃತಿ'**, ಸಮಾಜ ಪುಸ್ತಕಲಾಯ, ಧಾರವಾಡ, ಪು.೨೧೨

೧೬. ಷಣ್ಮುಖಯ್ಯ ಅಕ್ಕೂರ ಮಠ, ೧೯೯೪, **'ಜಾಗತಿಕ ಧರ್ಮದಲ್ಲಿ ಮಹಿಳೆ'** ಚೆನ್ನ ಚೇತನ ಪ್ರಕಾಶನ, ಹೊನ್ನಳಿ, ಪುಟ.೧೨೭

೧೭. ರಾಜಶೇಖರ್ ಎಸ್., ೨೦೦೧, **'ಭಾರತೀಯ ಸಮಾಜ'** ಪುಟ.೯೫

೧೮. ಹಾಲತಿ ಸೋಮೇಶ್ವರ ೨೦೦೭, **'ಮಹಿಳಾ ಚಳುವಳಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'**, ವಿಸ್ಮಯ ಪ್ರಕಾಶನ, ಮೈಸೂರು, ಪುಟ.೪೪

೧೯. ವೀಣಾ ಕುಲಕರ್ಣಿ ೨೦೦೮, 'ಬ್ರಾಹ್ಮಣ ಮಹಿಳೆ ಸಾಮಾಜಿಕ ಚಹರೆ', (ಅಪ್ರಕಟಿತ)ಪು.೮೨

೨೦. ಹಾಲತಿ ಸೋಮೇಶ್ವರ ೨೦೦೭, **'ಮಹಿಳಾ ಚಳುವಳಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'**, ವಿಸ್ಮಯ ಪ್ರಕಾಶನ, ಮೈಸೂರು, ಪುಟ.೧೨೪

೨೧. ಅದೇ, ಪುಟ.೧೨೫

೨೨. ಅದೇ, ಪುಟ.೧೨೭

೨೩. ಸುಮಿತ್ರಬಾಯಿ ಬಿ.ಎನ್., ೨೦೦೦, **'ಹೆಣ್ಣು' (ಧರ್ಮ ವಿಶ್ವಕೋಶ), (ಸಂ) ರಹಮತ್ ತರೀಕೆರೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫೦೨

೨೪. ಹಾಲತಿ ಸೋಮೇಶ್ವರ ೨೦೦೭, **'ಮಹಿಳಾ ಚಳುವಳಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'**, ವಿಸ್ಮಯ ಪ್ರಕಾಶನ, ಮೈಸೂರು, ಪುಟ.೧೦೫

೨೫. ಅದೇ, ಪುಟ.೧೦೬

೨೬. ಷಣ್ಮುಖಯ್ಯ ಅಕ್ಕೂರ ಮಠ ೧೯೯೪, **'ಜಾಗತಿಕ ಧರ್ಮದಲ್ಲಿ ಮಹಿಳೆ'** ಚೆನ್ನ ಚೇತನ ಪ್ರಕಾಶನ, ಹೊನ್ನಳಿ, ಪುಟ.೧೧೯

೨೭. ಶೇಷ ನವರತ್ನ ೨೦೦೫, **'ಮನಸ್ಮೃತಿ'**, ಸಮಾಜ ಪುಸ್ತಕಲಾಯ, ಧಾರವಾಡ, ಪು.೮೫

೨೮. ಅದೇ, ಪುಟ.೮೨

೨೯. ಅದೇ, ಪುಟ.೮೧

೩೦. ಅದೇ, ಪುಟ.೮೧

೩೧. ಅದೇ, ಪುಟ.೮೧, ೮೩

೩೨. ಶೈಲಜಾ ಹಿರೇಮಠ, ೨೦೦೩, **'ಸ್ತ್ರೀ-ಸಂಕಥನ'**, ಭುವನ ಪ್ರಕಾಶನ, ಹೊಸಪೇಟೆ, ಪುಟ.೩

೩೩. ಹಾಲತಿ ಸೋಮೇಶ್ವರ ೨೦೦೭, **'ಮಹಿಳಾ ಚಳುವಳಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'**, ವಿಸ್ಮಯ ಪ್ರಕಾಶನ, ಮೈಸೂರು, ಪುಟ.೪೩

೩೪. ಅದೇ, ಪುಟ.೪೩

೩೫. ಅದೇ, ಪುಟ.೫೩

೩೬. ಅದೇ, ಪುಟ.೧೨೮

೩೭. ಷಣ್ಮುಖಯ್ಯ ಅಕ್ಕೂರ ಮಠ ೧೯೯೪, **'ಜಾಗತಿಕ ಧರ್ಮದಲ್ಲಿ ಮಹಿಳೆ'** ಚೆನ್ನ ಚೇತನ ಪ್ರಕಾಶನ, ಹೊನ್ನಳಿ, ಪುಟ.೧೨೭

೩೮. ಹಾಲತಿ ಸೋಮೇಶ್ವರ ೨೦೦೭, **'ಮಹಿಳಾ ಚಳುವಳಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'**, ವಿಸ್ಮಯ ಪ್ರಕಾಶನ, ಮೈಸೂರು, ಪುಟ.೧೦೭

೩೯. ಷಣ್ಮುಖಯ್ಯ ಅಕ್ಕೂರ ಮಠ ೧೯೯೪, **'ಜಾಗತಿಕ ಧರ್ಮದಲ್ಲಿ ಮಹಿಳೆ'** ಚೆನ್ನ ಚೇತನ ಪ್ರಕಾಶನ, ಹೊನ್ನಳಿ, ಪುಟ.೧೨೯

೪೦. ಶೇಷ ನವರತ್ನ ೨೦೦೫, **'ಮನಸ್ಮೃತಿ'**, ಸಮಾಜ ಪುಸ್ತಕಲಾಯ, ಧಾರವಾಡ, ಪು.೮೪

೪೧. ಹೆಗಡೆ ಆಲ್ಮನೆ ಆರ್.ಡಿ., ೨೦೦೧, **'ಭಗವದ್ಗೀತೆ ಅಪರಾಧ ಮತ್ತು ಶಿಕ್ಷೆ'**, ಪುಟ.೫೩

೪೨. ಶೇಷ ನವರತ್ನ ೨೦೦೫, **'ಮನಸ್ಮೃತಿ'**, ಸಮಾಜ ಪುಸ್ತಕಲಾಯ, ಧಾರವಾಡ, ಪು.೩೯೫

೪೩. ಅದೇ, ಪುಟ.೩೯೭

೪೪. ಹಾಲತಿ ಸೋಮೇಶ್ವರ ೨೦೦೭, **'ಮಹಿಳಾ ಚಳುವಳಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'**, ವಿಸ್ಮಯ ಪ್ರಕಾಶನ, ಮೈಸೂರು, ಪುಟ.೧೧

೪೫. ಅದೇ, ಪುಟ.೧೧೧

೪೬. ಅದೇ, ಪುಟ.೧೧೧

೪೭. ಶೇಷ ನವರತ್ನ ೨೦೦೫, **'ಮನಸ್ಮೃತಿ'**, ಸಮಾಜ ಪುಸ್ತಕಲಾಯ, ಧಾರವಾಡ, ಪು.೨೨೯

೪೮. ಅದೇ, ಪುಟ.೨೨೯

೪೯. ಹಾಲತಿ ಸೋಮೇಶ್ವರ ೨೦೦೭, **'ಮಹಿಳಾ ಚಳುವಳಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'**, ಪುಟ.೧೨೯

೫೦. ಹಾಲತಿ ಸೋಮೇಶ್ವರ ೨೦೦೭, **'ಮಹಿಳಾ ಚಳುವಳಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'**, ವಿಸ್ಮಯ ಪ್ರಕಾಶನ, ಮೈಸೂರು, ಪುಟ.೪೫

೫೧. ಅದೇ, ಪುಟ.೪೨

೫೨. ಅಂಬೇಡ್ಕರ ೧೯೯೩, **'ಸ್ತ್ರೀ ಮತ್ತು ಪ್ರತಿಕ್ರಾಂತಿ'**, ಅನುಸೂಯ ಕಾಂಬ್ಳೆ(ಸಂ) 'ವಿಚಾರ ಸಾಹಿತ್ಯ ಮತ್ತು ಹೆಣ್ಣು', ವೈಚಾರಿಕ ಸಾಹಿತ್ಯ ಪ್ರಕಾಶನ, ರಾಯಭಾಗ, ಪುಟ.೧೭೨

೫೩. ಅದೇ, ಪುಟ.೨

೫೪. ಇಬ್ರಾಹಿಂ ಈಸದ್ ೧೯೯೬, **'ಪ್ರವಾದಿ ಮಹಮ್ಮದ್(ಸಂ) ಜೀವನ ಮತ್ತು ಸಂದೇಶ'**, ಶಾಂತಿ ಪ್ರಕಾಶನ, ಮಂಗಳೂರು, ಪುಟ.೧೬

೫೫. ಹಾಲತಿ ಸೋಮೇಶ್ವರ ೨೦೦೭, **'ಮಹಿಳಾ ಚಳುವಳಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ'**, ವಿಸ್ಮಯ ಪ್ರಕಾಶನ, ಮೈಸೂರು, ಪುಟ.೧೨೫

೫೬. ಅದೇ, ಪುಟ.೧೦೭

೫೭. ಅದೇ, ಪುಟ.೧೦೭

೫೮. ಅದೇ, ಪುಟ.೧೧೪

೫೯. ಇಬ್ರಾಹಿಂ ಈಸದ್ ೧೯೯೬, **'ಪ್ರವಾದಿ ಮಹಮ್ಮದ್(ಸಂ) ಜೀವನ ಮತ್ತು ಸಂದೇಶ'**, ಶಾಂತಿ ಪ್ರಕಾಶನ, ಮಂಗಳೂರು, ಪುಟ.

೬೦. ಮಧು ವೆಂಕಟರೆಡ್ಡಿ ೧೯೯೬ **'ಥೇರಿಗಾಥ'**, ಮಹಿಳಾ ಸಾಹಿತ್ಯಿಕಾ ನವನಗರ, ಹುಬ್ಬಳ್ಳಿ, ಪುಟ.೨೧

೬೧. ಷಣ್ಮುಖಯ್ಯ ಅಕ್ಕೂರ ಮಠ, ೧೯೯೪, **'ಜಾಗತಿಕ ಧರ್ಮದಲ್ಲಿ ಮಹಿಳೆ'** (ಧರ್ಮ ಸಂಪದ) ಚೆನ್ನ ಚೇತನ ಪ್ರಕಾಶನ, ಹೊನ್ನಳಿ, ಪುಟ.೧೨೫

೬೨. ಮಧು ವೆಂಕಟರೆಡ್ಡಿ ೧೯೯೬ **'ಥೇರಿಗಾಥ'**, ಮಹಿಳಾ ಸಾಹಿತ್ಯಿಕಾ ನವನಗರ, ಹುಬ್ಬಳ್ಳಿ, ಪುಟ.೨೪-೨೫

೬೩. ಗೀತಾ.ಎಸ್., ೨೦೦೭, **'ಹೆಣ್ಣು ದೇಹ ಮತ್ತು ಪುರುಷಾಧಿಕಾರ'**,(ಅಪ್ರಕಟಿತ) ಪುಟ.೧೫

* * *

ಅಧ್ಯಾಯ ನಾಲ್ಕು

ಸಂಪ್ರದಾಯ ಆಚರಣೆಗಳು : ಹೆಣ್ಣಿನ ಜೈವಿಕತೆ

(ವೈದಿಕ ಮತ್ತು ಅವೈದಿಕರನ್ನು ಅನುಲಕ್ಷಿಸಿ)

೧. ಮೊದಲ ಮುಟ್ಟು : ಸಂಪ್ರದಾಯ ಆಚರಣೆ

೨. ತಿಂಗಳ ಮುಟ್ಟು : ಸಂಪ್ರದಾಯ ಆಚರಣೆ

೩. ಹೆರಿಗೆ : ಸಂಪ್ರದಾಯ ಆಚರಣೆ

೪

ಸಂಪ್ರದಾಯ ಆಚರಣೆಗಳು : ಹೆಣ್ಣಿನ ಜೈವಿಕತೆ

(ವೈದಿಕ ಮತ್ತು ಅವೈದಿಕರನ್ನು ಅನುಲಕ್ಷಿಸಿ)

ನಂಬಿಕೆಯ ಭಾಗವಾಗಿ ಬೆಳೆದ ಸಂಪ್ರದಾಯ ಆಚರಣೆಗಳೂ ಬಹುತೇಕವಾಗಿ ಹೆಣ್ಣಿನ ದೇಹವನ್ನೆ ಕೇಂದ್ರವಾಗಿಟ್ಟುಕೊಂಡು ಮುನ್ನಡೆಯುತ್ತಿವೆ. ಋತಿಮತಿ ಮುಟ್ಟು ಮತ್ತು ಹೆರಿಗೆ ಪ್ರಕ್ರಿಯೆಗಳಂತಹ ಸಹಜ ಕ್ರಿಯೆಗಳಿಗೆ ಸಂಬಂಧಿಸಿದಂತೆ ವಿವಿಧ ಜಾತಿ ಜನಾಂಗ ವರ್ಗ, ಪಂಗಡ, ಸಮುದಾಯಗಳಲ್ಲಿ ಭಿನ್ನ ರೀತಿಯ ಸಂಪ್ರದಾಯ ಆಚರಣೆಗಳು ಇವೆ, ಮತ್ತು ಇವುಗಳು ಪ್ರಾದೇಶಿಕವಾಗಿ ಭಿನ್ನವಾಗಿದೆ. ಅವುಗಳಿಗೆ ಯಾವುದೇ ವೈಜ್ಞಾನಿಕ ಹಿನ್ನಲೆ ಇಲ್ಲದೆ ಕೇವಲ ನಂಬಿಕೆ ಆಧರಿಸಿ ಇಲ್ಲವೆ ಹಿರಿಯರು ಮಾಡಿಕೊಂಡು ಬಂದಿರುವುದು ಎಂದು ನಂಬಿಕೊಂಡು ಮುಂದುವರೆಯುತ್ತಿವೆ. ಹೀಗೆ ಇವತ್ತೊಗಿನ ಮುಂದುವರೆದ ಸಂಪ್ರದಾಯ ಆಚರಣೆಗಳು ಹೆಣ್ಣಿನ ಕುರಿತ ನೇತ್ರಾತ್ಮಕ-ಧೋರಣೆಗಳನ್ನು ನೀತಿಗಳನ್ನು ಸಾಮಾಜಿಕ ಮೌಲ್ಯಗಳಾಗಿ ನಿರ್ವಚಿಸುತ್ತಿವೆ. ಈ ಹಿನ್ನೆಲೆಯಲ್ಲಿ ಅತ್ಯಗತ್ಯವಾದ ಅಂಶಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

ಇತ್ತೀಚಿನ ದಶಕಗಳಲ್ಲಿ ಕರ್ನಾಟಕದಲ್ಲಿ ಸಮುದಾಯ ಆಧಾರಿತ, ಅಧ್ಯಯನಗಳು, ತೀವ್ರಗತಿಯಲ್ಲಿ ನಡೆದಿವೆ ಮತ್ತು ನಡೆಯುತ್ತಿವೆ. ಅವುಗಳಲ್ಲಿ ಜಾತಿ, ಜನಾಂಗ, ವರ್ಗ, ಪಂಗಡ, ಮೊದಲಾದವುಗಳನ್ನು ಆಧರಿಸಿ ಅಧ್ಯಯನ ನಡೆದಿರುವುದು ಕಂಡುಬರುತ್ತದೆ. ಈ ಬಗೆಯ ಅಧ್ಯಯನಗಳು ಆಯಾ ಸಮುದಾಯಗಳಲ್ಲಿನ ಸಂಪ್ರದಾಯ ಆಚರಣೆಗಳನ್ನು ದಾಖಲಿಸಿವೆ. ನಾನೂ ಕೂಡ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಸಂಪ್ರದಾಯ ಆಚರಣೆಗಳನ್ನು ಪರಿಶೀಲನೆಗೆ ಒಳಪಡಿಸಲಾಗಿದೆ. ಹೀಗೆ ದಾಖಲಿಸಿದ ಸಂಪ್ರದಾಯ ಆಚರಣೆಗಳನ್ನು ಲಿಂಗಾಧಾರಿತ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಬಹುತೇಕ ಸಮುದಾಯದಲ್ಲಿರುವ ಆಚರಣೆ ಸಂಪ್ರದಾಯಗಳು ಹೆಣ್ಣಿನ ಜೈವಿಕತೆಗೆ ಸಂಬಂಧಪಟ್ಟದವುಗಳಾಗಿವೆ. ಅವುಗಳನ್ನು ವೈದಿಕ ಮತ್ತು ಅವೈದಿಕ ನೆಲೆಗಳಲ್ಲಿ ವಿಂಗಡಿಸಿಕೊಂಡು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೪.೧. ಮೊದಲ ಮುಟ್ಟು ಅಥವಾ ಋತುಮತಿ : ಸಂಪ್ರದಾಯ ಆಚರಣೆ

ಹೆಣ್ಣು ಋತುಮತಿಯಾಗುವುದು ಪ್ರಕೃತಿಯ ಸಹಜ ನಿಯಮ. ಇದು ಸಮಾನ್ಯವಾಗಿ ೧೦ ರಿಂದ ೧೬ನೇ ವಯಸ್ಸಿನ ಪ್ರತಿಯೊಬ್ಬ ಹೆಣ್ಣು ಮಕ್ಕಳಲ್ಲಿ ನಡೆಯುವ ಜೈವಿಕ ಸಹಜ ಕ್ರಿಯೆ. ಇದನ್ನು ಮೈನೆರೆಯುವುದು, ಹೆಣ್ಣಾಗುವುದು, ದೊಡ್ಡವಳಾಗುವುದು. ವಯಸ್ಸಿಗೆ ಬರುವುದು, ನೀರಾಕುವುದು ಮುಂತಾಗಿ ಆಯಾ ಜಾತಿ, ಜನಾಂಗ, ವರ್ಗ, ಬುಡಕಟ್ಟು ಸಮುದಾಯಗಳಲ್ಲಿ ತಮ್ಮ ಭಾಷೆಯಲ್ಲಿ ಕರೆಯುತ್ತಾರೆ. ಈ ಜೈವಿಕ ಸಹಜ ಕ್ರಿಯೆ ಋತುಚಕ್ರ ಸ್ಥಗಿತಗೊಳ್ಳುವವರೆಗಿನ ಘಟಕವನ್ನು 'ಫಲವಂತಿಕೆ ಕಾಲ' ಎಂದು ಕೂಡ ಕರೆಯುವುದು ಕಂಡುಬರುತ್ತದೆ. ಹೆಣ್ಣು ಋತಿಮತಿಯಾದಾಗ ತನ್ನ ಬದುಕಿನಲ್ಲಿ ಮೊಟ್ಟ ಮೊದಲಿಗೆ ಜೈವಿಕ ಬದಲಾವಣೆಯಾಗುತ್ತಿರುವುದನ್ನು ಅನುಭವಿಸುತ್ತಾಳೆ. ಹುಡುಗಿ ಋತುಮತಿಯಾದಳು ಎಂದರೆ ಆಕೆಯಲ್ಲಿ ಒಂದು ಜೀವ ಉತ್ಪತ್ತಿಗೆ ಕಾರಣವಾಗುವ ಜೀವಕೋಶವು ಸಿದ್ದಗೊಳ್ಳುವುದಕ್ಕೆ ಪ್ರಾರಂಭವಾಗಿದೆ ಎಂದರ್ಥ. ಮೊದಲ ಮುಟ್ಟಿನ ಬಗ್ಗೆ ಹಲವು ಜಾತಿ, ಸಮುದಾಯಗಳಲ್ಲಿ ಹಲವು ಬಗೆಯ ಸಂಪ್ರದಾಯ ಆಚರಣೆಗಳು ಇವೆ.

ಹೆಣ್ಣು ಋತುಮತಿಯಾದ ದಿನದಿಂದ ಹಿಡಿದು ಆಯಾ ಜನಾಂಗ, ಜಾತಿ, ಬುಡಕಟ್ಟು ಸಮುದಾಯಕ್ಕೆ ಸಂಬಂಧಿಪಟ್ಟಂತೆ ಅವರು ೫, ೯, ೧೬ ಹಾಗೂ ೨೧, ದಿನಗಳವರೆಗೆ ಮೈಲಿಗೆ ಎಂದು ತಿಳಿದು ಈ ಸಂದರ್ಭದಲ್ಲಿ ವಯಸ್ಸಾದ ಹೆಂಗಸನ್ನು ಬಿಟ್ಟರೆ ಉಳಿದವರು ಋತುಮತಿಯಾದ ಹುಡುಗಿಯನ್ನು ಯಾರು ಮುಟ್ಟುವ ಪ್ರಯತ್ನ ಮಾಡದಂತೆ ಮಾಡುತ್ತಾರೆ. ಇಲ್ಲಿಂದ ಪ್ರಾರಂಭವಾಗುತ್ತವೆ ಅವಳ ಬಗ್ಗೆಗಿನ ನಂಬಿಕೆ, ಸಂಪ್ರದಾಯ ಆಚರಣೆಗಳು.

ವೈದಿಕರಲ್ಲಿ: "ನಮ್ಮ ಜಾತಿಯಲ್ಲಿ ಋತುಮತಿಯಾದ ಹೆಣ್ಣನ್ನು, ೫ ದಿನ ಅಥವಾ ೯ ದಿನ, ೧೬ ದಿನಗಳವರೆಗೆ ಅವರವರ ಅನುಕೂಲಕ್ಕೆ ತಕ್ಕಂತೆ ಮನೆಯ ಹೊರಗಡೆ, ಇಲ್ಲವೆ ಮನೆಯ ಒಂದು ಮೂಲೆಯಲ್ಲಿ ಕೂಡಿಸುತ್ತಾರೆ. ಋತುಮತಿಯಾಗುವುದನ್ನು ನಮ್ಮ ಜಾತಿಯಲ್ಲಿ ಅತ್ಯಂತ ದೋಷವೆಂದು ಪರಿಗಣಿಸುತ್ತಾರೆ. ಋತುಮತಿಗೆ ಸಂಬಂಧಪಟ್ಟಂತೆ ಹೆಣ್ಣಿನ, ನಕ್ಷತ್ರ, ಋತುಮತಿಯಾದ ದಿನದ ನಕ್ಷತ್ರವನ್ನು, ಸಮಯವನ್ನು ನೋಡುತ್ತಾರೆ. ಜ್ಯೋತಿಷ್ಯರನ್ನು ಕೇಳುತ್ತಾರೆ. ಒಂದು ವೇಳೆ ದೋಷವೆಂದು ಪರಿಗಣಿತವಾದರೆ ಆ ದೋಷಕ್ಕೆ ಸಂಬಂಧಪಟ್ಟಂತೆ, ಪರಿಹಾರವಾಗಿ ಕ್ರಿಯಾವಿಧಿಗಳನ್ನು ಆಚರಿಸುತ್ತಾರೆ. ನಂತರ ಐದನೇ ದಿನ ಇಲ್ಲವೇ ೯ನೇ ದಿನ ಇಲ್ಲವೇ ೧೬ನೇ ದಿನ ಆಕೆಯನ್ನು ಕೂಡಿಸಿ ಹೂ ಮುಡಿಸಲಾಗುವುದು. ಹೆಣ್ಣಿಗೆ ಇಲ್ಲಿಂದ ಪ್ರಾರಂಭವಾದ ವಿಧಿ ನಿಷೇಧಗಳು ಆಕೆಯ ಬದುಕಿನುದ್ದಕ್ಕೂ ಮುಂದುವರೆಯುತ್ತವೆ. ನಮ್ಮಲ್ಲಿ (ವೈದಿಕ)ರಲ್ಲಿ ಋತುಮತಿಯಾದ ಹಾಗೂ ಮುಟ್ಟಾದ ಹೆಣ್ಣು ಮಕ್ಕಳು ತುಳುಸಿದಳವನ್ನು ಎತ್ತುವಂತಿಲ್ಲ, ದೇವರ ಕೋಣೆಯಲ್ಲಿ ದೇವರನ್ನು ಮುಟ್ಟುವಂತಿಲ್ಲ,

ತೆಂಗಿನಕಾಯಿ ಒಡೆಯುವಂತಿಲ್ಲ, ಗಂಟೆ ಬಾರಿಸುವಂತಿಲ್ಲ, ಆರತಿಯನ್ನು ಬೆಳಗುವಂತಿಲ್ಲ, ಪುರುಷ ದೇವರಗಳನ್ನು ಮುಟ್ಟುವಂತಿಲ್ಲ (ನಿಷೇಧ) ಗೌರಿ ಪೆಟ್ಟಿಗೆ ಮಾತ್ರ ಪೂಜೆ ಸಲ್ಲಿಸಬೇಕು. ಈ ಹೆಣ್ಣು ಮಕ್ಕಳಿಗೆ ತುಳಸಿಯನ್ನು ಕೊಡಬಾರದು. ಅವರು ತೆಗೆದುಕೊಳ್ಳಬಾರದು. ಋತುಮತಿಯಾದ ನಂತರ ಕೂದಲು ತೆಗೆದರೆ ಮುತ್ತೈದೆತನ ಹೋದಂತೆ. ಈ ಹೆಣ್ಣು ಮಕ್ಕಳು ಬಳೆ ಇಲ್ಲದೆ ಇರಬಾರದು" ಎಂದು ವನಜಾಕ್ಷಿ ಹೇಳುತ್ತಾರೆ. ಋತುಮತಿಯಾಗುವುದರ ಕುರಿತಿರುವ ಸಂಪ್ರದಾಯ ಆಚರಣೆಗಳು ಸ್ವತಃ ಹೆಣ್ಣಿನಲ್ಲಿ ಕೀಳರಿಮೆಯನ್ನು ಹುಟ್ಟು ಹಾಕುತ್ತದೆ. ಹಾಗೆಯೇ ಸಮಾಜದಲ್ಲಿ ಆಕೆಯನ್ನು ಎರಡನೆಯ ದರ್ಜೆಯ ಪ್ರಜೆಯಾಗಿ ನಿರ್ವಚಿಸುತ್ತದೆ. ಹಾಗೆಯೇ ಅದನ್ನು ಸತ್ಯಗೊಳಿಸುತ್ತದೆ. ಹೀಗಾಗಿ ಮಾನ್ವಿಯ ಕಮಲಮ್ಮ ಹೇಳಿದಂತೆ ವೈದಿಕರಲ್ಲಿ ಮುಟ್ಟಿನ ಮನೆಗಳು ಈಗಲೂ ಹಳ್ಳಿಗಳಲ್ಲಿ ಇವೆ. ಇತ್ತೀಚಿನ ಅಂದರೆ ೧೯೮೦ರಿಂದೀಚೆಗೆ ಮನೆ ವಿನ್ಯಾಸದಲ್ಲಿ ಮುಟ್ಟಿನ ಮನೆ ಕಾಣುತ್ತಿಲ್ಲ. ಕಂಡರೂ ಅದನ್ನು ಗೌಪ್ಯತೆ ಮುಖಾಂತರ ಆಚರಿಸುತ್ತಾರೆ. ಋತುಮತಿ, ಮುಟ್ಟು, ಹೆರಿಗೆ, ಈ ಅವಧಿಯನ್ನು ನಿಷೇಧಿತ ಅವಧಿಯಾಗಿಯೇ ಪರಿಗಣಿಸಲ್ಪಟ್ಟಿದೆ. ನಾವು ಇಂದು ಎಷ್ಟೇ ನಂಬಿಕೆ, ಸಂಪ್ರದಾಯ ಆಚರಣೆ ಇಲ್ಲವೆಂದರೂ ಅವುಗಳು ಇನ್ನೂ ಜೀವಂತವಾಗಿವೆ ಎನ್ನುತ್ತಾರೆ.

ಅವೈದಿಕರು: ಇಲ್ಲಿ ವೈದಿಕರಲ್ಲದವರನ್ನು ಅವೈದಿಕರೆಂದು ಗುರುತಿಸಿಕೊಳ್ಳಲಾಗಿದೆ. ವಿಶೇಷವಾಗಿ ಬುಡಕಟ್ಟು ಸಮುದಾಯವರನ್ನು, ತಳ ಸಮುದಾಯದವರನ್ನು, ಅವೈದಿಕರೆಂದು ಗುರುತಿಸಿಕೊಂಡಿದ್ದೇನೆ. ಗೊಲ್ಲ, ಮಲೆನಾಡಿನ ಕುರುಹೀನ, ಶೆಟ್ಟರು, ಉಪ್ಪಾರ, ದುರುಗಮುರುಗಿ, ಅಥವಾ ಸಿಂದೋಳ್ಳ, ಮ್ಯಾಸಬೇಡರು, ಗೋಸಂಗಿ, ಸಮುದಾಯದವರನ್ನು ಅನುಲಕ್ಷಿಸಿ ಅಧ್ಯಯನ ನಡೆಸಲಾಗಿದೆ.

ಗೊಲ್ಲ ಸಮುದಾಯದಲ್ಲಿ "ರಾಜ್ಯದ ಎಲ್ಲ ಜನಾಂಗದಲ್ಲಿರುವಂತೆ ಹಲವು ಸಂಪ್ರದಾಯಗಳು, ರೀತಿ, ನೀತಿ, ರೂಢಿ ಪದ್ಧತಿಗಳು ಸಾಮಾಜಿಕ, ಕಟ್ಟಳೆಗಳು, ನಿಯಮಗಳಿವೆ. ಈ ಸಾಮಾಜಿಕ ನಿಯಮ ಅಥವಾ ಪದ್ಧತಿ ಬಹುಶಃ ಇಂಡಿಯಾದ ಯಾವುದೇ ಬುಡಕಟ್ಟು ಅಥವಾ ಜಾತಿ, ಜನಾಂಗಗಳಲ್ಲಿ ಕಟ್ಟು ನಿಟ್ಟಾಗಿ ಆಚರಿಸಿಸುವಂತೆ ಇಲ್ಲಿ ಆಚರಿಸಲಾಗತ್ತದೆ. ಈ ಆಚರಣೆಗಳು ಕೆಲವೊಮ್ಮೆ ಅಮಾನವೀಯ ರೂಪ ತಾಳುತ್ತವೆ. ಜೈವಿಕ ಸಹಜ ಕ್ರಿಯೆಯಾದ 'ಮೈನೆರೆಯುವಿಕೆ' ಸಾಮಾನ್ಯವಾಗಿ ಬುಡಕಟ್ಟು ಮತ್ತು ಹಿಂದುಳಿದ ಸಮುದಾಯಗಳಲ್ಲಿ ಮೈನೆರೆದವರನ್ನು ಮತ್ತು ಮುಟ್ಟಾದವರನ್ನು ೩ (ಮೂರು) ದಿನಗಳ ಕಾಲ ಮನೆಯ ಒಳಗೆ ಅಥವಾ ಹೊರಗೆ 'ಸೂತಕ'ದ ಹೆಸರಿನಲ್ಲಿ ಪ್ರತ್ಯೇಕ ಇಡುವುದನ್ನು ಕಾಣಬಹುದು. ಕಾಲ ಕಳೆದಂತೆ, ಕಾಲಕ್ರಮೇಣದಲ್ಲಿ ಈ ಸೂತಕ ಕಡಿಮೆಯೆನಿಸಿದರೂ, ವಾಸಿಸುವ ಮನೆಗಳಲ್ಲಿಯೇ ಸೂತಕದ ಜಾಗವನ್ನು ಗುರುತಿಸಿಕೊಂಡು ಮುಟ್ಟಿನ ಸಂಪ್ರದಾಯ ಆಚರಣೆಗಳನ್ನು ಮುಂದುವರಿಸಿದ್ದಾರೆ ಕೆಲವು ಸಮುದಾಯಗಳಲ್ಲಿ ಇದು ಇಂದಿಗೂ ಮುಟ್ಟಿನ ಆಚರಣೆಗಳನ್ನು ನಡೆಸಿಕೊಂಡು

ಬರುತ್ತಿದ್ದಾರೆ, ಗೊಲ್ಲ, ಬುಡಕಟ್ಟಿನಲ್ಲಿ ಹೆಣ್ಣು ಮೈನೆರೆದಾಗ, ದೇವರು, ಹಟ್ಟಿ ಮತ್ತು ಮನೆಗಳಿಗೆ 'ಸೂತಕ' ಎಂಬ ನಂಬಿಕೆಯಿದ್ದು, ಇಂತಹ ಹೆಣ್ಣು ಮಕ್ಕಳನ್ನು ಬಾಣಂತಿಯಂತೆಯೇ ಹಟ್ಟಿಯ ಹೊರಗಡೆ ಸಂಕೇತಿಕವಾಗಿ ಗುಡಿಸಲು ಕಟ್ಟಿ ಬಿಡುತ್ತಾರೆ. ಮೈನೆರೆದ ಹೆಣ್ಣು ಮಗಳು, ಬಿಸಿಲು ಮಳೆ, ಗಾಳಿಯನ್ನದೆ, ಬಟಂಬಯಲಿನ್ನಲ್ಲಿಯೇ ಅಥವಾ ಮರದ ಕೆಳಗೆ ಅನಾಥರಂತೆಯೇ ಇಲ್ಲವೇ ಊರಿನ (ಮೇಲು ವರ್ಗದ) ಮನೆಯ ಹೊರಾಂಡದಲ್ಲಿಯೇ ಕಾಲ ಕಳೆಯಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಬೇರೆ ಜಾತಿಯ ಯುವಕರು 'ಗೊಲ್ಲ' ಹೆಣ್ಣು ಮಕ್ಕಳಿಗೆ ಕಿರುಕುಳ ಕೊಟ್ಟಿರುವ ಅನೇಕ ನಿರ್ದಶನಗಳಿವೆ. ಋತುಮತಿಯಾದ ಗೊಲ್ಲ ಜನಾಂಗದ ಹೆಣ್ಣು ಮಕ್ಕಳು ಬೇರೆ ಜಾತಿಯವರ ಮನೆಯ ಹೊರಾಂಡದಲ್ಲಿದ್ದರೆ ಅವರಿಗೆ 'ಸೂತಕ'ವೆನಿಸುವುದಿಲ್ಲ ಆದರೆ ಗೊಲ್ಲ ಜನಾಂಗದವರಿಗೆ 'ಸೂತಕ'ವಾಗುತ್ತದೆ. ಮೈನೆರೆದ ಹೆಣ್ಣಿನ ಮತ್ತು ಮುಟ್ಟಾದವರ ನೆರಳು ಕೂಡ ಯಾರ ಮೇಲೆ ಬೀಳುವಂತಿಲ್ಲ. ಊಟವನ್ನು ಕೊಡುವಾಗ ದೂರ ನಿಂತು ಕೊಡುತ್ತಾರೆ. (ನಿಂತು ಕೈಗೆ ಎತ್ತಿ ಹಾಕುವುದು) ನೀರನ್ನು ಕೂಡ ಕೈ ಬೊಗಸೆಗೆ ಮೇಲಿನಿಂದ ಸುರಿಯುತ್ತಾರೆ. ದಿನ ನಿತ್ಯದ ಹೆಣ್ಣಿನ ಬಗ್ಗೆ, ಶುಚಿತ್ವದ ಬಗ್ಗೆ ಗತಿಯೇನು ಎಂಬುದರ ಬಗ್ಗೆ ಯಾರು ಯೋಚಿಸುವುದಿಲ್ಲ. ಅಷ್ಟರ ಮಟ್ಟಿಗೆ 'ಸೂತಕ'ದ ಹೆಸರಿನಲ್ಲಿ ಮಡಿ, ಮೈಲಿಗೆಯ ಸಂಪ್ರದಾಯ, ಆಚರಣೆಯನ್ನು ಮಾಡುತ್ತಾರೆ. ಋತುಮತಿಯಾದುದಕ್ಕಾಗಿ ಶಾಲೆಯನ್ನು ಮಧ್ಯಕ್ಕೆ ಬಿಡಿಸಿರುವುದು ಹೆಚ್ಚು. ಶ್ರೀಮಂತ ಮನೆತನದ ಹೆಣ್ಣು ಮಕ್ಕಳಲ್ಲಿ ಕೂಡ ಇದಕ್ಕೆ ಹೊರತಾದವರಲ್ಲ (ಗುರುಲಿಂಗಯ್ಯ ಎಂ., ೨೦೦೫, ಪು.೩೧, ೩೨). ಮುಟ್ಟನ್ನು ಮೈಲಿಗೆಯಾಗಿ ಪರಿಗಣಿಸುವುದರಿಂದ ಹುಡುಗಿಯರಲ್ಲಿ ತಾವು ಅಶುದ್ಧರು ಎನ್ನುವ ಕೀಳರಿಮೆ ಹುಟ್ಟುವಂತೆ ಮಾಡುತ್ತದೆ. ಜೊತೆಗೆ ಗೊಲ್ಲ ಸಮುದಾಯದ ಹುಡುಗಿಯರಿಗೆ ಮೊದಲ 'ಮುಟ್ಟು' ಶಿಕ್ಷಣ ನಿಲ್ಲಿಸುವಷ್ಟು ಪ್ರಭಾವಶಾಲಿಯಾಗಿದೆ.

"ಇತ್ತೀಚಿನ ವಿದ್ಯಾವಂತ ನಗರ ವಾಸಿ ನೌಕರಿಯಲ್ಲಿರುವ ತಂದೆ–ತಾಯಿಗಳು ಇದನ್ನು ಒಂದು 'ಸೂತಕ' ಎಂದು ಭಾವಿಸದೆ ತಮ್ಮ ಹೆಣ್ಣು ಮಕ್ಕಳನ್ನು ಶಾಲಾ–ಕಾಲೇಜುಗಳಿಗೆ ಕಳುಹಿಸಲು ಪ್ರಾರಂಭಿಸಿದ್ದಾರೆ. ಆದರೆ ಅಂಥಹವರ ಸಂಖ್ಯೆ ಕಡಮೆ, ಆದಾಗ್ಯೂ ಕೆಲವು ಸಂಪ್ರದಾಯಸ್ಥ ನಗರ ವಾಸಿ ಜನಾಂಗದ ಜನರು ನಗರದಲ್ಲಿ ಮನೆ ನಿರ್ಮಿಸುವಾಗಲೇ ಮೈನೆರೆದ ಹೆಣ್ಣು ಮಕ್ಕಳಿಗೋಸ್ಕರ ಮತ್ತು ಮುಟ್ಟಾದವರಿಗೆಂದು ಒಂದು ಪ್ರತ್ಯೇಕ ಕೊಠಡಿ ನಿರ್ಮಿಸುತ್ತಿರುವುದನ್ನು ನೋಡಿದರೆ ಇಂತಹ ಸೂತಕ, ಮಡಿ, ಮೈಲಿಗೆ ಸಂಪ್ರದಾಯ ಆಚರಣೆಗಳಿಗೆ ಕೊನೆ ಇಲ್ಲ ಎಂಬ ಭಾವನೆ ಉಂಟಾಗುತ್ತದೆ". (ಗುರುಲಿಂಗಯ್ಯ ಎಂ., ೨೦೦೫, ಪುಟ ೩೧,೩೨).

ಮಲೆನಾಡಿನ ಕುರುಹಿನ ಶೆಟ್ಟರಲ್ಲಿ : ಹೆಣ್ಣು ಮೈನೆರೆದಾಗ ಇವರಲ್ಲಿ ಸೂತಕವುಂಟು. ಇದು ಬಲುಕಟ್ಟುನಿಟ್ಟಿನ 'ಸೂತಕ' ೧೨ ದಿನಗಳವರೆಗೆ ಇರುತ್ತದೆ. ಇದನ್ನು 'ದೃಷ್ಟಿ ಸೂತಕ'

ಎಂದು ಕರೆಯುತ್ತಾರೆ ಅಥವಾ ಹನ್ನೆರಡು ವರ್ಷದ ಸೂತಕ ಎಂದು ಕರೆಯುತ್ತಾರೆ. ಇದು ಹೆಣ್ಣಿಗೆ ಮಾತ್ರವಲ್ಲದೆ ಆಕೆಯ (ಆ ಹೆಣ್ಣಿನ ಮನೆಯ ಎಲ್ಲರಿಗೂ ಅಣ್ಣ – ತಮ್ಮಂದಿರಿಗೂ, ಕುಟುಂಬದವರಿಗೂ ಅನ್ವಯಿಸುತ್ತದೆ) 'ಸೂತಕ' ಕಳೆಯುವವರೆಗೂ' ಋತುಮತಿಯಾದ' ಹೆಣ್ಣು ಮಗಳು ಮನೆಯ ಒಳಗಡೆ ಹೋಗಬಾರದು, ಪಾತ್ರೆ, ಅಡುಗೆ, ನೀರು, ಮುಂತಾದವುಗಳನ್ನು ಮುಟ್ಟಬಾರದು ಒಂದು ವೇಳೆ ಮುಟ್ಟಿದರೆ, ಅದನ್ನು ಮಡಿ ಮಾಡಿ ಒಳಗೆ ತರುತ್ತಾರೆ.

ಆಕೆಗೆ ಪ್ರತ್ಯೇಕವಾದ ಹಾಸಿಗೆ, ಊಟ, ತಟ್ಟೆ, ಲೋಟಗಳನ್ನು ಕೊಡುತ್ತಾರೆ. ಆಗ ಅವಳು ದೇವಸ್ಥಾನಕ್ಕೆ ಹೋಗುವಂತಿಲ್ಲ, ದೇವರಪೂಜೆ ಮಾಡುವಂತಿಲ್ಲ, ಹೂ ಮುಡಿಯುವಂತಿಲ್ಲ, ಮಂಗಳಕಾರ್ಯಲ್ಲಿ ಭಾಗವಹಿಸುವಂತಿಲ್ಲ, ಅಲಂಕಾರಿಕ ವಸ್ತುಗಳನ್ನು (ಚಿನ್ನ, ಬಳೆ, ಸರ, ಕಿವಿಯೊಲೆ ಇತ್ಯಾದಿ) ಧರಿಸುವಂತಿಲ್ಲ, ಬರಿಗಾಲಲ್ಲಿ ನಡೆಯುವಂತಿಲ್ಲ, ಆ ಅವಧಿಯಲ್ಲಿ ಆಕೆ 'ಅಶುದ್ಧಳು' ಎಂಬ ನಂಬಿಕೆಗೆ ಕಾರಣವಾಗಿದೆ, ಹೀಗೆ ಪ್ರತಿಯೊಂದು ನಿಷೇಧದ ನಡುವೆ ಕಾಲ ಕಳೆಯುವಂತೆ ಮಾಡುತ್ತಾರೆ. ಆಕೆಯ ಮನಸ್ಥಿತಿ ಏನಾಗುವುದು ಎಂದು ಯಾರು ಕೂಡ ಆಲೋಚಿಸುವುದಿಲ್ಲ. ಅದನ್ನು ಕಟ್ಟು ನಿಟ್ಟಾಗಿ ಪಾಲಿಸಲೇಬೇಕು. ಇದೊಂದು ಮಹಾದೋಷವೆಂದೇ ನಂಬಲಾಗಿದೆ. ಪುರುಷರನ್ನು ಮುಟ್ಟಬಾರದು, ಹತ್ತಿರಕ್ಕೆ ಸುಳಿಯಬಾರದು ಹೀಗೆ ಪ್ರತಿಯೊಂದರ ನಿಷೇಧದ ನಡುವೆ ಕಾಲ ಕಳೆಯುವಂತೆ ಮಾಡುತ್ತಾರೆ. ಇದರಿಂದಾಗಿ ಹೆಣ್ಣು ಮಕ್ಕಳಿಗೆ ಒಂದು ಆತಂಕದ ಮನೋಭಾವನೆ ಬೆಳೆಯುವುದರ ಜೊತೆಗೆ ಆಕೆಯು ಯಾವುದೆ ರೀತಿಯ ಪ್ರತಿಭಟನೆಯ ಸ್ಥಿತಿಯನ್ನು ಕಳೆದುಕೊಂಡು ಬಿಡುತ್ತಾಳೆ. ಯಾಕೆಂದರೆ ಹಿರಿಯರಾದವರು ಇಂತಹ ಜೈವಿಕ ಸಹಜ ಕ್ರಿಯೆಯನ್ನು ಆಧರಿಸಿ ಇದು ನಮ್ಮ ಸಂಪ್ರದಾಯ ಆಚರಣೆ ಎಂದು ನಂಬಿ ಆಕೆಯ (ಹೆಣ್ಣಿನ) ಮೇಲೆ ವಿಧಿ–ನಿಷೇಧ ನೀತಿ, ನಿಯಮಗಳನ್ನು ಹೇರಿರುವುದರಿಂದಾಗಿ ಹೆಣ್ಣು ಇಂದಿಗೂ ಯಾವುದನ್ನು ಮೀರಲು ಸಾಧ್ಯವಿಲ್ಲ". (ಮಂಜಪ್ಪ ಶೆಟ್ಟಿ ಎಂ.ಪಿ., ಮಸಗಲಿ, ೨೦೦೦, ಪು.೧೩೪, ೧೩೫).

ಉಪ್ಪಾರ ಜನಾಂಗದಲ್ಲಿ: " ಹೆಣ್ಣು ಋತುಮತಿಯಾದರೆ ಮನೆಯ ಒಂದು ಭಾಗದಲ್ಲಿ ಅವಳನ್ನು ಪ್ರತ್ಯೇಕವಾಗಿ ೫ ದಿನದಿಂದ ೨೧ ದಿನದವರೆಗೆ ಬೆಡಗಿಗೆ ಅನುಗುಣವಾಗಿ ಕೂರಿಸುತ್ತಾರೆ. ಈ ದಿನಗಳಲ್ಲಿ ಸಂಜೆಯ ವೇಳೆಯಲ್ಲಿ ಮುತ್ತೈದೆಯರನ್ನು ಕರೆಸಿ ಅವರಿಂದ ಹಾಡು ಹೇಳಿಸಿ ಆರತಿ ಬೆಳಗುತಾರೆ. ಮುತ್ತೈದೆಯರಿಗೆ ಅರಶಿಣ, ಕುಂಕುಮ ಕೊಡುತ್ತಾರೆ. ಬಂಧುಗಳು ಈ ದಿನಗಳಲ್ಲಿ ಅವಳಿಗೆ ವಿವಿಧ ಬಗೆಯ ತಿಂಡಿ ತಿನಿಸುಗಳನ್ನು ತಂದುಕೊಡುವುದು, ಅನುಕೂಲವಿದ್ದವರು. ಆಕೆಗೆ ಸರಸ್ವತಿ, ಲಕ್ಷ್ಮಿ, ಕೃಷ್ಣ, ರಾಧೆ ಮೊದಲಾದ ದೇವತೆಯರ ಅಲಂಕಾರವನ್ನು ಹಾಕುವುದುಂಟು. ಈ ರೀತಿಯ ಅಲಂಕರಿಸಿದ ಹುಡುಗಿಗೆ ದೃಷ್ಟಿ ತಾಕದಂತಿರಲು. ಇತರ ಕೆಲವು ಮಕ್ಕಳಿಗೆ ವಿವಿಧ ವೇಷಗಳನ್ನು ಹಾಕಿ ಅವಳ ಜೊತೆಗೆ

ಕೂರಿಸುವರು. ಈ ಜಾತಿಯಲ್ಲಿ ಕೂಡ ಕೆಲವು ವಿಧಿ ನಿಷೇಧ ನಿಯಂತ್ರಗಳಿವೆ. 'ಮಡಿ' 'ಮೈಲಿಗೆ' 'ಸೂತಕ'ದ ಕಲ್ಪನೆ ಇದೆ. ಮನೆಯ ಒಳಗಡೆ ಹೋಗಬಾರದು ಗಂಡಿನ ಮುಖ ನೋಡಬಾರದು, ಹೆಚ್ಚು ಮಾತನಾಡಬಾರದು, ಅತ್ಯಂತ ದೋಷ ಪೂರಿತ ಸೂತಕ. ಇದು ಕಳೆಯುವವರೆಗೆ ಯಾವುದೇ ತರನಾದ ಚಟುವಟಿಕೆಯಲ್ಲಿ ಋತುಮತಿಯಾದ ಹೆಣ್ಣು ಪಾಲ್ಗೊಳ್ಳಬಾರದು, ದೈವಕಾರ್ಯವಾಗಲಿ, ಮಂಗಳಕಾರ್ಯವಾಗಲಿ, ಋತುಮತಿಯಾದ ಹೆಣ್ಣಿನ ರಕ್ತ ಸಂಬಂಧಿಗಳಿಗೆ ಈ ಸೂತಕದ ದೋಷ ಒಳಗೊಂಡಿರುತ್ತದೆ. ಅವರು ಕೂಡ ಈ ಸೂತಕ ಕಳೆಯುವವರೆಗೆ ಯಾವುದೆ ದೈವ ಮತ್ತು ಮಂಗಳ ಕಾರ್ಯ ಕೈಗೊಳ್ಳವಂತಿಲ್ಲ. ಸೂತಕ ಕಳಿಯುವ ಕೊನೆಯ ದಿನ ಹೂ ಮುಡಿಸುವ ಕಾರ್ಯಕ್ರಮ ಅಥವಾ 'ಎಬ್ಬಿಸುವುದು' ಎನ್ನುತ್ತಾರೆ. ಈ ದಿನದಂದು ಬಂಧು ಮಿತ್ರರನ್ನು ಕರೆದು ಊಟ ಹಾಕುತ್ತಾರೆ. ಹಾಗೂ ಹುಡುಗಿಗೆ ಉಡುಗೊರೆಯನ್ನು ನೀಡುವ ಸಂಪ್ರದಾಯವು ಇದೆ. ಅಂದು ಸಂಜೆ ಈ ಹುಡುಗಿಯನ್ನು ಜನಪದ ಗೀತೆ, ಇಲ್ಲವೆ ಬ್ಯಾಂಡ್ ವಾದ್ಯ, ಹಲಗಿ ಮಜಲು, ಹೀಗಿ ಮೊದಲಾದ ವಾದ್ಯಗಳೊಂದಿಗೆ ಹುಡುಗಿಯನ್ನು ಮೆರವಣಿಗೆ ಮುಖೇನ ಊರಿನ ಹನುಮಂತ ದೇವರ ಗುಡಿಗೆ ಕರೆದುಕೊಂಡು ಹೋಗಿ ಪೂಜೆ ಸಲ್ಲಿಸಿ ಬರುವುದು ರೂಢಿಯಲ್ಲಿದೆ". (ರಮೇಶ ಸ.ಚಿ., ೧೯೯೬, ಪು.೫೨, ೫೩)

ದುರುಗಮುರಗಿ ಅಥವಾ ಸಿಂಧೊಳ್ಳ : "ಬುಡಕಟ್ಟು ಅಲೆಮಾರಿ ಸಮುದಾಯವಾದ ಇವರಲ್ಲಿ ಹೆಣ್ಣು ಋತುಮತಿ ಅಥವಾ ದೊಡ್ಡವಳಾದ ಸಂದರ್ಭದಲ್ಲಿ ಹೆಂಗಸರು ತಮ್ಮ ಗುಡಾರದಲ್ಲಿ ಆರು ಅಡಿಗಳ ಅಂತರದಲ್ಲಿ ಆಕೆಯನ್ನು ಕೂಡಿಸಿರುತ್ತಾರೆ. ಗುಡಾರದ ಒಳಗಡೆ ಹಳೆ ಚಾಪೆ, ಚಾದರ, ಸೀಮೆಎಣ್ಣೆ ದೀಪ ಇಡುತ್ತಾರೆ ಅಂದಿನ ದಿವಸದಲ್ಲಿ ಅನುಭವಿ ಮಹಿಳೆಯಾಗಲಿ, ಮುದುಕಿಯಾಗಲಿ ಬಂದು ಸ್ನಾನ ಮಾಡಿಸಿ, ಬಟ್ಟೆ ಬದಲಾಯಿಸುತ್ತಾಳೆ, ಮೈನೆರೆದ ಹುಡುಗಿ ಮನೆಯಲ್ಲಿ (ಜೊಪಡಿ, ಗುಡಾರ) ಓಡಾಡುವಂತಿಲ್ಲ. ಕೆಲಸ ಮಾಡುವಂತಿಲ್ಲ. ಆ ಸಂದರ್ಭದಲ್ಲಿ ಅವಳಿಗೆ ಕೊಬರಿ, ಬೆಲ್ಲ, ತಿಂಡಿ, ತಿನುಸುಗಳನ್ನು ಹೂವು, ಬಳೆಗಳನ್ನು ಹಾಕಿ ಸಿಂಗಾರ ಮಾಡಲಾಗುವುದು. ಋತುಮತಿಗೆ ಸಂಬಂಧಿಸಿದಂತೆ, ಅಂದಿನ ದಿನ ಕುಲ ದೈವದವರ ಪಂಚಾಯ್ತಿ ನಡೆಯುವುದು. (ಅಲ್ಲೆ ಇದ್ದವರು ಸೇರಿಕೊಂಡು) ಋತುಮತಿಯಾದ ಹುಡುಗಿ ತಂದೆ, ತಾಯಿಯ ಪಂಚಾಯಿತಿಯಲ್ಲಿ ಪಾಲ್ಗೊಳುತ್ತಾರೆ. ಕುಲದ ಮುಖಂಡರು ಕೆಲವೊಂದು ಪ್ರಶ್ನೆಗಳನ್ನು ಕೇಳುತ್ತಾರೆ.

ಕುಲದ ಮುಖಂಡ: ಏನಪ್ಪ ನಿಮ್ಮ ಮಗಳು ದೊಡ್ಡವಳಾಗಿದ್ದಾಳಂತೆ ನೀವು ಕುಲ ಪಂಚಾಯ್ತಿಗೆ ಏನು ಕೊಡುವಿರಿ ಎಂದು ಕೇಳುತ್ತಾನೆ.

ತಂದೆ ತಾಯಿಗಳು: ನೀವು ಏನೋ ಹೇಳಿವಿರೊ ನಾವ್ ಕೊಡಲು ಸಿದ್ದ ಎಂದು ಹೇಳುತ್ತಾರೆ. ಆಗ ಕುಲದ ಮುಖಂಡ ಕುಲದೈವದ ಪ್ರಕಾರ ದೊಡ್ಡವಳಾದಾಗ ೨೦೦

ರೂಪಾಯಿಗಳು ಕೊಡಬೇಕೆಂದು ಕುಲದಲ್ಲಿ ತೀರ್ಮಾನವಾಗಿದೆ ಎಂದು ಹೇಳುತ್ತಾನೆ. ತಂದೆ ತಾಯಿಗಳು ಕುಲ ದೈವಕ್ಕೆ ೨೦೦ ರೂಪಾಯಿಗಳನ್ನು ಕೊಡುತ್ತಾರೆ. ನಂತರದ ಕುಲದ ಮುಖಂಡರಿಗೆ ಸಾರಾಯಿ ಕುಡಿಸುತ್ತಾರೆ. ನಂತರ ಹುಡುಗಿ ದೊಡ್ಡವಳಾದ ಸುದ್ದಿಯನ್ನು ಕುಲದ ಎಲ್ಲರಿಗೆ ತಿಳಿಸುತ್ತಾರೆ. ಐದು ಮಂದಿ ಮುತ್ತೈದೆಯರಿಂದ ಸ್ನಾನ ಮಾಡಿಸುತ್ತಾರೆ. ಅದಕ್ಕೆ ಮುಟ್ಟರೆಯುವುದು ಎಂದು ಕರೆಯುತ್ತಾರೆ. ಋತುಮತಿಯಾದವಳನ್ನು ಸ್ನಾನ ಮಾಡಿಸಿದ ನಂತರ ಮುತ್ತೈದೆಯರೂ ಸ್ನಾನ ಮಾಡಬೇಕು. ಈ ಸಮುದಾಯದ ಒಳ ಪಂಗಡದಲ್ಲಿ ಋತುಮತಿ ಹೆಣ್ಣನ್ನು ಅಂದಿನ ಕೆಲಸ ಕ್ರಮಗಳು ವಿಭಿನ್ನ ರೀತಿಯಲ್ಲಿ ಕಂಡು ಬರುವವು. ಮಂಡಲೂರು ಕುಟುಂಬದಲ್ಲಿ ದೊಡ್ಡವಳು ಆದರೆ ೩ ದಿವಸದ ಕಾರ್ಯಕ್ರಮ ನಡೆಯುತ್ತದೆ. ಇಲ್ಲಿ ಕೂಡ ಹೆಣ್ಣಿನ ಸೋದರಮಾವ ಬರುವನು. ಆ ದಿನಗಳಲ್ಲಿ ಸೂತಕ ಕಳೆಯುವ ಕೊನೆಯ ದಿನ ರಾತ್ರಿ ಸಮಯದಲ್ಲಿ ದೊಡ್ಡವಳಾದ ಹೆಣ್ಣನ್ನು ಕಟ್ಟೆ ಮೇಲೆ ಅಥವಾ ಊರಿನಲ್ಲಿ ವಾಸಮಾಡುತ್ತಿರುವ ಜನರುಗಳ ಹತ್ತಿರ ಕುರ್ಚಿಯನ್ನು ತಂದು ಕುರ್ಚಿ ಹಾಕಿ ಕುಳ್ಳಿಸುತ್ತಾರೆ. ಮುತ್ತೈದೆಯರು ಕಳಸ ಬೆಳಗುತ್ತಾರೆ. ಇದು ಮುಖ್ಯವಾಗಿರುತ್ತದೆ ಹಾಗೂ ಅನ್ನದ ಆರತಿಯನ್ನು ಮಾಡುತ್ತಾರೆ. (ಲೋಕರಾಜ ದೊಡ್ಡಮನಿ, ೨೦೦೨, ಪುಟ.೪೫) ಹೆಣ್ಣಿನ ದೈಹಿಕ ಬದಲಾವಣೆಯಿಂದಾಗಿ ದೇಹದ ಸಹಜ ಕ್ರಿಯೆಗೆ ಇದೆಲ್ಲ ಸಂಪ್ರದಾಯ ಆಚರಣೆಗಳು ನಡೆಯುತ್ತಿವೆ. ಇವು ಹೆಣ್ಣಿಗೆ ತನ್ನ ಅಂತಃ ಸ್ವತವನ್ನು ಕಳೆದು ಕೀಳರಿಮೆಯನ್ನುಂಟು ಮಾಡುತ್ತಿರುವುದಲ್ಲದೆ ಆಕೆಯು ಸಮಾಜದಲ್ಲಿ ಚಲನಶಿಲತೆಗೆ ಕುಂಠಿತಕ್ಕೆ ಕಾರಣವಾಗುತ್ತದೆ.

ಮ್ಯಾಸಬೇಡರು: "ಬೇಡನಾಯಕರಲ್ಲಿ ಹೆಣ್ಣು ಮಕ್ಕಳು ಮೈನೆರೆದರೆ ಮನೆಯ ಮುಂದೆಯೇ ಹೊಂಗೆ ಮತ್ತು ಬೇವಿನ ಸೊಪ್ಪು ಬೆರೆತ ಒಂದು ಚಿಕ್ಕ ಗುಡಿಸಲನ್ನು ಕಟ್ಟುವರು ಯಥವಿಧಿಯಾಗಿ ಅದರಲ್ಲಿ ಋತುಮತಿಯಾದ ಹೆಣ್ಣು ಮಕ್ಕಳು ಹತ್ತು ದಿನಗಳ ಕಾಲ ಅಲ್ಲಿ ಕೂತು ಕಾಲಕಳೆಯಬೇಕು. ಆ ಹತ್ತು ದಿನದಲ್ಲಿ ಆಕೆ ಗುಡಿಸಲೊಳಗೆ ಸೂತಕದ ಹೆಂಗಸಾಗಿ ಇರುತ್ತಾಳೆ. ಹಾಗೆ ಅವಳಿಗೆ ಮಕ್ಕಳನ್ನು ಪಡೆಯುವ ಬಯಕೆಯನ್ನು ಪ್ರಚೋದಿಸುವ ಸಲುವಾಗಿ ಅವಳೊಡನೆ ಮಕ್ಕಳು ಆಟವಾಡುವಂತೆ ಅವಕಾಶ ಮಾಡಿಕೊಡಲಾಗುತ್ತದೆ. ಆಕೆಗೆ ಬೇಕಾದ ಆಹಾರ ಪದಾರ್ಥಗಳನ್ನು ತಯಾರಿಸಿ ಕೊಡುವವರು ಅವು ಆಕೆಯ ವೈವಾಹಿಕ ಬಯಕೆಗಳನ್ನು ಪ್ರಚೋದಿಸುವವೇ ಆಗಿರುತ್ತವೆ.

ಹನ್ನೊಂದನೆಯ ದಿನ ವಾದ್ಯ ಸಮೇತ ಊರ ಹೊರಗೆ ಕರೆದುಕೊಂಡು ಹೋಗಿ ತಂಗಟೆ ಗಿಡ ಮುಟ್ಟಿಸುತ್ತಾರೆ. ಅದಲ್ಲದೆ ಆ ಗಿಡವನ್ನು ಅವಳಿಂದ ಅತ್ತಿಂದಿತ್ತ ಇತ್ತಿಂದತ್ತ ಮೂರು ಬಾರಿ ದಾಟಿಸುವರು ತಂಗಟೆ ಗಿಡದ ಸ್ಥಳದಿಂದ ದೇವಸ್ಥಾಕ್ಕೆ ಕರೆದುಕೊಂಡು ಬಂದು ಪೂಜೆ ಮಾಡಿಸುವುದುಂಟು. ಪೂಜೆಯಿಂದ ಆಕೆಯನ್ನು ಮನೆಗೆ ಕರೆದುಕೊಂಡುಬರುತ್ತಾರೆ. ಮನೆಯ ಮುಂದೆ ಕುರಿಯ ಒಣಪಿಕ್ಕೆಯೊಂದಿಗೆ ಸೌದೆಯಿಟ್ಟು

ಬೆಂಕಿ ಹಾಕಲಾಗುತ್ತದೆ. ಈ ಬೆಂಕಿಯಲಿಟ್ಟು ಬೇವಿನ ಕಡ್ಡಿಯನ್ನು ಹುಡುಗಿಯ ನಾಲಿಗೆಗಿಟ್ಟು ಸುಡವರು. ನಾಲಿಗೆಯನ್ನು ಸುಡುವುದು ಮೂರು ಬಾರಿ ಅಲ್ಲಿಗೆ ಹೆಣ್ಣಿಗೆ ಸೂತಕ ಕಳೆದುಕೊಂಡು, ಮನೆಯ ಒಳಕ್ಕೆ ಸೇರಿಕೊಂಡಂತಾಯಿತು. ಮನೆಯ ಒಳಗೆ ಬಂದ ಹೆಂಗಸ್ಸು ಅಲ್ಲಿಂದ ಹಾಲು ವೀಳೆಯದೆಲೆ, ಗಂಧದ ಕಡ್ಡಿಯನ್ನು ಎಡೆಯಲ್ಲಿಟ್ಟುಕೊಂಡು ನೀರು ಇರುವ ಕಡೆ ಬರುವರು. ಅಲ್ಲಿ ಗಂಗಾದೇವತೆಗೆ ಪೂಜೆ ಮಾಡಿ ವೀಳೆಯದೆಲೆಯನ್ನು ನೀರಿನಲ್ಲಿ ತೇಲಿಬಿಡಲಾಗುತ್ತದೆ. ಮೈನೆರೆದ ಹೆಣ್ಣು ಮಗಳೊಂದಿಗೆ, ಹೋಗಿ ಐದು ಜನ ಮುತ್ತೈದೆಯರು ಕೊಡದಲ್ಲಿ ನೀರು ಹೊತ್ತುಕೊಂಡು ಬರುವರು. ಇದು ಋತುಮತಿ ಹೆಣ್ಣಿಗೆ ಸಂಬಂಧಪಟ್ಟಂತೆ ಮಾಡುವ ಪದ್ದತಿ ಇದೆ. (ಕೃಷ್ಣಮೂರ್ತಿ ಹನ್ನೂರ, ೧೯೯೩, ಪುಟ.೧೦೦)

ಗೊಸಂಗಿ ಸಮುದಾಯ: "ಅಲೆಮಾರಿ ಅರೆ-ಅಲೆಮಾರಿ ಸಮುದಾಯವೆಂದು ಗುರುತಿಸಿಕೊಳ್ಳುವ ಗೊಸಂಗಿ ಸಮುದಾಯ ಬಳ್ಳಾರಿ, ಬೆಂಗಳೂರು, ಚಿತ್ರದುರ್ಗ, ದಾವಣಗೆರೆ, ತುಮಕೂರು, ಶಿವಮೊಗ್ಗ ಹೀಗೆ ಎಲ್ಲಾ ಕಡೆ ನೆಲೆಸಿರುವ ಇವರು ಹೆಣ್ಣಿನ ಸಹಜ ಕ್ರಿಯೆಯಾದ ಋತುಮತಿಗೆ ಸಂಬಂಧಪಟ್ಟಂತೆ ಗೊಸಂಗಿಗಳು ಋತುಮತಿಯಾದ ಶಾಸ್ತ್ರವನ್ನು 'ಸೂತಕ'ವೆಂದೆ ಭಾವಿಸುತ್ತಾರೆ. ಈ ಹಿಂದೆ ಗೊಸಂಗಿಗಳು ಋತುಮತಿಯಾದವಳನ್ನು ಪ್ರತ್ಯೇಕವಾದ ಡೇರಾದಲ್ಲಿರುಸುತ್ತಿದ್ದರು.

ಆಗ ಸುಮಾರು ಒಂಬತ್ತು ದಿನಗಳ ಕಾಲ ಆಕೆ ಏಕಾಂತದಲ್ಲಿರಬೇಕಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಈ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆಗೆ ಒಳಪಟ್ಟಿದೆ. ಈಚೆಗೆ ವಾಸ ಮಾಡುವ ಡೇರಾದ ಒಂದು ಮೂಲೆಯಲ್ಲಿ ಋತುಮತಿಯಾದವಳಿಗೆ ಬಟ್ಟೆಯ ಪರದೆ ಮಾಡುತ್ತಾರೆ. ಸೂತಕದ ಸ್ಥಳದಲ್ಲಿ ಮೆಟ್ಟು, ಪೊರಕೆ, ಇಡುವುದರ ಜೊತೆಗೆ ಬೇವಿನ ಸೊಪ್ಪನ್ನೂ ಸಹ ಋತುಮತಿಯಾದವಳ ಪಕ್ಕಕಟಿರುತ್ತಾರೆ. ಹೀಗೆ ಮಾಡುವುದರಿಂದ ದೃಷ್ಟಶಕ್ತಿಗಳು ಹತ್ತಿರ ಸುಳಿಯುವುದಿಲ್ಲವೆಂಬ ನಂಬಿಕೆಯಿಂದಾಗಿ ಋತುಮತಿಯಾದವರಿಗೆ ಪ್ರತ್ಯೇಕವಾದ ತಟ್ಟೆ, ಚೊಂಬನ್ನು ಕೊಡುತ್ತಾರೆ. ಒಂಬತ್ತು ದಿನಗಳ ಕಾಲ ಆಕೆಯನ್ನು ಮುಟ್ಟಾದವಳೆಂದು ಭಾವಿಸುತ್ತಾರೆ. ಸೂತಕ ಕಳೆಯುವುದನ್ನು ಎಲ್ಲಾ ಡೇರಾಗಳನ್ನು ಸ್ವಚ್ಛಗೊಳಿಸಿ ಗೋಮೂತ್ರದಿಂದ ಶುದ್ಧಗೊಳಿಸುವರು, ಜೊತೆಗೆ ಆಕೆ ಬಳಸಿದ ತಟ್ಟೆ, ಚೊಂಬುಗಳನ್ನು ಸುಟ್ಟು ಗೋಮೂತ್ರದಿಂದ ಸೂತಕ ಕಳೆಯುವರು. ಇವರಲ್ಲಿ ಕೂಡ ಬೆಡಗು ಪಂಗಡಕ್ಕೆ ಅನುಗುಣವಾಗಿ ನಂಬಿಕೆ, ಸಂಪ್ರದಾಯ ಆಚರಣೆಗಳು ನಡೆಯುತ್ತವೆ". (ಮಾರುತಿ ವಿ.ಎಸ್., ೨೦೦೨, ಪು.೧೦೧)

ಮುಗೇರರು ಜನಾಂಗಗಳಲ್ಲಿ: ಇವರಲ್ಲಿ ಋತುಮತಿಯಾದಾಗ ಹೆಣ್ಣಿನ ಬಗೆಗಿನ ಗ್ರಹಿಕೆ ಗೌರವಗಳನ್ನು ಪ್ರತಿಬಿಂಬಿಸುತ್ತಿದೆ ಎಂದು ಹೇಳುವುದರ ಮುಖಾಂತರ ಋತುಮತಿಯಾದವಳನ್ನು

'ಮುಲ್ಲುಮೊಟ್ಟಲ್' (ಮುಟ್ಟುತುಳಿದವಳು) 'ಪೊಂಜೆವಾಯಲ್' (ಹೆಂಗಸಾದಳು) ಎಂಬ ಪದಗಳಿಂದ ಸೂತಕವಾಗಿ ತಿಳಿಸುತ್ತಾರೆ. ಸೂಕ್ಷ್ಮ ವಿಚಾರಗಳನ್ನು ಸಂಕೇತವಾಗಿ ತಿಳಿಸುವುದು, ಈ ಸಂಕೇತಕ್ಕೆ ಹೆಚ್ಚಾಗಿ ಅನಿಷ್ಟಕರವಾದುದಕ್ಕೆ ಅನ್ವಯವಾಗುತ್ತದೆ ಇಲ್ಲಿ 'ಮುಲ್ಲುಮೊಟ್ಟಲ್' ಎಂಬ ಪದ ಯಾವುದೇ 'ಅನಿಷ್ಠ' ಎಂಬ ಅರ್ಥದಲ್ಲಿ ಬಾರದೆ ಮುಂದೆ ಇಡಿ ಬದುಕಿನ ಕಷ್ಟ ಜೀವನಕ್ಕೆ ಕಾಲಿರಿಸಿದಂತೆ ಈ ಗಾಂಭೀರ್ಯ ಜೀವನವನು 'ಮುಳ್ಳು' ಎಂದು ಸಂಕೇತವಾಗಿ ಅರ್ಥೈಯಿಸಿ ಈ ಮುಳ್ಳನ್ನು ತುಳಿದಳು, ಜೀವನಕ್ಕೆ ಕಾಲಿರಿಸಿದಳು ಎಂಬ ಅರ್ಥ ಕಂಡುಬರುತ್ತದೆ.

ಹೆಣ್ಣು ಋತುಮತಿಯಾಗುವುದು ಒಂದು ದುರಂತವೆಂದು ಕಾಣದೆ ಅವರಿಗೆ ಸಂತೋಷದ ಸಂಭ್ರಮದ ಸಂದರ್ಭವಾಗಿದೆ. ಅವಳಿಗೆ ವಿಶೇಷವಾದ ತುಪ್ಪ, ಆಹಾರ, ನೀಡಿ ಆರೈಕೆ ಮಾಡುತ್ತಾರೆ. (ಉದಾಹರಣೆ: ಹೆಸರು ಮೆಂತೆ,ಕಾಳು, ಇತ್ಯಾದಿ) ಏಳನೇ ದಿವಸಕ್ಕೆ 'ಮರ್ಮಲೆ' ಮದುವೆ (ಋತುಮತಿಯಾದ ಮದುವೆ)ಯನ್ನು ಆಚರಿಸುತ್ತಾರೆ. ಇದಕ್ಕೆ ಅವಳ ಬಂಧು-ಬಾಂಧವರನ್ನು ವಿಶೇಷವಾಗಿ ಹೆಂಗಸರನ್ನು ಸೇರಿಸುತ್ತಾರೆ. ಹುಡುಗಿಯನ್ನು ಅಂಗಗಳಲ್ಲಿ ಭತ್ತದ 'ಮುಡಿ' ಅಥವಾ ತೆಂಗಿನಕಾಯಿ ಅಥವಾ ಒನಕೆ ಮೇಲೆ ಕೂರಿಸಿ, ಐದು ಅಥವಾ ಏಳು ಬಳೆಯ ಹೆಂಗಸರು ಪಂಚಕಲಗಳ ನೀರನ್ನು ಗರಿಕೆ ಹುಲ್ಲಿನ ತುದಿಯಿಂದ ಹುಡುಗಿಯ ತಲೆಮೇಲೆ ಸಿಂಪಡಿಸುತ್ತಾರೆ. ಹುಡುಗಿ ಆ ಸಂದರ್ಭದಲ್ಲಿ ಕಣ್ಣಿಗೆ ವೀಳ್ಯದೆಲೆಯನ್ನು ಅಡ್ಡಿರಿಸಿಕೊಂಡಿರುತ್ತಾಳೆ. ಆ ಎಲೆಯನ್ನು ಅಂಗಳದಲ್ಲಿ ಇರಿಸಿ ಅದಕ್ಕೆ ಕೈ ಮುಟ್ಟಿ ನಮಸ್ಕರಿಸಿ ಸ್ನಾನಕ್ಕೆ ಕರೆದುಕೊಂಡು ಹೋಗುತ್ತಾರೆ. ಸ್ನಾನ ಮಾಡಿ ಹೊಸ ಬಟ್ಟೆಯನ್ನುಟ್ಟುಕೊಂಡು ಬರುವಾಗ ಪಕ್ಕದಲ್ಲಿರುವ ಫಲ ನೀಡುವ ಮರಗಳನ್ನು (ಹಲಸು, ಬಾಳೆ, ತೆಂಗಿನ, ಅಡ್ಡಿಕೆ, ವೀಳ್ಯ) ಮುಟ್ಟಿ ನಮಸ್ಕರಿಸುತ್ತಾರೆ. ಪಂಚಕಲಗಳಲ್ಲಿ ಇರಿಸಿದ ನೀರನ್ನು ಬಾಳೆಗಿಡ ಅಥವಾ ತೆಂಗಿನ ಮರದ ಬುಡಕ್ಕೆ ಸುರಿಸುತ್ತಾರೆ. ನಂತರ ಹುಡುಗಿಯನ್ನು ಕೂರಿಸಿ ಅಕ್ಷತೆ ಹಾಕಿ ಉಡುಗೊರೆ ನೀಡುತ್ತಾರೆ. ನಂತರ ಹುಡುಗಿಯನ್ನು ಸೋದರ ಮಾವ ಅಥವಾ ಕುಟುಂಬದವರು ಕರೆದುಕೊಂಡು ಹೋಗುತ್ತಾರೆ. ಒಂದು ಹೆಣ್ಣು ಋತುಮತಿಯಾದಾಗ ಇಡೀ ಸಮುದಾಯವೇ ಸಂತೋಷದಿಂದ ಆಕೆಯನ್ನು ಬದುಕಿಗೆ ಬರಮಾಡಿಕೊಳ್ಳುತ್ತಾರೆ. ಹಾಗೆ ಬರಮಾಡಿಕೊಂಡಾಗ ಬದುಕಿನ ಬಗೆಗೆ ಗೌರವಿರುತ್ತದೆ. ಋತುಮತಿಯಾದ ಹೆಣ್ಣು ಅದೇ ಸಮಾಜದಲ್ಲಿ ಫಲವಂತಿಕೆ ಆಗಲಿ ಎಂಬ ಫಲವಂತಿಕೆಯ ಕಲ್ಪನೆಯನ್ನು ಇಡೀ ಆಚರಣೆಯಲ್ಲಿ ಮಾಡುತ್ತಾರೆ". (ಅಭಯ ಕೆಕ್ರೌಡಿ, ೧೯೯೭, ಪುಟ.೨೯).

ಹೀಗೆ ಹೆಣ್ಣಿನ ಜೈವಿಕತೆಯನ್ನಾಧರಿಸಿ ವಿವಿಧ ಜಾತಿ, ವರ್ಗ, ಜನಾಂಗ, ಸಮುದಾಯದಲ್ಲಿ ಭಿನ್ನ ಭಿನ್ನವಾಗಿ ನಡೆದುಕೊಂಡು ಬಂದಿರುವುದು ಕಂಡುಬರುತ್ತದೆ ಇನ್ನೂ

ಈ ಋತುಮತಿಯ ಸಂದರ್ಭದಲ್ಲಿ ಹಲವು 'ಒಸಿಗೆ' ಹಾಡುಗಳನ್ನು ಹಾಡುವುದು ದೊರೆಯುತ್ತದೆ. ಈ ಹಾಡುಗಳಲ್ಲಿ (ಹೆಣ್ಣಿನ) ಅವಳ ದೇಹಕ್ಕೆ ಸಂಬಂಧಿಸಿದಂತೆ ಹಾಗೂ ಋತುಮತಿಯಾದ ಹೆಣ್ಣನ್ನು (ಸ್ನಾನ ಮಾಡಿಸುವಾಗ) ಸುಂದರಗೊಳಿಸುವ ಸಂದರ್ಭದಲ್ಲಿ ಹಾಡುವ ಹಾಡುಗಳ ಈ ರೀತಿಯಾಗಿ ದೊರೆಯುತ್ತವೆ.

"ಕನ್ನೆ ಮೈನೆರೆದು ಹಟ್ಟೇಲಿ ನಿಂದವಳೆ
ಕುಟ್ಟಮ್ಮ ಎಳ್ಳು ಚಿಗುಳೀಯ
ತಂಬಿಟ್ಟನುಂಡೆ ಕರಿಯಮ್ಮ ನೆರೆಯಗಳತೀರ
ಮಾಡಮ್ಮ ಮಗಳ ಒಸಗೆಯ

(ಪುಟ ೫೩ ಕಾಡುಗೊಲ್ಲ ಸಂಪ್ರದಾಯದಲ್ಲಿ)

"ಯಾವಾಗ ಮೈನೆರೆದ ಅತಿರಂಭೆ
ಅರಿಷಿಣ ಕಾಲಾಗ ಯಾವಾಗ ಮೈನೆರೆದ ಅತಿರಂಭೆ
ದೀವಳಿಗೆ ಹೊಂಬಾಳೆ ಒಡವಿಯ ತತವೀಗ,

ನಿಂಬೆ ಗಿಡದಾಚೆ ರಂಭೆ ಮೈನೆರೆದಾಳೆ
ನಿಂಬೆಯ ಮರವ ಚಿಗಳೀಯ
ನಿಂಬೀಯ ಮರದ ಚಿಗಳೀಯ ತಂಬಿಟ್ಟನುಂಡೆ
ಬಾಲೆಗೆ ಮಡಲಿಗಿಡುದಾವೆ

ಬಾಳೆಗಿಡದಾಗೆ ರಂಭೆ ಮೈನೆರೆದಾಳೆ
ಬಾಳೆಯ ಮರದ ಚಿಗುಳೀಯ
ತಂಬಿಟ್ಟಿನುಂಡೆ
ಬಾಲೆಗೆ ಮಡಲಿಗಿಡರಾವೆ॥

ಬಾಲೆ ಮೈನೆರೆದು ಬಾಗೆಲಾಚೆ ತಳುಗ್ಯಾವಳೆ
ಬಾನಿಗೋಡ್ಯಾವೆ ಮಳೆಯ ಮೋಡ
ಅವರಣ್ಣ ನೀಲದ ಗುಡುರವೊಡ್ಡಿಸ್ಯಾನೆ॥

ನಾರಿ ಮೈನೆರೆದು ಹತ್ಯಾಗ ತಳುಗ್ಯಾವಳೆ
ಸುಂತ್ರಾಲೋಡ್ಯುವೆ ಮಳೆ ಮೋಡ
ಅವರಪ್ಪ ಮುತ್ತಿನ ಗುಡಾರವೊಡ್ಡಿಸ್ಯಾನೆ॥

ಅತ್ತಿ ಆಲದ ಸೊಪ್ಪು ಮತ್ತೆ ಬೇವಿನ ಸೊಪ್ಪು
ಅತ್ತಿಯ ಮಗನೆ ತರಬೇಕು
ಅತ್ತೇಯ ಮಗನೆ ತಂದ ಬೇವಿನ ಸೊಪ್ಪು
ಒಪ್ಪದಕ್ಕೆ ಬಂದು ನಿಲ್ಲಬೇಕು
(ಎಂ. ಬೈರೇಗೌಡ, ೨೦೦೦, ಪುಟ.೧೮೦)

'ಹೊಸಗೆ' ಹಾಡು ಜೊತೆಗೆ ಕೆಲವು ಋತುಮತಿ ಹೆಣ್ಣಿನ ಸಂಬಂಧಿಸಿದಂತೆ ಕೆಲವು ನಂಬಿಕೆಗಳು ದೊರೆಯುತ್ತವೆ. ಅವುಗಳೆಂದರೆ.

೧. ಋತುಮತಿಯಾದಾಗ ಮಲ್ಲಿಗೆ, ಬಳೆ ಮುಟ್ಟಿಸಬೇಕು.

೨. ಋತುಮತಿಯಾದ ಹೆಣ್ಣು ಮುಟ್ಟಿದ ಮಲ್ಲಿಗೆ ಬಳೆ ಬಾಡಿದರೆ ಸಂತಾನ ಭಾಗ್ಯವಿಲ್ಲ.

೩. ಋತುಮತಿಯಾದ ಐದು ದಿನ ಜನ ಹೆಣ್ಣು 'ಮೈಲಿಗೆ'

೪. ಈ ಹೆಣ್ಣು ಮನೆಯೊಳಗಡೆ ಪ್ರವೇಶಿಸಬಾರದು, ದೇವರ ಪೂಜೆ ಮಾಡಬಾರದು.

೫. ಈ ಹೆಣ್ಣು ಹಸುಗೂಸುಗಳನ್ನು ಮುಟ್ಟಬಾರದು.

ಹೆಣ್ಣಿನ ಜೀವನದಲ್ಲಿ ಆಗುವ ಮೊದಲ ಜೈವಿಕ ಪ್ರಕ್ರಿಯೆ 'ಋತುಮತಿ' ಅದು ಜೀವವಿರುವ ಯಾವುದೇ ಜೀವಿಗಳಲ್ಲಿ ಒಂದಲ್ಲ ಒಂದು ಹಂತದಲ್ಲಿ ಆಗುವ. ಜೈವಿಕ ಬದಲಾವಣೆ ಕ್ರಿಯೆ. ಈ ಕ್ರಿಯೆ ಹೆಣ್ಣಿನಲ್ಲಿ ಪ್ರಥಮ ಬಾರಿಗೆ ಸಾಮನ್ಯಾವಾಗಿ ೯ ರಿಂದ ೧೭ನೇ ವಯಸ್ಸಿನವರೆಗೆ ಹೆಣ್ಣಿನ ದೇಹಕ್ಕೆ, ಪ್ರಕೃತಿಗೆ ಅನುಗುಣವಾಗಿ ನಡೆಯುತ್ತದೆ. ಆದರೆ ಈ ಜೈವಿಕ ಪ್ರಕ್ರಿಯೆಯನ್ನಾಧರಿಸಿ ಅನೇಕ ರೀತಿಯ ಸಂಪ್ರದಾಯ ಆಚರಣೆಗಳು ನಡೆಯುತ್ತಿವೆ.

ಅಲ್ಲದೆ ಹೀಗೆ ನಡೆಯುವ ಸಂಪ್ರದಾಯ ಆಚರಣೆಗಳೂ ಹೆಣ್ಣಿಗೆ ನಿಯಂತ್ರಣ ನಿಷೇಧ ನಿರ್ದೇಶನದೊಂದಿಗೆ ಹೆಣ್ಣಿಗೆ ಶೋಷಣೆ, ಹೆಣ್ಣಿನ ಚಲನವಲನ ಮೇಲೆ ಪರಿಣಾಮ ಬೀರುವಂತೆ ಮಾಡುತ್ತಿವೆ. ಜೈವಿಕ ಸಹಜ ಪ್ರಕ್ರಿಯೆ ಹೆಣ್ಣಿನ ದೇಹದಲ್ಲಿ ಒಂದು ಜೀವಿಗೆ ಸೃಷ್ಟಿಗೆ ಕಾರಣವಾಗುವ ಪ್ರಕ್ರಿಯೆ ಅಷ್ಟೇ ಈ ಪ್ರಕ್ರಿಯೆ ಮೊದಲ ಮುಟ್ಟಿನಿಂದ ಪ್ರಾರಂಭವಾಗುತ್ತದೆ. ಈ ಪ್ರಕ್ರಿಯೆ ಯಾವುದೇ 'ಸೂತಕ' 'ಮೈಲಿಗೆ' ದೋಷ ಸೃಷ್ಟಿಸುವಂತಹದಲ್ಲ. ಅದು ಒಂದು ಜೀವಿಯಲ್ಲಿ ವಯಸ್ಸಿಗೆ ಅನುಗುಣವಾಗಿ ಹೆಣ್ಣಿನ ದೇಹದಲ್ಲಿ ಕಾಣಿಸಿಕೊಳುವ ಜೈವಿಕ ಪ್ರಕ್ರಿಯೆ. ಮುಟ್ಟಿನ ಸಂದರ್ಭದಲ್ಲಿ ಹೆಣ್ಣಿಗೆ ವಿಶ್ರಾಂತಿ, ಆರೋಗ್ಯಕ್ಕೆ ಒಳ್ಳೆಯ ಆಹಾರ, ಮತ್ತು ಆಹಾರ ಈ ಶುಚಿತ್ವವಿದ್ದರೆ ಸಾಕು, ಹೆಣ್ಣಿಗೆ ಇಷ್ಟೆಲ್ಲ ಸೌಲಭ್ಯಗಳು ಋತುಮತಿಗೊಂಡ ನಂತರ ನೀಡಿದರೆ ಸಾಕು. ಪ್ರತಿಯೊಂದು ಸಮಾಜದಲ್ಲಿ ಮೊದಲ ಮುಟ್ಟನ್ನು ಒಂದು ದೊಡ್ಡ

'ದೋಷ'ವೆಂದು ಪರಿಗಣಿಸಿ 'ಸೂತಕ' 'ಮೈಲಿಗೆ' ಎಂದು ಹೆಣ್ಣಿನ ಪ್ರಜನನ ಶಕ್ತಿಯನ್ನು ನಿರಾಕರಿಸುತ್ತಲೇ ಬರಲಾಗಿದೆ. ಋತುಮತಿಯಾದ ಹೆಣ್ಣಿಗೆ ಸಮಾಜದಲ್ಲಿ ಬಹಳ 'ಎಚ್ಚರ'ದಿಂದ ಇರಬೇಕು ಎಂದು 'ಎಚ್ಚರಿಕೆ'ಯನ್ನು ಸೃಷ್ಠಿಮಾಡಿ ಎಚ್ಚರಿಕೆಯಲ್ಲಿ ಬಾಳುವಂತೆ ಮಾಡುತ್ತಿವೆ. ಪ್ರತಿಯೊಂದು ಜಾತಿಯಲ್ಲಿ ಸಮುದಾಯದಲ್ಲಿ ಋತುಮತಿಯಾದ ನಂತರ ಹೆಣ್ಣು ಮನೆಯ ಪುರುಷರಾಗಿರಬಹುದು, ಪರಪುರುಷರಾಗಿರಬಹುದು ಅವರೊಟ್ಟಿಗೆ ಮಾತನಾಡಬಾರದು, ಬೆರೆಯಬಾರದು, ಕೂಡಬಾರದು, ಹೊರಗಡೆ ಹೋಗಬಾರದು, ಎಂದು ಹೆಣ್ಣಿನ ಚಲನಶೀಲತೆಯನ್ನು ಕಡಿದುಹಾಕುತ್ತಿವೆ. ಹೆಣ್ಣಿಗೆ ಜೈವಿಕ ಸಹಜ ಕ್ರಿಯೆ ಸಹಜವಾಗಿ ನಡೆದರು ಅದು ಸಾಮಾಜಿಕ ಜೀವನದಲ್ಲಿ ಅಸಹಜತೆಯಾಗಿ ಬದುಕುವಂತ ಸ್ಥಿತಿ ನಿರ್ಮಾಣ ಮಾಡಿವೆ. ಇದಕ್ಕೆ ಕಾರಣಕೂಡ ಪುರುಷ ಪ್ರಧಾನ ವ್ಯವಸ್ಥೆ. ಹೀಗಾಗಿ ಈ ತೆರನಾದ ಸಂಪ್ರದಾಯ ಆಚರಣೆಗಳಿಂದ ಹೆಣ್ಣಿಗೆ ಸಾಮಾಜಿಕ ದೃಷ್ಠಿಕೋನದಲ್ಲಿ ಹೆಣ್ಣನ್ನು ಕಾಣಲಾಗಿರುವ ಬಗ್ಗೆ ಗೊತ್ತಾಗುತ್ತದೆ.

ಸಾಮಾಜಿಕ ದೃಷ್ಠಿಕೋನ: ಹೆಣ್ಣು ಋತುಮತಿಯಾದೊಡನೆ ಸಮಾಜ ವ್ಯವಸ್ಥೆಯಲ್ಲಿ ಮೊದಲು ಕಂಡುಬರುವ ಮಾತೆಂದರೆ ಹುಡುಗಿ ಕೈಗೆ ಬಂದಿದ್ದಾಳೆ, ದೊಡ್ಡವಳಾಗಿ ನಿಂತಿದ್ದಾಳೆ, ವಯಸ್ಸಿಗೆ ಬಂದಿದ್ದಾಳೆ, ಇಂತಹ ಹೆಣ್ಣನ್ನು ಮನೆಯಲ್ಲಿ ಇಟ್ಟುಕೊಳ್ಳುವುದು ಶ್ರೇಯಸ್ಸು ಅಲ್ಲ, ಇಲ್ಲವೆ ಇಂತಹ ಹೆಣ್ಣಿನ ಬಗ್ಗೆ ಮನೆಯವರು ಎಚ್ಚರದಿಂದಿರಬೇಕು, ಹೀಗೆ ಹತ್ತು ಹಲವು ಸಂಪ್ರದಾಯಿಕ ಮಾತಿನ ಸಂಗತಿಗಳು ಕಂಡುಬರುತ್ತವೆ. ಹುಡುಗಿ ದೊಡ್ಡವಳಾದರೆ ಸಾಕು, ಅವಳಿಗೆ ಮನೆಯೊಳಗೆ ಇದ್ದು ಕೆಲಸ ಮಾಡಬೆಕು, ಒಬ್ಬಳೆ ಎಲ್ಲಿಯೂ ತಿರುಗಾಡಬಾರದು, ಹುಡುಗರ ಜೊತೆ ಬೆರೆಯುವುದು ನಿಲ್ಲಿಸಬೇಕು, ಹಿರಿಯರಲ್ಲಿ, ಕಿರಿಯರಲ್ಲಿ ನಡೆದುಕೊಳ್ಳುವಾಗ ಎಚ್ಚರದಿಂದ ಇರಬೇಕು, ನೆಲನೋಡಿಕೊಂಡು ಹೋಗಬೇಕು. ಹೀಗೆ ಹಂತ, ಹಂತವಾಗಿ ಆ ಹೆಣ್ಣಿನ ಸುತ್ತ ಕಾವಲು ಹಾಕಲು ಕಾರಣವಾಗುತ್ತಿವೆ. ಈ ತೆರನಾದ ಸಂಪ್ರದಾಯಿಕ ಮಾತುಗಳು, ಹೆಣ್ಣು ಋತುಮತಿಗೊಂಡ ನಂತರ ಪ್ರಾರಂಭಗೊಳ್ಳುತ್ತವೆ. ಇವು ಹೆಣ್ಣಿನ ಆತ್ಮ ವಿಶ್ವಾಸವನ್ನು ಕುಂಠಿತಗೊಳಿಸುತ್ತವೆ. ಜೊತೆಯಲ್ಲಿ ಲಿಂಗ ತಾರತಮ್ಯದಂತಹ ಅಂಶಗಳನ್ನು ಬಿತ್ತುತ್ತವೆ. ಇವುಗಳಿಂದಾಗಿ ಹೆಣ್ಣಿಗೆ ದೊರೆಯಬೇಕಾದ ಸ್ಥಾನಮಾನ, ಶಿಕ್ಷಣ, ಸಾಮಾಜಿಕ, ರಾಜಕೀಯ, ಆರ್ಥಿಕ, ದೊರೆಯದೆ ಹೋಗುತ್ತವೆ. ಪ್ರಾತಿನಿಧ್ಯ ಇದಕ್ಕೆ ಗೊಲ್ಲ ಸಮುದಾಯದವರಲ್ಲಿ ಹೆಣ್ಣು ಮಗಳು ಋತುಮತಿಗೊಂಡರೆ (ಆ ಹೆಣ್ಣನ್ನು) ಆಕೆಯನ್ನು ಶಾಲೆ–ಕಾಲೇಜುಗೆ ಕಳುಹಿಸದೆ ಇರುವುದು ಕಂಡುಬರುತ್ತದೆ. ಇತ್ತೀಚಿನ ದಿನಮಾನಗಳಲ್ಲಿ ಅಂತಹ ಸಂಪ್ರದಾಯ ಆಚರಣೆಗಳು ಕಡಿಮೆ ಎನಿಸಿದರು. ಅದರ ಪರಿಣಾಮ ಈಗಲೂ ಆಕಯ ಸಾಮಾಜಿಕ ಚಹರೆಯನ್ನು ಅಳಿಸಿಹಾಕುವಲ್ಲಿ ಪ್ರಧಾನ ವಹಿಸುತ್ತಿವೆ. ಜಾಗತೀಕರಣದ ದಿನಮಾನಗಳಲ್ಲಿ ಇದೇವೆಂದರೂ, ಋತುಮತಿಯಾಗುವ ನೈಸರ್ಗಿಕ ಪ್ರಕ್ರಿಯೆ ಹೆಣ್ಣನ್ನು ಶಿಕ್ಷಣ

ರಂಗದಿಂದ ದೂರ ಇಡುವಂತೆ ಮಾಡುವಲ್ಲಿ ಪ್ರಬಲ ಪಾತ್ರ ವಹಿಸುತ್ತದೆ. ಇದನ್ನು ಹೆಣ್ಣು ಮಕ್ಕಳು ಶಾಲಾ ಬಿಡುವಿಕೆಯ ಅಂಕಿ-ಸಂಖ್ಯೆಗಳನ್ನು ಅಧ್ಯಯನಕ್ಕೊಳಪಡಿಸಿದಾಗ ತಿಳಿದುಬರುತ್ತದೆ.

ಇನ್ನೂ ಹೆಣ್ಣು ಋತುಮತಿಗೊಂಡ ನಂತರ ಆ ಹೆಣ್ಣಿಗೆ ನೀಡುವ ಮಾರ್ಗದರ್ಶನದಲ್ಲಿ ಅಥವಾ ತಿಳುವಳಿಕೆಯ ಮಾತುಗಳಲ್ಲಿ ಹೆಚ್ಚಾಗಿ ಹೆಣ್ಣಿಗೆ ನಿಯಂತ್ರಣ, ನಿಷೇಧದ ಸಂಗತಿಗಳಿಂದ ಕೂಡಿರುತ್ತದೆ. ದೊಡ್ಡವಳಾದ ನಂತರ ಹೆಣ್ಣನ್ನು ಹೊರಗಡೆ ಕಳುಹಿಸಬೇಕಾದ ಸಂದರ್ಭ ಬಂದರೆ, ಆ ಹೆಣ್ಣಿನ (ಹುಡುಗಿ) ಜೊತೆಗೆ ಮನೆಯ ಹಿರಿಯರು ಅಥವಾ ಅಣ್ಣ, ತಮ್ಮ ಇವರಲ್ಲಿ ಯಾರಾದರೊಬ್ಬರು ಕಾವಲು ಕಾಯುತ್ತಿರುತ್ತಾರೆ.

ಹೆಣ್ಣಿನ ಜೈವಿಕ ಸಹಜ ಕ್ರಿಯೆಯನ್ನು 'ಹೊಲಸು' ಅಸ್ಪೃಶ್ಯತೆ' ಇದು 'ಸೂತಕ' 'ಮೈಲಿಗೆ 'ದೋಷ' ಎಂದು ಮುಂತಾಗಿ ನಿರ್ವಚಿಸಲಾಗಿದೆ. ಹೀಗೆ ಹೆಣ್ಣು ಸ್ವತಃ ತನ್ನ ದೇಹದ ಬಗ್ಗೆ ಕೀಳರಿಮೆಯನ್ನು ಬೆಳೆಸಿಕೊಳ್ಳುವುದರ ಜೊತೆಯಲ್ಲಿ ಕಳೆದುಕೊಳ್ಳುತ್ತಾರೆ. ಇದಕ್ಕೆ ಮುಗೇರದಲ್ಲಿ ಋತಿಮತಿಯಾದ ಹುಡಿಗಿಯ ಪಕ್ಕದಲ್ಲಿ ಮಕ್ಕಳನ್ನು ಆಡಲು ಬಿಡುತ್ತಾರೆ. ಹಾಗೆ ಆಕೆಯ ಸೋದರ ಮಾವನಿಗೆ ಮೊದಲ ಸುದ್ದಿ ಮುಟ್ಟಿಸುತ್ತಾರೆ. ಪ್ರಕ್ರಿಯೆಗಳು ಹುಟ್ಟಿದ ಮನೆಯಿಂದ ಗಂಡನ ಮನೆಗೆ ಹೋಗುವಂಥ ಪ್ರಕ್ರಿಯೆಗಳನ್ನು ಪರೋಕ್ಷ ನೆಲೆಯಲ್ಲಿ ಬಿತ್ತರಿಸುತ್ತವೆ. ಇಂತಹ ಆಚರಣೆಗಳಿಂದ ತಿಳಿದುಬರುವುದೇನೆಂದರೆ ಋತುಮತಿಗೊಂಡ ಹೆಣ್ಣಿಗೆ ನಿನ್ನ ಕೆಲಸ ವಿವಾಹವಾಗುವುದು, ಮಕ್ಕಳನ್ನು ಹೇರುವುದು ಎಂದು ಬೋಧಿಸುವುದು ಬದ್ಧಗೊಳಿಸುವುದಾಗಿದೆ.

ಕೇವಲ ದೇಹದಲ್ಲಿನ ಜೈವಿಕ ಬದಲಾವಣೆ ಹೆಣ್ಣಿನ ಜೀವನದ ಮೇಲೆ ಇಷ್ಟೆಲ್ಲ ಪರಿಣಾಮ ಬೀರಲು ಕಾರಣವಾಗಿರುವುದಕ್ಕೆ ಜೈವಿಕತೆಯನ್ನಾಧರಿಸಿದ ಸಂಪ್ರದಾಯ ಆಚರಣೆಗಳೆನ್ನಬಹುದು. ಇವು ಲಿಂಗತಾರತಮ್ಯ, ಶ್ರಮ ವಿಭಜನೆ, ಅಸಮಾನತೆ, ಅಧಿಕಾರ ಹಂಚಿಕೆ, ಮುಂತಾದ ಅಂಶಗಳನ್ನು ಸಮಾಜದಲ್ಲಿ ಬಿತ್ತುತ್ತವೆ ಹಾಗೇ ಜೀವವರ್ಗದಲ್ಲಿನ ಜೀವಿಗಳಲ್ಲಿ ಅಸಮಾನತೆಯನ್ನು ಬೇರೂರಲೂ ಕಾರಣವಾಗುತ್ತವೆ. ಆ ಮರುಷನಿಗೆ ವಯಸ್ಸಿಗೆ ಬಂದರೂ (ವೀರ್ಯಾಣು ಉತ್ಪಾದನೆಯಾಗುವ ಹಂತಕ್ಕೆ) ಆತನಿಗೆ ಯಾವುದೇ ರೀತಿಯ ಸಂಪ್ರದಾಯ ಆಚರಣೆಗಳು ಇಲ್ಲ. ಹೆಣ್ಣಿಗೆ ಮಾತ್ರ ಇವೆಲ್ಲ ಯಾಕೆ ಎಂದು ಕೇಳುವ ಜರೂರಿದೆ ಎನ್ನುವ ಪ್ರಶ್ನೆಗಳನ್ನು ಸಂಪ್ರದಾಯ ಆಚರಣೆಗಳನ್ನು ವಿಮರ್ಶಿಸಿ ನೋಡಿದರೆ ಉತ್ತರ ಬರುವುದು ಪುರುಷ (ಪಿತೃ) ಪ್ರಧಾನತೆಯ ರಾಜಕಾರಣ ಸ್ಪಷ್ಟವಾಗುತ್ತದೆ. ಸಮಾಜದಲ್ಲಿ ಪುರುಷನೆ 'ಶ್ರೇಷ್ಠ' ಎಂದು ಮುಂದುವರೆಯಬೇಕಾದರೆ ಈತರನಾದ ಸಂಪ್ರದಾಯ ಆಚರಣೆಗಳು ಮುನ್ನಡೆಸಿಕೊಂಡು ಬರಬೇಕು ಅವನ ಈ ತಂತ್ರಗಾರಿಕೆಯಿಂದಾಗಿಯೇ ಇಂದಿಗೂ ಹೆಣ್ಣಿನ ಜೈವಿಕತೆಯ ಸುತ್ತ ನಂಬಿಕೆ ಸಂಪ್ರದಾಯ ಆಚರಣೆಗಳನ್ನು ಇಂದಿಗೂ ಮುಂದುವರೆಯುತ್ತಿವೆ.

ಹೆಣ್ಣಿಗೆ ಇವುಗಳಿಂದಾಗಿ ಪುರುಷನಿಗೆ ಸಮನವಾಗಿ ಬದುಕದಂತ ಸ್ಥಿತಿಗೆ ಕಾರಣವಾಗಿವೆ. ಹಾಗೇ ಇವು ಹೆಣ್ಣಿಗೆ ಸಾಮಾಜಿಕ ಜೀವನದ ಕನಿಷ್ಠ ಅವಶ್ಯಕತೆ ಸೌಲಭ್ಯಗಳನ್ನು ತಿರಸ್ಕರಿಸಲಿಕೆ ಕಾರಣವಾಗಿವೆ. ಉದಾಹರಣೆಯಾಗಿ ಈ ಋತುಮತಿಗೊಂಡ ನಂತರ ಎಲ್ಲ ಜಾತಿ, ವರ್ಗ, ಜನಾಂಗ ಸಮುದಾಯದಲ್ಲಿ ಹೆಣ್ಣಿಗೆ, ನೀರು, ಆಹಾರ, ವಸತಿ, ಬಟ್ಟೆ ಇತರೆ ಸೌಲಭ್ಯಗಳನ್ನು ದೂರದಿಂದ ಎತ್ತಿ ಹಾಕುತ್ತಿರುವುದರಿಂದ ತಿಳಿಯಬಹುದಾಗಿದೆ. ವೈಜ್ಞಾನಿಕವಾಗಿ ನೋಡಿದರೆ ಹೆಣ್ಣಿನ ದೇಹದಲ್ಲಿ ನಡೆದ ಬದಲಾವಣೆಗೂ ಅದಕ್ಕೆ ಸಂಬಂಧಿಸಿದಂತೆ ಸಂಪ್ರದಾಯ ಆಚರಣೆಗಳಿಗೂ ಯಾವುದೆ ಸಂಬಂಧವಿಲ್ಲ. ಈ ಸಂದರ್ಭದಲ್ಲಿ ಕೇವಲ ವಿಶ್ರಾಂತಿ ಶುಚಿತ್ವ ದೃಷ್ಠಿಯಿಂದ ಆರೋಗ್ಯ ಕೇಂದ್ರವಾಗಿಟ್ಟುಕೊಂಡು ನೋಡಬೇಕಿದೆ. ದುಷ್ಪಶಕ್ತಿ' ಅನಿಷ್ಠ' ಮೈಲಿಗೆ' 'ಸೂತಕ' ದೋಷ ಎನ್ನುವ ದೃಷ್ಠಿಯಿಂದ ನೋಡಬಾರದು. ಈ ತೆರನಾದ ಸಂಪ್ರದಾಯ ಆಚರಣೆ ಪುರುಷನಿಗಿಲ್ಲ ಅವನ ಜೈವಿಕ ಕ್ರಿಯೆಗಳು ಅವನಿಗೆ ಹೆಮ್ಮೆ, ಗೌರವ, ಘನತೆ, ಶ್ರೇಷ್ಠತೆ ತಂದುಕೊಡುತ್ತದೆ. ಪುರುಷನ ಜೈವಿಕತೆಗೆ ಯಾವುದೆ 'ಅಶುದ್ಧ' ಅಶೌಚ್ಯ' ಮೈಲಿಗೆ, ಸೂತಕ, ದೋಷ, ಯಾವುದು ಇಲ್ಲ ಹೆಣ್ಣು ಮತ್ತು ಗಂಡನ್ನು ಕೇಂದ್ರವಾಗಿಟ್ಟು ನಡೆದ ಈ ಬಗೆಯ ನಿರ್ವಚನಗಳು ಹೊರಟಿವೆ. ಪುರುಷ ಪ್ರಧಾನ ನೆಲೆಯಿಂದಲೇ ಭಿನ್ನ ಜೈವಿಕತೆಯನ್ನಾಧರಿಸಿದ ನಡೆಯುವ ಸಂಪ್ರದಾಯ ಆಚರಣೆಗಳು ಹೆಣ್ಣಿಗೆ 'ಕನಿಷ್ಠ' ಅಧೀನತೆ 'ಅಸ್ಪೃಶ್ಯತೆ'ಗೆ ಕಾರಣವಾದರೆ ಗಂಡಿಗೆ ಹೆಮ್ಮೆ, ಗೌರವ, ಘನತೆಗೆ ಕಾರಣವಾಗುತ್ತವೆ.

ಇನ್ನು ಜೈವಿಕ ಸಹಜ ಕ್ರಿಯೆಗಳಲ್ಲಿ ಮತ್ತೊಂದಾದ ತಿಂಗಳ ಮುಟ್ಟು ಕುರಿತು ಹಲವು ನಿಷೇಧ ನಿಯಂತ್ರಣ, ನಂಬಿಕೆಗಳ ಸಂಪ್ರದಾಯಗಳು ಕಂಡುಬರುತ್ತವೆ. ಅವುಗಳನ್ನು ಕೂಡ ಜಾತಿ, ಜನಾಂಗ, ಸಮುದಾಯವನ್ನಾಧರಿಸಿ ನೋಡಿದರೆ ಈ ರೀತಿಯಾಗಿ ಕಂಡುಬರುತ್ತವೆ.

೪.೨. ತಿಂಗಳ ಮುಟ್ಟು: ಸಂಪ್ರದಾಯ ಆಚರಣೆ

ಹೆಣ್ಣಿನ ಜೈವಿಕತೆಯ ಪ್ರಕ್ರಿಯೆಯಲ್ಲಿ ತಿಂಗಳಿಗೊಮ್ಮೆ 'ಮುಟ್ಟಾಗುವುದು (ಹೆಣ್ಣಿನ ದೇಹದಿಂದ ತಿಂಗಳಿಗೊಂದು ಅಂಡಾಣು ಹೊರಬರುವುದು) ಸಹಜ ಕ್ರಿಯೆಯಾಗಿದೆ ಮತ್ತು ಇದು ಹೆಣ್ಣಿನ ಫಲವಂತಿಕೆಯ ಸ್ಥಿತಿಯನ್ನು ಸೂಚಿಸುವ ಜೈವಿಕ ಕ್ರಿಯೆಯಾಗಿದೆ. ಹೆಣ್ಣಿನ ದೇಹದಲ್ಲಿ ಪ್ರತಿ ತಿಂಗಳಿಗೊಮ್ಮೆ ನಡೆಯುವ ಜೈವಿಕ ಕ್ರಿಯೆಗಳನ್ನಾಧರಿಸಿ ಆ ಗಳಿಗೆಯನ್ನು ಮೈಲಿಗೆಯೆಂದು ಪರಿಭಾವಿಸಲಾಗಿದೆ. ಮನೆಯ ಹೊರಗಡೆ ಅಥವಾ ಮನೆಯ ಯಾವುದೋ ಒಂದು ಮೂಲೆಯಲ್ಲಿ ಮುಟ್ಟಾದ ಹುಡುಗಿಯನ್ನು ಕೂಡಿಸುತ್ತಾರೆ.

ಬ್ರಾಹಣರಲ್ಲಿ "ಮುಟ್ಟಾದ ಮಹಿಳೆಯರನ್ನು ೩ ದಿನಗಳ ಕಾಲ ಮನೆಯ ಮೂಲೆಯಲ್ಲಿ ಕೂಡಿಸುತ್ತಾರೆ. ಅವಳಿಗೆಂದೇ ತಾಮ್ರ ತಂಬಿಗೆ, ಹಾಸಿಗೆ ಪ್ರತ್ಯೇಕ ಇರುತ್ತದೆ. ಇವುಗಳನ್ನು ಹಾಗೆಲ್ಲ ಮುಟ್ಟಾದ ಹೆಣ್ಣನ್ನು ಶೂದ್ರರಂತೆ, ಅಸ್ಪೃಶ್ಯತೆ ಕಾಣುತ್ತಾರೆ. ಮನೆಯಲ್ಲಿ ಯಾವುದೇ

ಮಗು ಇರಲಿ ಹಿರಿಯರಿರಲಿ, ಕಿರಿಯರಿರಲಿ, ಆಕೆಯನ್ನು ಮುಟ್ಟಬಾರದು. ಹಾಗಾಗಿ ಮುಟ್ಟಾದ ಹೆಣ್ಣನ್ನು ಪ್ರತ್ಯೇಕವಾಗಿ ಇರಿಸಲಾಗುತ್ತದೆ ಎಂದು ಕಮಲಮ್ಮ ಹೇಳುತ್ತಾರೆ.

ಗೊಲ್ಲ ಜನಾಂಗದಲ್ಲಿ: "ಮುಟ್ಟಾದವರನ್ನು ನಾಲ್ಕೈದು ದಿನಗಳವರೆಗೆ ಊರಿನಿಂದ ಹೊರಗಿಡುತ್ತಾರೆ. ಅವರನ್ನು ಗ್ರಾಮದ ಊರ ಅಂಚಿನಲ್ಲಿ, ಇಡಲಾಗುತ್ತದೆ. ಮರಗಳ ನೆರಳಿನಲ್ಲಿ ಆಸರೆ ಪಡೆಯುತ್ತಾರೆ. ಹಾಗೇ ಇವರಿಗೆ ಕೆಲವು ನಿಷೇಧಗಳನ್ನು ಹಾಕಲಾಗುತ್ತದೆ. ದೈವಿಕ ಕಾರ್ಯ, ಸಾರ್ವಜನಿಕ ಕಾರ್ಯಗಳಲ್ಲಿ ಪಾಲ್ಗೊಳ್ಳದಂತೆ ಹೆಣ್ಣಿಗೆನಿಷೇಧ ಹಾಕಲಾಗುತ್ತದೆ. ಮುಟ್ಟಾದವಳು 'ಚಾಂಡಲಕನ್ಯೆ' ಆಗಿರುತ್ತಾಳೆ ಎಂದು ಭಾವಿಸಿ ಅವಳನ್ನು ದೂರವಿರಿಸಿ ಊಟ, ನೀರು, ಉಡುಗೆ, ತೊಡುಗೆ ಎಲ್ಲವನ್ನು ಎತ್ತಿ ಹಾಕಲಾಗುತ್ತದೆ. ಜೊತೆಗೆ ಬೇಕಾದಷ್ಟು ಕೆಲಸ ಮಾಡಿಸಿಕೊಂಡು ಆ ಕೆಲಸದ ಪಡೆದ ವಸ್ತುಗಳಿಗೆ ನೀರು ಚಿಮುಕಿಸಿ ಶುದ್ಧಮಾಡಿಕೊಂಡು ತಾವು ಮುಟ್ಟಬಹುದು ಎಂಬ ಭಾವನೆಯೊಂದಿಗೆ ವಸ್ತುಗಳನ್ನು ಮನೆಯೊಳಗಡೆ ತೆಗೆದುಕೊಂಡು ಹೋಗುತ್ತಾರೆ. ಆದರೆ ಈ ಸಂದರ್ಭದಲ್ಲಿ ಅವಳ ಮನದಲ್ಲಿ ಆದ ನೋವವನ್ನು ಯಾರು ಊಹಿಸುವುದಿಲ್ಲ. ಹೆಣ್ಣು ಮುಟ್ಟಾದಾಗ ಪ್ರತ್ಯೇಕತೆಯನ್ನು ಕಾಪಾಡುವುದು ನಮ್ಮ ಸಮುದಾಯದ ಪದ್ಧತಿ ಸಂಪ್ರದಾಯ ಆಚರಣೆ ಎಂದು ಹೇಳುತ್ತಾರೆ. ಜೊತೆಗೆ ಅದನ್ನು ಯಾರು ಮೀರುವಂತಿಲ್ಲ (ಮುರಿಯುವಂತಿಲ್ಲ) ಯಾಕೆಂದರೆ ಇದೊಂದು ಅಶುದ್ಧತೆಯ ಸಂಕೇತ, ಮೈಲಿಗೆಯ ಪರಿಕಲ್ಪನೆ ಇಟ್ಟುಕೊಂಡು ಇದನ್ನು ಅಚ್ಚುಕಟ್ಟಾಗಿ, ವಿಧಿವತ್ತಾಗಿ ಆಚರಿಸಿಕೊಂಡು ಬರುತ್ತಾರೆ" (ಗುರುಲಿಂಗಯ್ಯ ಎಂ., ೨೦೦೫, ಪು.೩೩)

ಕುರಿಹಿನ ಶೆಟ್ಟರಲ್ಲಿ: "ಇದೊಂದು 'ಒಸಗೆ' ಎಂಬ ನಂಬಿಕೆ ಇದೆ, ಆಕೆಯು ತಿಂಗಳಿಗೊಮ್ಮೆ ಮುಟ್ಟಾದಾಗ ಅವಳು ದಿನಾಲು ಸ್ನಾನ ಮಾಡಿ ಬಟ್ಟೆ ಬದಲಾಯಿಸುತ್ತಿರುತ್ತಾಳೆ. ಕೆಲವೆಡೆಗಳಲ್ಲಿ ಮೂರು ದಿನಗಳ ಕಾಲ ಮಾತ್ರ ಮನೆಯಿಂದ ಹೊರಗಿಡುವ ಪದ್ಧತಿ ಇದೆ. ತಾವು ಹೊರಗಿದ್ದ ಅವಧಿಯಲ್ಲಿ ಉಪಯೋಗಿಸುತ್ತಿದ್ದ ಹಾಸಿಗೆ, ಬಟ್ಟೆ, ಊಟದ ತಟ್ಟೆ, ಲೋಟಗಳನ್ನು 'ಮಡಿ' ಮಾಡಿ ಮನೆಯೊಳಗಡೆ ತರುತ್ತಾರೆ. ಹಾಗೆ ಒಳಗೆ ಬಂದ ಮೇಲೆ ಮತ್ತೊಮ್ಮೆ ಅವಳು ಸ್ನಾನ ಮಾಡಿ ಮಡಿ ಮಾಡಿಕೊಳ್ಳುವವರೆಗೆ ತನ್ನ ಗಂಡನೊಂದಿಗೆ ಮಲಗುವಂತಿಲ್ಲ, ದೇವಸ್ಥಾನಗಳಿಗೆ ಹೋಗುವಂತಿಲ್ಲ. ದೇವರಿಗೆ ಧೂಪ ಹಾಕುವಂತಿಲ್ಲ, ಮಂಗಳಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ, ಇನ್ನೂ ಯಾವುದಾದರೂ ಕಾರ್ಯವನ್ನು ನಂಬಿಕೊಂಡಾಗ ಬೇರೆಲ್ಲಿಗಾದರೂ ಪ್ರಯಾಣ ಹೊರಟಾಗ ಮಂಗಳ ಕಾರ್ಯ ಮಾಡುವಾಗ ಒಂದು ಮುಟ್ಟಾದ ಹೆಣ್ಣು ಪ್ರಯಾಣ ಹೊರಟಾಗ ಎದುರು ಬಂದರೆ ಅಮಂಗಳಕರ, ಅಪಶಕುನ ಎಂದು ತಿಳಿಯುತ್ತಾರೆ. ಇನ್ನು ಕೆಲವು ಶುಭಕಾರ್ಯಗಳಲ್ಲಿ ಮನೆದೇವರು ಪೂಜೆ ಮಾಡುವಲ್ಲಿ ಮುಟ್ಟಾದವರ ಹೆಸರು ಹೇಳುವಂತಿಲ್ಲ ಆದುದರಿಂದಾಗಿ ಮೈನೆರೆಯುವುದಕ್ಕಿಂತ

ಮೊದಲೆ ಮದುವೆ ಮಾಡುವ ಪದ್ಧತಿಯೂ ಹಿಂದೆ ಇತ್ತು. ಇದೊಂದು ಪಾಪದ ಪರಿಕಲ್ಪನೆಯಿಂದಾಗಿಯೂ ಕೂಡಬೇಗನೆ ಮಾಡುತ್ತಿದ್ದರು".(ಮಂಜಪ್ಪಶೆಟ್ಟಿ ಎಂ.ಪಿ., ಮಸಗಲಿ, ೨೦೦೦, ಪು.೧೩೪)

ಉಪ್ಪಾರ ಸಮುದಾಯದಲ್ಲಿ: "ಮುಟ್ಟಾದ ಸಮಯದಲ್ಲಿ ಮಂಗಳ ಕಾರ್ಯ, ಪೂಜೆ, ದೇವರಕೋಣೆ, ಅಡುಗೆ ಪಾತ್ರೆಗಳು, ಕೆಲವು ವ್ರತ, ವೈಯಕ್ತಿಕ ಪೂಜೆಗಳನ್ನು ನಿಲ್ಲಿಸುತ್ತಾರೆ. ಅದೊಂದು ಮೈಲಿಗೆ ಎಂದು ತಿಳಿದು ಅವರಿಗೆ ಇಂತಹ ಕೆಲವು ನಿಷೇಧಗಳನ್ನು ಹಾಕುತ್ತಾರೆ. ನಂತರ ಸ್ನಾನ ಮಾಡಿದ ನಂತರ ಮನೆಯ ಇತರೆ ಸ್ಥಳಗಳಿಗೆ ಪ್ರವೇಶ. ಅಂದು ಯಾವುದೇ ರೀತಿಯ ಇತರೆ ಕಾರ್ಯ, ಚಟುವಟಿಕೆಗಳಿಗೆ ಅವಕಾಶ ಮಾಡಿಕೊಡುವುದಿಲ್ಲ. ಮುಟ್ಟಾದವಳನ್ನು 'ಅಪವಿತ್ರ'ಳೆಂದು ಭಾವಿಸುವ ಪದ್ಧತಿ ಇವರಲ್ಲಿದೆ".

ಮೇಲೆ ಉಲ್ಲೇಖಿಸಿದ ಆಚರಣೆಗಳು ಉಲ್ಲೇಖಿತ ಸಮುದಾಯಗಳಲ್ಲಿ ಮಾತ್ರ ಇಲ್ಲ. ಈ ಬಗೆಯ ಸಂಪ್ರದಾಯ ಆಚರಣೆಗಳು ಪ್ರತಿ ಜಾತಿಗಳಲ್ಲಿ, ಬುಡಕಟ್ಟುಗಳಲ್ಲಿ ಇವೆ. ಇತ್ತೀಚಿನ ದಿನಗಳಲ್ಲಿ 'ಮುಟ್ಟಿನ' ಕುರಿತು ಇರುವ ನಂಬಿಕೆಗಳು ಸಂಪ್ರದಾಯ ಆಚರಣೆಗಳು "ಮಲೆನಾಡಿನ ಹಳ್ಳಿಗಳಲ್ಲಿ ಪುಟ್ಟ, ಪುಟ್ಟ ಸಂಪ್ರದಾಯಸ್ಥ ಮನೆಯ ಮೆಟ್ಟಿಲು, ಜಗುಲಿಯಲ್ಲಿ ಕಂಬಳಿ, ಹಾಸಿಗೆ, ಪ್ಲಾಸ್ಟಿಕ್ ಚಂಬು ಅದಕ್ಕೆ ಮೆತ್ತಿದ ಸಗಣಿ ಇವಿಷ್ಟು ಸಾಮಗ್ರಿಗಳನ್ನು ಮನೆಯ ಜಗಲಿಯ ಮೇಲೆ ಇಟ್ಟಿರುತ್ತಾರೆ. ಅವು ಆ ಮೆನೆ ಹೆಣ್ಣು ಋತುಮತಿಯಾದ ನಂತರ ಹೆಣ್ಣಿನ ಮನೆಯ ಹತ್ತಿರ ಇರಬೇಕಾದ ಸಾಮಾಗ್ರಿಗಳು ಎಂದು.

ಇಂದಿಗೂ ಋತುಸ್ರಾವದ ದಿನಗಳಲ್ಲಿ ಹಿತ್ತಲು, ಹೆಬ್ಬಾಗಿಲು, ಅಂಗಗಳಲ್ಲಿ ಕಳೆಯುವ ಇವರು ದೇವರ ಮನೆ, ಅಡುಗೆ ಮನೆಯನ್ನು ಪ್ರವೇಶಿಸುವುದಿಲ್ಲ. ಹೊಟ್ಟೆ ನೋವಿರಲಿ, ಸೊಂಟನೋವಿರಲಿ ಥಂಡಿ ಇರಲಿ ಅಂಗಳದಲ್ಲಿ ಅಡಿಕೆ ಬಿಡಿಸುವುದು ಇರಲಿ ಇವರಲ್ಲಿ ಅನೇಕರು ಪತ್ರಬೇರು ತೊಯ್ದು ಸೀಕುತ್ತಾ ಕರಿಎಳ್ಳು ಹುರಿದು ತಿನ್ನುತ್ತಾ, ಮುಟ್ಟು ಮುಂದಾಗಿಸಲು ಪ್ರಯತ್ನ ಪಟ್ಟರೆ ಇನ್ನು ಕೆಲವರು ತಲೆಸ್ನಾನ ಮಾಡುತ್ತಾ ಕೆಮ್ಮಣ್ಣು ನೀರು ಕುಡಿಯುತ್ತಾ, ಮುಟ್ಟು ಹಿಂದಾಗಿಸಲು ಒಟ್ಟಿನಲ್ಲಿ ಎಷ್ಟೇ ತ್ರಾಸಪಟ್ಟಾದರೂ ಅದನ್ನು ಹಿಂದೆ ಮುಂದೆ ಮಾಡಿಕೊಳ್ಳುವ ಪ್ರಯತ್ನದಲ್ಲಿರುತ್ತಾರೆಯೇ ಹೊರತು, ಆ ಮೂರು ದಿನಗಳನ್ನ ಮನೆಯ ಒಳಗಡೆ ಕಳೆಯುವ (ಕಳೆಯುವ) ಧೈರ್ಯವನ್ನು ಮಾಡುವುದಿಲ್ಲ. ಯಾವುದೋ ಅವ್ಯಕ್ತ ಭಯ, ಬಹುಶಃ ಹಿರಿಯರದಿರಬಹುದು, ದೇವರದಿರಬಹುದು ಅಥವಾ ಧರ್ಮ ಕುರಿತು ಇರಬಹುದು. ಯಾವುದೋ ಭಯ ಅವರನ್ನು ಕಾಡುತ್ತಿರುತ್ತದೆ ಎಂಬುದು ನಗ್ನ ಸತ್ಯ

ಕಾಲ ಇಷ್ಟು ಮುಂದುವರೆದರೂ ತಿಂಗಳ ಋತುಸ್ರಾವ ಸಾಮಾನ್ಯ ಕ್ರಿಯೆ. ಹೆಣ್ಣಿನ ದೇಹದಲ್ಲಾಗುವ ಸಾಮಾನ್ಯ ಬದಲಾವಣೆ ಮುಟ್ಟಿನಿಂದ ಯಾರಿಗೂ ಕೇಡಾಗಲ್ಲ. ವೈಜ್ಞಾನಿಕವಾಗಿ

ತಿಳಿಸಿ ಹೇಳಿದರೂ ಅದನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿ ಪುರುಷ ಪ್ರಧಾನ ಸಮಾಜ ಇಲ್ಲಿದೆ. ಮಲೆನಾಡಿನಲ್ಲಿ ಚೊಂಬು ಹಿಡಿದು ಓಡಾಡುವ ಇವರು ತಮ್ಮಿಂದ ಗಂಡಸರು ಆಕರ್ಷಿತರಾಗಬಾರದು ಎಂಬ ಉದ್ದೇಶದಿಂದ ಕೂದಲು ಬಾಚಿಕೊಳ್ಳುವುದಿಲ್ಲ. ಕುಂಕುಮ ಇಡುವುದಿಲ್ಲ. ೪ನೇ ದಿನ ಬಚ್ಚಲಿನಲ್ಲಿ ಸ್ನಾನ ಮಾಡುವಾಗ ಹಿಂದಿನ ದಿನದ ಮುಸುರೆ (ಅನ್ನದೊಸೆ) ತಿಂದು ತುಳಸಿ ನೀರು ಕುಡಿದರೆ ಮಾತ್ರ ದೇಹ ಶುದ್ಧಿಯಾಗುತ್ತದೆ ಎಂಬ ನಂಬಿಕೆ ಇವರಲ್ಲಿ ಇಂದಿಗೂ ಜೀವಂತವಾಗಿದೆ. ಈ ಮಹಿಳೆಯರಿಗೆ ಸಣ್ಣ ಸಣ್ಣ ಮಕ್ಕಳಿದ್ದರಂತೂ ಅವರ ಫಜೀತಿ ಹೇಳುವುದು ಬೇಡ, ಅವರಿಗೂ ಊಟ, ತಿಂಡಿ, ಹೊರಗಡೆ ಕೊಡುತ್ತಾರೆ.

ಅಂಬಿಗರ ಸಂಸ್ಕೃತಿಯಲ್ಲಿ: "ಮುಟ್ಟಾದವಳು ಅರಗೋಲು ಹೇರಿದರೆ ಆಕೆಯು ಹೇರುವ ಮುನ್ನ ನದಿಯ ದಡದಲ್ಲಿ ಆಕೆಯನ್ನು (ಆ ಹೆಣ್ಣು) ಕೂರಿಸಿ ಉಟ್ಟಿನಿಂದ ನೇಮ ಮಾಡುವುದರ ಮೂಲಕ ಆಕೆಯನ್ನು ಮಡಿಗೊಳಿಸಿ ದೋಣಿಗೆ ಹತ್ತಿಸಿಕೊಳ್ಳುತ್ತಾರೆ. ಒಂದು ವೇಳೆ ಈ ನೇಮ ಮಾಡದೆ ಹೋದರೆ ಮತ್ತು ದೋಣಿಯೇರಿದರೆ ದೋಣಿ ಮುಳುಗುತ್ತದೆ. ಎಂಬುದು ಅಂಬಿಗರ ನಂಬಿಕೆ. ಆದುದರಿಂದ ಈ ಸಂಪ್ರದಾಯವನ್ನು ತಪ್ಪದೇ ಆಚರಿಸುತ್ತಾರೆ (ಅನುಸರಿಸುತ್ತಾರೆ) ಇದನ್ನು ದೋಣಿಯಲ್ಲಿ ಕುಳಿತಾಗ ದೋಣಿಯಲ್ಲಿ ಕುಳಿತ ಎಲ್ಲರಿಗೆ ನದಿಯಲ್ಲಿ ಅಥವಾ ಹೊಳೆಯಲ್ಲಿ ದೋಣಿ ಸ್ವಲ್ಪ ಮುಂದಕ್ಕೆ ಹೋದ ನಂತರ ಅಂಬಿಗರ ಸರ್ವೆಸಾಮಾನ್ಯವಾಗಿ ನೀರನ್ನು ಚಿಮುಕಿಸುತ್ತಾರೆ ಎಂದು ಆನೆಗುಂದಿಯ ಸೋಮಪ್ಪ ಅಂಬಿಗರ ಹೇಳಿದರು.

ಹೀಗೆ ಈ ಮೇಲಿನ ಎಲ್ಲಾ ಜಾತಿ, ಸಮುದಾಯದಲ್ಲಿ ದೊರೆಯುವ 'ಮುಟ್ಟಿನ' ಕುರಿತಾದ ಸಂಪ್ರದಾಯ ಆಚರಣೆಗಳು, ಹೆಣ್ಣಿಗೆ ಸಾಮಾಜಿಕ ಸ್ಥಾನಮಾನ ಇಲ್ಲದಂತೆ ಮಾಡಿರುವುದು ಕಂಡುಬರುತ್ತದೆ. ಯಾಕೆಂದರೆ ಜೈವಿಕ ಕ್ರಿಯೆಯನ್ನು ಆಧರಿಸಿ ಹೆಣ್ಣಿನ ದೇಹ 'ಅಪವಿತ್ರ' 'ಅಶುದ್ಧ' ಎನ್ನುವ ಹಿನ್ನಲೆಯಿಂದಲೆ ನಿರ್ವಚಿಸಲಾಗುತ್ತದೆ. ಈ ಬಗೆಯ ನಿರ್ವಚನಗಳು ತಾತ್ವಿಕ ನೆಲೆಗಳಲ್ಲಿ ನಿಂತುಕೊಳ್ಳುವುದಿಲ್ಲ. ಬದಲಾಗಿ ತಾನು ಹೆಣೆದ ಹೆಣ್ಣಿನ ಬಗೆಯ ತಾತ್ವಿಕತೆಯನ್ನು ಕ್ರಿಯಾರೂಪದಲ್ಲಿ ಇಳಿಸುತ್ತದೆ. ಅವುಗಳು ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನಕ್ಕೆ ಕುಂದುಂಟು ಮಾಡುತ್ತಿವೆ. 'ಹೆಣ್ಣಿಗೆ ಮುಟ್ಟು' ಎನ್ನುವುದು ಒಂದು ಜೀವಕ್ಕೆ ಜನ್ಮ ನೀಡುವ ಶಕ್ತಿಯನ್ನು ಒಳಗೊಂಡಿರುವ 'ಅಂಡಾಣು' ಅಷ್ಟೆ. ಆ ಅಂಡಾಣು ಹೆಣ್ಣಿನ ದೇಹದಿಂದ ತಿಂಗಳಿಗೊಮ್ಮೆ ಹೊರಬರುವ ಪ್ರಕ್ರಿಯೆ. ಈ ಪ್ರಕ್ರಿಯೆಗೆ ನಡೆಸುವ ದೇಹವನ್ನು 'ಅಸ್ಪೃಶ್ಯತೆ' 'ಅಪವಿತ್ರ' ಎಂದು ಬಿಂಬಿತಗೊಳಿಸಲಾಗಿದೆ. ಮುಟ್ಟನ್ನೇ ಕೇಂದ್ರವಾಗಿಟ್ಟುಕೊಂಡು ಹೆಣ್ಣಿನ ದೇಹದ ಕುರಿತಾಗಿ ಹಲವು ನೆಲೆಯಲ್ಲಿ ನಂಬಿಕೆಗಳು ರೂಪುಗೊಂಡಿವೆ.

೧. ಮುಟ್ಟಾದ ಸ್ತ್ರೀಯು ಮರಗಿಡಗಳನ್ನು ಮುಟ್ಟಬಾರದು, ಮುಟ್ಟಿದರೆ ಮರ ಗಿಡಗಳು ಸಾಯುತ್ತವೆ. ಇದಕ್ಕೆ ವೈಕರಲ್ಲಿ ತುಳಸಿ ದಳವನ್ನು ಎತ್ತಬಾರದು (ಮುಟ್ಟಬಾರದು, ಕೀಳಬಾರದು) ಎನ್ನುವ ನಂಬಿಕೆ ಹೊಂದಿರುವುದು ತಿಳಿಯಬಹದು.

೨. ಮುಟ್ಟಾದ ಸ್ತ್ರೀಯರು ಹೊಳೆ ದಾಟಬಾರದು, ಹೂ ಮುಡಿಯಬಾರದು ಎನ್ನುವ ನಂಬಿಕೆ ಇದಕ್ಕೆ ಅಂಬಿಗರಲ್ಲಿ ಮತ್ತು ಇತರೆ ಸಮುದಾಯಗಳಲ್ಲಿ ನಡೆಸಿಕೊಳ್ಳುವ ರೀತಿಯಿಂದ ತಿಳಿಯಬಹುದಾಗಿದೆ.

೩. ಮುಟ್ಟಾದವರು ಮುಟ್ಟಿದ ಆಹಾರ ಕೆಟ್ಟು ಹೋಗುತ್ತದೆ ಎನ್ನುವ ನಂಬಿಕೆ ಇದೆ. ಇದಕ್ಕೆ ಮುಟ್ಟಾದ ಹೆಣ್ಣಿಗೆ ಅಡುಗೆ ಕೋಣೆಗೆ ಹೆಣ್ಣು ಹೋಗದಂತೆ ಮತ್ತು ಅಡುಗೆಯನ್ನು ಮಾಡದಂತೆ ನಿಷೇಧ ಹೇರಿರುವುದರಿಂದ ತಿಳಿದುಬರುತ್ತದೆ.

೪. ಮುಟ್ಟಾದ ಹೆಣ್ಣು ಒಂಟಿಯಾಗಿ ಹೋಗಬಾರದು ಆಗ ದೈವ, ಪಿಶಾಚಿಗಳ ಕಾಟ ಜಾಸ್ತಿ. ಆದ್ದರಿಂದ ಹೆಣ್ಣು ಒಂಟಿಯಾಗಿ ತಿರುಗಾಡಬಾರದು ಎಂದಿದೆ. ಆದರೆ ವಾಸ್ತವದಲ್ಲಿ ನೋಡಿದರೆ ಮುಟ್ಟಾದಾಗಿನ ದೈಹಿಕ ನಿಶಕ್ತಿಯಿಂದ ತಿರುಗಾಡಬಾರದು, ಹೊರಗಡೆ ಹೋಗಬಾರದು. ವಿಶ್ರಾಂತಿಗಾಗಿ ಮಾಡಿದ ನಿಷೇಧವಾಗಿದೆ.

೫. ಮುಟ್ಟಾದ ಹೆಣ್ಣಿನ ಜೊತೆ ಸಂಭೋಗ ಮಾಡುವುದರಿಂದ ನಪುಂಸಕತ್ವ ಬರುತ್ತದೆ.

೬. ಮುಟ್ಟಿನ ರಕ್ತದಿಂದ ಶಿಶ್ನ ಸುಟ್ಟು ಹೋಗುತ್ತದೆ.

೭. ಮುಟ್ಟಾದ ಸಮಯದಲ್ಲಿ ಕ್ರೀಡೆ, ಆಟ, ಪಾಠಗಳಲ್ಲಿ, ಭಾಗವಹಿಸಬಾರದು.

೮. ಮುಟ್ಟಾಗುವುದಕ್ಕೆ ಮುಂಚೆ ಮತ್ತು ಮುಟ್ಟಿನ ಸಮಯದಲ್ಲಿ ಸ್ತ್ರೀಯರು ಯಾವುದೇ ತೀರ್ಮಾನ ತೆಗೆದುಕೊಳ್ಳಬಾರದು ಆದುದರಿಂದಲೆ ಆಕೆಗೆ ಕೆಲವು ಜವಾಬ್ದಾರಿ. ನಿರ್ಧಾರದ ಕೆಲಸಗಳನ್ನು ಕೊಡುವುದು ಸೂಕ್ತವಲ್ಲ ಎನ್ನುವುದರ ಸಾಮಾಜಿಕ ನಂಬಿಕೆ ಕಂಡುಬರುತ್ತದೆ. ಆದರೆ ಈ ರೀತಿಯಾದ ನಂಬಿಕೆಯಲ್ಲಿ ಪುರುಷ ಧೋರಣೆ ಕಂಡುಬರುತ್ತದೆ.

೯. ಹೆಣ್ಣು ಅಧಿಕಾರಕ್ಕೆ ಬರಬಾರದು, ಯಾಕೆಂದರೆ ಮುಟ್ಟಾದಾಗ ಅವರ ನಡವಳಿಕೆಯಲ್ಲಿ ಬದಲಾವಣೆಗಳು ಆಗುತ್ತವೆ. ಅಂದರೆ ಆಕೆಯು ಹುಚ್ಚಾಗಿ ವರ್ತಿಸುತ್ತಾಳೆ ಎನ್ನುವ ನಂಬಿಕೆ ಇದೆ.

೧೧. ಮುಟ್ಟಿನ ಸಮುಯದಲ್ಲಿ ಹೊಟ್ಟೆಯಲ್ಲಿ ಗಾಯವಿರುತ್ತದೆ. ಅದನ್ನು ಸರಿಯಾಗಿ ತೊಳೆಯಬೇಕು.

೧೨. ಮುಟ್ಟಿನ ನೋವು ಪೂರ್ಣವಾಗಿ ಮನಸ್ಸಿಗೆ ಸಂಬಂಧಿಸಿದ್ದು. ಆದರೆ ಜೈವಿಕ ಸಹಜ ಕ್ರಿಯೆಯನ್ನು ತಪ್ಪಾಗಿ ಅರ್ಥೈಯಿಸಿರುವುದು ತಪ್ಪುಕಲ್ಪನೆ ದಾರಿ ಮಾಡಿಕೊಡುವ ತಂತ್ರ ಕಂಡುಬರುತ್ತದೆ.

೧೩. ಮುಟ್ಟಾದ ಸಮಯದಲ್ಲಿ ಸ್ನಾನ ಮಾಡಬಾರದು ಕೂದಲು ತೊಳೆಯಬಾರದು ಎನ್ನುವ ನಂಬಿಕೆ ಕಂಡುಬರುತ್ತದೆ.

ಈ ತೆರನಾದ ಅಪನಂಬಿಕೆ, ಕಲ್ಪನೆಯಿಂದ ಬಂದ ಚಿಂತನೆಗಳೇ ಹೆಣ್ಣಿಗೆ ಚಲನಶೀಲತೆ, ಸೃಜನಶೀಲತೆ ಮೊಟಕುಗೊಳಿಸಿದೆ. ಹಾಗೆ ಮಾನಸಿಕ, ದೈಹಿಕ ಹಿಂಸೆಗೆ ಕಾರಣವಾಗುತ್ತವೆ. ಅದೇ ಭಿನ್ನ ಜೈವಿಕ ಹೊಂದಿರುವ ಅಥವಾ ಭಿನ್ನ ಲಿಂಗವಾದ ಪುರುಷನ ಜೈವಿಕತೆಯ ಕುರಿತಾಗಿ ಯಾವುದೇ ಕಟ್ಟು ಪಾಡುಗಳಿಲ್ಲ.

೪.೩. ಹೆರಿಗೆ : ಸಂಪ್ರದಾಯ ಆಚರಣೆ

ಹೆಣ್ಣಿನ ಜೈವಿಕ ಸಹಜ ಕ್ರಿಯೆಗಳಲ್ಲಿ ಹೆರಿಗೆಯು ಒಂದು. ಇದು ಹೆಣ್ಣಿಗೆ ನೈಸರ್ಗಿಕ ವರದಾನ. ಹೆರಿಗೆಯನ್ನು ಆಧರಿಸಿ ಹಲವು ಮೂಢನಂಬಿಕೆಗಳು ಸಂಪ್ರದಾಯ ಆಚರಣೆಗಳು ನಡೆದುಕೊಂಡು ಬಂದಿರುವುದು ಕಂಡುಬರುತ್ತವೆ. ಇವುಗಳು ಜಾತಿ, ವರ್ಗ, ಸಮುದಾಯ, ಪ್ರಾದೇಶಿಕತೆಗೆ ಅನುಗುಣವಾಗಿ ಭಿನ್ನ ಭಿನ್ನವಾಗಿಯೇ ನಡೆದುಕೊಂಡು ಬಂದಿವೆ. ಉದಾಹರಣೆಯಾಗಿ ದಕ್ಷಿಣ ಆಫ್ರಿಕ ಬುಡಕಟ್ಟು ಜನಾಂಗವೊಂದರಲ್ಲಿ ಬಸುರಿಯಾಗುವುದು. ಯಾಕೆಂದರೆ ಆಕಾಶದ ಯಾವುದೋ ಒಂದು ತಾರೆಯು ಆಕೆ (ಹೆಣ್ಣು) ಬಗ್ಗೆ ಮೋಹಗೊಂಡು ಅಲ್ಲಿಂದ ಹಾರಿಬಂದು ಅವಳನ್ನು ಕೂಡಿ ಗರ್ಭ ಸೇರುತ್ತವೆ. ಆದುದರಿಂದಲೇ ಆಕೆ ಬಸುರಿಯಾಗುತ್ತಾಳೆ ಎಂದು ಹೇಳುತ್ತಾರೆ. ಹೀಗೆ ಹಲವಾರು ಬಗೆಯ ಗರ್ಭಧಾರಣೆಯ ಹೆರಿಗೆ ಸಂಬಂಧಿಸಿದಂತೆ ನಂಬಿಕೆ, ಮೌಢ್ಯತೆಯ ಹಿನ್ನೆಲೆಯಲ್ಲಿ ಸಂಪ್ರದಾಯ ಆಚರಣೆಗಳು ನಡೆದು ಬಂದಿರುವುದು ಕಂಡುಬರುತ್ತದೆ.

ಜೈವಿಕ ಪ್ರಕ್ರಿಯೆಯಾದ ಹೆರಿಗೆಯ ಸಂದರ್ಭವನ್ನು ಕೂಡ 'ಮೈಲಿಗೆ', 'ಸೂತಕ'ವೆಂದು ಪರಿಭಾವಿಸಲಾಗಿದೆ. ಈ ಸೂತಕ ಅವಳಿಗಷ್ಟೇ ಅನ್ವಯಿಸುವುದಿಲ್ಲ. ಅವಳು ವಾಸಿಸುವ ಕುಟುಂಬದಲ್ಲಿನ ಎಲ್ಲ ಸದಸ್ಯರಿಗೂ ವಿಸ್ತರಿಸಿಕೊಳ್ಳುತ್ತವೆ. ಒಂದು ಜೀವ ಸೃಷ್ಟಿಗೊಳ್ಳುವ ಹೆರಿಗೆ ಪ್ರಕ್ರಿಯೆಯನ್ನಾಧಾರಿಸಿ ಅನೇಕ ಬಗೆಯ ಸಂಪ್ರದಾಯ ಆಚರಣೆಗೆ ಸೃಷ್ಟಿಯಾಗಿವೆ. ಆದರೆ ಈ ಪ್ರಕ್ರಿಯೆಗೆ ಅನೇಕ ನಂಬಿಕೆ ಕಟ್ಟು ಪಾಡು ವಿಧಿ-ನಿಷೇಧಗಳು ಪದ್ಧತಿ, ಸಂಪ್ರದಾಯ ಆಚರಣೆಗಳು ಕಂಡುಬರುತ್ತಿವೆ. ಅವುಗಳನ್ನು ಇಲ್ಲಿ ದಾಖಲಿಸಿ ವಿಶ್ಲೇಷಿಸಿದರೆ ಹೆಣ್ಣಿನ ಜೈವಿಕತೆಯನ್ನು ಸಂಪ್ರದಾಯ ಆಚರಣೆಗಳು ಹೇಗೆ ಕಂಡಿವೆ ಎನ್ನುವುದು. ಈ ಹಿನ್ನೆಲೆಯಿಂದ ಈ ಕೆಳಕಂಡ ಸಮುದಾಯವನ್ನು ದಾಖಲಿಸಲಾಗಿದೆ.

ವೈದಿಕರಲ್ಲಿ (ಬ್ರಾಹ್ಮಣ): "ಮಾಧ್ವರೆಂದು ಗುರುತಿಸಿಕೊಂಡಿರುವ ಪಂಗಡದಲ್ಲಿ ಹೆರಿಗೆಗೆ ಸಂಬಂಧಪಟ್ಟಂತೆ ಅನೇಕ ರೀತಿಯಾದ ಕಟ್ಟು ಪಾಡುಗಳಿವೆ. ಇವರಲ್ಲಿ ಹೆರಿಗೆ ಸಂದರ್ಭದಲ್ಲಿ, ಆಕೆಗಾಗಿ ಪ್ರತ್ಯೇಕವಾದ ಜಾಗ, ಕೋಣೆಯನ್ನು ನಿಗದಿಪಡಿಸಲಾಗುತ್ತದೆ. ಈ ಹೆರಿಗೆಯನ್ನು

ಮೈಲಿಗೆ, ಸೂತಕವೆಂದು ತಿಳಿದು ಯಾವುದೇ ರೀತಿಯಾದ, ಹಿಂದಿನಿಂದ ನೇಮ ಮಾಡಿಕೊಂಡ ಬಂದಿದ್ದ ದೈವಕಾರ್ಯಗಳನ್ನು ಪೂಜಾ ಕಾರ್ಯಗಳನ್ನು ಮಾಡಲಾಗುವುದಿಲ್ಲ. ಮನೆಯಲ್ಲಿ ಮತ್ತು ಹೊರಗಡೆ ಸೇರಿದಂತೆ ಎರಡು ಕಡೆ ಅದೊಂದು ಮೈಲಿಗೆಯಾಗಿದೆ ಎಂದು ತಿಳಿದಿದರಿಂದ ಯಾವುದೇ ದೈವ ಕಾರ್ಯ ನಡೆಯುವುದಿಲ್ಲ. ಇತ್ತೀಚಿನ ದಿನ ಮಾನದಲ್ಲಿ ಮೈಲಿಗೆ ಎಂದು ಭಾವಿಸಿಕೊಂಡು ಸುಮ್ಮನಿರುವವರ ಸಂಖ್ಯೆ ಹೆಚ್ಚಾಗಿದೆ ಎಂದೆನಿಸಿದರು ಅದು ಪ್ರತಿಯೊಂದು ಸಂಪ್ರದಾಯಸ್ಥ ಮನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಡೆದೆ ನಡೆಯುತ್ತದೆ" ಎಂದು ಗಂಗಾವತಿಯ ಕಮಲಮ್ಮನವರು ಹೇಳುತ್ತಾರೆ.

ಗೊಲ್ಲ ಸಮುದಾಯದಲ್ಲಿ : "ಜನನಕ್ಕೆ ಸಂಬಂಧಿಸಿದಂತೆ ಗೊಲ್ಲ ಜನಾಂಗದಲ್ಲಿ ಹಲವು ಸಂಪ್ರದಾಯಗಳ ರೀತಿ ನೀತಿಗಳು, ರೂಢಿ – ಪದ್ಧತಿಗಳು ಸಾಮಾಜಿಕ ಕಟ್ಟು ಪಾಡುಗಳು ನಿಯಮಗಳಿವೆ. ಈ ತೆರನಾದ ಸಂಪ್ರದಾಯಿಕ ಆಚರಣೆ ಕೆಲವೊಮ್ಮೆ ಅಮಾನವೀಯವಾಗಿ ರೂಪತಾಳುತ್ತಿವೆ. ಜನನ ಕ್ರಿಯೆ ಒಂದು ಸ್ವಭಾವಿಕ ಸಹಜ, ಶಾರೀರಕ ಕ್ರಿಯೆಯಾಗಿದ್ದರೂ ಕಾಡುಗೊಲ್ಲರಲ್ಲಿ ಒಂದು ರೀತಿಯ ಮೂಢನಂಬಿಕೆಯ ಆಚರಣೆಯಾಗಿದೆ. ಗೊಲ್ಲ ಜನಾಂಗದಲ್ಲಿ ಮಗು ಹೆರುವ ಕ್ರಿಯೆ ಅತ್ಯಂತ ಸೂತಕದ ವಿಚಾರ. ಬಸುರಿ ಹೆಂಗಸಿಗೆ ನೋವು ಕಾಣಿಸಿಕೊಂಡ ತಕ್ಷಣ ಅವಳನ್ನು ಹಟ್ಟಿಯಿಂದ ದೂರ ಕರೆದೊಯ್ಯಲಾಗುತ್ತದೆ. ಅಲ್ಲಿ ಸಂಬಂಧಿಕರೆನಿಸಿಕೊಂಡವರು ಆ ಮಹಿಳೆಯನ್ನು ಮುಟ್ಟುವಂತಿಲ್ಲ. ಅವಳ ಸಹಾಯಕ್ಕೆ ಹೋಗುವಂತಿಲ್ಲ. ಸೂಲಗಿತ್ತಿಯೇ ಬಂದು ಹೆರಿಗೆ ಮಾಡಿಸುತ್ತಾಳೆ. ಹಿಂದಿನ ಕಾಲದಲ್ಲಿ ಸೂಲಗಿತ್ತಿಯೂ ಸಹ ಅವಳ ಸಹಾಯಕ್ಕೆ ಹೋಗುವಂತಿರಲಿಲ್ಲ. ಬಸುರಿ ಹೆಂಗಸೇ ಹೆರಿಗೆ ಮಾಡಿಕೊಂಡು ಕರುಳು ಬಳ್ಳಿಯನ್ನು ಅವಳೇ ಕತ್ತಿರಿಸಿಕೊಳ್ಳಬೇಕಾಗಿತ್ತು. ಯಾರೂ ಸಹ ಅವಳ ನೆರವಿಗೆ ಹೋಗುವಂತಿರಲಿಲ್ಲ. ಈಗೀಗ ಸೂಲಗಿತ್ತಿ ಅಥವಾ ಜನಾಂಗದ ಹಿರಿಯ ಮಹಿಳೆಯರು ಹೆರಿಗೆ ಸಂದರ್ಭದಲ್ಲಿ ನೆರವಿಗೆ ದಾವಿಸುತ್ತಾರೆ. ಇಂತಹ ಸಂದರ್ಭದಲ್ಲಿ ವೈದ್ಯರ ಇಲ್ಲವೆ ಆಸ್ಪತ್ರೆಯ ನೆನಪು ಮಾಡಿಕೊಳ್ಳುವುದಿಲ್ಲ. ಹೆರಿಗೆ ನಂತರ ಸುಮಾರು ಎರಡು ತಿಂಗಳ ಕಾಲ ಮಗು ಮತ್ತು ತಾಯಿಯನ್ನು ಹಟ್ಟಿಯಿಂದ ಹೊರಗಿಡುತ್ತಾರೆ. ಅವರನ್ನು ಯಾರು ಮುಟ್ಟುವಂತಿಲ್ಲ. ಅವರಿಬ್ಬರ ನೆರಳೂ ಸಹ ಬೇರೆಯವರ ಮೇಲೆ ಬೀಳುವಂತಿಲ್ಲ. ಒಂದು ವೇಳೆ ಬೇರೆಯವರ ಮೇಲೆ ಬಿದ್ದರೂ ಸಹ ಅವರು ಮೈಲಿಗೆಯಾಗುತ್ತಾರೆ. ಅವರು ಮತ್ತೆ ಶುಚಿತ್ವ ಪಡೆದು ದೇವರಿಗೆ ದಂಡ ಕೊಡಬೇಕಾಗುತ್ತದೆ. ಹೊರಗೆ ಮತ್ತು ಬಾಣಂತಿಯು ಎರಡು ತಿಂಗಳುಗಳ ಕಾಲ ಯಾರ ಸಹಾಯವಿಲ್ಲದೆ ಸಾವನಪ್ಪಿದ ಪ್ರಸಂಗಗಳಿವೆ. ಇದು ಹಲವು ಸಂಶೋಧನೆಯಿಂದಲೂ ಧೃಢಪಟ್ಟಿದೆ. ಇದರಿಂದ ಇವರಲ್ಲಿ ಶಿಶು ಮರಣ ಪ್ರಮಾಣ ಅತ್ಯಂತ ಹೆಚ್ಚು ಎಂದು ಹಲವು ಸಂಶೋಧನೆಗಳಿಂದ ತಿಳಿದುಬಂದಿದೆ.

ಮಗು ಮತ್ತು ಬಾಣಂತಿಯು ಎರಡು ತಿಂಗಳ ವನವಾಸದ ನಂತರ ಹಟ್ಟಿಯ ಪೂಜಾರಿಯು ಅಥವಾ ಗೌಡನ ನಿಯಮದಂತೆ ಸೂತಕವನ್ನು ಕಳೆದು ದೇವಸ್ಥಾನಕ್ಕೆ ಬಂದು ಮಗುವಿಗೆ ನಾಮಕರಣ ಮಾಡಿ, (ಜನ್ನಿಗೆ) ಕುರಿಯ ಹಾಲಿನಿಂದ ನಾಮಕರಣ ಮಾಡಿ ಮೈಲಿಗೆಯನ್ನು ಕಳೆದುಕೊಳ್ಳುತ್ತಾರೆ. ಈ ಪದ್ಧತಿ ಅಥವಾ ಆಚರಣೆಯನ್ನು ತೊಡೆದು ಹಾಕಲು ಯಾವುದೇ ಗಂಭೀರ ಪ್ರಯತ್ನ ನಡೆದಿಲ್ಲ. ಈ ತೆರನಾದ ಸಂಪ್ರದಾಯ ಆಚರಣೆಯಿಂದಾಗಿ ಬಾಣಂತಿಯ ಆರೋಗ್ಯದ ದೃಷ್ಠಿಯಿಂದ ಮತ್ತು ಮಾನವೀಯ ದೃಷ್ಠಿಯಿಂದ ಮಗು ಬಾಣಂತಿಯನ್ನು ಹೊರಗಿಡುವುದು ಸರಿಯಾದ ಕ್ರಮವಲ್ಲ. ಎಷ್ಟೋ ಸಂದರ್ಭದಲ್ಲಿ ಗುಡುಗು, ಮಳೆ, ಸಿಡಿಲು, ಬಿರುಗಾಳಿಯಿಂದ ಮಗು ಬಾಣಂತಿಗೆ ಜೀವಕ್ಕೆ ಅಪಾಯವಾಗಿರುವುದು ಕಂಡುಬಂದಿದೆ. ಇತ್ತೀಚಿನ ಆಧುನಿಕ ಶಿಕ್ಷಣದಿಂದ ಜನ ಪ್ರಜ್ಞಾವಂತರಾದರೂ ಅದನ್ನು ಬಿಟ್ಟಿಲ್ಲ". (ಗುರುಲಿಂಗಯ್ಯ ಎಂ., ೨೦೦೫, ಪುಟ.೩೦). "ಗೊಲ್ಲ ಸಮುದಾಯದ ಮಹಿಳೆಯರಿಗೆ ಮೂಢನಂಬಿಕೆ, ಸಂಪ್ರದಾಯದ ಕಟ್ಟು ಪಾಡುಗಳಿಂದ ಮಹಿಳೆಯರು ಶೋಷಿತರಾಗುವುದು ಕೊನೆಗೊಂಡಿಲ್ಲ. ಈ ಸಂದರ್ಭದಲ್ಲಿ ಸಂಪ್ರದಾಯ ಪಾಲಿಸದಿದ್ದದಲ್ಲಿ ದುಷ್ಟ ಶಕ್ತಿಗಳು ಪ್ರವೇಶ ಮಾಡುತ್ತವೆ ಎಂಬ ನಂಬಿಕೆ ಬೆಳೆದುಕೊಂಡು ಬಂದಿದೆ. ಇದಕ್ಕಾಗಿ ಮೂರು ತಿಂಗಳು ಮನೆಯಷ್ಟೇ ಅಲ್ಲ ಊರ ಹೊರಗಡೆಯೇ ಕಳೆಯಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ.

ಮಹಿಳೆ ಹೆರಿಗೆಗೆ ಹೋದಳೆಂದರೆ ಇತ್ತ ಮನೆಯ ಗಂಡಸರು ಊರ ಹೊರಗಿನ ನಿರ್ಜನ ಪ್ರದೇಶಕ್ಕೆ ತೆರಳುತ್ತಾರೆ. ಮಹಿಳೆ ಮತ್ತು ಆಕೆಯ ಮಗು ಇರಬೇಕಾದಷ್ಟು ತೀರಾ ಚಿಕ್ಕದಾದ ಗುಡಿಸಲನ್ನು ನಿರ್ಮಿಸಲಾಗುತ್ತದೆ. ಅದಕ್ಕೊಂದು ಗವಿಯ ಬಾಯಿಯಂತಹ ಬಾಗಿಲು. ಆ ಮಹಿಳೆಯ ಮೂರು ತಿಂಗಳವಾಸದ ಗುಡಿಸಲಲ್ಲಿ ಅಲ್ಲಿ ಅಡುಗೆ ಮಾಡಿಕೊಳ್ಳಲು ಬೇಕಾದ ಪಾತ್ರೆಗಳನ್ನಿಡಲಾಗುತ್ತದೆ. ಹೆರಿಗೆ ನಂತರ ಮಹಿಳೆಯನ್ನು ಅಲ್ಲಿ ಬಿಟ್ಟು ಹೋದರೆ ನಂತರದ ಮೂರು ತಿಂಗಳ ಕಾಲ ಎಳೆಯ ಕಂದಮ್ಮನೊಂದಿಗೆ ಜೀವನ ನಿರ್ವಹಣೆಯ ಭಾರವನ್ನು ಬಾಣಂತಿಯೆ ಹೊರಬೇಕು.

ಈಗೀಗ ಸಂಪ್ರದಾಯ ಸ್ವಲ್ಪ ಬದಲಾಗಿ ಹಗಲು ವೇಳೆಯಲ್ಲಿ ಮಹಿಳೆಯೇ ಹೆತ್ತವ್ವನೋ ಅಥವಾ ಬೆನ್ನಿಗೆ ಬಿದ್ದ ಅಕ್ಕ ತಂಗಿಯರೋ ಬಂದು ಕಾಲ ಕಳೆದು ಹೋಗುತ್ತಾರೆ. ಆದರೆ ರಾತ್ರಿಯಾಯಿತೆಂದರೆ ನಿರ್ಜನ ಪ್ರದೇಶದಲ್ಲಿ ಹಸುಗೂಸಿನೊಂದಿಗೆ ರಾತ್ರಿಯ ನೀರವತೆಯ ಕತ್ತಲಿನೊಂದಿಗೆ ಮಹಿಳೆಯ ಒಂಟಿ ಸಂಸಾರ ಸಾಗಬೇಕು. ಹುಲ್ಲಿನ ಗುಡಿಸಲಾದ್ದರಿಂದ ಧೈರ್ಯವಾಗಿ ಬೆಳಕಿನ ವ್ಯವಸ್ಥೆಯನ್ನು ಮಾಡಿಕೊಳ್ಳಲು ಅಂಜದೇ ಗಾಳಿಗೆ ಸಿಲುಕಿದ ದೀಪದ ಕಡ್ಡಿ ಅಕಸ್ಮಾತಾಗಿ ಗುಡಿಸಲಿಗೆ ಸೋಕಿದರೆ ಎಂಬ ಆತಂಕ ಮೂರು ತಿಂಗಳ ಬಯಲಲ್ಲಿ ಹರಿದಾಡುವ ವಿಷ ಜಂತುಗಳಿಗೆ ತನ್ನ ಹಾಗೂ ತನ್ನೊಡಲ ಕುಡಿಯ ಜೀವವನ್ನು ಬಲಿಗಿಟ್ಟು

ಕಳೆಯುವ ಬದುಕು ಈ ಸಮುದಾಯದ ಮಹಿಳೆಯದಾಗಿರುವ ಸಂದರ್ಭವಿರುತ್ತದೆ. ಇತ್ತ ಮಹಿಳೆಯರು ಪಡಬಾರದ ಕಷ್ಟ ಪಡುತ್ತಾ ತನ್ನ ತಾಯ್ತನವನ್ನೇ ಶಪಿಸುತ್ತಾ ನಿರ್ಜನ ಬಯಲಲ್ಲಿ ಒಬ್ಬಂಟಿ ಬದುಕು ಸಾಗಿಸುತ್ತಿದ್ದಾರೆ. ಅತ್ತ ಗಂಡನೆನಿಸಿಕೊಂಡವನು ತನಗೇನೂ ಸಂಬಂಧವೇ ಇಲ್ಲವೇನೋ ಎಂಬಂತೆ ಕುರಿಗಳ ಹಿಂಡೆಹಿಡಿದು ಮತ್ತೊಬ್ಬರ ಜಮೀನು ಫಲವತ್ತಾಗಿಸಲು ಗುಳೆ ಹೋಗಿರುತ್ತಾನಂದರೆ ಎಂಥ ವಿಪರ್ಯಾಸವಲ್ಲವೇ. (ಕರಣಂ ರಮೇಶ, ೨೦೦೬, ಪುಟ.೧೬). ಹೀಗೆ ಗೊಲ್ಲ ಸಮುದಾಯದ ಮಹಿಳೆಯರಿಗೆ ಹೆರಿಗೆ ಬಾಣಂತನ ಎನ್ನುವುದು ಶಾಪವಾಗಿದೆ.

ಉಪ್ಪಾರ: "ಗರ್ಭಿಣಿಯಾದ ಐದು ಅಥವಾ ಏಳನೇ ತಿಂಗಳಲ್ಲಿ ತವರಿಗೆ ಕರೆದುಕೊಂಡ ಬರುವ ವಾಡಿಕೆ ಇದೆ. ತವರಿಗೆ ಬಂದ ಬಸುರಿಗೆ ಅನೇಕ ಬಯಕೆಗಳಾಗುತ್ತವೆ. ತಿಂಡಿ ತಿನಿಸುಗಳನ್ನು, ಬಂಧು ಬಳಗದವರನ್ನು ನೋಡುವ, ವಸ್ತ್ರಾಭರಣಗಳ ಬಯಕೆ ಎಂತಾದರೆ ಈ ಎಲ್ಲ ಬಯಕೆಗಳನ್ನು ತವರಿನವರು ಈಡೆರಿಸಲು ಯತ್ನಿಸಬೇಕು, ಒಂದು ವೇಳೆ ಅವಳ ಬಯಕೆಗಳನ್ನು ಈಡೇರಿಸಿದೆ ಇದ್ದರೆ ಗರ್ಭಿಣಿಗೆ ಕಣ್ಣು ಕಾಣುವುದಿಲ್ಲವೆಂದು, ಎದೆ ಹಾಲು ಇಂಗಿ ಹೋಗುತ್ತದೆಂದೂ ದುರ್ಬಲ ಮನಸ್ಕಳಾಗುತ್ತಾಳೆಂದು ನಂಬಿಗಳಿವೆ.

ಈ ಸಮುದಾಯದಲ್ಲಿ ಹೆಣ್ಣು ಗರ್ಭ ಧರಿಸಿದ ಸಮಯದಲ್ಲಿ ಗ್ರಹಣ ಹಿಡಿದರೆ ಬಸುರಿ ಹೆಂಗಸನ್ನು ಕತ್ತಲೆ ಕೋಣೆಯಲ್ಲಿ ಮಲಗಿಸುತ್ತಾರೆ. ಕಾರಣ ಗರ್ಭಿಣಿ ಹೆಂಗಸಿನ ಮೇಲೆ ಗ್ರಹಣದ ಕಿರಣಗಳು ಬೀಳದಂತೆ ಇರಲಿ ಎಂದು. ಈ ಸಮಯದಲ್ಲಿ ಅವಳು ತೊಟ್ಟ ಬಳೆ, ಆಭರಣಗಳನ್ನು ತೆಗೆದಿರಿಸುತ್ತಾರೆ. ಹೆರಿಗೆಯ ಸಮಯದಲ್ಲಿ ಹೆರಿಗೆಯನ್ನು ಸುಲಗಿತ್ತಿಯೇ ಬಂದು ಮಾಡಿಸುತ್ತಾಳೆ. ಹೆರಿಗೆ ಕಷ್ಟವಾದರೆ ಊರಿನ ದೇವರಿಗೆ ಕಾಣಿಕೆ ಕಟ್ಟಿಕೊಳ್ಳುವ ಪದ್ಧತಿ ಇದೆ ಎಂದು ಆಸ್ಪತ್ರೆಗೆ ಹೋಗುವುದಿಲ್ಲ. ಹೆರಿಗೆಯಾದ ನಂತರ ತಾಯಿ ಮತ್ತು ಮಗುವನ್ನು ಸೂಲಗಿತ್ತಿಯು ಹೊಕ್ಕಳ ಬಳ್ಳಿಯನ್ನು ಒಂದು ಚಾಕುವಿನಿಂದ ಕತ್ತರಿಸುವುದರ ಮೂಲಕ ತಾಯಿ ಮಗುವನ್ನು ಬೇಪರ್ಡಿಸುತ್ತಾಳೆ. ಮಗುವಿನ ಹೊಕ್ಕಳು ಬಳ್ಳಿಯ ತುದಿಯನ್ನು ಒಂದು ನೂಲಿನಿಂದ ಕಟ್ಟಿ ಅರಿಷಿಣ ಕೊಂಬನ್ನು ಅಲ್ಲಿಟ್ಟು ಹೊಕ್ಕಳ ಬಳ್ಳಿಯ ತುದಿಯನ್ನು ಮೆತ್ತಿ ನೂಲಿನಿಂದ ಬಿಗಿಯುತ್ತಾರೆ. ಹೀಗೆ ಮಾಡುವ ಉದ್ದೇಶ ರಕ್ತ ಸೋರಿಕೆಯನ್ನು ತಡೆಗಟ್ಟುವುದು.

ಮಗು ಜನನವಾದ ಐದು ದಿನಗಳವರೆಗೆ ಮೈಲಿಗೆಯನ್ನಾಗಿ ಆಚರಿಸುವರು. ಈ ದಿನಗಳಲ್ಲಿ ಮನೆಯ ಹಾಗು ಹುಡುಗನ ಅಣ್ಣ ತಮ್ಮಂದಿರು ಸೇರಿ ಮೈಲಿಗೆಯನ್ನು ತೊಳೆದುಕೊಳ್ಳಬೇಕು. ಮನೆಯಲ್ಲಿ ಯಾವುದೇ ಶುಭ ಕಾರ್ಯಮಾಡುವುದಿಲ್ಲ. ಈ ಎಲ್ಲ ಸಂಪ್ರದಾಯ ಆಚರಣೆಗೆ 'ಐರಿಸೆ' ಎನ್ನುತ್ತಾರೆ. ಅರಿಶಿಣ ಅರೆದ ಕಲ್ಲನ್ನು ಬಾಣಂತಿಯ ಹೊರಸಿನ (ಮಂಚದ) ಕೆಳಗೆ ಇಟ್ಟು ಪೂಜಿಸುತ್ತಾರೆ. ಇದಕ್ಕೆ ಶಟಗಿ (ಶಟವ) ಎಂದು ಕೆಲವು ಕಡೆಗಳಲ್ಲಿ ಕರೆಯುತ್ತಾರೆ. ಬಾಣಂತಿಯ ಹೊರಸಿನ(ಮಂಚದ) ನಾಲ್ಕು ಕಾಲುಗಳಿಗೆ

ನೂಲಿನ ಐದೆಳೆದಾರ ಸುತ್ತುತ್ತಾರೆ. ಸೋದರತ್ತೆಯಾದವಳು ಮಗುವಿನ ಹೆಸರು ಇಡುವವಳಾಗುತ್ತಾಳೆ ತಿಂಗಳ ತುಂಬುವುದರೊಳಗಾಗಿ ಬಾಣಂತಿಯ ಕೈಗೆ ಹಸಿರು ಬಳೆ ತೊಡಿಸಿ, ಗಂಗೆ ಪೂಜೆಯನ್ನು ಮಾಡಿಸಿ ದೇವಾಲಯಕ್ಕೆ ಕರೆದುಕೊಂಡು ಹೋಗುವ ರೂಢಿ ಇದೆ. ನಂತರ ಬಾಣಂತಿಯನ್ನು ೩,೫,೯ ತಿಂಗಳ ನಂತರ ಗಂಡನ ಮನೆಗೆ ಕರೆದುಕೊಂಡು ಹೋಗುತ್ತಾರೆ. (ರಮೇಶ ಸ.ಚಿ., ೧೯೯೬, ಪುಟ.೫೫, ೫೬).

ಮಲೆನಾಡಿನ ಕುರುಹಿನ ಶೆಟ್ಟರು: "ಇವರು ಜನನ ಸಂದರ್ಭದಲ್ಲಿ ಇತರೆ ಜನಾಂಗಗಳವರಂತೆ ಕೆಲವು ಸಂಪ್ರದಾಯ ಆಚರಣೆಗಳನ್ನು ನಡೆಸುತ್ತಾರೆ. ಒಂದು ಹೆಣ್ಣು ಗರ್ಭವತಿಯಾದಳೆಂದರೆ ಕೂಡಲೆ ಸಂಪ್ರದಾಯ ಪ್ರಾರಂಭವಾಗುತ್ತದೆ. ಕೆಲವು ಕಟ್ಟು ಪಾಡುಗಳು ಹಾಗೂ ಆಚರಣೆ ಅವಳನ್ನು ಆಗಿನಿಂದಲೇ ಕೆಲವು ನಿರ್ಬಂಧಗಳಿಗೆ ಒಳಗಾಗುವಂತೆ ಮಾಡುತ್ತವೆ. ಅವಳು ಮೊದಲನೆಯದಾಗಿ ಅರಿತು ಅಥವಾ ಅರಿಯದೋ ಕೆಟ್ಟ ಕೆಲಸಗಳನ್ನು ಮಾಡಬಾರದು, ಕೆಟ್ಟ ಯೋಚನೆ ಮಾಡಬಾರದು. ಸುಳ್ಳು ಹೇಳಬಾರದು, ಕೋಪ ಉದ್ರೇಕಕ್ಕೆ ಒಳಗಾಗಬಾರದು, ಶಾಂತ ಚಿತ್ತಗಳಾಗಿದ್ದುಕೊಂಡು ಸಂತೋಷದಿಂದ ದೇವರ ಪೂಜೆ, ಧ್ಯಾನ, ಧರ್ಮವ ಮಾಡುತ್ತಾ ಪುಣ್ಯಕಥೆಗಳನ್ನು ಕೇಳುತ್ತಾ, ಓದುತ್ತಾ ಕಾಲ ಕಳೆಯಬೇಕು. ಏಕೆಂದರೆ ಈ ಅವಧಿಯಲ್ಲಿ ಆಕೆ ಮಾಡುವ ಪ್ರತಿಯೊಂದು ಒಳಿತು ಕೆಡಕೂ ಕೂಡ ಆಕೆಯ ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿನ ಮೇಲೆ ಪ್ರಭಾವ ಬೀರುತ್ತವೆ ಎಂದು ನಂಬುತ್ತಾರೆ. ಅಲ್ಲದೇ ಆಕೆ ಗಿಡ ಮರ ಬಳ್ಳಿಗಳ ಕುಡಿಗಳನ್ನು ಕತ್ತರಿಸಬಾರದು. ಪ್ರಾಣಿಗಳನ್ನು ಕೊಲ್ಲಬಾರದು (ಉದಾಹರಣೆ: ಗಂಡನಾದವನು ಹಾವನ್ನು ಹೊಡೆಯಬಾರದು(ಸಾಯಿಸಬಾರದು) ಹಾಗೇ ಮಾಡಿದರೆ ಒಂದು ವೇಳೆ ಹುಟ್ಟುವ ಮಗು ಅಂಗವಿಕಲವಾಗಿ ಹುಟ್ಟುತ್ತದೆ. ಗ್ರಹಣ ನೋಡಿದರೆ ಕುರುಡಾಗಿ ಹುಟ್ಟುತ್ತದೆ ಎಂದು ಗ್ರಹಣದ ಕಾಲದಲ್ಲಿ ಗರ್ಭಿಣಿಯನ್ನು ಕತ್ತಲ ಕೋಣೆಯಲ್ಲಿ ಮಲಗಿಸುತ್ತಾರೆ ಅವಳಿಗೆ ಆಹಾರ, ಪಾನೀಯ ನಿರ್ಬಂಧವಿರುತ್ತದೆ.

ಗರ್ಭಿಣಿಯಾದವಳು ಮಾಂಸಹಾರಿಯಾದ ಏಡಿ, ಮೊಲ, ಕೋಳಿ, ಮೀನು ಹಾಗೂ ಇನ್ನಿತರ ಉಷ್ಣಾಂಶ ಪದಾರ್ಥಗಳನ್ನು ತಿನ್ನುವಂತಿಲ್ಲ. ಗರ್ಭಪಾತವಾಗುತ್ತದೆ ಎನ್ನುವ ನಂಬಿಕೆಯಿಂದ ಆರು ತಿಂಗಳ ತುಂಬುವ ತನಕ ಕುಟ್ಟುವುದು ಬೀಸುವುದು, ಅಗೆಯುವುದು ಭಾರ ಹೊರುವುದು ಮಾಡುವಂತಿಲ್ಲ ಅದೇ ಆರು ತಿಂಗಳ ನಂತರ ಆಕೆಯಿಂದ ಶ್ರಮಕೆಲಸ ಮಾಡಿಸುತ್ತಾರೆ. ಇದರಿಂದ ಹೆರಿಗೆ ನಿರಾಸಾಯವಾಗುತ್ತದೆ ಎನ್ನುವ ನಂಬಿಕೆ. ಹೀಗೆ ಗರ್ಭಿಣಿ ನಿಷೇಧದ ನಡುವೆಯೂ ಸುರಕ್ಷಿತ ಸ್ಥಾನವನ್ನು ಕಲ್ಪಿಸಿಕೊಳುತ್ತಾರೆ.

ಹೆರಿಗೆ ನಂತರ ಇದನ್ನು 'ಮೈಲಿಗೆ' 'ಸೂತಕ'ವೆಂದು ಭಾವಿಸಿಕೊಂಡು ಹಬ್ಬ ದಿನಗಳಲ್ಲಿ ಪೂಜಾ ಕಾರ್ಯಕ್ರಮಗಳನ್ನು ಆಚರಿಸುವುದಿಲ್ಲ. 'ಮೈಲಿಗೆ' ಎಂದು ತಿಳಿದು ದೇವರ ಪೂಜೆ, ಗ್ರಾಮ ದೇವತೆಯ ಪೂಜೆ ಇದಕ್ಕೆ ನೆಂಟರು ಕೂಡ ದೈವಕಾರ್ಯ, ಪೂಜೆ ಮಾಡುವಂತಿಲ್ಲ

ದೇವರ ಮೆರವಣಿಗೆ ಬೀದಿಯಲ್ಲಿ ಬಂದರೂ ಕೂಡ ಆರತಿ ಕೊಡುವುದಿಲ್ಲ. 'ಸೂತಕ'ವಿದೆ ಎಂದು ತಿಳಿಸುತ್ತಾರೆ. 'ಸೂತಕದ' ಮನೆಯೆಂದು ಶುಭ ಕಾರ್ಯಾರ್ಥವಾಗಿ ಯಾವ ಪದಾರ್ಥಗಳನ್ನು ಪಡೆದುಕೊಳ್ಳುವುದಿಲ್ಲ. "(ಮಂಜಪ್ಪಶೆಟ್ಟಿ ಮಸಗಲಿ ಎಂ.ಪಿ., ಪುಟ.೧,೨,೩).

ದುರುಗಮುರಿಗೆ ಅಥವಾ ಸಿಂಧೋಳ್ಳ: "ಈ ಸಮುದಾಯದಲ್ಲಿ ಜನನ, ಹೆರಿಗೆ ಸಂಬಂಧಪಟ್ಟಂತೆ ಆಚರಣೆ ನಡೆಯುತ್ತಿವೆ. ಈ ಬುಡಕಟ್ಟು ಸಮಾಜ ಗರ್ಭವ್ಯವಸ್ಥೆಯಲ್ಲಿದ್ದಾಗ ಹಾಗೂ ಮಗು ಜನನವಾದಾಗ ಆಚರಿಸುವ ಸಂಪ್ರದಾಯ ತುಂಬ ಕಟ್ಟುನಿಟ್ಟಾಗಿದೆ. ಹೆಣ್ಣಿನ ಬದುಕು ಸಾರ್ಥಕವಾಗಬೇಕಾದರೆ ಅವಳು ತಾಯಿಯಾಗಿ ಮತ್ತೊಂದು ಜೀವಕ್ಕೆ ಜನ್ಮಕೊಟ್ಟಾಗಲೇ ಸಮಾಜ ಮುಂದುವರೆಯುವುದು. ದುರುಗಮುರಿಗಿಯರಲ್ಲಿ ಬಂಜೆ ಹೆಣ್ಣು ಕಂಡುಬಂದರೆ ಈ ಸಮುದಾಯದಲ್ಲಿ ಕಳಂಕಕ್ಕೆ ಗುರಿಯಾಗುತ್ತಾಳೆ.

ಕುಟುಂಬದ ಹೆಣ್ಣು ಗರ್ಭವತಿಯಾದರೆ ಸುದ್ದಿಯನ್ನು ತವರು ಮನೆಯವರಿಗೆ ಮುಟ್ಟಿಸುತ್ತಾರೆ. ಈ ಸಮುದಾಯದವರು ಎಲ್ಲಿ ವಾಸಿಸುತ್ತಾರೋ ಅಲ್ಲಿ ಗರ್ಭಿಣಿಯಾದ ಮಹಿಳೆಯ ಹೆರಿಗೆಯಾಗುವುದು. ಗರ್ಭಿಣೆಗೆ ಬೇಕಾದ ತಿಂಡಿ, ಆಹಾರ ಕೊಡುತ್ತಾರೆ. ಹಾಗೂ ಗಂಡನಿಗೆ, ಮಾವನಿಗೆ ಸಾರಾಯಿ ಕುಡಿಸುತ್ತಾರೆ. ಗರ್ಭಿಣೆ ಮಹಿಳೆಗೆ ಪ್ರತ್ಯೇಕವಾಗಿ ಗುಡಾರ ಇರುವುದು. ಈ ಗುಡಾರದಲ್ಲಿ ಚಾಪೆ, ಮೊರ, ಬಿಸಿ ನೀರಿನ ಗಡಿಗೆ ಅಥವಾ ಪಾತ್ರೆ ಇರುವುದು ಗರ್ಭಿಣೆ ಮಹಿಳೆಗೆ ಹೆರಿಗೆ ನೋವು ಬಂದಾಗ ಸಮುದಾಯದ ಜನರು ಸೇರಿಕೊಂಡು ತಮ್ಮ ಮನೆಯ ದೇವರುಗಳಿಗೆ ಪ್ರಾರ್ಥಿಸುತ್ತಾರೆ. ಹೆರಿಗೆಯಾಗುವ ಸಮಯದಲ್ಲಿ ಸಮುದಾಯದ ಯಜಮಾನರು ತಮ್ಮ ಗುಡಾರದ ಹೊರಗಡೆ ಕುಳಿತಿರುತ್ತಾರೆ. ನವವಯಸ್ಕರು ತಮ್ಮ ವೃತ್ತಿಯನ್ನಾರಿಸಿಕೊಂಡು ಹೋಗಿರುತ್ತಾರೆ. ಹಲವರು ಬಿಕ್ಷೆಯಾಟನೆ ಮಾಡುವುದಕ್ಕೆ ಹೋಗಿರುತ್ತಾರೆ. ಗರ್ಭಿಣಿ ಮಹಿಳೆಗೆ ಹೆರಿಗೆ ಸಮಯದಲ್ಲಿ ಗರ್ಭಿಣಿ ಮಹಿಳೆಗೆ ಹೆರಿಗೆ ಸಮಯದಲ್ಲಿ ಸೂಲಗಿತ್ತಿ ಅಥವಾ ಅನುಭವಸ್ಥ ಮಹಿಳೆಯ ಮುಖಾಂತರ ಹೆಣ್ಣಿಗೆ ಹೆರಿಗೆ ಮಾಡಿಸುತ್ತಾಳೆ. ಪ್ರಥಮವಾಗಿ ಮಗುವಿಗೆ ಕರುಳು ಬಳ್ಳಿಯನ್ನು ಕುಡಗೋಲಿನಿಂದ ಕತ್ತರಿಸುವರು, ಕರುಳು ಬಳ್ಳಿಗೆ ಮಾಸ ಎಂದು ಹೆಸರು ನಂತರ ಕೂಸನು ಚಾಪೆಯ ಮೇಲೆ ಹಾಕುವರು ಮೊದಲೆ ತರಿಸಿಟ್ಟಿದ ಮಣ್ಣಿನ ಗಡಿಗೆಯಲ್ಲಿ ಆ ಮಾಸನ್ನು ತುಂಬಿ ಮಣ್ಣಿನಲ್ಲಿ ಮುಚ್ಚಿಡುತ್ತಾರೆ.

ಈ ಸಮುದಾಯದಲ್ಲಿ ಹೆಣ್ಣು ಹುಟ್ಟಿದರೆ ಬೇಡಿಕೆ ಎಂದು ಹೇಳುತ್ತಾರೆ. ೩ ದಿನಗಳ ಮೇಲೆ ಚಾಪೆ ಮೇಲೆ ಹಾಕಿರುವ ಮಗುವನ್ನು ಮೊರದಲ್ಲಿ ಹಾಕಲಾಗುವುದು. ಅಂದಿನ ದಿನಗಳಲ್ಲಿ ಗುಡಾರದ ಒಳಗಡೆಯ ಸೆಗಣಿ ನೀರಿನಿಂದ ನೆಲಸಾರಿಸಿ ಸ್ವಚ್ಚತೆಯನ್ನು ಮಾಡಿಕೊಳ್ಳುತ್ತಾರೆ. ಆ ದಿನದ ಸಂಜೆ ಮಾಸಕ್ಕೆ ಪೂಜೆ ಮಾಡುತ್ತಾರೆ. ಮಾಸಕ್ಕೆ ಬಾಣಂತಿ ಬಂದು ಪೂಜೆ ಮಾಡಿ ನಮಸ್ಕರಿಸುತ್ತಾಳೆ. ಹುಟ್ಟಿದ ಮಗುವಿಗೆ ಬಲಗಡೆ ಹಾಗೂ

ಕಾರಣ, ಒಮ್ಮೆ ಗಂಡು ಹೆಣ್ಣು ಮದುವೆ ಮಾಡಿಕೊಂಡು ಬೇರ್ಪಟರೆ ಮತ್ತೆ ಎರಡು ಕುಟುಂಬಗಳ ಸೇರುವ ಸಂಭವಗಳು ತೀರ ಕಡಿಮೆ ಹೀಗಿರುವಾಗ ಹೆರಿಗೆ ಸಂದರ್ಭದಲ್ಲಿ ಹೆಣ್ಣಿನ ತವರು ಮನೆಯನ್ನು ಹುಡುಕಿ ಬಾಣಂತಿತನವನ್ನು ತೀರಿಸಿಕೊಂಡು ಮತ್ತೆ ಗಂಡನ ಮನೆ ಸೇರುವುದು ಕಷ್ಟ ಸಾಧ್ಯ. ಇದರಿಂದಾಗಿ ಹೆರಿಗೆ ಹೆಣ್ಣನ್ನು ತವರಿಗೆ ಕಳುಹಿಸದೆ ಹಿಂದಿನ ಪದ್ಧತಿಯಂತೆ ಬಾಣಂತಿತನವನ್ನು ಗಂಡನ ಮನೆಯಲ್ಲೆ ಮಾಡಿ ಮುಗಿಸುತ್ತಿರುವುದು ಕಂಡುಬರುತ್ತಿದೆ.

ಇತರೆ ಬುಡಕಟ್ಟು ಸಮುದಾಯಗಳಂತೆ ಪ್ರತ್ಯೇಕವಾಗಿ ಗುಡಿಸಲನ್ನು ನಿರ್ಮಿಸುವುದಿಲ್ಲ ಡೇರೆ ನಿರ್ಮಿಸುತ್ತಾರೆ. ಅಂದರೆ ತಾವೇ ನಿರ್ಮಿಸಿರುವ ಗುಡಿಸಲು ಅದನ್ನೇ ಗರ್ಭಿಣಿ ಸ್ತ್ರೀಗೆ ಬಿಟ್ಟುಕೊಡುತ್ತಾರೆ. ಆ ಸ್ಥಳವನ್ನು ಸೂತಕದ ಜಾಗವೆಂದು ಪಾರಿಭಾವಿಸುವವರು ಗರ್ಭಿಣಿಯು ಮಲಗುವ ಸ್ಥಳದಲ್ಲಿ ಸ್ವಲ್ಪ ಹುಲ್ಲನ್ನು ಹಾಸಿ, ಊಟ ಮಾಡಲು, ನೀರು ಕುಡಿಯಲು ಪ್ರತ್ಯೇಕವಾದ ತಟ್ಟೆ, ಚೊಂಬನ್ನು ನೀಡುವರು. ಅಷ್ಟೆ ಅಲ್ಲದೆ ದುಷ್ಟ ಶಕ್ತಿಗಳ ನಿವಾಹರಣೆಗಾಗಿ ಕಬ್ಬಿಣದ ಆಯುಧವನ್ನು ಪಕ್ಕದಲ್ಲಿ ಇಟ್ಟಿರುತ್ತಾರೆ. ಡೇರಾ ಸುತ್ತಾ ಬಲೆಯನ್ನು ಹಾಕುವರು. (ದೃಷ್ಠ ಶಕ್ತಿಗಳು ಹತ್ತಿರ ಬರದಿರತೆಂದು) ಗರ್ಭಿಣಿ ಸತ್ತ ನರಿಮಾಂಸ ತಿಂದರೆ ಹೆರಿಗೆ ಸುಗುಮವಾಗುತ್ತದೆಂಬ ನಂಬಿಕೆ ಇವರಲ್ಲಿದೆ. ಆದ್ದರಿಂದ ಗರ್ಭಿಣಿಗೆ ತಪ್ಪದೆ ನರಿ ಮಾಂಸವನ್ನು ತಪ್ಪದೆ ತಿನ್ನಿಸುತ್ತಾರೆ. ಈ ಜನಾಂಗದಲ್ಲಿ ಎಷ್ಟೆ ಕಷ್ಟವಾದರು ಅನುಭವಿ ಸೂಲಗಿತ್ತಿಯನ್ನು ಕರೆಯಿಸಿ ಹೆರಿಗೆ ಮಾಡಿಸುತ್ತಾರೆ. (ಇತ್ತಿಚೆಗೆ ಕೂಡ ನಗರ ಪ್ರದೇಶದ ಹತ್ತಿರ ವಾಸಿಸುವ ಗೊಸಂಗಿಗಳೂ ಎಷ್ಟೆ ಕಷ್ಟವಾದರೂ ಹೆರೆಗೆ ಮಾಡಿಸಲು ಆಸ್ಪತ್ರೆಗೆ ಕರೆದುಕೊಂಡು ಹೋಗುವುದಿಲ್ಲ,) ತಾಯಿ ಗರ್ಭದಿಂದ ಮಗುವನ್ನು ಹೊರತೆಗೆದು ಆ ಮಗುವಿಗೆ ಹೊಕ್ಕಳ ಬಳ್ಳಿಯನ್ನು ಸ್ವಚ್ಚವಾದ ಕುಡುಗೋಲು ಅಥವಾ ಚಾಕುವನ್ನು ಬಳಸಿ, ಕೊಯ್ದು ಬೇರ್ಪಡಿಸುತ್ತಾರೆ. ನಂಜನ್ನು ನಿಯಂತ್ರಿಸುವ ಗುಣ ಅರಿಷಿಣಕ್ಕೆ ಇರುವ ಹೊಕ್ಕಳ ಬಳ್ಳಿಗೆ ಅರಿಶಿಣ ಲೇಪಿಸುತ್ತಾರೆ. ಜನನವಾದ ನಂತರ ಬಾಣಂತಿಯ ಗರ್ಭದಿಂದ ಮಾಸನ್ನು ತೆಗೆದು ಗಡಿಗೆಯಲ್ಲಿ ಹಾಕಿ ಡೇರಾದ ಸಮಿಪ ಸುರಕ್ಷಿತ ಸ್ಥಳದಲ್ಲಿ ಉಳಿಸುತ್ತಾರೆ. ನಾಯಿ ಪ್ರಾಣಿಯಂತಹ ಬಾಯಿಗೆ ಸಿಗಬಾರದೆಂದು. ಒಂದು ವೇಳೆ ಸಿಕ್ಕರೆ ತಾಯಿಯ ಇದೆ ಹಾಲು ಬತ್ತುತದೆಂಬ ನಂಬಿಕೆಯಿಂದ, ಇವರಲ್ಲಿ 'ಹೆಣ್ಣು ಹುಟ್ಟಿದರೆ ಲಕ್ಷ್ಮಿ' ಎಂದು ಭಾವಿಸುತ್ತಾರೆ. ಆದರೂ ಗಂಡು ಮಗುವಿನ ಜನನಕ್ಕೆ ಹೆಚ್ಚು ಹಂಚಿ ಸಂತೋಷ ವ್ಯಕ್ತಪಡಿಸುತ್ತಿರುವುದು ಕಂಡುಬರುತ್ತದೆ. (ಸಕ್ಕರೆ ಶ್ರೇಷ್ಠತೆಯ ಸಂಕೇತ ಶ್ರೀಮಂತ ಸಂಕೇತ, ಮಾನ್ಯತೆ ಪಡೆಯುವಂತಹದ್ದು ಆದರೆ ಬಡತನ, ದರಿದ್ರ್ಯತೆಯ ಸಂಕೇತವಾಗಿ ಬಳಸುತ್ತಾರೆ.)

ಇವರು ಜನನ ಮರಣಗಳಿಂದುಂಟಾಗುವ ಮೈಲಿಗೆಗೆ ಸೂತಕವೆಂದು ಭಾವಿಸುವರು. 'ಜನನ ಮತ್ತು ಋತುಮತಿಗೆ ಸಂಬಂಧಪಟ್ಟಂತೆ ಅತ್ಯಂತ ವಿಧಿ-ವಿಧಾನಗಳನ್ನು, ವಿಧಿ-

ಪೂರ್ವಕವಾಗಿ ನೆರವೇರಿಸುವವುದು ಹೀಗಾಗಿ ಬಾಣಂತಿಯ ಸೂತಕವನ್ನು ಇಡೀ ಸಮುದಾಯಕ್ಕೆ ಸೇರಿದ್ದರಿಂದ ಎಲ್ಲಾ ಡೇರೆಗಳನ್ನು ಗೋವಿನ ಸೆಗಣಿಯಿಂದ ಸರಿಸಿ. ತುಂಬಿದ ಕೊಡದ ನೀರಿನಲ್ಲಿ ಸ್ವಲ್ಪ ಗೋಮಾತ್ರವನ್ನು ಬೆರೆಸಿ ಎಲ್ಲಾ ಡೇರಾಗಳಿಗೆ ಚಿಮುಕಿಸುವುದರ ಮೂಲಕ ಜನ್ಮ ಸೂತಕ ಕಳೆಯುವರು".(ಮಾರುತಿ ವಿ.ಎಸ್., ೨೦೦೭, ಪು.೧೦೦)

ಹೀಗೆ ಅನೇಕ ಜಾತಿ, ವರ್ಗ, ಸಮುದಯ ಪಂಗಡಗಳನ್ನು ಆಧರಿಸಿ ಭಿನ್ನ ಭಿನ್ನವಾದ ರೀತಿಯಲ್ಲಿ ನಂಬಿಕೆಯನ್ನಾಧರಿಸಿ ಸಂಪ್ರದಾಯ ಆಚರಣೆಗಳು ಕಂಡುಬರುತ್ತವೆ ಹೀಗೆ ಕಂಡುಬರುವ ಸಂಪ್ರದಾಯ ಆಚರಣೆಗಳಲ್ಲಿ ಕೆಲವು ಒಳ್ಳೆಯ ಉದ್ದೇಶ ಬಾಣಂತಿಯ ಆರೋಗ್ಯದ ದೃಷ್ಟಿಯಿಂದ ಅನುಸರಿಸಲಾಗುತ್ತಿವೆ ಎಂದು ಹೇಳಲಾಗುತ್ತಿದ್ದರು. ಬಹುತೇಕ ಕೆಟ್ಟ ಪರಿಣಾಮವನ್ನು ಬೀರುವ ಸಂದರ್ಭ ಕಂಡುಬರುತ್ತಿವೆ. ಅದು ನಂಬಿಕೆಯ ಭಾಗವಾಗಿ ಮುಂದುವರೆಸಿಕೊಂಡು ಬಂದ ಪದ್ಧತಿ ಸಂಪ್ರದಾಯದಲ್ಲಿ ಅಮಾನವೀಯತೆಯನ್ನು ಒಳಗೊಂಡಿರುವುದು ಕಂಡುಬರುತ್ತವೆ. ಅದನ್ನೆಲ್ಲ ಚರ್ಚಿಸುವುದಕ್ಕಿಂತ ಮುಂಚೆ ಕೆಲವು ಹೆರಿಗೆ, ಜನನಕ್ಕೆ ಸಂಬಂಧಿಸಿದ ನಂಬಿಕೆಗಳು ಕಂಡುಬರುತ್ತಿವೆ. ಅವು ಈ ಕೆಳಗಿನಂತಿವೆ.

ಬಸುರಿ

ಗರ್ಭಿಣಿಯರು ಹೆಣ ನೋಡಬಾರದು, ಸ್ಮಶಾನಕ್ಕೆ ಹೊಗಬಾರದು

ರಾತ್ರಿಯಾದ ನಂತರ ಹೊರಗೆ ಹೋಗಬಾರದು

ಬಸುರಿಯರು ಹೊಳೆ, ಹಳ್ಳ ದಾಟಬಾರದು

ಗ್ರಹಣವನ್ನು ನೋಡಬಾರದು

ಬಸುರಿಯರು ಉಪವಾಸ, ವ್ರತ ಮಾಡಬಾರದು, ಮಾಡಿದರೆ ದೇವರಿಗೆ ಮುಟ್ಟುವುದಿಲ್ಲ. ಬಸುರಿಯ ಬಯಕೆ ತೀರಿಸದ್ದರೆ ಹುಟ್ಟುವ ಮಗುವಿನ ಕಿವಿ ಸೋರುತ್ತದೆ. ಗರ್ಭಿಣಿಯ ಗಂಡ ಹಾವು ಹೊಡೆಯಬಾರದು ಕೂಸ ಕುರುಡಾಗಿ ಹುಟ್ಟುತ್ತದೆ. ಬಸರಿ ಸತ್ತರೆ ದೆವ್ವವಾಗುತ್ತಾಳೆ. ಬಸುರಿಯರು ಅವಳಿ ಬಾಳೆ ಹಣ್ಣು ತಿಂದರೆ ಅವಳಿ ಮಕ್ಕಳಾಗುತ್ತವೆ (ಸಾದೃಶ್ಯ ಸಂಬಂಧ) ಬಸರಿಯರು ರಾತ್ರಿ ಹೊರಗೆ ಮಲಗಬಾರದು. ಅವರ ಮೇಲೆ ಹಕ್ಕಿಗಳು (ಕಣ್ಣಕಪಡಿ) ಹಾರಿ ಹೋದರೆ ಮಗು ಅಂಗವಿಕಲವಾಗುತ್ತದೆ. ಬಸುರಿಯನ್ನು ಹೆರಿಗೆಗೆ ಕರೆತರಲು ಅಣ್ಣನನ್ನು ಕಳಿಸಬಾರದು. ಗರ್ಭಿಣೆ ಮಹಿಳೆ ಬೆಳ್ಳಗಾದರೆ, ಹೆಣ್ಣು ಹುಟ್ಟುತ್ತದೆ. ಕಪ್ಪಗಾದರೆ ಗಂಡು ಹುಟ್ಟುತ್ತದೆ ಮಣ್ಣು ತಿನ್ನುವ ಆಸೆಯಾದರೆ ರಾಜ ಮಗ ಹುಟ್ಟುತ್ತಾನೆ. ಬಸುರಿಯ ನೆರಳು ಹಾವಿನ ಮೇಲೆ ಬಿದ್ದರೆ ಹಾವು ಕುರುಡಾಗುತ್ತದೆ. ಮೂರು ತಿಂಗಳಾದ ನಂತರ ಸೀಮಂತ ಕಳ್ಳಕುಬುಸ ಮಾಡಬಾರದು ಅಮವಾಸ್ಯೆಯೆಂದು ಹೊರಗೆ ಹೋಗಬಾರದು.

ಬಾಣಂತಿ

ಮೊದಲ ಹೆರಿಗೆ ತವರ ಮನೆಯಲ್ಲಿ ಆಗಬೇಕು.

ಒಂದು ತಿಂಗಳವರೆಗೆ ಕಸಬಾರಿಗೆ ಮುಟ್ಟಬಾರದು.

ತಿಂಗಳವರೆಗೆ ತಲೆ ಬಾಚಬಾರದು, ಹೂ ಮುಡಿಯಬಾರದು ಗಂಡು ಮಗುವಾದಾಗ ಬಾಣಂತಿಯು ಕೋಳಿಯ ತಲೆ, ಕಾಲು ತಿನ್ನಬಾರದು ಮೊಲೆ ಕುಡಿಸುವಾಗ ಮಗು ತಾಯಿಯ ಮುಖ ನೋಡಿ ನಕ್ಕರೆ ಕೂದಲು ಉದುರುತ್ತವೆ.

ಮೊಲೆ ಕುಡಿಸುವಾಗ ಮಗುವಿಗೆ ಒಂದೆ ಮೊಲೆ ಹಾಲು ಕುಡಿಸಬಾರದು ಎರಡು ಮೊಲೆ ಹಾಲು ಕುಡಿಸಬೇಕು. ಬಾಣಂತಿಯ ೧೧ನೇ ದಿನ ಗಂಗೆ ಪೂಜೆ ಮಾಡಬೇಕು.

ಹೆರಿಗೆಯಾದ ೧೧ ಅಥವಾ ೩೦ ದಿನಗಳಿಗೆ ಮೈಲಿಗೆ ಕಳೆದು ಶುದ್ದಚಾರ ಮಾಡಿಸಬೇಕು.

ಜನನ

ಅಮವಾಸ್ಯೆಯ ದಿನ ಹೆಣ್ಣು ಹುಟ್ಟಿದರೆ ತವರಿವರಿಗೆ ಅಶುಭ. ಹುಣಿಮೆಯ ದಿನ ಹುಟ್ಟಿದರೆ ಶುಭ. ಅಶ್ಲೇಷ ನಕ್ಷತ್ರದಲ್ಲಿ ಹುಟ್ಟಿದ ಹೆಣ್ಣು ಮಗಳನ್ನು ಅತ್ತೆ ಇಲ್ಲದ ಮನೆಗೆ ಕೊಡಬೇಕು. ಜೇಷ್ಠ ನಕ್ಷತ್ರದಲ್ಲಿ ಹೆಣ್ಣು ಹುಟ್ಟಿದರೆ ಭಾವ. ಇಲ್ಲದ ಮನೆಗೆ ಕೊಡಬೇಕು. ಬುಧವಾರ, ಹುಟ್ಟಿದರೆ ಆಕೆಯ ಕನ್ಯಾಧಾನ ವಿವಾಹವನ್ನು ತಂದೆಯೇ ಮಾಡಿದರೆ ಶುಭ, ಶುಕ್ರವಾರ ಹೆಣ್ಣು ಹುಟ್ಟಿದರೆ ಶುಭ, ಸೂರ್ಯೋದಯಕ್ಕೆ ಹುಟ್ಟಿದರೆ ಶ್ರೇಷ್ಠ ಸೂಚ್ಯದ ಸಮಯದಲ್ಲಿ ಹುಟ್ಟಿದರೆ ತಂದೆ, ತಾಯಿಗೆ ಕೇಡು.

ಮೂರು ಗಂಡಿನ ನಂತರ ಹೆಣ್ಣು ಹುಟ್ಟಿದರೆ ಹುಟ್ಟಿದ ಮನೆಗೆ ಕೇಡು." (ಶಾಂತ ಇಮ್ರಾಪುರ, ೨೦೦೧ ೪೦, ೪೧, ೪೨,) ಹೀಗೆ ಹಲವು ನಂಬಿಕೆಗಳು ಇರುವುದು ದೊರೆಯುತ್ತವೆ. ಈ ಮೇಲಿನ ಸಮುದಾಯದಲ್ಲಿ ದೊರೆಯುವ ನಂಬಿಕೆ ಸಂಪ್ರದಾಯ ಆಚರಣೆಗಳು ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುತ್ತಿವೆ. ಇವುಗಳಿಗೆ ಕೆಲವು ಪ್ರಶ್ನೆಗಳನ್ನು ಹಾಕಿ ವಿಶ್ಲೇಷಿಸಿದರೆ ಬಹುತೇಕವಾಗಿ ಹೆಣ್ಣಿಗೆ ದೈಹಿಕ, ಮಾನಸಿಕ, ಮತ್ತು ಆರೋಗ್ಯದ ಮೇಲೆ ದೃಷ್ಪ ಪರಿಣಾಮ ಬೀರುವುವಗಳಾಗಿವೆ. ಅದು ಹೇಗೆಂದರೆ ಪ್ರಕೃತಿದತ್ತವಾದ ಗರ್ಭಿಣಿ, ಸಂದರ್ಭ, ಹೆರಿಗೆ ಪ್ರಕ್ರಿಯೆಗಳು ಸುರಕ್ಷಿತ ಕ್ರಮಗಳನ್ನು ಬಯಸುತ್ತದೆ ಹೊರತು, ಸಂಪ್ರದಾಯ ವಿಧಿ-ವಿಧಾನಗಳನಲ್ಲ. ಹೆರಿಗೆಯು(ಹುಟ್ಟು) ಎಂಬುದು ಕೇವಲ ಬೌತಿಕವಾದ ಸಂಗತಿಯೊಂದೆ ಅಲ್ಲ ಅದು ಮಾನಸಿಕವಾಗಿ ಉಳಿದಿರುವಂತಹದ್ದು. ಹಾಗಾಗಿ ಸಂಪ್ರದಾಯ ವಿಧಾನಗಳು ಅನುಸರಿಸುವ ಸಂದರ್ಭದಲ್ಲಿ ಹೆಣ್ಣಿಗೆ ತಂದೊಡ್ಡುವ ಅಪಾಯವನ್ನು ನೋಡಬೇಕಾಗಿದೆ.

ಇತ್ತೀಚಿನ ಆಧುನಿಕ ದಿನಗಳಲ್ಲಿ ತಾಯಿಮರಣ, ಶಿಶುಮರಣ ಮತ್ತು ಗರ್ಭಪಾತಗಳಂತ ಸಂಖ್ಯೆಗಳು ಹೆಚ್ಚಾಗುತ್ತಿರುವುದು ಕೇಳಿಬರುತ್ತಿವೆ. ಹೀಗೆ ಕೇಳಿಬರುವ ಸಂಗತಿಗಳಲ್ಲಿ ನಂಬಿಕೆ ಸಂಪ್ರದಾಯ ಆಚರಣೆಗೆ ಒಳಗಾಗಿ ಹೆಣ್ಣಿಗೆ ಅಪಾಯವನ್ನು ಉಂಟುಮಾಡಿರುವ ಸಂಗತಿಗಳು ಇವೆ. ಇದಕ್ಕೆ ಗರ್ಭಿಣಿ ಸಂದರ್ಭದಲ್ಲಿ ಅನುಸರಿಸಿಸುವ ನಂಬಿಕೆಗಳ ಮತ್ತು ಹೆರಿಗೆ ಸಂದರ್ಭದಲ್ಲಿ ಸಂಪ್ರದಾಯಿಕ ಪದ್ಧತಿಯನ್ನು ಅನುಸರಿಸಿ ಹೆರಿಗೆ ಮಾಡಿಸುವುದು ಇವುಗಳು ಅನುಸರಿಸುವ ಪದ್ಧತಿಯಲ್ಲಿ ಅವೈಜ್ಞಾನಿಕತೆಯಿಂದ ಕೂಡಿದ್ದಾಗಿರುತ್ತವೆ. ನಂಬಿಕೆಯನ್ನಾಧರಿಸಿ ಸಂಪ್ರದಾಯಗಳು ಹೆಣ್ಣು ಸಮುದಾಯಕ್ಕೆ ಅಪಾಯವನ್ನುಂಟು ಮಾಡುತ್ತಿರುವುದರಿಂದಲೇ ಸಂಪ್ರದಾಯಿಕ ಹಾನಿಕಾರಕ ರೂಢಿಗಳನ್ನು ಮತ್ತು ಹೆಣ್ಣು ಮಕ್ಕಳ, ಮಕ್ಕಳ ಮತ್ತು ತಂಗಿಯರ ಮೇಲೆ ದುಷ್ಪರಿಣಾಮ ಬೀರುವ ಸಾಮಾಜಿಕ ಪ್ರತಿಬಂಧಕಗಳನ್ನು (ಸಂಪ್ರದಯದಂತಹವು) ತೆಗೆದು ಹಾಕುವ ಕುರಿತು ಒತ್ತು ಕೊಡಲಾಗಿರುವುದು. ೧೯೯೩ರಲ್ಲಿ ವಿಶ್ವಸಂಸ್ಥೆ ಆರೋಗ್ಯ ಸಭೆಯಲ್ಲಿ ನಿರ್ಣಯವನ್ನು ಅಂಗೀಕರಿಸಿರುವುದು ದೊರೆಯುತ್ತದೆ".(ಇಂಗ್ ಹುಟ್ಟರ್, ೧೯೯೮, ಪುಟ.೧)

ಈ ಕುರಿತಾಗಿ ಹೆರಿಗೆ ಸಂದರ್ಭವನ್ನು ಆಧರಿಸಿ ಮರಣ ಹೊಂದಿರುವ ತಾಯಿ ಶಿಶುವಿನ ಇತ್ತೀಚಿನ ಅಂಕಿ ಅಂಶಗಳನ್ನು ನೋಡಿದರೆ ಈ ರೀತಿಯಾಗಿ ದೊರೆಯುತ್ತದೆ. "ನಮ್ಮ ಇತ್ತೀಚಿನ ಅಂಕಿ ಅಂಶಗಳ ವರದಿ ಪ್ರಕಾರ ಪ್ರತಿ ೧೦೦೦ ಜೀವಂತ ಜನನಕ್ಕೆ ಮರಣ ೭೪ ಇವೆ. ಇದರಲ್ಲಿ ಅಧಿಕ ಸಂಖ್ಯೆಯು ಹುಟ್ಟಿದ ಮಕ್ಕಳು ಮೊದಲ ತಿಂಗಳಲ್ಲಿ ಸಾವು ಸಂಭವಿಸುತ್ತವೆ. ಬಹುಪಾಲು ಮೊದಲ ವಾರದಲ್ಲಿ ಸಾವು ಸಂಭವಿಸುತ್ತವೆ. ಅದು ಹುಟ್ಟಿದ ಒಂದು ತಿಂಗಳ ವಾರದ ಅವಧಿಯಲ್ಲಿ ಬಸಿರು ಮತ್ತು ಹೆರಿಗೆಗೆ ಸಂಬಂಧಪಟ್ಟ ಸಂಗತಿಯಿಂದಲೆ" (ಇಂಗ್ ಹುಟ್ಟರ್ ೧೯೯೮, ಪುಟ.೨) ಎಂದು ದೊರೆಯುತ್ತದೆ.

ಸಂಪ್ರದಾಯ ಮತ್ತು ಅವೈಜ್ಞಾನಿಕ ಪದ್ಧತಿಯಿಂದಾಗಿ ಒಂದು ಸಂಶೋಧನಾ ಅಧ್ಯಯನ ಪ್ರಕಾರ ದೊರೆಯುವ ಮಾಹಿತಿಯಲ್ಲಿ "ಬಸಿರು ಮತ್ತು ಮಕ್ಕಳ ಜನನಕ್ಕೆ ಸಂಬಂಧಪಟ್ಟಂತೆ ಭಾರತದಲ್ಲಿ ತಾಯಿಯ ಮರಣ ಸಮಾನ್ಯವಾಗಿ ಪ್ರತಿ ೧೦೦,೦೦೦ ಜೀವಂತ ಜನನಗಳಿಗೆ ೮೦೦ ಮರಣ ಎಂದು ಅಂದಾಜು. ಗ್ರಾಮೀಣ ಪ್ರದೇಶದಲ್ಲಿ ಪ್ರತಿ ೧,೦೦,೦೦೦ ಜೀವಂತ ಜನನಗಳಿಗೆ ಮರಣ ದರಗಳು ೧,೩೬೦ ರಷ್ಟು ಹೆಚ್ಚಾಗಿದೆ ಎಂದು ವರದಿ ಮಾಡಲಾಗಿದೆ. ಭಾರತದ ಸ್ತ್ರೀಗೆ ಬಸಿರು ಮತ್ತು ಮಕ್ಕಳ ಜನನಕ್ಕೆ ಸಂಬಂಧಪಟ್ಟಂತೆ ಜೀವಮಾನದಲ್ಲಿ ಮರಣ ಹೊಂದುವ ಸಂಖ್ಯೆ ೨೭ ರಲ್ಲಿ ೧ ಇದೆ. ಭಾರತದಲ್ಲಿ ಹೆಣ್ಣಿನ ಸಂಖ್ಯೆಯ ಅಂದರೆ ತಾಯಿ ಮರಣಗಳು (೭೩% ಪ್ರತಿಶತ)ದಲ್ಲಿ ನಡೆಯುತ್ತಿವೆ ಎಂದು ಅಧ್ಯಯನಗಳು ಹೇಳುತ್ತವೆ". ಈ ಮಾಹಿತಿಯನ್ನಾಧರಿಸಿ ನೋಡಿದರೆ ಇದಕ್ಕೆ ಕಾರಣ (ಇಂಗ್ ಹುಟ್ಟರ್ ೧೯೯೮, ಪುಟ ೨) ಅನೇಕ ರೂಢಿ ಸಂಪ್ರದಾಯ ಆಚರಣೆಗಳಿಂದ ಆಗಿರುವ ಅನಾಹುತದ ಸ್ಪಷ್ಟವಾಗುತ್ತದೆ.

ಸಂಪ್ರದಾಯಿಕ ಪದ್ಧತಿ, ರೂಢಿ ನಂಬಿಕೆಗಳಿಂದಾಗಿ ಗರ್ಭಿಣಿಯರ ಮೇಲೆ ಆಗುವ ತೊಂದರೆಯ ಕುರಿತಾಗಿ ಮತ್ತು ಗರ್ಭಿಣಿ ಸ್ತ್ರೀಯರಿಗೆ ಆಹಾರ ಲಭ್ಯತೆಯನ್ನಾಧರಿಸಿ ನಡೆದಿರುವ ಅಧ್ಯಯನದಲ್ಲಿ ಈ ಕುಟುಂಬದ ಒಳಗಡೆ ಆಹಾರದ ಲಭ್ಯತೆ ಮುಖ್ಯ ಉದಾಹರಣೆಯಾಗಿ ಗಂಡಸರು ಮತ್ತು ಮಕ್ಕಳನ್ನು (ಊಟ) ಉಂಡ ನಂತರವೆ ಸ್ತ್ರೀಯರು ಉಣ್ಣುತ್ತಾರೆ. ಅಂತೆಯೇ ಬಸಿರು (ಗರ್ಭಿಣಿ) ಇರುವ ಹೆಣ್ಣಿಗೆ ಕೂಡ ಈ ಸಂಪ್ರದಾಯಿಕ ಮಾದರಿಯ ಪಾತ್ರ ಅನ್ವಯಿಸುತ್ತದೆ. ಮೊದಲಿನ ತಿಂಗಳುಗಳಲ್ಲಿ ವಾಕರಿಕೆ ಆಹಾರ ಸೇವನೆಯನ್ನು ಕಡಿಮೆ ಮಾಡಬಹುದು, ಅಂತಹ ಸಮಯದಲ್ಲಿ ಗರ್ಭಿಣಿ (ಬಸಿರು) ಸ್ತ್ರೀ, ಏನು ತಿನ್ನಬೇಕೆಂಬುದರ ಬಗ್ಗೆ ನಂಬಿಕೆಗಳು ನಿರ್ಧರಿಸುತ್ತವೆ. ಆದುದರಿಂದ ಬಸುರಿನ ಕೊನೆಯ ತ್ರಿಮಾಸದ (ಕೊನೆಯ ೩ ತಿಂಗಳ) ಸಮಯದಲ್ಲಿ ಆಹಾರದ ಸೇವನೆಯ ಕಡಿತವಾಗುತ್ತದೆ. ಸಂಪ್ರದಾಯ, ಗರ್ಭಿಣಿ ಸ್ತ್ರೀಗೆ ಇದ್ದಾವೇ. ಇದರಿಂದಲೇ (ಗರ್ಭಿಣಿ ಸ್ತ್ರೀಯರ) ತಮ್ಮ ಆಹಾರ ಸೇವೆಯನ್ನು ಕಡಿಮೆ ಮಾಡುತ್ತಾರೆ". (ಇಂಗ್ ಹುಟ್ಟರ್, ೧೯೯೮, ಪುಟ.೧೪) "ಆಹಾರ ಕಡಿಮೆ ಮಾಡುವುದರಿಂದ ಸಣ್ಣ ಮಗು ಹಾಗೂ ಸುಲಭ ಹೆರಿಗೆ ಆಗುತ್ತದೆಂದು ಮಹಿಳೆಯರು ಆಶಿಸುತ್ತಾರೆ. ಆದರೂ ದಕ್ಷಿಣ ಭಾರತದ ಒಂದು ಅಧ್ಯಯನ ಆಹಾರ ಸೇವನೆ ಮತ್ತು ಶಿಶುವಿನ ಅಳತೆಯ ಮಧ್ಯೆ ಪೂರ್ತಿ ವಿರುದ್ದ ಸಂಬಂಧಗಳನ್ನು ಕಂಡಿದ್ದು ಕಡಿಮೆ. ಆಹಾರವೆಂದರೆ ದೊಡ್ಡ ಶಿಶುವೆಂದು ಸ್ತ್ರೀಯರು ನಂಬುತ್ತಾರೆ. ಹೆಚ್ಚು ತಿಂದರೆ ಶಿಶುವಿಗೆ ಬೆಳೆಯಲು ಸಾಕಷ್ಟು ಜಾಗ ಸಿಗುವುದಿಲ್ಲ ಎಂದು ನಂಬಿದ್ದರು. "(ಇಂಗ್ ಹುಟ್ಟರ್, ೧೯೯೮, ಪುಟ.೧೪) ಉತ್ತರಪ್ರದೇಶದಲ್ಲಿ ಕೈಗೊಳ್ಳಲಾದ ಅಧ್ಯಯನ ವರದಿಯಲ್ಲಿ "ಅತೀ ಹೆಚ್ಚು ತಿನ್ನುವುದರಿಂದ ದೊಡ್ಡ ಶಿಶುವಾಗಿ ಪರಿಣಮಿಸುತ್ತದೆ ಮತ್ತು ಅದು ಹೆಚ್ಚು ಗಂಡಾಂತರಕಾರಿ ಹೆರಿಗೆ ಎಂದು ಸ್ತ್ರೀಯರು ನಂಬಿದ್ದರು ಮತ್ತು ತನ್ನ ಆಹಾರ ಸೇವನೆಯನ್ನು ಕಡಿಮೆ ಮಾಡದೆ ಚಿಕ್ಕ ಮಗುವಿಗೆ ಜನ್ಮ ಕೊಟ್ಟ ಒಬ್ಬ ಸ್ತ್ರೀಯನ್ನು, ಹೆಚ್ಚು ತಿಂದಿದಕ್ಕಾಗಿ ತೆಗಳಲಾಯಿತು. ಅವಳ ಹೊಟ್ಟೆ ನಳಿಕೆಗಳು ಆಹಾರದಿಂದ ತುಂಬಿ ಶಿಶುವಿಗೆ ಇಕಟ್ಟಾಯಿತೆಂದು ನಂಬಿದ ಸಂಗತಿಗಳು ಕಂಡುಬಂದಿವೆ. ಈ ನಂಬಿಕೆ ಕೆಲವೊಮ್ಮೆ ಗರ್ಭಿಣಿ ಸ್ತ್ರೀಯನ್ನು ಅಪೌಷ್ಟಿಕತೆಗೆ ಕಾರಣವಾಗಿ, ಹೆರಿಗೆ ಸಂದರ್ಭದಲ್ಲಿ ಬಾಣಂತಿಯನ್ನು ನಿಶಕ್ತಿಯಾಗಲೂ ಕಾರಣವಾಗಿರುವುದುಂಟು. ಇದು ಅತಿಯಾದ ನಂಬಿಕೆಯ ಪ್ರಭಾವ ಗರ್ಭಿಣಿ ಸ್ತ್ರೀಯರ ಮೇಲೆ ಅನೇಕ ರೀತಿಯಾಗಿ ಅದು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪರಿಣಾಮವನ್ನುಂಟು ಮಾಡುತ್ತದೆ. ಜೊತೆಗೆ ಆಹಾರ ಕುರಿತಾಗಿ ಇರುವ ಕೆಲವು ನಂಬಿಕೆಗಳು ಹೆಣ್ಣಿನ ಅಶಕ್ತಿಗೆ ಕಾರಣವನ್ನುಂಟು ಮಾಡಿರುವ ಸಂಗತಿಗಳು ಇವೆ. (ಇಂಗ್ ಹುಟ್ಟರ್, ೧೯೯೮)

ಕೆಲವು ಸಮುದಾಯಗಳಲ್ಲಿ ಗರ್ಭಿಣಿ ಬಾಣಂತಿ, ಮಗುವಿನ, ಸಂಬಂಧಪಟ್ಟಂತೆ ನಡೆಯುವ ಸಂಪ್ರದಾಯ ಆಚರಣೆಗಳಲ್ಲಿ ಅಮಾನವೀಯತೆ ಅಂಶಗಳು ಕಂಡುಬರುತ್ತವೆ. ಅದು ಹೇಗೆಂದರೆ ಜಾತಿ, ಜನಾಂಗ, ವರ್ಗ, ಸಮುದಾಯದ, ಆಧಾರವಾಗಿ ಉದಾಹರಣೆ: ಮಗುವಿಗೆ ಸೂಜಿಯಿಂದ ಕಾಯಿಸಿ ಬರೆಹಾಕುವುದು ಗೊಲ್ಲರ ಸಮುದಾಯದಲ್ಲಿ ಬಾಣಂತಿಯನ್ನೇ

ಸೂತಕದ ಹೆಸರಿನಲ್ಲಿ ಊರ ಹೊರಗೆ ಇಡುವುದು. ಹೀಗೆ ಕೆಲವು ನಿರ್ಬಂಧಗಳನ್ನು, ನಿಯಂತ್ರಣಗಳನ್ನು ಹಾಕಿರುವುದು ಈ ಮೇಲೆ ದಾಖಲಿಸಿದ ಸಮುದಾಯಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಸಂಪ್ರದಾಯಿಕ ಪದ್ಧತಿಗಳಿಂದಾಗಿ ಭಾರತದಲ್ಲಿ ಸಾವನ್ನಪ್ಪಿದ ಹೆಣ್ಣು ಮಕ್ಕಳ ಸಂಖ್ಯೆಯನ್ನು ಶೇ. ೭೫ ರಷ್ಟಿದೆ. ಇದರಲ್ಲಿ ಮರಣಗಳು, ರಕ್ತಸ್ರಾವ, ನಂಜು, ಗರ್ಭಪಾತ, ವಿಷರಕ್ತ ಮುಂತಾದ ಕಾಯಿಲೆಗಳಿಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಒಳಗಾಗಿರುವ ಹೆಣ್ಣು ಮಕ್ಕಳಿದ್ದಾರೆ. ಹೆಣ್ಣಿಗೆ ರಕ್ತ ಹೀನತೆ, ಉಂಟಾಗಿ ಶೇ. ೧೫ ರಿಂದ ೨೦ ರಷ್ಟು ಮರಣಗಳಿಗೆ ಕಾರಣವಾಗಿದೆ. ಅಲ್ಲದೆ ಹೆಣ್ಣಿಗೆ ಕಾಯಿಲೆ ಬರಲು ಕಾರಣವಾಗಿದೆ ಎಂದು ಇವೆ. ಸಂಶೋಧನೆಗಳಿಂದ ತಿಳಿದು ಬಂದಿರುವುದೂ ಇದೆ. ಈ ಎಲ್ಲ ಮಾಹಿತಿಯು ಸಂಪ್ರದಾಯಿಕ ಪದ್ಧತಿಯಲ್ಲಿನ ಅವೈಜ್ಞಾನಿಕ ಪದ್ಧತಿಯಿಂದಾಗಿ ಹೆಣ್ಣಿಗೆ ಉಂಟು ಮಾಡಿರುವ ತೊಂದರೆಗಳಾಗಿವೆ.

ಜೈವಿಕ ಸಹಜ ಕ್ರಿಯೆಯನ್ನಾಧರಿಸಿ ನಡೆಯುವ ಸಂಪ್ರದಾಯ ಆಚರಣೆಗಳು ಒಟ್ಟಾಗಿ ಹೆಣ್ಣಿಗೆ, ಹೆಣ್ಣಿನ ದೇಹಕ್ಕೆ ಅನಾರೋಗ್ಯವನ್ನು ತಂದೊಡ್ಡುತ್ತವೆ. ಜೊತೆಗೆ ಹೆರಿಗೆ ಪ್ರಕ್ರಿಯೆಯನ್ನು ಅಸ್ಪೃಶ್ಯತೆ ನೆಲೆಯಲ್ಲಿ ನೋಡಿರುವುದು ಕಂಡುಬರುತ್ತದೆ. ಇದಕ್ಕೆ ಈ ಮೇಲೆ ದಾಖಲಿಸಿದ ವಿವಿಧ ಸಮುದಾಯದಲ್ಲಿನ ಜೈವಿಕ ಕ್ರಿಯೆಯನ್ನಾಧರಿಸಿದ ಸಂಪ್ರದಾಯಿಕ ಆಚರಣೆಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ. ಬಹುತೇಕ ಸಂಪ್ರದಾಯ ಆಚರಣೆಗಳು ಅಂಥ ಉದ್ದೇಶಗಳನ್ನು ಒಳಗೊಂಡಿವೆ. ಆದುದರಿಂದ ಇಂತಹ ಸಂಪ್ರದಾಯ ಆಚರಣೆಗಳನ್ನು ವಿರೋಧಿಸುವ, ವಿಮರ್ಶಿಸಿ ನೋಡುವ ವೈಜ್ಞಾನಿಕ ಕ್ರಮಬೇಕಾಗಿದೆ. ಹೆಣ್ಣು ಮತ್ತೊಂದು ಜೀವಕ್ಕೆ ಜನ್ಮ ಕೊಡುವ ಶಕ್ತಿ ಕೇಂದ್ರ, ಆ ಶಕ್ತಿ ಕೇಂದ್ರಕ್ಕೆ ಮತ್ತ್ಯಾವುದೇ ರೀತಿಯಿಂದ ನಿರ್ಬಂಧ, ನಿಯಂತ್ರಣ ಇರಬಾರದು. ಸ್ವತಂತ್ರವಾಗಿ ಜೈವಿಕ ಪ್ರಕ್ರಿಯೆಯಾಗಬೇಕೆ ಹೊರತು ಯಾವ ಅಸಹ್ಯ ಅಪವಿತ್ರ, ಮೈಲಿಗೆ, ಸೂತಕ ಎನ್ನುವ ಹೆಸರಿನಿಂದ ನಡೆಯಬೇಕಾಗಿಲ್ಲ ಮತ್ತು ನಡೆಯುವಂತಹದು ಕೂಡ ಅಲ್ಲ. ಅಂತಹ ಜೈವಿಕ ಪ್ರಕ್ರಿಯೆ ಮೂಢನಂಬಿಕೆ ಆಧಾರವಾಗಿ ನಡೆಯುವ ಸಂಪ್ರದಾಯ ಆಚರಣೆಗಳನ್ನು ತೊಲಗಿಸಬೇಕಾಗಿದೆ.

ಇನ್ನು ಜೈವಿಕತೆಯನ್ನಾಧರಿಸಿ ಹೆಣ್ಣಿಗೆ ನಿಯಂತ್ರಣ ನಿರ್ದೇಶನ ಮಾಡಿರುವುದು ಕೌಟುಂಬಿಕ ವಲಯದಲ್ಲಿ ಕಂಡರೂ ಇನ್ನೂ ಮುಂದುವರೆದು ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿನ ಪೂಜೆ ವ್ರತ, ದೈವಾಧಾರಿತ ಪೂಜಾಗಳ ಮುಖಾಂತರ ಹೆಣ್ಣಿಗೆ ಒತ್ತಡ, ಉಂಟಾಗಿರುವುದು ಕಂಡುಬರುತ್ತಿದೆ. ಅದು ಸಂಪ್ರದಾಯ ಆಚರಣೆಗಳ ಮೂಲಕವೇ ಆದುದರಿಂದ ಅಂತಹ ಅಂಶಗಳು ಮುಂದಿನ ಅಧ್ಯಯದಲ್ಲಿ ಸಾರ್ವಜನಿಕ ಮತ್ತು ಖಾಸಗಿಯಲ್ಲಿನ ಸಂಪ್ರದಾಯ ಆಚರಣೆಗಳು ಎನ್ನುವ ಶೀರ್ಷಿಕೆ ಅಡಿಯಲ್ಲಿ ಮುಂದಿನ ಅಧ್ಯಯನ ಮಾಡಲಾಗಿದೆ.

ಅಡಿ ಟಿಪ್ಪಣಿ

೧. ವಕ್ತೃ : ವನಜಾಕ್ಷಿ ವಯಸ್ಸು.೪೩, ಕಮಲಾಪುರ

೨. ಗುರುಲಿಂಗಯ್ಯ ಎಂ., ೨೦೦೫, **'ಕರ್ನಾಟಕಗೊಲ್ಲ ಸಮುದಾಯ ಸಮಾಜ–ಸಾಂಸ್ಕೃತಿಕ ಅಧ್ಯಯನ'**, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂ., ಪು.೩೧,೩೨

೩. ವಕ್ತೃ: ಕಮಲಮ್ಮ ವಯಸ್ಸು, ಗಂಗಾವತಿ

೪. ಗುರುಲಿಂಗಯ್ಯ ಎಂ., ೨೦೦೫, **'ಕರ್ನಾಟಕ ಗೊಲ್ಲ ಸಮುದಾಯ ಸಮಾಜ – ಸಾಂಸ್ಕೃತಿಕ ಅಧ್ಯಯನ'**, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂ., ಪುಟ.೩೧, ೩೨

೫. ಮಂಜಪ್ಪ ಶೆಟ್ಟಿ ಮಸಗಲಿ ಎಂ.ಪಿ., ೨೦೦೦, **'ಮಲೆನಾಡ ಕುರುಹಿನ ಶೆಟ್ಟರ ಒಂದು ಅಧ್ಯಯನ'**, ಮಸಗಲಿ ಪ್ರಕಾಶನ, ಮೈಸೂರು, ಪುಟ.೧೩೪–೧೩೫

೬. ರಮೇಶ ಸ.ಚಿ., ೧೯೯೬, **'ದಕ್ಷಿಣ ಕರ್ನಾಟಕದ ಉಪ್ಪಾರ ಸಮುದಾಯ' ಸಮಾಜೋ–ಆರ್ಥಿಕ ಅಧ್ಯಯನ'**, (ಅಪ್ರಕಟಿತ) ಪು.೫೦–೫೧

೭. ಲೋಕರಾಜ ದೊಡ್ಡಮನಿ, ೨೦೦೨, **'ಸಿಂಧೋಳ್ಳ ಸಮುದಾಯ ಒಂದು ಅಧ್ಯಯನ'**, (ಅಪ್ರಕಟಿತ) ಪುಟ.೪೫.

೮. ಕೃಷ್ಣಮೂರ್ತಿ ಹನ್ನೂರ, ೧೯೯೩, **'ಮ್ಯಾಸಬೇಡರು'**, ಸಂವಹನ ಪ್ರಕಾಶನ, ಮೈಸೂರು, ಪುಟ.೧೦೦,

೯. ಮಾರುತಿ.ವಿ.ಎಸ್, ೨೦೦೨, **'ಗೋಸಂಗಿ ಸಮುದಾಯ ಒಂದು ಅಧ್ಯಯನ'**, (ಅಪ್ರಕಟಿತ) ಪುಟ.೧೦೧

೧೦. ಅಭಯ ಕೆಕ್ರಾಡಿ, ೧೯೯೭, **'ಮುಗೇರರು ಒಂದು ಅಧ್ಯಯನ'**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ.೨೯

೧೧. ಬೈರೇಗೌಡ ಎಂ., ೨೦೦೦, **'ಇರುಳಿಗರ ಜನಾಪರ ಅಧ್ಯಯನ'**, ಸಿ.ವಿ.ಜಿ. ಪಬ್ಲಿಷರ್ಸ್, ಬೆಂ.,ಪುಟ.೧೮೦

೧೨. ವಕ್ತೃ : ಕಮಲಮ್ಮ ವಯಸ್ಸು: ೪೩, ಮಾನ್ವಿ

೧೩. ಗುರುಲಿಂಗಯ್ಯ ಎಂ., ೨೦೦೫, **'ಕರ್ನಾಟಕಗೊಲ್ಲ ಸಮುದಾಯ ಸಮಾಜ–ಸಂಸ್ಕೃತಿ ಅಧ್ಯಯನ'**, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂ., ಪು.೩೩

೧೪. ಮಂಜಪ್ಪ ಶೆಟ್ಟಿ ಮಸಗಲಿ ಎಂ.ಪಿ., ೨೦೦೦, **'ಮಲೆನಾಡ ಕುರುಹಿನ ಶೆಟ್ಟರ ಒಂದು ಅಧ್ಯಯನ'**, ಮಸಗಲಿ ಪ್ರಕಾಶನ, ಮೈಸೂರು, ಪುಟ.–

೧೫. ರಮೇಶ ಸ.ಚಿ., ೧೯೯೬, **'ದಕ್ಷಿಣ ಕರ್ನಾಟಕದ ಉಪ್ಪಾರ ಸಮುದಾಯ' ಸಮಾಜೋ–ಆರ್ಥಿಕ ಅಧ್ಯಯನ'**, (ಅಪ್ರಕಟಿತ) ಪು.೫೨–೫೩

೧೬. ನಾರಾಯಣ, ೨೦೦೬, **'ಮಲೆನಾಡಿನ ಹೊರಗಿನ ಮಹಿಳೆಯರು'**, ಪುಟ.೫೬

ಸುಧಾ ೧೬ನೇ ನವೆಂಬರ್ ೨೦೦೬

೧೭. ವಕ್ತೃ: ಸೋಮಪ್ಪ ಅಂಬಿಗರು, ವಯಸ್ಸು: ೪೮, ಆನೆಗುಂದಿ

೧೮. ವಕ್ತೃ : ಕಮಲಮ್ಮ ವಯಸ್ಸು: ೪೮, ಗಂಗಾವತಿ

೧೯. ಗುರುಲಿಂಗಯ್ಯ ಎಂ., ೨೦೦೫, **'ಕರ್ನಾಟಕಗೊಲ್ಲ ಸಮುದಾಯ ಸಮಾಜ-ಸಂಸ್ಕೃತಿ ಅಧ್ಯಯನ'**, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂ., ಪು.೩೦

೨೦. ಕರಣಂ ರಮೇಶ, ೨೦೦೬, **'ಪ್ರಜಾವಾಣಿ ಸುದ್ದಿ'**, ಪುಟ.೧೬

೨೧. ರಮೇಶ ಸ.ಚಿ., ೧೯೯೬, **'ದಕ್ಷಿಣ ಕರ್ನಾಟಕದ ಉಪ್ಪಾರ ಸಮುದಾಯ' ಸಮಾಜೋ-ಆರ್ಥಿಕ ಅಧ್ಯಯನ'**, (ಅಪ್ರಕಟಿತ) ಪು.೫೫-೫೬

೨೨. ಮಂಜಪ್ಪ ಶೆಟ್ಟಿ ಮಸಗಲಿ ಎಂ.ಪಿ., ೨೦೦೦, **'ಮಲೆನಾಡ ಕುರುಹಿನ ಶೆಟ್ಟರ ಒಂದು ಅಧ್ಯಯನ'**, ಮಸಗಲಿ ಪ್ರಕಾಶನ, ಮೈಸೂರು, ಪುಟ.೧,೨,೩

೨೩. ಲೋಕರಾಜ ದೊಡ್ಡಮನಿ, ೨೦೦೨, **'ಸಿಂಧೋಳ್ಳ ಸಮುದಾಯ ಒಂದು ಅಧ್ಯಯನ'**, ಪುಟ.೯೨

೨೪. ಕೃಷ್ಣ ಮೂರ್ತಿ ಹನ್ನೂರ, ೧೯೯೭, **'ಮ್ಯಾಸಬೇಡರು'**, ಸಂವಹನ ಪ್ರಕಾಶನ, ಮೈಸೂರು, ಪುಟ.೮-೯

೨೫. ಮಾರುತಿ ವಿ.ಎಸ್., ೨೦೦೨, **'ಗೋಸಂಗಿ ಸಮುದಾಯ: ಒಂದು ಅಧ್ಯಯನ'**, (ಅಪ್ರಕಟಿತ) ಪು.೧೦೦

೨೬. ಶಾಂತ ಇಮ್ರಾಪುರ, ೨೦೦೧, **'ಮಹಿಳೆ ಸಾಹಿತ್ಯ-ಸಂಸ್ಕೃತಿ'**, ಚೇತನ ಪ್ರಕಾಶನ, ಧಾರವಾಡ, ಪು.೪೦,೪೧,೪೨

೨೭. ಇಂಗ್ ಹುಟ್ಟಿರ್, ೧೯೯೮ **'ಅವಳು ಹೊಟ್ಟೆಯಿಂದಿದ್ದಾಳೆ'**, ಮನೋಹರ ಗ್ರಂಥಮಾಲಾ, ಧಾರವಾಡ, ಪುಟ.೧

೨೮. ಅದೇ, ಪುಟ.೨

೨೯. ಅದೇ, ಪು.೧೪

೩೦. ಅದೇ, ಪು.೧೪

೩೧. ಅದೇ, ಪು.೧೫

* * *

ಅಧ್ಯಾಯ ಐದು

ಸಾರ್ವಜನಿಕ ಮತ್ತು ಖಾಸಗಿ ಸಂಪ್ರದಾಯ ಆಚರಣೆಗಳು : ಹೆಣ್ಣಿನ ಜೈವಿಕತೆ

೫

ಸಾರ್ವಜನಿಕ ಮತ್ತು ಖಾಸಗಿ ಸಂಪ್ರದಾಯ ಆಚರಣೆಗಳು : ಹೆಣ್ಣಿನ ಜೈವಿಕತೆ

ಹೆಣ್ಣಿನ ಜೈವಿಕ ಸಹಜ ಕ್ರಿಯೆನ್ನಾಧರಿಸಿ ನಡೆಯುತ್ತಿರುವ ಸಂಪ್ರದಾಯ ಆಚರಣೆಗಳು ಹೆಣ್ಣನ್ನು 'ಅಪವಿತ್ರ', 'ಅಶುದ್ಧ' ಎಂದು ನಿರ್ವಚಿಸುವುದರೊಂದಿಗೆ ಆಕೆಯನ್ನು ನಿಷೇಧಿಸಲಾಗಿದೆ. ಸಮಾಜದಲ್ಲಿನ ಲಿಂಗ ತಾರತಮ್ಯ, ಅಸಮಾನತೆಯಂತಹ ಸಂಗತಿಗಳನ್ನು ಹಾಗೂ ಶ್ರೇಷ್ಠ-ಕನಿಷ್ಠದಂತಹ ಅಂಶಗಳನ್ನು ಸಮಾಜದಲ್ಲಿ ಬಿತ್ತಲು ಈ ಬಗೆಯ ಸಂಪ್ರದಾಯ ಆಚರಣೆಗಳೇ ಕಾರಣವಾಗಿವೆ. ನಿಷೇಧ ನಿಯಂತ್ರಣ, ನಿರ್ದೇಶನದಂತಹ ಸಂಗತಿಗಳು ಸಂಪ್ರದಾಯ ಆಚರಣೆಗಳ ಮುಖಾಂತರ ಹಾಕುತ್ತಾ ಹೆಣ್ಣಿಗೆ ಸಾರ್ವಜನಿಕ ಮತ್ತು ಖಾಸಗಿ ವಲಯಗಳೆರಡರಲ್ಲಿ ಪ್ರವೇಶಿಸದಂತೆ ನೋಡಿಕೊಳ್ಳಲಾಗಿದೆ.

ಸಂಪ್ರದಾಯ ಆಚರಣೆಗಳ ಮಾಹಿತಿಯನ್ನು ಸಾರ್ವಜನಿಕ ಸಂಪ್ರದಾಯ ಆಚರಣೆಗಳು ಮತ್ತು ಖಾಸಗಿ ಸಂಪ್ರದಾಯ ಆಚರಣೆಗಳೆಂದು ವಿಂಗಡಿಸಿಕೊಳ್ಳಲಾಗಿದೆ. ದೇವಸ್ಥಾನ, ಪ್ರಾರ್ಥನಾ ಸ್ಥಳ, ಮಸೀದಿ ಮುಂತಾದವುಗಳನ್ನು ಸಾರ್ವಜನಿಕ ಸಂಪ್ರದಾಯ ಆಚರಣೆಗಳು ಎಂದು ಕರೆಯಬಹುದು. ಪೂಜೆ, ಉಪವಾಸ, ವ್ರತ, ಹರಕೆ ಮುಂತಾದವುಗಳನ್ನು ಖಾಸಗಿ ಸಂಪ್ರದಾಯ ಆಚರಣೆಗಳೆಂದು ಕರೆಯಲಾಗಿದೆ. ಈ ವಿಂಗಡನೆಗಳನ್ನು ಅಧ್ಯಯನದ ಅನುಕೂಲಕ್ಕೆಂದು ಮಾಡಿಕೊಳ್ಳಲಾಗಿದೆ. ಹೀಗಾಗಿ ಅವುಗಳು ಅಂತಿಮವಾಗಿ ಖಾಸಗಿಯಲ್ಲಿ ಸಾರ್ವಜನಿಕ, ಸಾರ್ವಜನಿಕದಲ್ಲಿ ಖಾಸಗಿಯಲ್ಲಿ ಸೇರ್ಪಡೆಗೊಳ್ಳುತ್ತದೆ ಎಂಬ ಅರಿವು ನನಗಿದೆ.

ಸಾರ್ವಜನಿಕ ವಲಯದಲ್ಲಿನ ಸಂಪ್ರದಾಯ ಆಚರಣೆಗಳು: ಸಾರ್ವಜನಿಕ ಎಂದರೆ ಖಾಸಗಿ ಬದುಕಿನಿಂದ ಹೊರಗಡೆ ನಡೆಯುವಂತಹ ಸ್ಥಳ. (ಮನೆಯಿಂದಾಚೆ) ಜನರು ಪಾಲ್ಗೊಳ್ಳುವಂತಹ ಸ್ಥಳವಾಗಿರುವ ದೇವಸ್ಥಾನ, ಮಂದಿರ, ಮಸೀದಿ ಇತ್ಯಾದಿ ಧಾರ್ಮಿಕ ಸ್ಥಳಗಳನ್ನು ಸಾರ್ವಜನಿಕ ಸ್ಥಳವೆಂದು ಗುರುತಿಸಿಕೊಂಡು, ಸಂಪ್ರದಾಯ ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸಕೊಳ್ಳಲಾಗಿದೆ. ಹಾಗೇ ಇಲ್ಲಿ ಈಗಾಗಲೇ ನಡೆದಿರುವ, ನಡೆಯುತ್ತಿರುವ ಸಂಪ್ರದಾಯ ಆಚರಣೆಗಳ ಪ್ರಕರಣಗಳನ್ನು ಆಯ್ದುಕೊಂಡು ಅಧ್ಯಯನ ಮಾಡಲಾಗಿದೆ

ಮೊದಲಿಗೆ ಇತ್ತೀಚೆಗೆ ರಾಜ್ಯಗಳಾದ್ಯಂತಹ ಸುದ್ದಿಯಾಗಿರುವ ಅಯ್ಯಪ್ಪ ಸ್ವಾಮಿ ದೇವಾಲಯಕ್ಕೆ ಪ್ರವೇಶಿಸಿರುವ (ಹೆಣ್ಣು) ಜಯಮಾಲ ಪ್ರಕರಣವನ್ನು ಒಳಪಡಿಸಿಕೊಂಡು ಈ ಅಧ್ಯಯನದಲ್ಲಿ ಚರ್ಚೆ ಮಾಡಲು ಎತ್ತಿಕೊಳ್ಳಲಾಗಿದೆ. ಸಂಪ್ರದಾಯಂತಹ ಸಂಗತಿಗಳು ಹೆಣ್ಣನ್ನು ಹೇಗೆ ಕಾಣುತ್ತಿವೆ. ಹಾಗೆ ಹೆಣ್ಣಿನ ಮತ್ತು ಹೆಣ್ಣಿನ ದೇಹದ ಬಗ್ಗೆ ಅಪನಂಬಿಕೆ ಸೃಷ್ಟಿಕೊಳ್ಳಲು ಹೇಗೆ ಕಾರಣವಾಗಿದೆ ಎನ್ನುವಂತಹ ಸಂಗತಿಗಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಅದಕ್ಕೆ ಜಯಮಾಲ ಪ್ರಕರಣವನ್ನು ಚರ್ಚೆಮಾಡಲಾಗಿದೆ. ಅದು "ಸಂಪ್ರದಾಯಕ್ಕೆ ಹೆಸರಾದ ಅಯ್ಯಪ್ಪ ಸ್ವಾಮಿ ದೇವಾಲಕ್ಕೆ ಇಪ್ಪತ್ತು ವರ್ಷಗಳ ಹಿಂದೆ ನಾನು ಪ್ರವೇಶಿಸಿದ್ದೆ, ದೇವರ ಮೂರ್ತಿಯನ್ನು ಸ್ಪರ್ಶಿಸಿದ್ದೆ ಎಂದು ಕೊಟ್ಟ ಹೇಳಿಕೆ ಇತ್ತೇಚಿನ ದಿನಗಳಲ್ಲಿ ಟಿ.ವಿ, ರೇಡಿಯೋ, ವೃತ ಪತ್ರಿಕೆಗಳಲ್ಲಿ ಒಂದು ಅಗ್ರ ಸುದ್ದಿಯಾಗಿದೆ.

ಪಂಡಿತರಿಂದ ಪಾಮರರವರೆಗೆ, ರಾಜಕಾರಣಿಗಳಿಂದ ಸಾಮಾನ್ಯ ಜನರವರೆಗೆ, ವಿದ್ವಂಸರಿಂದ ವಿದ್ಯಾರ್ಥಿಗಳವರೆಗೆ ಎಲ್ಲಾ ವರ್ಗದ ಜನರಲ್ಲಿ ಚರ್ಚೆಗೆ ಗ್ರಾಸವಾಗಿದೆ, ಧಾರ್ಮಿಕ ಮುಖಂಡರು ಮಹಿಳೆಯರ ಪ್ರವೇಶಕ್ಕೆ ನಿಷೇಧವಿರುವ ಈ ಪವಿತ್ರ ದೇವಾಲಯ ಸಿನಿಮಾ ತಾರೆಯ ಪ್ರವೇಶದಿಂದ ಅಪವಿತ್ರವಾಗಿದೆ. ಈ ತಾರೆ ಅಕ್ಷಮ್ಯ ಅಪರಾಧವೆಸಗಿದ್ದಾಳೆ ಇದಕ್ಕಾಗಿ ಅವಳಿಗೆ ತಕ್ಕ ಶಿಕ್ಷೆ ವಿಧಿಸಬೇಕು. ಯಜ್ಞ, ಪೂಜೆ, ಹವನ, ಹೋಮಗಳಿಂದ ದೇವಾಲಯನ್ನು ಪರಿಶುದ್ಧಗೊಳಿಸಬೇಕು ಎಂದು ವಾದಿಸುತ್ತಿದ್ದಾರೆ ಸುಪ್ರಸಿದ್ಧ. ಹಿರಿಯ ವಿಚಾರವಾದಿಯೊಬ್ಬರು ಇದು ಸಮಾಜಕ್ಕೆ ಕಳಂಕ ತರುವಂತಹ ವಿಷಯ. ಇದರಿಂದ ಸ್ತ್ರೀ ಸಮಾಜಕ್ಕೆ ಬಹು ದೊಡ್ಡ ಅವಮಾನ ಮಾಡಿದಂತಾಗಿದೆ. ಎಂದು ವಿವರಿಸಲಾಗಿದೆ ಹಾಗೆ ಇದು ಸಾಮಾಜಿಕ ಪ್ರಜ್ಞೆಗೆ ದೊಡ್ಡ ಕಳಂಕ ಇದನ್ನು ಪ್ರತಿಯೊಬ್ಬ ಸುಸಂಸ್ಕೃತ ನಾಗರೀಕನು ಖಂಡಿಸಬೇಕು ಎಂಬ ಮಾತನ್ನು ಸಮಾಜದಲ್ಲಿ ಇನ್ನೂ ಅನೇಕ ಮುಖಂಡರು ವ್ಯಕ್ತ ಪಡಿಸಿದ್ದಾರೆ. ಸಂಸತ್ತು ಮತ್ತು ವಿಧಾನ ಸಭೆಗಳಲ್ಲಿ ಇದರ ಬಗ್ಗೆ ವಿಶೇಷ ಚರ್ಚೆಗಳು" ನಡೆದಿವೆ. (ಸಂಯುಕ್ತ ಕರ್ನಾಟಕ ೩೦.೦೬.೨೦೦೬ ಪುಟ್ಟ ೧೨).

ಈ ಕುರಿತಾಗಿ ಕೆಲವು ಪ್ರಶ್ನೆಗಳನ್ನು ಹಾಕಿಕೊಂಡರೆ ಸ್ತ್ರೀಯೂ ದೇವಾಲಯವನ್ನು ಏಕೆ ಪ್ರವೇಶಿಸಬಾರದು? ಹೆಣ್ಣು ದೇವಾಲಯವನ್ನು ಪ್ರವೇಶಿಸುವುದರಿಂದ ದೇವಾಲಯವು ಅಪವಿತ್ರವಾಗುವುದು ಸಾಧ್ಯವೇ? ಇಂತಹ ಅನಿಷ್ಟ ಪರಂಪರೆ ಹೆಣ್ಣಿಗೆ ಮಾತ್ರ ಏಕೆ? ವಿಚಾರವಂತ (ವಿದ್ವಂಸರು) ಜನರು ಇಂತಹ ಅನಿಷ್ಟ ಸಂಪ್ರದಾಯ ಆಚರಣೆಯ ಕುರಿತು ಏಕೆ ಮೌನವಾಗಿದ್ದಾರೆ ? ಇಂಥ ಪ್ರಶ್ನೆಗಳನ್ನು ಕೇಳಿಕೊಳ್ಳುವ ಅಗತ್ಯವಿದೆ. ಹಾಗೆಯೇ. ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಅಗತ್ಯವಿದೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ, ಹೆಣ್ಣಿನ ಬಗ್ಗೆ, ಹೆಣ್ಣಿನ ದೇಹದ ಕುರಿತಾಗಿ ಸೃಷ್ಠಿಗೊಂಡಿರುವ ಚಿಂತನೆಗಳು ಹೆಣ್ಣನ್ನು 'ಕನಿಷ್ಠ', 'ಅಪವಿತ್ರಳು', 'ಅಶುದ್ಧಳು', 'ಅವಳು ಯೋಗ್ಯಳಲ್ಲ' ಎನ್ನುವಂತಹ ಅಪನಂಬಿಕೆಗಳು

ಈಗಾಗಲೇ ಸಮಾಜದಲ್ಲಿ ಸ್ಥಾಪನೆಗೊಂಡಿವೆ. ಅವು ಇಂತಹ ಸಂದರ್ಭದಲ್ಲಿ ಹೆಣ್ಣನ್ನು ಅಪವಿತ್ರಳೆಂದೆ ಪರಿಗಣಿತವಾಗುವಂತೆ ಮಾಡುತ್ತವೆ. ಹಾಗೆ ಹೆಣ್ಣಿನ ಜೈವಿಕ ಸಹಜ ಕ್ರಿಯೆಯಾದ ಮುಟ್ಟನ್ನಾಧರಿಸಿ, ಅಶುದ್ಧ, ಅಪವಿತ್ರವೆಂದು ನಾನಾತರನಾಗಿ ಕರೆಯುವಂತೆ ಪ್ರೇರಿಪಿಸಲು ಕಾರಣವಾಗುತ್ತವೆ. ಮತ್ತು ಈ ಕಾರಣಕ್ಕಾಗಿಯೇ ಹೆಣ್ಣು ಅಶುದ್ಧಳು ಎನ್ನುವ ಚಿಂತನೆ ನಂಬಿಕೆಯ ಮೂಲಕ ಸಂಪ್ರದಾಯ ಆಚರಣೆಗಳಲ್ಲಿ ಕಾಣಿಸಿಕೊಳ್ಳುತ್ತವೆ. "ಅದೇ ದೇವಾಲಯದಲ್ಲಿ ೧೨ ವರ್ಷಕ್ಕಿಂತ ಕಡಿಮೆ ಹಾಗೂ ೫೦ ವರ್ಷಕ್ಕಿಂತ ಹಿರಿಯರಿಗೆ ಮುಕ್ತ ಪ್ರವೇಶಕ್ಕೆ ಅನುಮತಿ ನೀಡಿದ್ದಾರೆ". (ಸಂಯುಕ್ತ ಕರ್ನಾಟಕ ದಿನಪತ್ರಿಕೆ ೩೦.೬.೨೦೦೬ ಪುಟ.೧೨) ಎಂದು ದೊರೆಯುವಲ್ಲಿನ ಮಾಹಿತಿಯಿಂದ ಸ್ಪಷ್ಟವಾಗುತ್ತದೆ.

ಹೆಣ್ಣಿನ ಜೈವಿಕತೆಯನ್ನಾಧರಿಸಿ ಹೆಣ್ಣಿಗೆ ನಿಷೇಧ ಹಾಕಿರುವುದು ಇದೆ. ಇದಕ್ಕೆ "ಕರ್ನಾಟಕದ ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ಕುಮಾರಸ್ವಾಮಿ ದೇವಾಲಯದಲ್ಲಿ ಹೆಣ್ಣಿನ ಪ್ರವೇಶ ನಿಷೇಧವಿತ್ತು. ಇಂದಿಗೂ ಈ ತರನಾದ ನಂಬಿಕೆಯಿಂದಾಗಿ ಸಂಪ್ರದಾಯಿಕ ಮನೋಭಾವನೆಯನ್ನೊಂದಿರುವ ಹೆಣ್ಣು ಮಕ್ಕಳು ದೇವಾಲಯದ ಒಳಗಡೆ ಹೋಗದೆ ಹೊರಗಡೆ ನಿಂತು ದರ್ಶನ ಪಡೆದಿರುವ ಮತ್ತು ಪಡೆಯುತ್ತಿರುವ ಉದಾಹರಣೆಗಳು ಕಂಡುಬರುತ್ತಿವೆ" ಎಂದು ಸಂಡೂರಿನ ಶರಣಪ್ಪ ಅವರು ಹೇಳುತ್ತಾರೆ.

ಪುರುಷ ಪ್ರದಾನ ಸಮಾಜವು ಹೆಣ್ಣನ್ನು, ಹೆಣ್ಣಿನ ದೇಹವನ್ನು ಅಪನಂಬಿಕೆ ನೆಲೆಯಲ್ಲಿ, ಅಂಧತೆಯ ನೆಲೆಯಲ್ಲಿ ನಿರ್ವಚಿಸಿವೆ. ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುವ ಸಂಪ್ರದಾಯ ಆಚರಣೆಗಳು ಕೇವಲ ಹೆಣ್ಣನ್ನು, ಹೆಣ್ಣಿನ ದೇಹವನ್ನು ಪರಿಗಣಿಸಿಲ್ಲ ಅವು ಮುಂದುವರೆದು ಹೆಣ್ಣಿನ ಮನಸ್ಸಿಗೆ ಘಾಸಿಯನ್ನುಂಟು ಮಾಡಿವೆ. ಸಾರ್ವಜನಿಕ ಸಂಪ್ರದಾಯ ಆಚರಣೆಗಳಲ್ಲಿ ಹೆಣ್ಣಿಗೆ, ಹೆಣ್ಣಿನ ಮನೆಗೆ, ಸಂಬಂಧಿಕರಿಗೆ, ಹಲವು ನೆಲೆಯಲ್ಲಿ ನಿರ್ವಚಿಸಿಕೊಂಡು ಹೋಗಿರುವುದು ಕಂಡುಬರುತ್ತದೆ. ಅದು ಏನೆಂದರೆ 'ಸೂತಕ' ಎನ್ನುವ ಸಂಕೇತದ ಹಿನ್ನಲೆಯಲ್ಲಿ ಹಲವು ನಿರ್ಬಂಧ, ನಿಷೇಧ, ನಿಯಂತ್ರಣ, ನಿರ್ದೇಶನದ ಸಂಗತಿಗಳನ್ನು ಹುಟ್ಟು ಹಾಕಿರುವುದು ಇದೆ. ಅದು ಹೆಣ್ಣಿನ ತಂದೆ, ತಾಯಿ, ಕುಟುಂಬ ವರ್ಗದವರು, ಹತ್ತಿರ ಸಂಬಂಧಿಗಳನ್ನು ಧಾರ್ಮಿಕ ವಲಯಗಳಲ್ಲಿ ಪಾಲ್ಗೊಳ್ಳದಂತಹ ಸ್ಥಿತಿಯನ್ನು ಉಂಟುಮಾಡಿರುವುದು ದೊರೆಯುತ್ತದೆ. ಇದಕ್ಕೆ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಸಂಕೋಬಾಚನಹಳ್ಳಿ ಹೋಬಳಿಯಲ್ಲಿನ ಹೆತ್ತಗೋನಹಳ್ಳಿಯ ತಾಯಮ್ಮ ದೇವಾಲಯದಲ್ಲಿನ ಧಾರ್ಮಿಕ ಕ್ರಿಯಯಲ್ಲಿ 'ಸೂತಕ' ಇರುವವರು ಪಾಲ್ಗೊಳ್ಳದಂತಹ ನಿರ್ಬಂಧಕ್ಕೆ ಒಳಾಗಾಗಿರುವುದು ಕಂಡುಬರುತ್ತದೆ. ಈ ರೀತಿಯಾಗಿ "ಸೂತಕದ ದಿನಗಳಲ್ಲಿ ಅಂತಹ ಮನೆಯರು, ಅವರ ಹತಿರದ ದಾಯಾದಿಗಳು ಅಣ್ಣ ತಮ್ಮಂದಿರು, ಬಂಧುಗಳು.

ಈ ದೇವತೆಯ ಹಬ್ಬ ಹರಿ ದಿನಗಳಲ್ಲಿ, ಪೂಜೆಯಲ್ಲಿ ಭಾಗವಹಿಸುವಂತಿಲ್ಲ. ಹುಟ್ಟು ಸಾವು ಮೈನೆರೆಯುವುದು ಇತ್ಯಾದಿಗಳನ್ನು ಗ್ರಾಮಾಂತರ ಜನರು ಸೂತಕವೆಂದು ಪರಿಗಣಿಸುತ್ತಾರೆ. (ಪರಿಗಣಿಸಿದ್ದಾರೆ) ಮಗು ಹುಟ್ಟಿದರೆ ೫ ದಿನ ಸೂತಕ, ಮೈನೆರೆದರೆ ೭ ದಿನಗಳವರೆಗೆ ಸೂತಕ, ಸೊಪ್ಪು ಹಾಕಿದ ನಂತರ ಅದು ಮುಂದುವರೆಯುತ್ತದೆ. ಸತ್ತವರ ಮನೆಯ ಸೂತಕ, ೧೧ ದಿನಗಳವರೆಗೆ ಇರುತ್ತದೆ ತಿಥಿಯೊಂದಿಗೆ ಅದು ಮುಗಿಯುತ್ತದೆ. ಇನ್ನು ಹೊರಗಾದವರು (ಮುಟ್ಟು), ಶವಯಾತ್ರೆಯಲ್ಲಿ ಪಾಲ್ಗೊಂಡುವರು ೩ ದಿನಗಳವರೆಗೆ ಸೂತಕ ಉಂಟು ಇಂತಹ ದಿನಗಳಲ್ಲಿ ಊರ ದೇವತೆ ಪೂಜೆ, ದೇವಾಲಯ ಪೂಜೆ ನಿಷೇಧ". (ಆರ್. ಚೇತನ ೧೯೯೫, ಪುಟ ೩೦) ಎಂದು ದೊರೆಯುವ ಮಾಹಿತಿ ಪ್ರಕೃತಿಯಲ್ಲಿನ ಸಹಜ ಕ್ರಿಯೆಗಳನ್ನಾಧರಿಸಿ ಅಶುದ್ಧ ಸಂಕೇತವಾಗಿ ಪರಿಗಣಿಸಿ ಕೆಲವು ನಿರ್ಬಂಧ ನಿಷೇಧ ಹಾಕಿರುವುದು ಕಂಡುಬರುತ್ತದೆ. ಹೀಗೆ ಹೆಣ್ಣಿನ ಜೈವಿಕತೆಯನ್ನು ಸಂಪ್ರದಾಯ ಆಚರಣೆಗಳು ಅನಿಷ್ಟತೆಯ ಮನೋಭಾವನೆಯನ್ನು ಸೃಷ್ಠಿ ಮಾಡಿವೆ ಎನ್ನಬಹುದಾಗಿದೆ. ಇದನ್ನು "ಈ ದೇವತೆಯ ಕಳಶವನ್ನು ಹೊರುವವರು ಹೆಣ್ಣು ಮಕ್ಕಳೇ ಆಗಿರಬೇಕು, ಆದರೇ ಅವರು ಋತುಮತಿಯಾಗಿರಬಾರದು. ಮಡಿ ಹೊರುವ ಹೆಂಗಸರಲ್ಲಿ ಹೊರಗಾದವರು (ಮುಟ್ಟಾದವರು) ಮಡಿಯನ್ನು ಹೊರುವುದಿಲ್ಲ. ಋತುಮತಿಯರಾಗದ ಹೆಣ್ಣು ಮಕ್ಕಳೆ ಪೂಜೆ ಮಾಡಬೇಕೆಂಬ ನಿಯಮವು ಕೆಲವು ಗ್ರಾಮ ದೇವತೆಗಳ ದೇವಾಲಯಗಳಲ್ಲಿವೆ. ಅಂತಹ ಹೆಣ್ಣು ಮಕ್ಕಳು ದೇವತೆಯಾದ ಪ್ರಸಂಗಗಳು ಕಂಡುಬರುತ್ತವೆ. ಉದಾಹರಣೆ ಮಂಡ್ಯ ಜಿಲ್ಲೆಯ ಕನಂಬಾಡಿ ಅಮ್ಮನನ್ನು ನೋಡಬಹುದು. ಇತ್ತೀಚಿನ ಕೇರಳದ ಕೆಲವೆಡೆ ಹೆಣ್ಣು ಮಕ್ಕಳನ್ನು ಪೂಜಿಸೋ ಸಂಪ್ರದಾಯ ಇದೆ. ಹೀಗೆ ಋತುಮತಿಯರಾಗದೇ ದೈವೀಕರಣಕ್ಕೆ ಸಾರ್ವಜನಿಕವಾಗಿ ಒಳಗಾಗಿರುವುದು ಕಂಡುಬರುತ್ತದೆ". (ಆರ್. ಚೇತನ ೧೯೯೫, ಪುಟ.೩೦) ಎನ್ನುವುದು ದೊರೆಯುತ್ತದೆ.

ಈತರನಾದ ಸಂಪ್ರದಾಯ ಆಚರಣೆಗಳು ಮತ್ತು ಚಿಂತನೆಗಳು ಕೇವಲ ಹಿಂದೂ ಧರ್ಮದೆಂದು ಗುರುತಿಸಿಕೊಂಡಿರುವ ದೇವಾಲಯ ಮಂದಿರ ಮಾತ್ರ ಸೀಮಿತಗೊಂಡಿಲ್ಲ. ಅವು ಧರ್ಮವನ್ನು ಮೀರಿ ಹೆಣ್ಣಿನ ಜೈವಿಕತೆಯನ್ನಾಧರಿಸಿ ಅಪನಂಬಿಕೆ ಹುಟ್ಟಾಕಿರುವುದು ಕಂಡುಬರುತ್ತದೆ. ಇದಕ್ಕೆ ಇಸ್ಲಾಂನಲ್ಲಿ ಪಾರ್ಥನೆ ಸ್ಥಳಕ್ಕೆ (ಪೂಜಾ ಸ್ಥಳಕ್ಕೆ) ಹೆಣ್ಣನ್ನು ನಿರಾಕರಿಸುವುದು ಇದೆ. ಇದಕ್ಕೆ ಸ್ಥಳೀಯ ಮುಸ್ಲೀಂ ಮಸೀದಿಯಲ್ಲಿನ ಸಂಗತಿಗಳನ್ನು ಗಮನಿಸಿದರೆ ತಿಳಿದುಬರುತ್ತದೆ. ಜೈವಿಕತೆಯನ್ನಾಧರಿಸಿ ಸಂಪ್ರದಾಯ ಆಚರಣೆಗಳು ಹೆಣ್ಣಿನ ದೇಹಕ್ಕೆ ಅಪನಂಬಿಕೆ, ಮಿಥ್‌ಗಳನ್ನು ಸೃಷ್ಟಿಗೊಳಿಸುತ್ತವೆ. ಹೀಗೆ ಸೃಷ್ಟಿಗೊಂಡ ಈ ನಂಬಿಕೆ ಮಿಥುಗಳು, ಹೆಣ್ಣಿನ ಬಗೆಗೆ ತಾತ್ವಿಕತೆಯನ್ನು ನಿರ್ವಚಿಸುತ್ತಿರುತ್ತವೆ. ಹೀಗೆ ನಿರ್ವಚಿಸಲ್ಪಟ್ಟ ತಾತ್ವಿಕ ನಂಬಿಕೆ ಆಚರಣೆ ಹಾಗೂ ಸಂಪ್ರದಾಯದ ಮೂಲಕ ಮತ್ತೆ ಜಾರಿಗೊಳ್ಳುತ್ತಿರುತ್ತವೆ.

ಹೀಗೆ ಜಾರಿಗೊಳ್ಳುವುದರಿಂದಲೇ ಇಂದಿಗೂ ಹೆಣ್ಣನ್ನು ಸಾರ್ವಜನಿಕದಂತಹ ಸ್ಥಳಗಳಲ್ಲಿ ನಿಯಂತ್ರಣ ನಿಷೇಧಕ್ಕೆ ಒಳಗಾಗಿದ್ದಾಳೆ.

ಇನ್ನು ಇದೇ ಜೈವಿಕ ಸಹಜ ಕ್ರಿಯೆಯಲ್ಲೊಂದಾದ 'ತಾಯ್ತನಕ್ಕಾಗಿ' (ಸಂತಾನಕ್ಕಾಗಿ) ಸಂಪ್ರದಾಯ ಆಚರಣೆಗಳ ಮೂಲಕ ಶೋಷಣೆಗೊಳಪಡಿಸುತ್ತಿರುವುದು ಕಂಡುಬರುತ್ತದೆ. ಅದು ಹೆಗೆಂದರೆ ಹೆಣ್ಣನ್ನು ಬೆತ್ತಲಾಗಿ ರಾತ್ರಿ ವೇಳೆ ಊರೆಲ್ಲಾ ತಿರುಗುವ ಅಮಾನವಿಯ ಪದ್ಧತಿಗಳ ಮೂಲಕ ಇದಕ್ಕೆ ರಾಜ್ಯದ ಕೆಲವು ಭಾಗಗಳಲ್ಲಿ ದೊರೆಯುವ ಮಾಹಿತಿ ಈ ರೀತಿಯಾಗಿದೆ. "ಗುಲ್ಬರ್ಗ ಜಿಲ್ಲೆಯ ಭೂಪಾಲ್, ತ್ಯಾಗನೂರು ಗ್ರಾಮದ ಮಾದಿಗ ಹೆಣ್ಣು ಮಕ್ಕಳಿಗೆ ೩ ವರ್ಷಗಳಿಂದ ಮಕ್ಕಳಿಲ್ಲದೇ ಇದ್ದರೆ ಆಕೆಯನ್ನು (ಹೆಣ್ಣು) ಬೆತ್ತಲಾಗಿ ಊರಿಡಿ ತಿರುಗಾಡಬೇಕೆಂದು ನಿರ್ಧರಿಸಲಾಗುತ್ತದೆ. ಆಕೆಯ ಸಂಬಂಧಿಕರು ನೆರೆಯ ಹೊರೆಯವರು ಸ್ನಾನ ಮಾಡಿಸಿ, ಆಕೆಗೆ ಹರಿಶಿನ ಕುಂಕುಮ ಹಚ್ಚಿ ಕೆಲವು ವಿಧಿಗಳನ್ನು ನೆರೆವೇರಿಸುತ್ತಾರೆ. ಆ ದಿನ ಮಧ್ಯ ರಾತ್ರಿ ಮಾರೆಮ್ಮನನ್ನು ನೆನೆಸಿಕೊಳ್ಳುತ್ತಾ, ಊರಿನಬೀದಿಗಳಲ್ಲಿ ಏಕಾಂಗಿಯಾಗಿ ತಿರುಗಾಡುತ್ತಾಳೆ" ಎಂದು ಜೈವಿಕತೆಯನ್ನಾಧರಿಸಿ ಸಂಪ್ರದಾಯ ಆಚರಣೆಗಳು ಸಾರ್ವಜನಿಕವಾಗಿ ಹೆಣ್ಣನ್ನು ಶೋಷಣೆಗೆ ಒಳಪಡಿಸುವುದು ಸ್ಪಷ್ಟವಾಗುತ್ತದೆ. ಹಾಗೇ ಇದೇ ತಾಯ್ತನಕ್ಕಾಗಿ ಹೆಣ್ಣನ್ನು ಸಾರ್ವಜನಿಕ ಸ್ಥಳಗಳಲ್ಲಿ ಬೆತ್ತಲೆ ಹಾಗೂ ಪರ ಪುರುಷನೊಡನೆ ಲೈಂಗಿಕ ಕ್ರಿಯೆಯನ್ನು ಹೊಂದುವುದರ ಮುಖಾಂತರ ಮಕ್ಕಳನ್ನು ಪಡೆಯಬಹುದು (ಸಂತಾನಕ್ಕಾಗಿ) ಎಂದು ತಿಳಿದು ಸಂಪ್ರದಾಯ ಆಚರಣೆಯನ್ನು ನಡೆಸಿಕೊಂಡು ಬಂದಿರುವುದೂ ಇದೆ. ಅದು "ತಮಗೆ ಗುರುತು ಪರಿಚಯವಿಲ್ಲದವರ ಜೊತೆ ಲೈಂಗಿಕ ಸಂಬಂಧ ಬೆಳೆಸುವುದರಿಂದ ಮಕ್ಕಳಾಗುತ್ತವೆಂದು ನಂಬಿ, ರಾತ್ರಿ ವೇಳೆಯಲ್ಲಿ ಬೆತ್ತಲಾಗಿ ತಿರುಗುವುದು. ಪರ ಪುರುಷರೊಡನೆ ಸಂಬಂಧ ಇತ್ಯಾದಿ ಅಮಾನವಿಯ ಪದ್ಧತಿಗಳು ರಾಜ್ಯದ ಕೆಲವು ಭಾಗಗಳಲ್ಲಿ ನಡೆಯುತ್ತಿರುವುದು ಇದೆ. ಉದಾಹರಣೆಯಾಗಿ ಹೇಳುವುದಾದರೆ ಚಾಮರಾಜನಗರ ಜಿಲ್ಲೆಯ ಎಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನ ಬೆಟ್ಟ, ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕೆಂಗೊಂಡ, ಗುಲ್ಬರ್ಗ ಜಿಲ್ಲೆಯ ಭೂಪಾಲ, ತ್ಯಾಗನೂರು, ಗ್ರಾಮಗಳನ್ನು ಹೆಸರಿಸಬಹುದು. ಹಾಗೆ ಚಿತ್ರದುರ್ಗದ ಒಂದು ಕಡೆ ಬೆಟ್ಟ ಕ್ಷೇತ್ರದಲ್ಲಿ ಚಾಮರಾಜನಗರ ಜಿಲ್ಲೆಯ ನಂಜನಗೂಡಿನಲ್ಲಿ ತುಮಕೂರಿನ ದೇವರಾಯನ ಬೆಟ್ಟದಲ್ಲಿ ಮಂಡ್ಯ ಜಿಲ್ಲೆಯ ಮಳ್ಳವಳ್ಳಿಯಲ್ಲಿ ಈತರನಾದ ಆಚರಣೆಗಳು ಜಾತ್ರೆಯ ಸಂದರ್ಭದಲ್ಲಿ ಇವೆ ಎಂಬ ಪ್ರಾಥಮಿಕ ಮಾಹಿತಿ ಇದ್ದರೂ ಇವುಗಳನ್ನು ದೃಢಪಡಿಸಲು ಸಾಧ್ಯವಾಗಿಲ್ಲ". ಹಾಗೂ "ಬಿಳಿಗಿರಿ ರಂಗನಾಥ ಸ್ವಾಮಿ ದೇವಾಲಯ ಪ್ರಸಿದ್ಧಿ ಹೊಂದಿದೆ. ಇದು ಸೋಲಿಗರ ಆರಾಧ್ಯ ದೈವ, ಸೋಲಿಗರ ಹೆಣ್ಣನ್ನು ಮದುವೆಯಾದ ನಂತರ ರಂಗನಾಥ ಇಲ್ಲಿಯೇ ನೆಲೆಸಿದ್ದ ಎಂದು ಸೋಲಿಗರು ನಂಬುತ್ತಾರೆ. ಹಾಗೂ ಅವನು ತಮ್ಮ ಹತ್ತಿರದ ಸಂಬಂಧಿ ಎಂದು ಅವರ ಭಾವನೆ ಈ ಜನರಲ್ಲಿದೆ.

ಪ್ರತಿ ವರ್ಷ ನಡೆಯುವ ಬಿಳಿಗಿರಿ ರಂಗನಾಥ ಜಾತ್ರೆಗೆ ಸಾವಿರಾರು ಜನರು ದೂರ ದೂರದ ಊರಗಳಿಂದ ಬಂದು ಸೇರುತ್ತಾರೆ. ಹಾಗೆ ಬೇರೆ ಬೇರೆ ಕಡೆಗಳಿಂದ ಸೋಲಿಗರು ಬಂದು ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಹೀಗೆ ಬರುವ ಸೋಲಿಗರು (ಹಲವರು) ಒಂದು ವಿಲಕ್ಷಣವಾದ ಸಂಪ್ರದಾಯವನ್ನು ಅನುಸರಿಸುತ್ತಾರೆ ಇದಕ್ಕೆ ' ಬಿದಿರು ಮಳೆ ಉತ್ಸವ' ಎಂದು ಹೆಸರು.

ಪ್ರತಿ ವರ್ಷ ಮೇ ತಿಂಗಳಲ್ಲಿ ನಡೆಯುವ ಈ ಜಾತ್ರೆಯು ವೇಳೆಯಲ್ಲಿ ದೇವಾಲಯದ ಆಸುಪಾಸಿನಲ್ಲಿ ಬಿದಿರು ಮಳೆ ಸೇವೆ ನಡೆಯುತ್ತದೆ. ಸೋಲಿಗರ ಜನಾಂಗಕ್ಕೆ ಸೇರಿದ ಮಹಿಳೆಯರು ಬಿದಿರು ಇರುವ ಹಿಂದಿನ ಮರೆಯಲ್ಲಿ ಅಪರಿಚಿತ ಪುರುಷನೊಂದಿಗೆ ಲೈಂಗಿಕ ಸಂಬಂಧ ಬೆಳೆಸುತ್ತಾರೆ. ಇದನ್ನು ಕೆಲವರು ಹರಕೆ ರೂಪದಲ್ಲಿ ಈ ಆಚರಣೆಯನ್ನು ನಡೆಸುತ್ತಾರೆ. ಇಲ್ಲಿ ಭಾಗವಹಿಸುವ ಮಹಿಳೆಯರು ಬರೀ ಸೋಲಿಗರ ಜನಾಂಗದವರಾಗಿದ್ದರು. ಅದು ಅವರ ಒಳಗೆ ನಡೆಯುವ ಆಚರಣೆಯಲ್ಲ. ಈ ಆಚರಣೆಯ ದುರ್ಲಾಭ ಪಡೆಯುವ ಪುರುಷರು ಬೇರೆ ಬೇರೆ ಜನಾಂಗಳಿಗೆ ಸೇರಿದವರಾಗಿರುತ್ತಾರೆ. ಈ ರೀತಿ ಆಚರಣೆಗೆ ಇತ್ತೀಚಿನ ದಿನಗಳಲ್ಲಿ ಜಾತ್ರೆಯ ವೇಳೆ ಬಿಗಿ ಪೊಲೀಸ್ ಬಂದೋಬಸ್ತ್ ಇರುವುದರಿಂದ ಸೋಲಿಗರಲ್ಲಿ ಒಂದು ಭಯದ ಭಾವನೆ ಬೆಳೆದಿದ್ದು ಬಿದಿರು ಮಳೆ ಉತ್ಸವದ ಆಚರಣೆಗೆ ದೇವಾಲಯದಿಂದ ೨ ಕಿ.ಮೀ. ಅಂತರದಿಂದ ಬೇರೆ ಪ್ರದೇಶಗಳಲ್ಲಿ ನಡೆಸುತ್ತಾರೆ. ಇದಕ್ಕೆ ಮೇ ೬, ೨೦೦೧ರಂದು ನಡೆದ ರಂಗನಾಥ ಸ್ವಾಮಿ ಜಾತ್ರೆಯಲ್ಲಿಯೂ 'ಬಿದಿರು ಮಳೆ ಉತ್ಸವ' ನಡೆದಿದೆ. ಚಾಮರಾಜನಗರ ತಾಲ್ಲೂಕಿನ ದಂಡದಹಳ್ಳಿ ನಿವಾಸಿ ಮಲ್ಲಿಕಾರ್ಜುನ ಸ್ವಾಮಿ ಎಂಬುವವರು ಹೇಳುವಂತೆ ಜಾತ್ರೆಯ ದಿನ ಸಂಜೆ ರೇಷ್ಮೇ ಇಲಾಖೆ ಫಾರ್ಮ್ ಸಮೀಪ ಬಿದಿರು ಮಳೆ ಉತ್ಸವ ನಡೆದಿದೆ. ಬಿದಿರು ಮಳೆ ಎಂದು ಕನಿಷ್ಠ ೮ ಮಂದಿ ಸೋಲಿಗ ಮಹಿಳೆಯರು ಈ ಸಂಪ್ರದಾಯವನ್ನು ಅನುಸರಿಸುತ್ತಿರುವುದನ್ನು ತಾನು ಪ್ರತ್ಯಕ್ಷ ಕಂಡಿರುವುದಾಗಿ ಅವರು ಹೇಳುತ್ತಾರೆ. ಹಿಂದೆ ಈ ಆಚರಣೆ ದೇವಾಲಯಕ್ಕೆ ಅತೀ ಹತ್ತಿರವಾದ ನಿರ್ದಿಷ್ಠ ಪ್ರದೇಶದಲ್ಲಿ ನಡೆಯುತ್ತಿದ್ದರೆ. ಈಗ ದೂರದ ಬೇರೆ ಬೇರೆ ಪ್ರದೇಶಗಳಲ್ಲಿಯೂ ಹರಡಿಕೊಂಡಿದೆ ಎಂದು ಕೆಲವು ಸ್ಥಳೀಯರು ಹೇಳುತ್ತಾರೆ.

ಹಾವೇರಿ ಜಿಲ್ಲೆಯ, ಬ್ಯಾಡಗಿ ತಾಲ್ಲೂಕಿನ, ಕೆಂಗೊಂಡ ಜಾತ್ರೆಗೆ ಸಮೂಹಿಕ ಸಂಭೋಗದಿಂದಾಗಿ ಕುಖ್ಯಾತಿ ಪಡೆದಿದೆ. ಪರಿಶಿಷ್ಠರಾದ ಲಂಬಾಣಿ ಜನಾಂಗದವರು ಸೇರಿ ಆಚರಿಸುವ ಈ ಜಾತ್ರೆಗೆ ಮಧ್ಯ ರಾತ್ರಿಗೆ ಆರಂಭವಾಗಿ ಮುಂಜಾವಿನ ೪ ಘಂಟೆಯಾಗುವುದರ ಒಳಗಾಗಿ ಮುಗಿದು ಬಿಡುತ್ತದೆ. ಇಲ್ಲಿರುವ ದೇವಾಲಯದ ಸುತ್ತಾ ಇರುವ ಗಿಡಗಂಟೆಗಳು ಹಿಂದೆ ಎಲ್ಲಾ ಬೇಕೆಂದರಲ್ಲಿ ಹೆಣ್ಣು ಮತ್ತು ಗಂಡು ಮಧ್ಯಪಾನ ಮಾಡಿದ ನಶೆಯಲ್ಲಿ ಸಾಮೂಹಿಕವಾಗಿ ಸಂಭೋಗ ನಡೆಸುತ್ತಾರೆ .... ಈ ಜಾತ್ರೆ ಎಷ್ಟು ಕುಖ್ಯಾತಿ

ಪಡದಿದೆ ಎಂದರೆ, ಅತಿ ಕಾಮಿ ಎನಿಸಿಕೊಂಡವರನ್ನು ಕೆಂಕೊಂಡಕ್ಕೆ ಹೋಗಿದ್ದಿ? ಹೊಕ್ಕಿರಿ ? ಇತ್ಯಾದಿಯಾಗಿ ಚುಚುವುದು ಆಡು ಮಾತಿನಲ್ಲಿ ಕಂಡು ಬರುತ್ತದೆ. ಇತೀಚಿನ ದಿನಗಳಲ್ಲಿ ಈ ಆಚರಣೆಗೆ ಪೊಲೀಸರ ಕ್ರಮದಿಂದಾಗಿ ಮತ್ತು ಯುವಕರಲ್ಲಿ ಸ್ವಲ್ಪ ಮಟ್ಟಿನ ಜಾಗೃತಿ ಮೂಡಿರುವುದರಿಂದಾಗಿ ಕಡಿಮೆಯಾಗಿದೆ ಆದರೂ ಇನ್ನೂ ಚಾಲ್ತಿಯಲ್ಲಿದೆ". (ರಾಜ್ಯ ಸಂಪನ್ಮೂಲ ಕೇಂದ್ರ ಕರ್ನಾಟಕ ೨೦೦೫, ಪು.೨೯,೩೦,೩೧). ಎಂದು ದೊರೆಯುವಲ್ಲಿನ ಮಾಹಿತಿಯ ಜೈವಿಕತೆಯನ್ನಾಧರಿಸಿ ಸಂಪ್ರದಾಯ ಆಚರಣೆಗಳು ಹೆಣ್ಣಿಗೆ ಉಂಟುಮಾಡಿರುವ ಶೋಷಣೆಯ ಸ್ಥಿತಿಯನ್ನು ತಿಳಿಸುತ್ತದೆ.ಹಾಗೆ ಸಮಾಜದಲ್ಲಿ ಹೆಣ್ಣಿಗಿರುವ ಸ್ಥಿತಿ, ಸ್ಥಾನ–ಮಾನವನ್ನ ತಿಳಿಸುತ್ತದೆ. ಇದಕ್ಕೆ ಮೇರಿ ವುಲ್‌ಸ್ಟನ್ ಕ್ರಾಫ್ಟ್‌ರವರು " ಹೆಣ್ಣನು ಶೋಷಣೆ ಮಾಡುವ ಪುರುಷರು ತಾನೂ (ಪುರುಷ) ಬಯಸಿದ ರೀತಿಯಲ್ಲಿ ಹೆಣ್ಣಿಗೆ ಸ್ಥಾನ ಕೊಡಬಲ್ಲ". (ಉದ್ಧೃತ: ಸುಮಿತ್ರಬಾಯಿ ಬಿಎನ್. ೧೯೯೫, ಪುಟ.೧೬) ಎಂದು ಹೇಳಿರುವರು. ಮತ್ತು ಯಾವುದೇ ದೇವಸ್ಥಾನ, ದೇವರ ಗುಡಿ ಬೆತ್ತಲಾಗಿ ತಿರುಗಿದರೆ ಸಂತಾನ ಪ್ರಾಪ್ತಿಯಾಗುವುದಂತದಲ್ಲ. (ಜೈವಿಕ ಕ್ರಿಯೆ) ಮತ್ತು ಕೇವಲ ಹೆಣ್ಣಿನಿಂದ ಮಾತ್ರ ಸಂತಾನ ವಾಗುವಂತದಲ್ಲ, ಪರಸ್ಪರ ವಿರುದ್ಧ ಲಿಂಗಗಳಾದ ಗಂಡು ಹೆಣ್ಣಿನ ನಡುವೆ ಸಂಯೋಗ ಹೊಂದಿದಾಗ ಉಂಟಾಗುವ ಜೀವಸಂಬಂಧಿ ಪ್ರಕ್ರಿಯೆ. ಈ ಪ್ರಕ್ರಿಯೆ ೨ ಜೀವಿಗಳ (ಗಂಡು, ಹೆಣ್ಣು) ಜೈವಿಕತೆಗೆ ಸಂಬಂಧಿಸಿದ್ದಾಗಿದೆ. ಆದರೆ ಸಂಪ್ರದಾಯದ ಆಚರಣೆ ಸಂದರ್ಭದಲ್ಲಿ ಹೆಣ್ಣಿಗೆ ಮಾತ್ರ ಎನ್ನುವಂತೆ ಮುಂದುವರೆಯುತ್ತಿರುವಲ್ಲಿ ಹೆಣ್ಣನ್ನು ಶೋಷಣೆಗೆ ಒಳಪಡಿಸುವ ಪುರುಷ ತಂತ್ರವಾಗಿದೆ ಹೊರತು ಮತ್ತ್ಯಾವುದು ಅಲ್ಲ. ನಂಬಿಕೆಯನ್ನಾಧರಿಸಿ ಸೃಷ್ಟಿಗೊಂಡ ಸಂಪ್ರದಾಯ ಆಚರಣೆಗಳು ಪುರುಷನ ಪರವಾಗಿ ಮುನ್ನಡೆಯುತ್ತಿರುವುದು ಕಂಡುಬರುತ್ತದೆ. ಅದು ಹೇಗೆಂದರೆ ಪರ–ಪುರುಷರೊಡನೆ ದೇವರ ಹೆಸಿರಿನಲ್ಲಿ, ಸಂಪ್ರದಾಯದ ಹೆಸರಿನಲ್ಲಿ ಹೆಣ್ಣಿಗೆ ಸಾಮೂಹಿಕ ಸಂಭೋಗಕ್ಕೆ ಅವಕಾಶ ಮಾಡಿಕೊಟ್ಟಿರುವುದು ಮತ್ತು ಈ ಮೂಲಕ ಹೆಣ್ಣು ಸಂತಾನ ಪಡೆಯುತ್ತಾಳೆ ಎಂದು ನಂಬಿರುವುದು. ಇವೆಲ್ಲವು ಪುರುಷನ ನಪುಂಸಕತ್ವವನ್ನು (ಭಂಜೆತನವನ್ನು) ಮರೆಮಾಚುವ ಕೆಲಸ ಮಾಡಿದ್ದಾನೆ. ಜೊತೆಗೆ ಹೆಣ್ಣಿಗೆ ಮಾತ್ರ ಜೈವಿಕತೆಯನ್ನು ಆರೋಪಿಸಿದ್ದಾನೆ ಎನ್ನುವುದು ಗೊತ್ತಾಗುತ್ತದೆ. ಈ ಹೀಗೆ ಪಿತೃ ಪ್ರದಾನ(ಪುರುಷ) ವ್ಯವಸ್ಥೆ ತನ್ನ ದೋಷವನ್ನು ಮುಚಿಕೊಳ್ಳುವ ನೆಪದಲ್ಲಿ ಹೆಣ್ಣಿಗೆ, ಹೆಣ್ಣಿನ ಜೈವಿಕತೆಗೆ ಸಂಪ್ರದಾಯ ಆಚರಣೆ ಮೂಲಕ ಹೆಣ್ಣನ್ನು ಬಂಜೆಯೆಂದು ದೂಷಿಸಲಾಗಿದೆ. ಅದನ್ನು ಹೆಣ್ಣಿಗೆ ಬೈಯುವ, ನಿಂದಿಸುವ, ಸಂದರ್ಭದಲ್ಲಿ ಹೆಚ್ಚಾಗಿ ಹೆಣ್ಣಿನ ಜೈವಿಕತೆಯನ್ನು ಒಳಗಂಡಂತೆ ನಿಂದಿಸುವ ಮಾತುಗಳು ಕಂಡುಬರುತ್ತವೆ. ಉದಾಹರಣೆಗೆ 'ಬಂಜೆ ನಡೆದ ನೆಲ ಬಂಜೆಯಾಗುತ್ತದೆ,' ಬಂಜೆ ಮುಟಿದ ಕೂಸು ಸಾಯುತ್ತದೆ, ಬಂಜೆ ಮುಟ್ಟಿದ ಗಿಡಮರ ಬಾಡುತ್ತದೆ. ಬಂಜೆ ಗೊಡ್ಡೆಮ್ಮೆ ತರಹ, ಬಂಜೆ ಯಾವುದಕ್ಕೆ ಉಪಯೋಗವಿಲ್ಲದವಳು ಎಂದು ಅನೇಕ ಮಾತುಗಳು ಹೆಣ್ಣಿನ

ಜೈವಿಕತೆಯನ್ನು ಕೇಂದ್ರವಾಗಿಟ್ಟುಕೊಂಡಿವೆ. ಅದೇ ಗಂಡಿಗೆ ಇದ್ಯಾವುದು ಇಲ್ಲ. ಹೀಗೆ ಜೈವಿಕತೆಯನ್ನಾಧರಿಸಿ ರೂಪಗೊಂಡ ತಾತ್ವಿಕತೆಗಳು ಸಂಪ್ರದಾಯ ಆಚರಣೆಗಳ ಮುಖಾಂತರ ಪರಂಪರೆಯಲ್ಲಿ ಮುಂದುವರೆದಿವೆ. ಅವುಗಳು ಹೆಣ್ಣಿನ ದೇಹದ ಕುರಿತಾಗಿ ಹಲವು ಗ್ರಹಿಕೆಗಳನ್ನು ಸೃಷ್ಟಿಸಲಿಕ್ಕೆ ಕಾರಣವಾಗುತ್ತವೆ.

ಒಟ್ಟಾರೆಯಾಗಿ ಸಾರ್ವಜನಿಕ ಸ್ಥಳಗಳಲ್ಲಿ ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುವ ಸಂಪ್ರದಾಯ ಆಚರಣೆಗಳು ಪುರುಷ ವರ್ಗಕ್ಕೆ ಶ್ರೇಷ್ಠತೆಯನ್ನು ಸ್ಥಿರಗೊಳಿಸುತ್ತವೆ. ಹೆಣ್ಣಿನ ಕನಿಷ್ಠತೆಯನ್ನು ಸ್ಥಾಪಿಸುತ್ತವೆ. ಈ ಮೂಲಕ ಹೆಣ್ಣು 'ಕನಿಷ್ಠಳು' ಎನ್ನುವ ಸಂದೇಶವನ್ನು ಸಾರುವ ಮೂಲಕ ಲಿಂಗ ತಾರತಮ್ಯ ಅಸಮಾನತೆಗೆ ಕಾರಣವಾಗಿದೆ.

ಇನ್ನು ಹೆಣ್ಣಿನ ಜೈವಿಕತೆಯನ್ನಾಧರಿಸಿ ಖಾಸಗಿ (ವಲಯದಲ್ಲಿ) ಬದುಕಿನಲ್ಲಿ ನಡೆಯುವ ಪೂಜೆ, ವ್ರತ, ಉಪವಾಸ, ಮುಂತಾದ ಆರಾಧನೆಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಖಾಸಗಿ ಸಂಪ್ರದಾಯ ಆಚರಣೆಗಳು: ನಂಬಿಕೆಗಳ ಮೊತ್ತವೇ ಸಂಪ್ರದಾಯವಾಗಿ ಹೆಣ್ಣಿಗೆ ಆಚರಣೆಯಲ್ಲಿ ತೊಡಗುವಂತೆ ಮಾಡಿವೆ. ಮನೆಯ ಒಳಗಡೆ ನಡೆಯುವ ಪೂಜೆ, ವ್ರತ, ಉಪವಾಸ, ಆರಾಧನೆಯನ್ನು ಕೈಗೊಳ್ಳುವಂತ ಪೂಜಾ ಸಂಪ್ರದಾಯ ಆಚರಣೆಗಳನ್ನು ಮಾತ್ರ ಖಾಸಗಿ ಸಂಪ್ರದಾಯ ಆಚರಣೆಗಳೆಂದು ನಿರ್ವಚಿಸಿಕೊಳ್ಳಲಾಗಿದೆ.

ಹೆಣ್ಣು ಒಂದಲ್ಲ ಒಂದು ಕಾರಣಕ್ಕಾಗಿ ಪೂಜೆ, ವ್ರತ, ಉಪವಾಸದಂತಹ ಸಂಪ್ರದಾಯ ಆಚರಣೆಗಳನ್ನು ನಿರಂತರವಾಗಿ ಮಾಡುತ್ತ ಬರುತ್ತಿದಾಳೆ. ಇದಕ್ಕೆ ಸಾಂಸ್ಕೃತಿಕ ಹಾಗೂ ಸಾಮಾಜಿಕ ಒತ್ತಡಗಳೆರಡೂ ಕಾರಣವಾಗಿವೆ. ಪುರುಷ ತನ್ನ ಶ್ರೇಷ್ಠತೆಯನ್ನು ಸ್ಥಿರಿಕರಿಸಿಕೊಳ್ಳುವುದಕ್ಕಾಗಿ ಅನೇಕ ರೀತಿಯ ಪೂಜೆ, ವ್ರತಗಳನ್ನು ಅನುಸರಿಸಬೇಕಾದ ಒತ್ತಡವನ್ನು ಮಹಿಳೆಯ ಮೇಲೆ ಹೇರಿದ್ದಾನೆ.

ಭೂಮಿ ಗಂಗೆ ಮುಂತಾದವನ್ನೆಲ್ಲಾ ಹೆಣ್ಣೆಂದು ಗುರುತಿಸುವುದು ಪರಂಪರೆಯ ದೃಷ್ಠಿಯಲ್ಲಿ ಕಂಡು ಬರುತ್ತಿದೆ ಮತ್ತು ಇವೆಲ್ಲವುಗಳನ್ನು ಹೆಣ್ಣಿಗೆ ಹೊಲಸಿಕೊಂಡು ಬಂದಿರುವುದು ಇದೆ. ಖಾಸಗಿಯಾಗಿ ನಡೆಯುವ ಎಲ್ಲಿ ಪೂಜಾ, ವ್ರತದಂತಹ ಸಂಪ್ರದಾಯ ಆಚರಣೆಗಳು ಪುರುಷನಿಗೆ ಮತ್ತು ಪುರುಷನ ಪರವಾಗಿಯೇ ನಡೆಯುತ್ತಿರುವುದು ಕಂಡುಬರುತ್ತದೆ. ನಡೆಸಿಕೊಂಡು ಬರುವ ಪೂಜೆಗಳನ್ನು, ವ್ರತಗಳನ್ನು, ಸಂತಾನಕ್ಕಾಗಿ, ಗಂಡನ ಆಯುಷ್ಯಕ್ಕಾಗಿ, ತಂದೆ-ಮಕ್ಕಳು, ಅಭಿವೃದ್ಧಿಗಾಗಿ, ಕುಟುಂಬದ ಐಶ್ವರ್ಯಕ್ಕಾಗಿ ನಡೆಸಿಕೊಂಡು ಬಂದಿರುವುದು ಕಂಡುಬರುತ್ತದೆ. ಇದರಲ್ಲಿ ಹೆಣ್ಣು ತನಗಾಗಿ ತನ್ನ ಶ್ರೇಯಸ್ಸಿಗಾಗಿ ಯಾವುದನ್ನು ಮಾಡಿಕೊಂಡು ಬಂದಂತ ಸ್ಥಿತಿ ಕಂಡುಬರುವುದಿಲ್ಲ. ಸಮಾಜ ವ್ಯವಸ್ಥೆಯಲ್ಲಿ ಎಲ್ಲವೂ ಪುರುಷನಿಗಾಗಿ ಇದೆ ಎನ್ನುವಂತೆ ಮುಂದುವರಿಸಿಕೊಂಡು ಬರುತ್ತಿವೆ.

ಅವುಗಳು ಸಮಾಜದಲ್ಲಿನ ಪುರುಷ ಪರವಾಗಿ ಕಾರ್ಯನಿರ್ವಹಿಸುತ್ತಿವೆ ಎನ್ನುವುದು ಗೊತ್ತಾಗುತ್ತದೆ. ಸಮಾಜದಲ್ಲಿ ಮಹಿಳೆಗೆ ಶ್ರೇಯಸ್ಸು, ಅಭಿವೃದ್ಧಿ, ಐಶ್ವರ್ಯ, ಸಂತೋಷ, ಆರೋಗ್ಯ ಗಂಡನಿಂದಲೇ ಮಕ್ಕಳಿಂದಲೇ ಎಂದು ಪರಿಭಾವಿಸಲಾಗಿದೆ. ಖಾಸಗಿ ಪೂಜೆ, ವ್ರತಗಳನ್ನು ದಾಖಲಿಸಿ, ವಿಶ್ಲೇಷಿಸಲಾಗಿದೆ.

ಸಂತಾನಕ್ಕೆ : ಹೆಣ್ಣಾದವಳು ಮಕ್ಕಳನ್ನು ಪಡೆದರೆ ಮಾತ್ರ ಆ ಹೆಣ್ಣಿಗೆ ಸಮಾಜದಲ್ಲಿ ಸ್ಥಾನ ಎಂಬ ಧೋರಣೆ ಸಮಾಜದಲ್ಲಿ ಕಂಡುಬರುತ್ತಿದೆ. ಈ ಕಾರಣಕ್ಕಾಗಿ ಕೆಲವು ನಾಣುಡಿಗಳನ್ನು ಹುಟ್ಟು ಹಾಕಿರುವುದು ಇದೆ, 'ಉತ್ತಲದೆ ಮಣ್ಣಲ್ಲ ಹೆತ್ತಲ್ಲದೆ ತಾಯಿಯಲ್ಲ', 'ಹೆಣ್ಣು ಹೆತ್ತರೆ ಮನೆಯ ದೀಪ' ಮುಂತಾದ ನಾಣ್ಣುಡಿಗಳನ್ನು ಹುಟ್ಟು ಹಾಕಿರುವುದು. ಹೆಣ್ಣು ಹೇರಲೇ ಬೇಕು ಎನ್ನುವ ಒತ್ತಡವನ್ನು ಸೃಷ್ಠಿ ಮಾಡಲ್ಲಿಕೆಂದು ಕಂಡುಬರುತ್ತದೆ. ಒಂದು ವೇಳೆ ಹೆಣ್ಣು ಹೆತ್ತಿಲ್ಲವೆಂದರೆ. ಸಮಾಜದ ಕ್ರೂರ ದೃಷ್ಠಿಗೆ ಗುರಿಯಾಗುತ್ತಾಳೆ. 'ಸಂತಾನಕ್ಕೆ' ಗಂಡಿನ (ಪುರುಷ) ದೈಹಿಕ ದೋಷವಿದ್ದರು ಅದನ್ನು ಮುಚ್ಚಿಹಾಕಿ ಹೆಣ್ಣು ಮಕ್ಕಳನ್ನು ಪಡೆಯಲೇಬೇಕು ಎನ್ನುವ ಸಮಾಜದ ಒತ್ತಡ ಉಂಟು ಮಾಡಿರುವುದರಿಂದ, ಹೆಣ್ಣು ಅನೇಕ ರೀತಿಯ ಪೂಜೆ, ವ್ರತ, ಉಪವಾಸದಂತಹ ಆರಾಧನೆಯನ್ನು ಖಾಸಗಿಯಾಗಿ ಕೈಗೊಳ್ಳುತ್ತಿರುವುದು ಕಂಡುಬರುತ್ತಿದೆ. ಜೊತೆಗೆ ದೈವಪ್ರಯತ್ನದಲ್ಲಿ ನಂಬಿಕೆಯಿಟ್ಟು ಮುಗ್ದ ಹೆಣ್ಣು ಮಕ್ಕಳ ಸಂತಾನಕ್ಕಾಗಿ ದೇವರ ಮೊರೆಹೋಗುವುದು ಪೂಜೆ, ವ್ರತಗಳನ್ನು ಕೈಗೊಳ್ಳುವುದು ಕಂಡುಬರುತ್ತಿದೆ. ಇದು ಈಗಿನಿಂದ ಹೆಣ್ಣಿಗೆ ಒತ್ತಡ ಹೇರಿ ನಡೆಸಿಕೊಂಡು ಬಂದಿಲ್ಲ. ನಡೆಸಿಕೊಂಡು ಬಂದಿರುವುದು ಕಂಡುಬರುತ್ತಿದೆ. ಇದಕ್ಕೆ ಜನಪದ ಸಾಹಿತ್ಯ ಕಥೆಗಳಲ್ಲಿ ಕಂಡುಬರುವ. 'ಮಾವಿನ ಹಣ್ಣು ತಿಂದರೆ ಮಕ್ಕಳಾಗುತ್ತವೆ' ಮಕ್ಕಳ ಕೊಡುವ ದೇವತೆ, ಮಕ್ಕಳಿಗಾಗಿ ದೇವರಿಗೆ ಬೇಡುವುದು. ಋಷಿ ಮುನಿಗಳಿಂದ ಮಂತ್ರಿಸಿದ ಹಣ್ಣನ್ನು ಸೇವಿಸಿದರೆ ಮಕ್ಕಳಾಗುತ್ತವೆ. ದೇವರಿಗೆ ಪೂಜೆ, ಹರಕೆ ಸಲ್ಲಿಸಿದರೆ ಮಕ್ಕಳಾಗುತ್ತವೆ ಎಂದು ನಂಬಿಕೆಯಿಂದ ಪೂಜಿಸಿರುವುದು. ದೇವರನ್ನ ಬೇಡಿ ವರಪಡೆದರು, ಪಡೆದಿದ್ದರು ಎಂದು ಹತ್ತು ಹಲವು ನಂಬಿಕೆಗಳನ್ನು ಸಮಾಜದಲ್ಲಿ ಸ್ಥಾಪಿಸಿ ಪೂಜೆ ವ್ರತ, ಆರಾಧನೆ ಸಂಪ್ರದಾಯ ಆಚರಣೆಯನ್ನು ನಡೆಸಿಕೊಂಡು ಬಂದಿರುವುದು ಕಂಡುಬರುತ್ತದೆ. ಒಂದೆಡೆ ಮಕ್ಕಳಿಲ್ಲದ ರಾಣಿ "ಕೊನೆಗೆ ನಾಗಪ್ಪನ ಪೂಜೆ ಮಾಡಲ್ಪಟ್ಟ ನಲವತ್ತೆಂಟು ದಿನ ಆಗುವುದರ ಒಳಗೆ ಬಂದು ನಮಗೆ ಮಕ್ಕಳು ಫಲ ಕೊಡಲಿ, ಇಲ್ಲದಿದ್ದರೆ ಅವನಿಂದಲೆ ಸತ್ತು ಹೋಗುವುದು ಸರಿ. ಮಕ್ಕಳಿಲ್ಲದ ಮೇಲೆ 'ಬಂಜೆ'ಯಾಗಿ ಈ ಪ್ರಪಂಚದಲ್ಲಿ ಇರಬಾರದು" (ಬಾನುಮತಿ ವೈ.ಸಿ. ೨೦೦೩, ಪುಟ.೩,೪) ಎನ್ನುವ ಧೋರಣೆಯುಳ್ಳ ಜನಪದ ಕಥೆಗಳಿವೆ. 'ನಾಗಪ್ಪ ದೇವತೆಯನ್ನು ಪೂಜಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಈ ದೇವತೆಯ ಆರಾಧನೆಯನ್ನು ಹೆಣ್ಣು ಮಕ್ಕಳೇ ಮಾಡುತ್ತಿದ್ದಾರೆ.

ಇನ್ನು ಸಂತಾನಕ್ಕಾಗಿ ದೇವರಲ್ಲಿ ಪೂಜಿಸಿ, ಪ್ರಾರ್ಥಿಸಿಕೊಂಡು ಸಂಗತಿಗಳು ದೊರೆಯುತ್ತದೆ. ಇದಕ್ಕೆ ಫಲವಂತಿಕೆಗೆ ಪ್ರಸಿದ್ಧಿ ದೇವತೆಗಳನ್ನು ಪೂಜೆಸಿಕೊಂಡು ಬಂದಿರುವುದು ಹಲವು ಕಡೆಗಳಲ್ಲಿ ದೊರೆಯುತ್ತದೆ ಉದಾಹರಣೆಯಾಗಿ "ಸುಗ್ಗಿ ಹಬ್ಬದಲ್ಲಿ ಅಮ್ಮನಿಗೆ ಪ್ರಾರ್ಥಿಸಿಕೊಂಡರೆ ಮಕ್ಕಳಾಗುವುದೆಂಬ ನಂಬಿಕೆ ಮಲೆನಾಡಿನಲ್ಲಿದೆ, ಮೈಸೂರು ಸಮೀಪದ ಗುಂಡ್ಲುಪೇಟೆ ತಾಲ್ಲೂಕಿನ ಗೋಪಾಲಸ್ವಾಮಿ, ಬೆಟ್ಟದ ಕೃಷ್ಣ ಸಂತಾನ ಗೋಪಾಲಸ್ವಾಮಿ ಎಂದೇ ಹೆಸರು ವಾಸಿ. ಇಟಲಿಯಲ್ಲಿ ಡೈಯಾನ (Diana) ಪ್ರಜನನ ದೇವತೆ ಎಂದು ಪೂಜಿಸುತ್ತಾರೆ. ಇಂತಹ ಹತ್ತಾರು ನಿದರ್ಶನಗಳು ಅಲ್ಲಲಿ ದೊರೆಯುತ್ತವೆ." 'ತಾಯ್ತನಕ್ಕಾಗಿ' (ಸಂತಾನ) ಹೆಣ್ಣು ಕೈಗೊಳ್ಳುವ ಪೂಜೆ, ವ್ರತ, ಉಪವಾಸಗಳು ನೂರಾರು 'ಕೊಂತಿ' ಪೂಜೆಯನ್ನು ಚರ್ಚೆಗೆ ಎತ್ತಿಕೊಳ್ಳಲಾಗಿದೆ." "ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ವಿಶೇಷವಾಗಿ ಕಂಡುಬರುವ ಈ ದೇವತೆಯನ್ನು ಬೇಡಿ ಮಕ್ಕಳನ್ನು ಪಡೆಯಬಹುದು ಎಂದು ಪೂಜಿಸುವವರು ಮತ್ತು ಫಲವತ್ತತೆಯ ದೇವತೆಯಾಗಿ ಈ ಕಡೆ ಜನರಲ್ಲಿ ಮಾನ್ಯಳಾಗಿದ್ದಾಳೆ. ವಿಶ್ವ ಉಳಿಯಲು, ಬೆಳೆಯಲು ಜೀವಿಗಳು ಬೇಕು. ಜೀವಿಗಳ ಉಗಮಕ್ಕೆ ಒಂದು ಕ್ಷೇತ್ರದ ಅಗತ್ಯವಿದೆ. ಈ ಕಾರಣಕ್ಕಾಗಿ ಭೂಮಿಗೆ ವಿಶೇಷ ಮನ್ನಣೆ ದೊರೆತಿದೆ. ಇದೇ ಕಾರಣಕ್ಕೆ 'ಕೊಂತಿ' ಪೂಜ್ಯನೀಯಳಾಗಿದ್ದಾಳೆ. ಕೊಂತಿಯೆಂಬುದು ಒಂದು ಅತಿ ಉದ್ದದ ದುಂಡನೆಯ ಕಲ್ಲು ಅದನ್ನ ಭೂಮಿಯಲ್ಲಿ ಹಳ್ಳ ತೋಡಿ ಅರ್ಧ ಭಾಗದಷ್ಟು ಹೊಳುವುದು ಈ ಆಚರಣೆಯ ಪ್ರಾರಂಭದ ಘಟ್ಟ ಮೂರು ಅಥವಾ ಐದು ದಿನಗಳ ಅನಂತರದಲ್ಲಿ ಆಕೆಗೆ ನಿತ್ಯಪೂಜೆ ಪ್ರಾರಂಭವಾಗುತ್ತದೆ.

ಹದಿನಾರನೆಯ ದಿನ ಆಕೆಯನ್ನು ಗಂಡನ ಮನೆಗೆ ಕಳುಹಿಸಿ ಬರುವ ಆಚರಣೆ ಇದೆ. ಇದು ಹೆಣ್ಣಿನ ಗರ್ಭಕ್ಕೆ ಹಾಗೂ ಆಕೆಯ ಗರ್ಭಧಾರಣೆಗೆ ಸಂಬಂಧಿಸಿದ ಹಬ್ಬವಾಗಿ ಕಂಡುಬರುತ್ತದೆ. ಇದನ್ನು ಆಚರಿಸುವವರು ಹೆಣ್ಣು ಮಕ್ಕಳೇ. ಕಾರ್ತಿಕ ಮಾಸದಲ್ಲಿ ಈ ಆಚರಣೆ ನಡೆಯುತ್ತಿದೆ" (ಆರ್. ಸುನಂದಮ್ಮ, ೨೦೦೫, ಪು.೧೪೦).

ಇನ್ನು "ಸ್ತ್ರೀಯರೆ ಭಾಗವಹಿಸುವಿಕೆ ಪ್ರಧಾನವಾದ ಆಚರಣೆಗಳಾದ ಗುಳ್ಳವ್ವನ ಪೂಜೆ, ಚಂಗಳ್ವನ ಪೂಜೆ, ಶೀಗೆ ಹುಣ್ಣಿಮೆ, ಜೋಕುಮಾರನ ಪೂಜೆ, ದಕ್ಷಿಣ ಕರ್ನಾಟಕದ ಕೊಂತಿ ಪೂಜೆ. ಬೆಳದಿಂಗಳಪ್ಪನ ಪೂಜೆ, ನಾಗರಪಂಚಮಿ ಪೂಜೆ, ಮಲೆನಾಡಿನ ಭೂಮಿ ಪೂಜೆ, ಹುಣಿಮೆ ಪೂಜೆ, ಮೊದಲಾದವುಗಳನ್ನು ಹೆಂಗಸರ ಆಚರಣೆಗಳೆಂದು ಗುರುತಿಸಲಾಗುತ್ತದೆ". (ಸಂಧ್ಯಾರೆಡ್ಡಿ ಕೆ.ಆರ್. ೨೦೦೫, ಪುಟ.೧೯) ಈ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಸಂಪ್ರದಾಯ ಆಚರಣೆಯನ್ನು ಬಿಡಿಬಿಡಿಯಾಗಿ ದಾಖಲಿಸಿ ವಿಶ್ಲೇಷಣೆಗೆ ಒಳಪಡಿಸಿದರೆ. ಹೆಣ್ಣಿಗೆ ಸಮಾಜದಲ್ಲಿ 'ತಾಯ್ತನವನ್ನು ಪಡೆಯಲೇಬೇಕು ಎನ್ನುವುದು ಸ್ತ್ರೀಕೇಂದ್ರಿತ ಪದ. "ಗುಳ್ಳವನ ಪೂಜೆ ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಆಚರಣೆಗೆ ಒಳಪಡಿಸುವ

ಒಂದು ದೇವತೆ. ಈ ದೇವತೆಯನ್ನು ಹೆಣ್ಣು ಮಕ್ಕಳೇ ವಿಶೇಷವಾಗಿ ಆಚರಿಸುವ ಸಂಪ್ರದಾಯ ಕಂಡುಬರುತ್ತದೆ. ಈ ಸ್ತ್ರೀ ದೇವತೆಯ ಆಚರಣೆ ಆಷಾಡ ತಿಂಗಳಲ್ಲಿ ಆರಾಧಿಸುವರು. ಶೂದ್ರರಿಗೆ ದೇವತೆಯಾಗಿರುವಳು ಇವಳ ಪೂಜೆ ಅಮವಾಸ್ಯೆಯಂದು ನಡೆಯುತ್ತದೆ. ಈ ಪೂಜೆಯನ್ನು ಮಂಗಳವಾರ ಬಾಲ ಮುತ್ತೈದೆಯರು, ಗುಂಪು ಗುಂಪಾಗಿ ಊರಮುಂದಿನ ಹೊಳೆ ಹಳ್ಳಕೆರೆ ಅಥವಾ ಹೊಲಕ್ಕೆ ಹೋಗುತ್ತಾರೆ. ಅಲ್ಲಿ ಕೂರಿಸಿ ಪೂಜೆ ಮಾಡಿ ತಿಂಡಿ ತಿನುಸುಗಳನ್ನು ತಿಂದು ಬರುತ್ತಾರೆ". (ವೀರೇಶ್ ಬಡಿಗೇರ, ೧೯೯೯, ಪುಟ.೧. ೧೯೯೯). "ಅಕ್ಕಮ್ಮನ ಆಚರಣೆ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಕೆಲವು ಭಾಗಗಳಲ್ಲಿ ರೂಢಿಯಲ್ಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳೆ ಆಚರಣೆಯಲ್ಲಿ ಪಾಲ್ಗೊಳುತ್ತಾರೆ. ಅಕ್ಕಮ್ಮನವರ ಪೂಜೆಗೆ ಅರಿಶಿನ ಕುಂಕುಮ ಹೂವು, ಕಡ್ಡಿ, ಕರ್ಪೂರ, ಕಾಯಿ ನೆನಸಿದ ತಂಬಿಟ್ಟು. ಹೊಸ ಸೀರೆ, ಹಾಗೂ ಕುಪ್ಪಸ (ರವಿಕೆ) ಕಣ, ಕೆಂಪು ಇಲ್ಲವೇ ಹಸಿರು ಬಳೆ, ಅರಶಿನ ಹಾರ, ಕರಿಮಣಿ ಇತ್ಯಾದಿ ಪರಿಕರಗಳು ಅಗತ್ಯ ಮುತ್ತೈದೆಯರು ಮಾತ್ರ ಪೂಜಿಸಬೇಕು. ಯುವತಿಯರು ವಿವಾಹಪೂರ್ವ ಹಾಗೂ ನಂತರದ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿಗೆ ಪರಿಹಾರವನ್ನು ಕೋರಿ ಪೂಜಿಸುವುದು ಸಾಮಾನ್ಯ. ಅಲ್ಲದೆ ಅವಿವಾಹಿತ ತರುಣಿಯರು ಕೆಲವು ವಿಶೇಷ ಸಂದರ್ಭದಲ್ಲಿ ಆರಾಧಿಸುತ್ತಾರೆ. ಅಕ್ಕಮ್ಮನ ಆಚರಣೆ ಕುರಿತಾಗಿ ಕೆಲವು ನಂಬಿಕೆ ಈ ರೀತಿಯಾಗಿ ದೊರೆಯುತ್ತವೆ. ವಯಸ್ಸಿಗೆ ಅನುಗುಣವಾಗಿ ಋತುಮತಿಯಾದ ಹೆಣ್ಣು ಮಕ್ಕಳು ಸಂತಾನದ ಕೊರತೆಯನ್ನು ಅನುಭವಿಸುವ ದಂಪತಿಗಳು ಅಕ್ಕಮ್ಮನ ಕಾಲವೆಂದು ತಿಳಿದು ಮಂಗಳವಾರ, ಶುಕ್ರವಾರಗಳಂದು, ಪೂಜಿಸುತ್ತಾರೆ. ಅಲ್ಲದೆ ಕಾರಣವಿಲ್ಲದೆ ಪೂಜಿಸಲು ಹೆದರುತ್ತಾರೆ. ಏಕೆಂದರೆ ಒಮ್ಮೆ ಪೂಜಿಸಿದ ನಂತರ ಮರೆಯುವಂತಿಲ್ಲ. ನಿಗದಿತ ಅವಧಿಗೆ ಅನುಗುಣವಾಗಿ ಆಚರಣೆಯನ್ನು ಮುಂದುವರಿಸಬೇಕು. ತಪ್ಪಾದರೆ ಮನೋರೋಗಿಗಳಾಗಿಯೋ, ಷಂಡರಾಗಿಯೋ ಬದುಕಬೇಕಾಗುತ್ತದೆ ಎಂದು". (ಉ: ವಿರೂಪಾಕ್ಷ ಪೂಜಾರಹಳ್ಳಿ, ೨೦೦೨, ಪುಟ.೨) ಈ ಬಗೆಯ ಆಚರಣೆಗಳಲ್ಲಿ ಹೆಣ್ಣಿನ ದೇವತೆಯನ್ನು ಪೂಜಿಸುವುದು ಕಂಡುಬರುತ್ತದೆ. ಬೆಳದಿಂಗಳ ಪೂಜೆ ಅಥವಾ ಬೆಳ್ದಿಂಗಪ್ಪ ಪೂಜೆಯಲ್ಲಿ ಗಂಡು ದೇವರನ್ನು ಪೂಜಿಸುವುದು ಕಂಡುಬರುತ್ತದೆ.

"ಇದು ಕರ್ನಾಟಕದ ತುಮಕೂರಿನ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಸುತ್ತಮುತ್ತಲಿನ, ಹಾಸನ, ಚಿಕ್ಕಮಂಗಳೂರು ಅರಿಸಿಕೆರೆ ಈ ನಡುವಣ ಪ್ರದೇಶಗಳಲ್ಲಿ ಈ ಸಂಪ್ರದಾಯ ಆಚರಣೆಯಲ್ಲಿದೆ 'ಗುಡಿಯ ಹುಣಿಮೆ' ಸಂಪ್ರದಾಯ ಬೆಳದಿಂಗಳ ಆರಾಧನೆಗೆ ಸಂಬಂಧಿಸಿದ್ದು ಅದನ್ನು ದೇವರು ಕರೆದುಕೊಳ್ಳುವ ಸಂಪ್ರದಾಯದಲ್ಲಿ ಗುರುತಿಸಬಹುದು. ಹಾಗೇ (ಚಂದ್ರಮ್ಮನ ಹೊಯ್ಯುವುದು) ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ

ಹಗಲವಾಡಿ, ಶಿವಪುರ, ಗುಡ್ಡೇನಹಳ್ಳಿ, ಚಿತ್ತ ದೇವರಹಳ್ಳಿ, ಜುಂಜಪ್ಪನಹಳ್ಳಿ ಮತ್ತು ಕೊರಟಗೆರೆ ತಾಲ್ಲೂಕು ಜೆಟ್ಟ ಅಗ್ರಹಾರ ಕಲ್ಲುಗಟ್ಟರಹಳ್ಳಿ, ಸುತ್ತಮುತ್ತಲ ಪ್ರದೇಶವು ಈ ಆಚರಣೆ, ಇದೆ. ಶೀರಾ ಮಧುಗಿರಿ ತಾಲ್ಲೂಕಿನಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಈ ಬೆಳ್ದಂಗಳಪ್ಪನ ಪೂಜೆಯನ್ನು ವರ್ಷಕ್ಕೊಮ್ಮೆ 'ಉಗಾದಿಯಂದೆ ಮುಂದೆ ಬ್ಯಾಸಗೇಲಿ ಮಾಡ್ತಾರೆ ಮುಖ್ಯವಾಗಿ ಹೆಂಗಸರು ಆಚರಿಸುವ ಈ ಪೂಜೆ ಹಳ್ಳಿಗರ ಮನೋರಂಜನೆಯ ಆಚರಣೆಯ ಮಕ್ಕಳ ಹಬ್ಬವಾಗಿವೆ. ಮುಖ್ಯವಾಗಿ ಇದನ್ನು ಮಾಡುವವರು ಹೆಂಗಸರು ಅವರಿಗೆ ಯಾವ ವಿಧದಲ್ಲಿ ಒಳ್ಳೆಯದೆಂಬುದನ್ನು ತಿಳಿದುಕೊಳ್ಳಬೇಕು ಎಳೆಯ ಬೆಳದಿಂಗಳ ಪೂಜೆ ಮಾಡಲು ಹೆಂಗಸರು ನಿರ್ಧರಿಸುತ್ತಾರೆ. ಇದಕ್ಕೆ ಹಣ ಸಂಗ್ರಹಿಸಿಕೊಂಡು ಮೂರು ದಿನಗಳ ಕಾಲ ಸಂಭ್ರಮ ಸಂತೋಷದಿಂದ ಮಾಡುತ್ತಾರೆ. ಇದರಲ್ಲಿ ಹೆಂಗಸರೇ ಮುಖ್ಯ ಪಾತ್ರ ಈ ಪೂಜೆಯನ್ನು ಒಂದು ನಂಬಿಕೆಯಂತೆ ಒಬ್ಬ ಚೆಲುವಾದ ಹುಡುಗ ದೊರೆಯುವವರೆಗೂ ತಮ್ಮ ನಾಡಿನ ಹುಡುಗಿಯರಿಗೆಲ್ಲ ಚಂದ್ರಮರಾಯನೇ ಗಂಡ, ಇವನೇ ಎಲ್ಲರಿಗೆ ಎಂಬ ಅಧಿಪತಿ ನಂಬಿಕೆ ಇದೆ. ಹಾಗೇ ಗರ್ಭಧರಿಸಿದ ಕೆಲವು ಹೆಂಗಸರು ತಾವು ಧರಿಸುವ ಗರ್ಭಕ್ಕೆ ಕಾರಣ ಚಂದ್ರನೆಂದು ನಂಬುತ್ತಾರೆ. ಚಂದ್ರನು ಮಾಸಚಕ್ರ, ಹೆಂಗಸರ ಋತು ಚಕ್ರ ಎರಡು ೨೮ ದಿನಗಳವರೆಗೆ ಕೆಲವರು ಚಂದ್ರಕಿರಣ ಹೆಣ್ಣಿನ ಮಾಸಚಕ್ರವನ್ನು ನಿಯಂತ್ರಿಸಬಹುದು ಎಂದು ನಂಬುತ್ತಾರೆ. ಈಗಲೂ ಹೆಂಗಸರೇ ಚಂದ್ರನ ಪೂಜೆ ಮಾಡುವುದಕ್ಕೆ ಕಾರಣ ಚಂದ್ರ ಗರ್ಭ ರಕ್ಷಕ ದೇವತೆ ಎಂಬ ನಂಬಿಕೆಯಿಂದಾಗಿರಬೇಕು." (ಅಗ್ರಹಾರ ಕೃಷ್ಣಮೂರ್ತಿ ೧೯೭೬ ಪುಟ ೧೮) ಮುಂದುವರೆದು ಇದನ್ನು ಹೆಚ್ಚಾಗಿ ಹರಿಜನರು ಆಚರಿಸುತ್ತಾರೆ.

ಫಲವಂತಿಕೆಯ ಕುರಿತಿರುವ ಸಂಪ್ರದಾಯ ಆಚರಣೆಗಳು ಹೆಣ್ಣನ್ನು ಪುರುಷ ಪ್ರಧಾನ ವ್ಯವಸ್ಥೆಗೆ ಪೂರಕವಾಗಿ ನಡೆಯಲು ಪ್ರೇರೇಪಿಸುತ್ತವೆ. ಇದಕ್ಕೆ 'ಕುಂತಿ ಪೂಜೆ ಮಾಡಿದರೆ ಮಕ್ಕಳಾಗುತ್ತವೆ'. 'ಮಂಗಳವಾರ, ಶುಕ್ರವಾರ, ವಿಶೇಷ ವಾರಗಳಂದು ಪರಿಗಣಿಸಿಕೊಂಡು ದೇವಿಯ ಪೂಜೆಯನ್ನು ಹೆಣ್ಣಾದವಳು ಮಾಡಬೇಕು' 'ಈ ದಿನಗಳಲ್ಲಿ ಹೆಣ್ಣು ಪೂಜೆ ವ್ರತಗಳನ್ನು ಕೈಗೊಂಡರೆ ಒಳ್ಳೆಯದಾಗುತ್ತದೆ'. ಹಾಗೆ ಮನೆ, ಕುಟುಂಬ, ಗಂಡ ಹೆಣ್ಣುಮಕ್ಕಳಿಗೆ ಒಳೆಯದಾಗುತ್ತದೆ ಎಂದು ನಾನಾ ಬಗೆಯಲ್ಲಿ ಹೆಣ್ಣಿನಿಂದ ಪೂಜೆ ವ್ರತ ಆರಾಧನೆಗಳನ್ನು ಮಾಡಿಸುತ್ತಾರೆ. ಹಾಗೂ ಈ ಎಲ್ಲಾ ಬಗೆ ಪೂಜಾ ವ್ರತಗಳನ್ನು ಸುಸಂಸ್ಕೃತ ಸಮಾಜದಲ್ಲಿ, ಹಾಗೂ ಆಧುನಿಕ ಸಮಾಜದಲ್ಲಿ ಮುಂದುವರಿಯುತ್ತಿರುವುದು ಹಾಗೂ ಪ್ರಜ್ಞಾವಂತ ಸಮಾಜ ಇದನ್ನು ಬೆಂಬಲಿಸುತ್ತಿರುವುದು ಒಂದು ವಿಪರ್ಯಾಸದ ಸಂಗತಿ.

ಹೆಣ್ಣಿಗೆ ಜೈವಿಕ ಸಹಜ ಕ್ರಿಯೆಯನ್ನಾಧಾರವಾಗಿಟ್ಟುಕೊಂಡು ನಡೆಯುತ್ತಿರುವ ಆಚರಣೆಗಳಲ್ಲಿ ಹೆಣ್ಣಿಗೆ ಒತ್ತಡ, ಹಿಂಸೆ, ಶೋಷಣೆಗೆ ಒಳಗಾಗಿಸಿರುವುದು ಕಂಡುಬರುತ್ತದೆ. ಇದಕ್ಕೆ

"ಕೋಲಾರ, ಬೆಂಗಳೂರು, ಜಿಲ್ಲೆಗಳಲ್ಲಿ ಹೊಸ ದ್ಯಾವರು ಆಚರಣೆ ಇದೆ. ಬರೀ ಹೆಣ್ಣು ಮಕ್ಕಳೇ ಸೇರಿ ಆಚರಣೆ ಇದು. ಆಯಾ ಕುಲದ ಹಿರಿಯ ಮಹಿಳೆಯ ಮನೆಯಲ್ಲಿ ಈ ಸಂಪ್ರದಾಯ ನಡೆಯುತ್ತದೆ. ಆ ಹಿರಿಯ ಹೆಣ್ಣು ಮಗಳು ಅಕ್ಕಿ ಹಾಕಿ ಮಾಡುವ ತಂಬಿಟ್ಟಿನ ದೀಪದ ಎದುರಿನಲ್ಲಿ ಒಬ್ಬೊಬ್ಬ ಹೆಣ್ಣು ಮಗು ಪ್ರತ್ಯೇಕವಾಗಿ ಹೋಗಿ ಬೆತ್ತಲಾಗಿ ನಿಂತು ತನ್ನ ಮನೋವ್ರತವನ್ನು ನಿವೇದಿಸಿಕೊಳ್ಳುವುದು ಈ ಆಚರಣೆಯಲ್ಲಿ ಕಂಡುಬರುತ್ತದೆ. ಇದು ಬಹಳ ಗುಟ್ಟಾಗಿ ನಡೆಯುತ್ತದೆ. ದೇವರ ಮುಂದೆ ನಿವೇದಿಸಿಕೊಳ್ಳುವ ವಿಚಾರ ಮತ್ತೊಬ್ಬಾಕೆಗೆ ತಿಳಿಯುದಿಲ್ಲ. ದೀಪದ ಎದುರಲ್ಲಿ ತಪ್ಪೆಂದು ಸಮಾಜ ಗ್ರಹಿಸುವ ವಿಚಾರವಾಗಿ ನಿವೇದಿಸಿಕೊಳ್ಳುವುದುಂಟು. ಹೀಗೆ ಮಾಡಿಕೊಳ್ಳುವ ಮೂಲಕ ಮಹಿಳೆಯ ಮೇಲೆ ಹಾಕುವ ನಿಷೇಧಗಳನ್ನು ಹಾಗೂ ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಹೆಣ್ಣಿನ ಬದುಕಿನಲ್ಲಿ ನಿಷೇಧಗಳು ಹೆಚ್ಚಾದಂತೆ ಇಂತಹ ಆಚರಣೆಗಳು ಹೆಣ್ಣಿಗೆ ಸಂದರ್ಭವನ್ನು ಮೀರುವ ಶಕ್ತಿಯ ವಿಚಾರಧರೆಗಳಾಗಿ ರೂಪ ತಳೆದಿವೆ". (.ಸುನಂದಮ್ಮ ಆರ್., ೨೦೦೫, ಪುಟ.೧೪೨) ಹೆಣ್ಣಿಗೆ ಹಿಂಸೆ, ಶೋಷಣೆಯ ಹಿನ್ನಲೆಯಲ್ಲಿ ಪೂಜೆ ಸಂಪ್ರದಾಯ ಆಚರಣೆಗಳು ನಡೆದುಕೊಂಡು ಬಂದಿರುವುದು ಗೊತ್ತಾಗುತ್ತದೆ. ಹಾಗೇ ಈ ಮೇಲಿನ ಮಾಹಿತಿಯನ್ನು ಆಧರಿಸಿ ನೋಡಿದರೆ ಇಂದಿಗೂ ಆರಾಧನಾ ಮಂದಿರ ದೇವಸ್ತಾನ ಪೂಜೆ ಸ್ಥಳಗಳಲ್ಲಿ ಹೆಚ್ಚಾಗಿ ಹೆಣ್ಣು ಕಾಣಿಸಿಕೊಳ್ಳುತ್ತಿರುವುದು ಪುರುಷ ಪ್ರಧಾನ ಮೌಲ್ಯಗಳೇ ಸ್ಪಷ್ಟವಾಗುತ್ತದೆ.

ಖಾಸಗಿ ವಲಯದಲ್ಲಿನ ಪೂಜೆ ವ್ರತಗಳು ಬಹುತೇಕ ಗಂಡಿನ ಶ್ರೇಯಸ್ಸಿಗಾಗಿ ಪುರುಷ ಪ್ರಧಾನ ಕುಟುಂಬಕ್ಕಾಗಿ ಹೆಣ್ಣು ನಡೆಸಿಕೊಂಡು ಹೋಗುತ್ತಿರುವುದು ಇದೆ. ಇದಕ್ಕೆ ಪುರುಷ ಪ್ರಧಾನ ಸೃಷ್ಠಿ ಮಾಡಿದ ಒತ್ತಡ ಶೋಷಣೆ ಹಿಂಸೆಯಂತಹ ಸಂಗತಿಗಳೇ ಕಾರಣವಾಗಿವೆ. ಇದನ್ನು ಮೌನ ಗೌರಿ ವ್ರತವನ್ನು ನೋಡಿದರೆ ತಿಳಿಯುತ್ತದೆ. " ಈ ಮೌನ ಗೌರಿ ವ್ರತವನ್ನು ತಾಯಂದಿರ ಮೂಲಕ ನವ ಪೀಳಿಗೆಗೆ ತಿಳಿಸಿಕೊಡುವುದು ಈ ಲೇಖನದ ಉದ್ದೇಶ . ... ಸಂಪ್ರದಾಯದಿಂದ ಬಂದಿರುವ ಮೌನ ಗೌರಿ ವ್ರತ ಇದು ಮರೆಯಾಗುತ್ತಿರುವುದು ವಿಷಾದನೀಯ ನಮ್ಮ ಸಂಪ್ರದಾಯ ಸಂಸ್ಕೃತಿ, ಧರ್ಮಗಳು ಉಳಿಯಲು ಇಂದು ಶ್ರಮವಹಿಸಬೇಕಾಗಿದೆ. ಸದಾಚಾರ, ಸತ್ಸಂಪ್ರದಾಯಗಳು ಇಂದು ನಿರಾಯಾಸದಿಂದ ಕಣ್ಮರೆಯಾಗುತ್ತಿರುವುದು ದುಃಖದ ಸಂಗತಿ. ನಮ್ಮ ಅಜ್ಜಿ ಹೇಳುತ್ತಿದ್ದರು ತಮ್ಮ ಅಜ್ಜಿಯ ಕಾಲದಿಂದಲೂ ಮೌನ ಗೌರಿ ವ್ರತ ಆಚರಣೆಯು ನಡೆದು ಬಂದಿದೆಯಂತೆ, ಈ ವ್ರತವು ನಮ್ಮ ತಾಯಿಯಿಂದ ನಮಗೂ ನಮ್ಮ ಮಕ್ಕಳಿಗೂ ಮಾಡಿಸಲ್ಪಟ್ಟಿತು. ಸುಮಾರು ೨೦೦ ವರ್ಷಕ್ಕೂ ಹೆಚ್ಚು ಹಿಂದಿನಿಂದ ನಡೆದು ಬಂದಿರುವ ಸದುದ್ದೇಶ, ಸಂತ್ಸಪ್ರದಾಯ ಹೊಂದಿರುವ ಈ ಮೌನ ಗೌರಿ ವ್ರತ ನಮ್ಮ ಮುಂದಿನ ಪೀಳಿಗೆಗೂ ಉಳಿಯಬೇಕು ಹಾಗೆ

ಉಳಿದು ಬೆಳೆದು ಬರಬೇಕಾಗಿದೆ. ಇದು ಬರಬೇಕಾದರೆ ಎಲ್ಲಾ ತಾಯಂದಿರೂ ಈ ವ್ರತದತ್ತ ಗಮನ ಕೊಟ್ಟು ತಮ್ಮ ಹೆಣ್ಣು ಮಕ್ಕಳಿಂದ ಮಾಡಿಸಬೇಕು. ಮಗು ಮಾತನಾಡುವುದಿಕ್ಕೆ ಪ್ರಾರಂಭ ಮಾಡುತಿದ್ದಂತೆಯೇ ಇವರ ದೇವರ ನಾಮಸ್ಮರಣೆಯ ಅಧಿಕಾರವನ್ನು ಪಡೆಯುತ್ತದೆ. ಹಾಗೆ ಊಟ (ಆಹಾರ) ಪ್ರಾರಂಭದಿಂದಲೇ ನೈವೆದ್ಯ, ವೈಶ್ವದೇವ, ಬಲಿಹರಣ ಶಾಸ್ತ್ರೀಯ ಸದನಕ್ಕೆ ಅರ್ಹವಾಗುತ್ತದೆ. ಎರಡನೇ ವರ್ಷಕ್ಕೆ ಹೆಣ್ಣು ಮಗುವಿಗೆ ಮದುವೆ ಮಾಡಬೇಕು ಎಂಬುವುದು ಶಾಸ್ತ್ರವಿಧಿ. ಆ ವಯಸ್ಸಿಗಾಗಲೇ ಕನ್ಯೆ, ಗುರುಹಿರಿಯರಲ್ಲಿ, ಭಕ್ತಿ ದೇವರಲ್ಲಿ ಅನನ್ಯ ನಂಬಿಕೆ ಪೂಜೆ ಸದಾಚಾರ ಮುಂತಾದವುಗಳನ್ನು ಕಲಿತಿರಬೇಕು. ಇತ್ತೀಚೆಗೆ ಬಾಲ್ಯ ವಿವಾಹ ಕಡಿಮೆಯಾಗಿದ್ದರು ಸಂಪೂರ್ಣ ನಶಿಸಿಹೋಗಿಲ್ಲ. ಇದನ್ನು ೫ ವರ್ಷದ ಕನ್ಯೆಯರು ಮಾಗ ಶುದ್ಧಿ ಪಾಡ್ಯದಿಂದ ಪಾಲ್ಗುಣ ಶುದ್ಧ ಪಾಡ್ಯದವರೆಗೂ ಪ್ರತಿ ನಿತ್ಯ ಅರುಣೋದಯದಲ್ಲಿ ಮೌನದಿಂದ ಎದ್ದು ಮನಸ್ಸನ್ನು ಭಗವಂತನಲ್ಲಿರಿಸಿ ಗಂಗೆ ದಡಕ್ಕೆ (ನದಿತೀರಕ್ಕೆ) ಹೋಗಿ ಮುಡಿಯುಟ್ಟು. ತುಳುಸು ಪೂಜೆ ಐದು ಕೊಂಬುಗಳಿದ ಹಸಿ ಹರಿಶಿನ ಕೊಂಬನ್ನು ಇಟ್ಟುಕೊಂಡು. ಅರಿಶಿನ ಕೊಂಬುಗಳೇ ಗೌರಿಯೆಂದು ಅನುಸಂಧಾನ ಮಾಡಕೊಂಡು ಅಭಿಷೇಕ ಮಾಡಿ. ಹೂವು ಐದು ತುರುಬೇ ಹೂವು ಗೆಜ್ಜೆ ವಸ್ತ್ರಧರಿಸಿ ದೀಪ, ಧೂಪ ನೈವೇದ್ಯ ಸಂದರ್ಭೋಚಿತ ದೇವರ ನಾಮಗಳನ್ನು ಹೇಳುತ್ತಾ ಪೂಜೆ ಮಾಡಬೇಕು. ಪೂಜೆ ಮುಗಿಸಿ ಸೂರ್ಯನ ಬರುವಿಕಯನ್ನು ಕಾದಿದ್ದು ಉದಯದ ನಂತರ ಐದು ಮಂತ್ರಾಕ್ಷತೆ, ಸೂರ್ಯನಿಗೆ ಹಾಕಿ. ನಮಸ್ಕರಿಸಿ ನಂತರ ಮಾತನಾಡಬೇಕು ಅಂದಾಗ ಮಾತ್ರ ಗೌರಿ ಪೂಜೆಯಾಗುತ್ತದೆ. ಹಾಗೆ ಈ ಕೆಳಕಂಡ ನಿಧಿ – ನಿಷೇಧಗಳನ್ನು ಒಳಗೊಂಡಿದೆ

- ಹಗಲು ಹಾಲು, ರಾತ್ರಿ ಮೊಸರು ತನ್ನಬಾರದು. ಮೌನವು ಈ ವ್ರತದ ಪ್ರಧಾನ ಆಚರಗೆ ಊಟ ಮಾಡುವಾಗ ಮೌನವಾಗಿದ್ದು, ನಂತರ ಸೂರ್ಯನಿಗೆ ಐದು ಕಾಲು ಮಂತ್ರಾಕ್ಷತೆ ಹಾಕಿ ನಮಸ್ಕರಿಸಿ ಮಾತನಾಡಬೇಕು.
- ಸೂರ್ಯಸ್ಥದ ನಂತರ ಊಟ ಮಾಡಬಾರದು, ಮೂರು ಹೊತ್ತು ಊಟ ಮಾಡಬಾರದು.
- ಐದು ವರ್ಷ ಅಂದರೆ ಐದು ಮಾಘಮಾಸ ಪೂಜೆ ಮಾಡಬೇಕು.
- ಕೆಲವು ದವಸ ದಾನ್ಯಗಳನ್ನು ಧಾನ ಮಾಡಬೇಕು.

ಹಾಗೆ ಇದನ್ನು ನಾನು ನನ್ನ ಸಹೋದರಿಯರು ಆಚರಿಸಿದ್ದೇವೆ". (ಶಾಂತಾರಮೋ–ಮಾಚಾರ್ಯ, ೨೦೦೬, ಪುಟ.೮,೯,೧೦,೧೩) ಹೆಣ್ಣಿನ ಕಠೀಣತೆ ಮತ್ತು ಬಾಲ್ಯ ವಿವಾಹ ಪದ್ಧತಿಗಳು ಉಳಿದುಕೊಂಡು ಬಂದಿರುವುದಕ್ಕೆ ಆದರ್ಶವಾಗಿ ನಿಲ್ಲುವುದು ಕಂಡುಬರುತ್ತದೆ.

ಹಾಗೂ ಸವಾಕು ಎನ್ನುವಂತ ಕೇವಲ ಹೆಣ್ಣಿಗೆ ಮಾತ್ರ ಈತರನಾಗಿ ಪೂಜಾ ವ್ರತಗಳ ಮೂಲಕ ಹೆಣ್ಣಿಗೆ ಸಂಪ್ರದಾಯವನ್ನು ಅನುಸರಿಸಿಕೊಂಡು ಹೊರಡುವ ಅನಿವಾರ್ಯತೆ ಸೃಷ್ಠಿಮಾಡಿರುವುದು ಇದರಲ್ಲಿ ಕಂಡುಬರುತ್ತದೆ. ಹೆಣ್ಣಿನಿಂದ ಹೆಣ್ಣಿಗೆ ಭೋದನೆ ಮಾಡಿಸಿರುವುದು ಪುರುಷ ಪಧಾನತೆಯ ಪರೋಕ್ಷ ನೆಲೆಯಲ್ಲಿ ತಂತ್ರಹೂಡಿರುವುದು ವ್ಯಕ್ತವಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕೆಲವು ಪೂಜೆಗಳನ್ನು ಉದಾಹರಿಸಬಹುದಾದರೆ. ಗೌರಿ ವ್ರತ, ಶುಕ್ರ ಗೌರಿ, ತುಳಸಿ ಪೂಜೆ, ತುಳಸಿ ಮದುವೆ, ಶ್ರಾವಣ ಶುಕ್ರವಾರ, ಅಷ್ಟಲಕ್ಷ್ಮಿ, ಭೀಮನ ಅಮವಾಸ್ಯೆ ಮುಂತಾದ ಖಾಸಗಿ ಸಂಪ್ರದಾಯಗಳು ನಂಬಿಕೆಯಿಂದಾಗಿ ದಿನ, ವಾರ, ತಿಂಗಳ, ಮುಖಾಂತರ ಮುಂದುವರೆಯುತ್ತಿರುವುದು ಕರಿಡುಬರುತ್ತದೆ. ಆದರೆ ಇವು ಹೆಣ್ಣಿನ ಹಿತದೃಷ್ಠಿಯಿಂದ ಅಲ್ಲ. ಈ ಆಚರಣೆಗಳಿಂದ ಹೆಣ್ಣಿಗೆ ಒಳ್ಳೆಯದಾಗುತ್ತದೆ ಅನಿಷ್ಟ ನಿವಾರಣೆಯಾಗುತ್ತದೆ ಶ್ರೇಯಸ್ಸು ಲಭಿಸುತ್ತದೆ. ವ್ರತ ಪೂಜೆ ಮುತ್ಯೆದೆ ಭಾಗ ದೊರೆಯುತ್ತದೆ ಎಂದು ಹೇಳಲಾಗುತ್ತದೆ. ಭೀಮನ ಅಮವಾಸ್ಯೆಯೆಂದು ಗಂಡನಿಗೆ ಪೂಜೆ ಮಾಡಿ ಪಾದ ತೊಳೆದರೆ ಹೆಂಡತಿ ಮುತ್ತೈದೆಯಾಗಿರುತ್ತಾಳೆ. ಗಂಡನ ಆಯುಷು ವೃದ್ಧಿಯಾಗುತ್ತದೆ ಎನ್ನುವ ನಂಬಿಕೆ. ಬಿತ್ತಿ ಭೀಮನ ಅಮವಾಸ್ಯೆಯೆಂದು ಗಂಡನಿಗೆ ಪೂಜೆ ಮಾಡುವುದು, ಪಾದ ತೊಳೆಯುವುದು, ನಮಸ್ಕರಿಸುವುದು, ಮುಂತಾದ ಧಾರ್ಮಿಕ ವಿಧಿಗಳು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಇಂದಿನ ಆಧುನಿಕ ಜಗತ್ತಿನಲ್ಲಿ ಮುಂದುವರಿಯುತ್ತಿವೆ. ಇದಕ್ಕೆ ಕಾರಣ ಪುರುಷ ಪ್ರಧ್ಯನತೆಯು ಹೆಣ್ಣಿಗೆ ಸೃಷ್ಠಿಮಾಡಿರುವ ಅಭದ್ರತೆಯಾಗಿದೆ.

ಈ ತೆರನಾದ ಸಂಗತಿಗಳು ಹೆಣ್ಣನ್ನು ಗಂಡಿನ ಅಧೀನ ಎಂದು ಗಂಡಿನ ಶ್ರೇಷ್ಠತೆ ಮತ್ತು ಪುರುಷ ಪ್ರಧಾನತೆಗಾಗಿ ದುಡಿಯಬೇಕು ಎನ್ನುಂತಹ ಸಂಗತಿಗಳನ್ನು ಸ್ಥಿರಿಕರಿಸುತ್ತವೆ. ಜೊತೆಗೆ ಹೆಣ್ಣಿಗೆ ದಾಸ್ಯತ್ವದ ನೆಲೆಯಲ್ಲಿ ಇರಲು ಕಾರಣವಾಗುತ್ತವೆ. ಹೆಣ್ಣು ಕುಟುಂಬದ ಅಭಿವೃದ್ಧಿಗಾಗಿ, ಕೀರ್ತಿಗಾಗಿ, ಔನತ್ಯಕ್ಕಾಗಿ ಈಕೆ ತ್ಯಾಗಿಯಾಗಬೇಕು. ದುಡಿಯಬೇಕು, ಅದರಲ್ಲಿಯೇ ಆಕೆಯ ಶ್ರೇಯಸ್ಸಿಗೆ ಎಂದು ಭೋಧಿಸುತ್ತವೆ. ಈ ಎಲ್ಲವುಗಳನ್ನು ನೋಡಿದರೆ ಹೆಣ್ಣು ಹೆಣ್ಣಿಗಾಗಿ ಏನ್ನನ್ನು ಮಾಡುವುದಿಲ್ಲ ಎನ್ನುವ ಸಂಗತಿಗಳು ಸ್ಪಷ್ಟವಾಗಿ ಕಂಡು ಬರುತ್ತವೆ.

ಈ ತೆರನಾದ ಸಂಪ್ರದಾಯ ಆಚರಣೆಗಳು ಹೆಣ್ಣನ್ನು ಆಳುವ ಮತ್ತು ತುಳಿಯುವ ಪುರುಷನಿಗೆ ಅಧೀನಗೊಳಿಸಿ ಹೆಣ್ಣಿನಲ್ಲಿ ಕೀಳರಿಮೆಯಲ್ಲಿ ಇರಿಸುತ್ತದೆ. ಇದರಿಂದ ಹೆಣ್ಣು ಮುಕ್ತವಾಗಬೇಕಾಗಿದೆ. ಹೆಣ್ಣಿಗೆ ವಿನಾಶಕಾರಿಯಾದ ಸಂಪ್ರದಾಯಗಳಿಂದ ಮುಕ್ತವಾಗಬೇಕಿದೆ, ಮತ್ತು ಈತರನಾದ ಆಚರಣೆಗಳನ್ನು ತಿರಸ್ಕರಿಸಬೇಕಿದೆ.

ಬಹುತೇಕ ಖಾಸಗಿಯೊಳಗಡೆ ನಡೆಯುವ ಪೂಜೆ, ವ್ರತ ಸಂಪ್ರದಾಯಗಳಲ್ಲಿ ಸ್ತ್ರೀ ದೇವತೆಯನ್ನು ಆರಾಧಿಸುವುದು ಕಂಡು ಬರುತ್ತದೆ. ಹೆಚ್ಚಾಗಿ ಸ್ತ್ರೀಯು ಪಾಲ್ಗೊಳುವುದರಿಂದ

ಸಂತಾನಕ್ಕಾಗಿ ಮತ್ತೊಂದು ಕಡೆ ಐಶ್ವರ್ಯ, ಸಂಪತ್ತು ಸಮೃದ್ಧಿಗಾಗಿ ಪೂಜಿಸಲಾಗುತ್ತದೆ ಎಂದರೆ, ಈ ಎಲ್ಲದರಲ್ಲಿ ಯಾವುದೇ ಒಂದು ಪ್ರತಿಫಲವು ಹೆಣ್ಣಿನ ಸ್ವಂತಕ್ಕಾಗಿಯಲ್ಲ ಎಂಬುದನ್ನು ಗಮನಿಸಿಬೇಕು ಯಾಕೆಂದರೆ ಈ ಯಾವುದರ ಮೇಲೆ ಹೆಣ್ಣಿಗೆ ಒಡೆತನವಿಲ್ಲ. ಗಂಡನ್ನು ಸೇರಿದಂತೆ ಎಲ್ಲವು ಪುರಷ ವರ್ಗದ ಅನುಕೂಲಕ್ಕಾಗಿಯೆ ಇವೆ. ಆದುದರಿಂದ ಈ ತೆರನಾದ ಸಂಪ್ರದಾಯ ಆಚರಣೆಗಳು ಹೆಣ್ಣಿಗೆ ಭಾಧ್ಯತೆಯನ್ನು ಸೃಷ್ಠಿ ಮಾಡಿ, ಅದರ ಹಕ್ಕು ಗಂಡಿಗೆ ಉಪಯೋಗವಾಗುವಂತೆ ಮುನ್ನಡೆಯುತ್ತಿವೆ. ಹೀಗಾಗಿ ಸಂಪ್ರದಾಯ ಆಚರಣೆಗಳು ಯಾವುದೇ 'ಅನಿಷ್ಠ' ನಿವಾಹರಣೆಯ ಉದ್ದೇಶವನ್ನು ಹೊಂದಿಲ್ಲ, ಬದಲಾಗಿ ಹೆಣ್ಣನ್ನೇ ಅನಿಷ್ಟವಾಗಿ ಚಿತ್ರಿಸಲಾಗಿದೆ.

ಹೆಣ್ಣಿಗೆ ಜೈವಿಕತೆಯನ್ನಾಧರಿಸಿ ನಡೆದುಕೊಂಡು ಬರುತ್ತಿರುವ ಈ ತೆರನಾದ ಸಂಪ್ರದಾಯ ಆಚರಣೆಗಳು ಲಿಂಗ ತಾರತಮ್ಯ, ಲಿಂಗಾಧಾರಿತ ಶ್ರಮ ವಿಭಜನೆ, ಲಿಂಗಾಧಾರಿತ ಅಸಮಾನತೆ, ಲಿಂಗಾಧಾರಿತ ಅಧಿಕಾರ ಹಂಚಿಕೆ ಮಾಡಲಾಗುತ್ತದೆ. ಹಾಗಾಗಿ ಮುಂದಿನ ಅಧ್ಯಾಯದಲ್ಲಿ ಸಂಪ್ರದಾಯ ಆಚರಣೆಗಳು ಲಿಂಗಾಧಾರಿತ ಶ್ರಮ ವಿಭಜನೆ ಮತ್ತು ಅಸಮಾನತೆ ಆಧಾರಗಳಲ್ಲಿ ಅಧಿಕಾರ ಹಂಚಿಕೆಯಂತಹ ಸಂಗತಿಗಳನ್ನು ಮುಂದಿನ ಅಧ್ಯಯದಲ್ಲಿ ನೋಡಲಾಗಿದೆ.

ಅಡಿ ಟಿಪ್ಪಣಿ

೧. ವೆಂಕಟರಾಮಯ್ಯ ಟಿ., **'ಸಿಂಧೂರ ಸಂಯುಕ್ತ ಕರ್ನಾಟಕ'**, ೨೦೦೬, ಪು.೧೨

೨. ಅದೇ, ಪು.೧೨

೩. ಶರಣಪ್ಪ ಕ್ಷೇತ್ರಕಾರ್ಯ, ಸಂಡೂರು

೪. ಚೇತನ ಆರ್., '.........' ೧೯೯೫, ಪುಟ.೩೦

೫. ಅದೇ, ಪು.೩೦

೬. ರಾಜ್ಯ ಸಂಪನ್ಮೂಲ ಕೇಂದ್ರ ಕರ್ನಾಟಕ ೨೦೦೫, **'ಅಮಾನವೀಯ ಆಚರಣೆಯಗಳ ದಾಖಲಾತಿ'**, ಪು.೨೯, ೩೦, ೩೧

೭. ಸುಮಿತ್ರಬಾಯಿ ಬಿ.ಎನ್., ೧೯೯೫, **'ಸ್ತ್ರೀವಾದಿ ಪ್ರವೇಶಿಕೆ'**, ಪುಟ.೧೬

೮. ಭಾನುಮತಿ ವೈಸಿ, ೨೦೦೩, **'ಜಾನಪದ ಅಂತರ್ಯ'**, ತಳಗಬಾರಿ ಪ್ರಕಾಶನ **ಮೈಸೂರು** ಪು.೩,೪

೯. ಅದೇ, ಪು.೪

೧೦. ಸುನಂದಮ್ಮ ಆರ್, ೨೦೦೫, **'ಮಹಿಳಾ ಸಂಸ್ಕೃತಿ'**, ಸಮಾತ ಅಧ್ಯಯನ ಕೇಂದ್ರ **ಮೈಸೂರು** ಪು.೧೪೦

೧೧. ಸಂಧ್ಯಾರೆಡ್ಡಿ ಕೆ.ಆರ್.(ಸಂ), ೨೦೦೫, **'ಕರ್ನಾಟಕ ಜಾನಪದ'** ಪು.೧೯

೧೨. ವೀರೇಶ ಬಡಿಗೇರ್, ೧೯೯೯, **'ಗುಳ್ಳವ ಆಚರಣೆ ವಿಶ್ಲೇಷಣೆ'**, ಮಯ ಪ್ರಕಾಶನ, ಕಮಲಾಪುರ ಪು.೧

೧೩. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨, **'ಅಕ್ಕಮ್ಮನ ಆಚರಣೆ'**, ಕನ್ನಡ ವಿ.ವಿ. ಹಂಪಿ ಪು.೨

೧೪. ಅಗ್ರಹಾರ ಕೃಷ್ಣಮೂರ್ತಿ, ೧೯೭೬, **'ಬೆಳದಿಂಗಳಪ್ಪನ ಪೂಜೆ'**, ಮುಂಗಾರು ಪ್ರಕಾಶನ ಬೆಂ. ಪು.೧೮

೧೫. ಸುನಂದಮ್ಮ ಆರ್, ೨೦೦೫, **'ಮಹಿಳಾ ಸಂಸ್ಕೃತಿ'**, ಸಮಾತ ಅಧ್ಯಯನ ಕೇಂದ್ರ ಪು.೧೪೨

೧೬. ಶಾಂತಾರಮೋಚಾರ್ಯ, ೨೦೦೬, **'ಸ್ತ್ರೀಯರ ನಿತ್ಯಕರ್ಮ ಮತ್ತು ಇತರ ವಿಷಯ'**, ಪು.೮,೯,೧೦,೧೨

* * *

ಅಧ್ಯಾಯ ಆರು

ಸಂಪ್ರದಾಯ ಆಚರಣೆಗಳು: ಲಿಂಗಾಧಾರಿತ ಶ್ರಮವಿಭಜನೆ

೬

ಸಂಪ್ರದಾಯ ಆಚರಣೆಗಳು: ಲಿಂಗಾಧಾರಿತ ಶ್ರಮವಿಭಜನೆ

ಜೈವಿಕತೆಯನ್ನು ಆಧರಿಸಿ ನಡೆದ ತಾರತಮ್ಯಗಳಲ್ಲಿ ಶ್ರಮವಿಭಜನೆಯು ಒಂದು. ಈ ರೀತಿಯ ವಿಭಜನೆಯು ಸ್ತ್ರೀ-ಪುರುಷರ ನಡುವೆ ಶ್ರೇಷ್ಠ-ಕನಿಷ್ಠ, ಮೇಲು-ಕೀಳು ಎನ್ನುವ ಕಂದರಗಳನ್ನು ಸೃಷ್ಟಿಸಿದೆ. ಇದಕ್ಕೆ ಕಾರಣವಾಗಿರುವುದು ಹೆಣ್ಣಿನ ಜೈವಿಕತೆಗೆ ಸಂಬಂಧಿಸಿದ ಸಂಪ್ರದಾಯ ಆಚರಣೆಗಳು. ಯಾಕೆಂದರೆ ಸಂಪ್ರದಾಯ ಮಾತಿನ ಮೂಲಕ ವ್ಯಕ್ತವಾದರೆ ಆಚರಣೆ ಕ್ರಿಯಾ ರೂಪದಲ್ಲಿ ಇರುತ್ತದೆ. ಸಂಪ್ರದಾಯ ಕೆಲವು ಗುಣ, ಪಾತ್ರ ನಡಾವಳಿಕೆ, ಮನೋಭಾವನೆಯನ್ನು ಸೃಷಿ ಮಾಡಿದರೆ, ಆಚರಣೆ ಅದನ್ನು ಅನುಸರಿಸಿಕೊಂಡು ಹೋಗುವಂತೆ ಇರುತ್ತದೆ. ಇದಕ್ಕೆ ಉದಾಹರಣೆಯಾಗಿ ಸಂಪ್ರದಾಯ ಮಾತುಗಳಲ್ಲಿ ಕಂಡು ಬರುವ 'ಹೆಣ್ಣಾದಳು ಮನೆಯಲ್ಲಿದ್ದು ಕೆಲಸ ಮಾಡಬೇಕು., ಗಂಡಾದವನು ಹೊರಗಡೆ ದುಡಿದು ತರಬೇಕು, ಅಂದಾಗ ಮಾತ್ರ ಹೆಣ್ಣು-ಗಂಡು ಎನಿಸಿಕೊಳ್ಳುತ್ತಾರೆ' ಎನ್ನುವ ಸಂಪ್ರದಾಯಕ ಮಾತುಗಳಿಂದ ಮತ್ತು ಅದನ್ನು ಅನುಸರಿಸುವ ರೂಢಿ ಪದ್ಧತಿ, ಸಾಮಾಜಿಕ, ಸಂಸ್ಕೃತಿಕ ಸಂಬಂಧಗಳ ಮೂಲಕ ತಿಳಿದು ಬರುತ್ತಿದೆ.

"ಲಿಂಗಾಧಾರಿತ ಶ್ರಮವಿಭಜನೆ ಎಂದರೆ ಸ್ತ್ರೀ-ಪುರುಷರ ನಡುವಿನ ಜೈವಿಕ ವ್ಯಾತ್ಯಾಸದ ಆಧಾರದ ಮೇಲೆ ಶ್ರಮ ಹಂಚಿಕೆಯಾಗಿರುವುದನ್ನು ಲಿಂಗಾಧಾರಿತ ಶ್ರಮವಿಭಜನೆ" ಎಂದು ಕರೆಯುತ್ತಾರೆ. (ಹೇಮಲತಾ ಎಚ್.ಎಂ., ಪು. ೩೪, ೨೦೦೪). ಈ ತೆರನಾದ ಶ್ರಮವಿಭಜನೆಯನ್ನು ಸ್ತ್ರೀ-ಪುರುಷ ಜೈವಿಕ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಶ್ರಮ ಹಂಚಿಕೆಯನ್ನು ಮಾಡಿವೆ. ಅದು ಹೇಗೆಂದರೆ ಹೆಣ್ಣಿನ ಸಹಜ ಜೈವಿಕ ಸಂಗತಿಯಾದ ಸಂತಾನೋತ್ಪತ್ತಿ ಸಂಗೋಪನೆ, ಪಾಲನೆ, ಪೋಷಣೆ, ರಕ್ಷಣೆ ಜೊತೆಗೆ ಗೃಹಕೃತ್ಯದ ಸಂಬಂಧಿಸಿದ ಸಂಗತಿಗಳನ್ನು ಹೆಣ್ಣಾದವಳೆ ಮಾಡಬೇಕು, ಅಂದಾಗ ಮಾತ್ರ ಹೆಣ್ಣಿಗೆ ಶೋಭೆ ಎಂದು ಹೇಳಲಾಗಿದೆ. ಗಂಡಾದವನು ಹೊರಗಿದ್ದು, ದುಡಿದು, ವ್ಯವಹಾರಗಳನ್ನು ನೋಡಿಕೊಂಡು, ನಿರ್ವಹಿಸಬೇಕು, ಅಂದಾಗ ಮಾತ್ರ ಗಂಡಸ್ಸಿಗೆ ಒಂದು ಬೆಲೆ ಎನ್ನುವ ಸಂಪ್ರದಾಯಿಕ ಸಂಗತಿಯನ್ನು ಸಮಾಜದಲ್ಲಿ ಸ್ವೀಕರಿಸಲಾಗಿದೆ. ಹೀಗಾಗಿ ಇಂದಿಗೂ ಗಂಡು-ಹೆಣ್ಣುಗಳ ನಡುವೆ ಲಿಂಗಾಧಾರಿತ ಶ್ರಮವಿಭಜನೆಯು ಕಾಣಬರುತ್ತಿದೆ. ಜೈವಿಕ ಸಹಜ ಸಂಗತಿಯನ್ನು

ಆಧಾರವಾಗಿಟ್ಟುಕೊಂಡು ಶ್ರಮವಿಭಜನೆಗೊಳಿಸಿರುವುದು ಸಂಪ್ರದಾಯಿಕ ಆಚರಣೆಗಳ ಎಂಬುದು ನನ್ನ ಊಹೆ. ಅದನ್ನು ಅಧ್ಯಯನದ ಮೂಲ ಸ್ಪಷ್ಟಗೊಳಿಸಿಕೊಳ್ಳಲು ಪ್ರಯತ್ನಿಸಿದ್ದೇನೆ.

ಸಂಪ್ರದಾಯ ಭಾಗವಾಗಿ ಹೆಣ್ಣಿಗೆ ಹೇರಿರುವ ಕೆಲಸಗಳಾದ ನೀರು ತರುವುದು, ಅಡುಗೆ ಮಾಡುವುದು ಆಹಾರ ಪದಾರ್ಥಗಳನ್ನು ಶೇಖರಿಸುವುದು, ಮಕ್ಕಳ ಪಾಲನೆ, ಪೋಷಣೆ, ವೃದ್ಧರ ಹಾಗೂ ಜಾನುವಾರಗಳ ಪಾಲನೆ ಇವುಗಳು ಹೆಣ್ಣಿನ ಜವಾಬ್ದಾರಿಗಳೆಂದು ನಿಗದಿಕರಿಸಲಾಗಿದೆ. ಈ ರೀತಿಯಾಗಿ ಸಮಾಜದಲ್ಲಿ ಹೆಣ್ಣಿನ ಪಾತ್ರಗಳನ್ನು ಸ್ಥಿರಿಕರಿಸಿದರೆಂದರೆ ಗಂಡು-ಹೆಣ್ಣಿನ ಮಧ್ಯ ಲಿಂಗತಾರತಮ್ಯ ಶ್ರಮವಿಭಜನೆ ಉಂಟಾಗಿರುವುದು ಕಂಡುಬರುತ್ತದೆ. ಸಂಪ್ರದಾಯ ಆಚರಣೆ ಬಹುಮುಖ್ಯವಾಗಿ ಲಿಂಗಕ್ಕೆ ಲಿಂಗತ್ವವನ್ನು ಸೃಷ್ಠಿಮಾಡಿಸುತ್ತಿವೆ. ಲಿಂಗ ಎನ್ನುವುದು ಜೈವಿಕ ಸ್ಥಿತಿಯಾದರೆ ಲಿಂಗತ್ವ ಎನ್ನುವುದು. ಸಂಪ್ರದಾಯದಂತಹ ಸಂಗತಿಗಳ ಮೂಲಕ ಹೆಣ್ಣಿಗೆ ನಿರ್ದೇಶನ, ನಿಯಂತ್ರಣದಂತಹ ಪಾತ್ರಗಳನ್ನು ನಿರ್ವಹಿಸುತ್ತಿದೆ. ಲಿಂಗ ಮತ್ತು ಲಿಂಗತ್ವದ ಮಧ್ಯೆ ಅಪಾರವಾದ ವ್ಯತ್ಯಾಸವಿದೆ.

'ಲಿಂಗ' (ಸೆಕ್ಸ್) ಮತ್ತು ಲಿಂಗತ್ವ (ಜೆಂಡರ್) ಈ ಎರಡು ಪದಗಳ ನಡುವಿನ ಭಿನ್ನತೆಯನ್ನು ಮೊದಲ ಬಾರಿಗೆ ವಿವರಿಸಿದವರು ಆನ್ನೆ ಒಕ್ಲೆ (Anne Okley) ವಿಚಾರಗಳ ಸ್ಪಷ್ಟತೆಗೆ ಇದೊಂದು ಉಪಯುಕ್ತ, ವಿಮರ್ಶಾತ್ಮಕ ವಿಧಾನವಾಗಿದ್ದು, ಈಗ ಇದನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗುತ್ತಿದೆ. ಈ ಭಿನ್ನತೆಗಳ ಪ್ರಕಾರ 'ಲಿಂಗ' (ಸೆಕ್ಸ್) ಎನ್ನುವುದು ಜೈವಿಕವಾಗಿದ್ದು, ಲಿಂಗತ್ವ ಎನ್ನುವುದು ಈಗಾಗಲೇ ತಿಳಿದಿರುವಂತೆ ಸಮಾಜಗಳಲ್ಲಿ ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ (ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ) ನಿರ್ಧರಿಸಲ್ಪಡುತ್ತದೆ. 'ಜೈವಿಕ' ಮತ್ತು ಭಿನ್ನತೆಗಳು 'ಸ್ತ್ರೀ' ಮತ್ತು 'ಪುರುಷರ' ಲಿಂಗವನ್ನು ನಿರ್ಧರಿಸುತ್ತದೆ. ಆದರೆ ಲಿಂಗತ್ವವನ್ನು ನಿರ್ಧರಿಸುತ್ತಿರುವುದು ಸಂಪ್ರದಾಯ ಆಚರಣೆ ಆಗಿವೆ. ಪುರುಷ ಮತ್ತು ಮಹಿಳೆಯರ ಗುಣಲಕ್ಷಣ ಮತ್ತು ಪಾತ್ರಗಳನ್ನು ಸಂಪ್ರದಾಯ ಆಚರಣೆಗಳು ನಿರ್ಧರಿಸುತ್ತಿರುವುದರಿಂದ ಲಿಂಗತಾರತಮ್ಯ ಶ್ರಮವಿಭಜನೆ ಕಂಡುಬರುತ್ತದೆ.

'ಲಿಂಗ'ವನ್ನು 'ಲಿಂಗತ್ವ'ಕ್ಕೆ ಒಳಪಡಿಸಿದ ಅಂಶಗಳು ಸಂಪ್ರದಾಯಿಕ ಆಚರಣೆಗಳಲ್ಲಿ ಕಂಡು ಬರುತ್ತದೆ. ಇದಕ್ಕೆ ವಿವಾಹ, ತಾಯ್ತಿನ, ಹೆಣ್ಣುಗಂಡಿನ, ಸಂಬಂಧಗಳು ಸಮಾಜದಲ್ಲಿ ನೆಲೆಗೊಂಡಿರುವ ರೀತಿಯಲ್ಲಿ ನೋಡಬಹುದಾಗಿದೆ. ಸಂಪ್ರದಾಯಿಕ ಆಚರಣೆಗಳು ಲಿಂಗಾಧಾರಿತವಾದ ನೀರಿಕ್ಷೆಗಳನ್ನು ಬೆಳೆಸಿ, ಪೋಷಿಸಿ, ಹೆಣ್ಣಿನ ಜೀವನಕ್ಕೆ ಹೆಚ್ಚು ಗೃಹಕೃತ್ಯ ಮತ್ತು ಸಂತಾನೋತ್ಪತ್ತಿ, ಸಂಗೋಪನೆ ಕಾರ್ಯಗಳಾದ ಮಕ್ಕಳ ಲಾಲನೆ, ಪಾಲನೆ, ಪೋಷಣೆ, ರಕ್ಷಣೆ ಮುಂತಾದ ಗೃಹ ಸಂಬಂಧಿ ಕೆಲಸಗಳಿಗೆ ಹೆಣ್ಣನ್ನು ಸೀಮಿತಗೊಳಿಸಿರುವುದು ಕಂಡು ಬರುತ್ತಿದೆ.

ಲಿಂಗ ಸಂಬಂಧಿ ಶ್ರಮವಿಭಜನೆ ಪ್ರಾರಂಭಗೊಳ್ಳುವುದು ಮೊದಲು ಹೆಣ್ಣಿಗೆ ಕುಟುಂಬದಿಂದಲೇ ಈ ಕುಟುಂಬವನ್ನು "ಜೈವಿಕ-ಸಾಮಾಜಿಕ ಘಟಕ" ಎಂದು ಸಮಾಜಶಾಸ್ತ್ರಜ್ಞರು ಗುರುತಿಸುತ್ತಾರೆ. ಈ ಕುಟುಂಬ ಎನ್ನುವ ಸಾಮಾಜಿಕ ಸಂಸ್ಥೆಗೆ ಸಂಪ್ರದಾಯ ಆಚರಣೆಗಳು ಬೇರು ಬಿಟ್ಟಿರುತ್ತವೆ. ಹೀಗೆ ಬೇರುಬಿಟ್ಟಂತಹ ಸಂಪ್ರದಾಯಿಕ ಚಿಂತನೆಗಳು ಕ್ರಿಯಾ ರೂಪದಲ್ಲಿ ಆಚರಣೆಗೆ ಬಂದು ಅವು 'ಲಿಂಗತ್ವ'ವಾಗಿ ಪರಿವರ್ತನೆಗೊಂಡು ನಂತರ ಜೈವಿಕ ಆಧಾರದ ಮೇಲೆ ಹಲವು ಕೆಲಸಗಳನ್ನು ಗಂಡು-ಹೆಣ್ಣಿಗೆ ಶ್ರಮವಿಭಜನೆಯನ್ನು ಉಂಟು ಮಾಡುತ್ತವೆ. ಅದು ಹೇಗೆಂದರೆ ಮಗುವಿರುವಾಗಲೇ ಗಂಡು ಮಗುವಿಗೆ ಹೊರಗಡೆ ಆಟವಾಡಬೇಕು ಎಂದು ಧೈರ್ಯ, ಸಾಹಸ ಶೂರತನ ಮುಂತಾದ ಶ್ರಮಸಂಬಂಧಿ ಚಟುವಟಿಕೆಯಲ್ಲಿ ಗಂಡು ಮಗುವನ್ನು ಬೆಳೆಸಲಾಗುತ್ತದೆ. ಅದೇ ಹೆಣ್ಣು ಮಗುವಿಗೆ ಮನೆಯಲ್ಲಿ ಇದ್ದು ಕೆಲಸ ಮಾಡಬೇಕು. ತಾಯಿಯ ಜೊತೆಗೆ ಅಡುಗೆ ಕೆಲಸಕ್ಕೆ ಸಹಾಯಕಳಾಗಬೇಕು, ಪಾತ್ರೆ ತೊಳೆಯಬೇಕು, ಕಸಗೂಡಿಸಬೇಕು, ಮನೆ ಅಲಂಕಾರ ಮಾಡಬೇಕು, ಅಡಿಗೆ ಮಾಡುವುದು, ಮಕ್ಕಳನ್ನು ಎತ್ತಿಕೊಳ್ಳುವುದು, ಆಡಿಸುವುದು, ಮುಂತಾದ ಸಂಗತಿಗಳನ್ನು ಕೇಂದ್ರೀಕರಣವಾಗಿಟ್ಟುಕೊಂಡೇ ಸಾಮಾಜೀಕರಣಗೊಳಿಸಲಾಗುತ್ತದೆ. ನಯ, ನಾಜೂಕ, ನಾಚಿಕೆ, ಸಂಕೋಚಗಳನ್ನು ಮೌಲ್ಯಗಳಾಗಿ ಹೇಳಿ ಕೊಡಲಾಗುತ್ತದೆ. ಹೀಗಾದಾಗ ಮಾತ್ರ ಒಳ್ಳೆಯ ಸಂಸ್ಕಾರದಲ್ಲಿ ಬೆಳೆದಿದ್ದಾಳೆ ಎಂದು ನಿರ್ಧರಿಸಲಾಗುತ್ತದೆ.

ಮಗುವಿರುವಾಗಲೇ ಗಂಡು-ಹೆಣ್ಣಿನಲ್ಲಿ ಪಾತ್ರ ಹಂಚಿಕೆ ಜೊತೆಗೆ ಶ್ರಮ ಹಂಚಿಕೆಯನ್ನು ಸಂಪ್ರದಾಯ ಆಚರಣೆಗಳು ನಿರ್ವಹಿಸುತ್ತವೆ. ಉದಾಹರಣೆಯಾಗಿ ಎಲ್ಲಿ ಸಮುದಾಯಗಳಲ್ಲಿ ಹೆಣ್ಣು ದೊಡ್ಡವಳಾದ ಮೇಲೆ ಹೊರಗಡೆ ಹೋಗಬಾರದೆನ್ನುವ ಸಾಮಾಜಿಕ ನೀತಿಯಿದೆ. ಮನೆಯ ಅಲಂಕಾರ, ಗೃಹಸಂಬಂಧಿ ಚಟುವಟಿಕೆಗಳಾದ ಅಡುಗೆ ಮಾಡುವುದು, ಪಾತ್ರೆ ತೊಳೆಯುವುದು, ಮನೆಯಲ್ಲಿದ್ದುಕೊಂಡು ಕಸೂತಿ ಹಾಕಿಸುವುದು, ಬಟ್ಟೆ ಹೊಲಿಯುವುದು, ಈ ವಿದ್ಯೆಯನ್ನು ಮಹಿಳೆಯರಿಗೆ ಹೇಳಿಕೊಡುವುದು, ಕುಟುಂಬದಲ್ಲಿನ ಇತರ ಎಳೆಯ ಪ್ರಾಯದ ಹುಡುಗಿಯರಿಗೆ ಮನೆಗೆಲಸ ಕಲಿಸುವುದು ಮುಂತಾದ ಕಾರ್ಯಚಟುವಟಿಕೆಯಲ್ಲಿ ತೊಡಗಿಕೊಳ್ಳುವಂತೆ ಮಾಡಲಾಗುತ್ತದೆ. ಮುಂದೆ ಅದೇ ಸಂಪ್ರದಾಯಿಕತೆ, ಹೆಣ್ಣು ಮದುವೆಯಾದ ನಂತರವೂ ಮುಂದುವರಿಯುತ್ತದೆ. 'ಹೆಂಡತಿಯಾದವಳು, ಮನೆಯಲ್ಲಿದ್ದುಕೊಂಡು ಮನೆಯನ್ನು ಯಾವಾಗಲೂ ಸ್ವಚ್ಛವಾಗಿಟ್ಟುಕೊಂಡಿರಬೇಕು', 'ದುಡಿದು ಬಂದ ಗಂಡನಿಗೆ ನೀರು ಕೊಟ್ಟು ಊಟಕ್ಕೆ ನೀಡಬೇಕು', 'ಗಂಡನಿಗೆ ವಿಶ್ರಾಂತಿಗೆ ಅವಕಾಶ ನೀಡಬೇಕು'. ಹೆಂಡತಿಯಾದವಳು ಗಂಡನ ಮಾತು ಕೇಳಬೇಕು' ಎಂದು ಹೀಗೆ ಹತ್ತು ಹಲವು ಸಂಪ್ರದಾಯಿಕ ಮಾತುಗಳಿಂದ ಮೌಲ್ಯಗಳನ್ನು ಮಹಿಳೆಗೆ ಹೇಳಲಾಗಿದೆ.ಸಮಾಜದಲ್ಲಿ ಹೆಣ್ಣಿಗೆ ಸ್ಥಿರಮಾದರಿ ಪಾತ್ರಗಳೊಂದಿಗೆ ಲಿಂಗಾಧಾರಿತ ಶ್ರಮವಿಭಜನೆಯನ್ನು ಹೆಣ್ಣಿಗೆ ಗೊತ್ತಿಲ್ಲದಂತೆ

ಬಿತ್ತುತ್ತಿರುವುದು ಕಂಡು ಬರುತ್ತದೆ. ಹೀಗೆ ಸಂಪ್ರದಾಯ ಚಿಂತನೆಯ ಮೌಲ್ಯಗಳನ್ನು ಹೆಣ್ಣಿಗೆ ಹೇರುತ್ತ ಬಂದಿರುವುದರಿಂದಲೇ ಹೆಣ್ಣು ಬೆಳಗ್ಗೆ ಐದು ಗಂಟೆಯಿಂದ ರಾತ್ರಿ ೧೧ ಗಂಟೆಯವರೆಗೆ ಅವಿಶ್ರಾಂತವಾಗಿ ದುಡಿಯುವಂತೆ ಮಾಡಿದೆ. ಅದೇ ಗಂಡಿಗೆ ಹೇಳುವ ಸಂಪ್ರದಾಯಿಕ ಮಾತುಗಳಲ್ಲಿ ಗಂಡಸಾದವನ 'ಹೊರಗಡೆ ದುಡಿಯಬೇಕು', 'ಮನೆಯಲ್ಲಿ ಕುಳಿತುಕೊಳ್ಳಬಾರದು, 'ಗಂಡಸಿನ ಕೆಲಸವೇನಾದರೂ ಅಡುಗೆ ಮನೆಯಿಂದ ಹೊರಗಡೆ, ಗಂಡಸಾದವನು ದುಡಿದರೆ ಚೆನ್ನ' ಎಂದು ಹೇಳಲಾಗಿದೆ. ಈ ಸಂಗತಿಗಳನ್ನು ಆಧಾರವಾಗಿಟ್ಟುಕೊಂಡು, ಕೆಲಸವು ಗಾದೆ ಮಾತುಗಳನ್ನು, ಆಡು ಮಾತುಗಳನ್ನು ಸೃಷಿ ಮಾಡಲಾಗಿದೆ. ಅವುಗಳೆಂದರೆ 'ಹೆಂಗಸು ತಿರುಗಿ ಕೆಟ್ಟಳು, ಗಂಡಸು ಕೂತು ಕೆಟ್ಟ', 'ಹೆಂಗಸು ಗಂಡಸಿನಂತೆ ಆದರೆ ಮನೆ ಹಾಳು', 'ಉದ್ಯೋಗಂ ಪುರುಷ ಲಕ್ಷಣಂ', 'ಗಂಡಸಿನ ಕಾಲು ಹೊರಗಿದ್ದರೆ ಚೆನ್ನ ಹೆಂಡತಿಯ ಕಾಲು ಹೊಸ್ತಿಲೊಳಗೆ ಇದ್ದರೆ ಚೆನ್ನ" ಹೀಗೆ ಹಲವು ಸಂಪ್ರದಾಯಿಕ ಮಾತುಗಳನ್ನು, ಗಾದೆ ಮಾತುಗಳನ್ನು, ಜನಸಾಮಾನ್ಯರ ಬಾಯಿಯಲ್ಲಿ ಚಾಲ್ತಿಯಲ್ಲಿರಿಸುವ ಮುಖಾಂತರ ಲಿಂಗಾಧಾರಿತ ಶ್ರಮವಿಭಜನೆಗಳಿಗೆ ದಾರಿ ಮಾಡಿಕೊಡುತ್ತಿರುತ್ತವೆ.

ಈ ಕಾರಣದಿಂದಾಗಿ ಗಂಡಸಿಗೆ ಮೌಲ್ಯ ಮತ್ತು ಸಾರ್ವಜನಿಕ ಜಗತ್ತಿನಲ್ಲಿ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ. ಹೆಂಗಸಿಗೆ ಹಾಗಾಗುವುದಿಲ್ಲ. ಹೆಣ್ಣಿನ ಶ್ರಮ, ದುಡಿಮೆ ಮೌಲ್ಯರಹಿತವಾಗಿ ಬಿಡುತ್ತದೆ. ಇನ್ನೂ ಜೈವಿಕ ಸಹಜ ಕ್ರಿಯೆಯನ್ನು ಆಧಾರವಾಗಿಟ್ಟುಕೊಂಡು ಸೃಷ್ಟಿ ಮಾಡಿರುವ ಕೆಲಸಗಳ ಸ್ವರೂಪವನ್ನು ನೋಡಿದರೆ ಅದು ಹೆಣ್ಣಿಗೆ ನಿರಂತರವೆಂದು ಸ್ಥಿರೀಕರಿಸಿರುವುದು ಕಂಡುಬರುತ್ತದೆ. ಅದು ಹೇಗೆಂದರೆ ಜೈವಿಕ ಸಹಜ ಕ್ರಿಯೆಯಾದ ಸಂತಾನೋತ್ಪತ್ತಿ ಹಾಗೂ ತಿಂಗಳ ಋತುಚಕ್ರದಿಂದ ಅವಳು ದೈಹಿಕ ಶಕ್ತಿ ಕುಗ್ಗುತ್ತದೆ. ಇದರಿಂದ ಹೆಣ್ಣು ದುರ್ಬಲಗಳಾಗುತ್ತಾಳೆ. ಅವಳಿಗೆ ಹೆಚ್ಚು (ಶಕ್ತಿ) ಶ್ರಮದಾಯಕ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಎನ್ನುವಂತ ಮಿಥ್‌ಗಳ ಚಾಲ್ತಿಯಲ್ಲಿ ಇರುವಂತೆ ನೋಡಿಕೊಳ್ಳಲಾಗಿದೆ. ಹೀಗಾಗಿ ಹೆಣ್ಣು ಹಗುರಾದ ಕೆಲಸ ಮಾಡಲು ಸೂಕ್ತ ಎಂದು ಮನೆಕೆಲಸಗಳನ್ನು, ಮಕ್ಕಳ ಪಾಲನೆ, ಪೋಷಣೆಯಂತಹ ಕೆಲಸಗಳನ್ನು ಮಾಡಲು ನಿರ್ದೇಶಿಸಲಾಗಿದೆ. ಆದರೆ ಹೆಣ್ಣಿನ ಹಗುರವಾದ ಕೆಲಸಗಳಿಂದ, ಸೃಷ್ಟಿ ಮಾಡಿ ಹೇಳಿರುವ ಕೆಲಸಗಳಲ್ಲಿ ಅಧಿಕ ಶ್ರಮವನ್ನು ಬಯಸುತ್ತದೆ. ಜೈವಿಕ ಸಹಜ ಕ್ರಿಯೆಯನ್ನಾಧರಿಸಿ ಶೌಚ, ಅಶೌಚದ ಪರಿಗ್ರಹಿಕೆಯ ಹಿನ್ನೆಲೆಯನ್ನು ಇಟ್ಟುಕೊಂಡು ಹೆಣ್ಣನ್ನು ಮೈಲಿಗೆಂದು ಪರಿಗ್ರಹಿಸಿ, ಕೆಲವೇ ಕೆಲಸಗಳಿಗೆ ಮಾತ್ರ ಸೀಮಿತಗೊಳಿಸಿದ ಸಂಗತಿಯು ಸಂಪ್ರದಾಯ ಆಚರಣೆಯಲ್ಲಿ ಕಂಡು ಬರುತ್ತದೆ. ಉದಾಹರಣೆಗೆ: ಧಾರ್ಮಿಕ ಕಾರ್ಯಗಳಲ್ಲಿ ಸಹಾಯ ಕೆಲಸಗಳನ್ನು ನಿರ್ವಹಿಸಬಹುದು ಎಂದು ಯಾಕೆಂದರೆ ಆಕೆ(ಹೆಣ್ಣು) ಮುಟ್ಟಾಗುವುದರಿಂದ ಧಾರ್ಮಿಕ ಕಾರ್ಯಗಳಲ್ಲಿ ನಿಷೇಧ ಮತ್ತು ಆ ಕೆಲಸಗಳನ್ನು ಆಕೆ ಮಾಡಬಾರದೆಂದು ಮಿಥ್‌ನ್ನು

ಸೃಷ್ಟಿಮಾಡಿದೆ. ಆದರೆ ವಾಸ್ತವವಾಗಿ ನೋಡಿದರೆ ಕೆಲವು ಕೆಲಸಗಳನ್ನು ಗಂಡು-ಹೆಣ್ಣು ಇಬ್ಬರು ಮಾಡಬಹುದಾದ ಕೆಲಸಗಳು ಇರುತ್ತವೆ. ಸಂಪ್ರದಾಯಗಳ ಹೆಸರಿನಲ್ಲಿ ಹೆಣ್ಣಿಗೆ ಕೇವಲ ಗೃಹಕೃತ್ಯದಂತಹ ಕೆಲಸಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಉದಾಹರಣೆಗೆ; ಬಟ್ಟೆ ತೊಳೆಯುವುದು, ಕಸಗೂಡಿಸುವುದು, ಅಡುಗೆ ಮಾಡುವುದು, ಉಣಬಡಿಸುವುದು, ಮಕ್ಕಳನ್ನು ಮನೆಯಲ್ಲಿ ಅನಾರೋಗ್ಯಕ್ಕೆ ಈಡಾದವರನ್ನು ಉಪಚರಿಸುವುದು, ಮಕ್ಕಳನ್ನು ಆಡಿಸುವುದು, ಮನೆಯ ಸೂಕ್ತ ವಾತಾವರಣವನ್ನು ಶುಚಿಯಾಗಿಟ್ಟುಕೊಳ್ಳುವುದು. ಹೀಗೆ ನಾನಾತರನಾಗಿ ಗೃಹಸಂಬಂಧಿ ಕೆಲಸಗಳಿಗೆ ಸ್ಥಿರಗೊಳಿಸಿದೆ. ಮತ್ತು ಇವುಗಳನ್ನು ಹೆಣ್ಣಾದವಳೇ ಮಾಡಬೇಕೆಂದು, ಅದು ಹೆಣ್ಣಿನ ಕೆಲಸವೆಂದು ದೃಢೀಕರಿಸಿರುವುದು ಕಂಡುಬರುತ್ತದೆ.

ಇಂದಿನ ಜಾಗತೀಕರಣದಂತಹ ಸಂದರ್ಭದಲ್ಲಿ ಸಂಪ್ರದಾಯ ಆಚರಣೆಗಳಿಂದಾಗಿ ಉದ್ಯೋಗ ಅವಕಾಶಗಳಲ್ಲಿ ಹೆಣ್ಣಿಗೆ ಜೈವಿಕತೆಯನ್ನು ಆಧಾರವಾಗಿಟ್ಟುಕೊಂಡು ಶ್ರಮವಿಭಜನೆ ಮಾಡಿರುವುದು ಕಂಡುಬರುತ್ತದೆ. ಅದೇನೆಂದರೆ ಹೆಣ್ಣಿನ ಜೈವಿಕ ಸಹಜ ಕ್ರಿಯೆಯಿಂದಾಗಿ ಹೆಣ್ಣಿಗೆ ಶ್ರಮದಾಯಕ ಮತ್ತು ಜವಾಬ್ದಾರಿ ಕೆಲಸಗಳನ್ನು ಮಾಡಲು ಆಗುವುದಿಲ್ಲ ಎನ್ನುವ ಸಂಪ್ರದಾಯಿಕ ಚಿಂತನೆಯನ್ನು ಬಿತ್ತಿ, ಹೆಣ್ಣಿಗೆ ನರ್ಸ, ಅಂಗನವಾಡಿ ಕಾರ್ಯಕರ್ತೆ, ಅಂಗನವಾಡಿ ಸಹಾಯಕಿ, ಸ್ವಾಗತಕಾರಣಿ, ಗುಮಾಸ್ತೆ, ಟೀಚರ್ ದೂರವಾಣಿ ಆಪರೇಟರ್ ಮುಂತಾದ ಕೆಳ ಮತ್ತು ಮಧ್ಯಮ ದರ್ಜೆಯ ಕೆಲಸಗಳನ್ನು ಹೆಣ್ಣಿಗೆ ಸೂಕ್ತ ಉದ್ಯೋಗ ಎಂದು ಪರಿಭಾವಿಸಲಾಗಿದೆ. ಇಂತಹ ಕೆಲಸಗಳನ್ನು ಹೆಣ್ಣಿಗೆ ಸುರಕ್ಷಿತ ಹಾಗೂ ಈ ಕೆಲಸಗಳನ್ನು ಮುಗಿಸಿಕೊಂಡು ಬಂದು ಗೃಹಸಂಬಂಧಿ ಕೆಲಸಗಳನ್ನು ಮಾಡಬಹುದೆಂದು ಪರಿಭಾವಿಸಲಾಗಿದೆ. ಇಂತಹ ಕೆಲಸಗಳನ್ನು ಹೆಣ್ಣಿಗೆ ಸುರಕ್ಷಿತ ಹಾಗೂ ಈ ಕೆಲಸಗಳನ್ನು ಮುಗಿಸಿಕೊಂಡು, ಬಂದು ಗೃಹಸಂಬಂಧಿ ಕೆಲಸಗಳನ್ನು ಮಾಡಿಕೊಳ್ಳಬಹುದು ಎನ್ನುವ ಚಿಂತನೆಯಲ್ಲಿ ಪುರುಷ ತಂತ್ರ ಅಡಗಿರುವುದು ಕಂಡುಬರುತ್ತದೆ. ಅದು ಹೇಗೆಂದರೆ ಹೆಣ್ಣನ್ನು ಗೃಹಮುಖಿಯಾಗಿಸಿ ಅವರ ಚಲನಶೀಲತೆಯಲ್ಲಿ ನಿಬಂಧಿಸಲಾಗಿದೆ. ಧಾರ್ಮಿಕ ವಲಯದಲ್ಲಿ ಜೈವಿಕ ಮತ್ತು ಸಮುದಾಯವನ್ನಾಧರಿಸಿ ಮಡಿ, ಮೈಲಿಗೆ, ಕಲ್ಪನೆಯನ್ನು ಹೆಣಿಯಲಾಗಿದೆ. ವೈದಿಕರಲ್ಲಿ ದೇವರ ಪೂಜೆ ಹಾಗೂ ಇತರ ಧಾರ್ಮಿಕ ಕ್ರಿಯೆಯಾದ ಹೋಮ, ಹವನ ಇತ್ಯಾದಿ ಸಂದರ್ಭಗಳಲ್ಲಿ ಪೂಜೆ ಸಹಾಯಕಳಾಗಿ ಇರುವಂತೆ ನೈವಿಧ್ಯ ತಯಾರಿಸುವುದು, ಹೂವಿನ ಹಾರ ಕಟ್ಟುವುದು. ಪೂಜಾ ಪರಿಕರಗಳನ್ನು ಸಿದ್ಧಪಡಿಸುವುದು. ಮನೆಯ ಮುಂದೆ ರಂಗೋಲಿಯಿಕ್ಕುವುದು, ಆರತಿ ಬತ್ತಿ ಮಾಡುವುದು, ಪೂಜೆ ಪ್ರದೇಶ ಹಾಗೂ ಪರಿಕರಗಳನ್ನು ಶುಚಿಗೊಳಿಸುವುದು. ಹೀಗೆ (ಹೆಣ್ಣಿನಿಂದ ಇವೆಲ್ಲ) ಕೆಲಸಗಳನ್ನು ಮಾಡಿಸಿಕೊಳ್ಳಲಾಗುವುದು. ಇಷ್ಟೆಲ್ಲ ಮಾಡಿದರೂ ಹೆಣ್ಣು ಧಾರ್ಮಿಕ ವಲಯದಿಂದ ದೂರವಿರುವವಂತೆ ನೋಡಲಾಗಿದೆ.

ಇದೇ ಸಂಪ್ರದಾಯಿಕತೆ ಕೃಷಿ ವಲಯದಲ್ಲಿ ಮುಂದುವರೆದಿದೆ. ಅದೇನೆಂದರೆ ಕೃಷಿ ಕರ್ಮದ ಎಲ್ಲ ಹಂತಗಳಲ್ಲಿ ಊಳುವುದು, ಬಿತ್ತುವುದು, ನಾಟಿ ಮಾಡುವುದು, ಕಳೆ ಕೀಳುವುದು, ಕೊಯ್ಲು ಮಾಡುವುದು, ಅಂಗಳದ ಕೆಲಸಗಳಾದ ತೆನೆ ಹೊಡೆಯುವುದು, ಗೇರುವುದು, ಕಸ ಹಾಯುವುದು, ಗೂಡಿಸುವುದು, ಬತ್ತ ಒಡೆಯುವುದು, ಒಣಗಿಸುವುದು, ತೆನೆ ಕಟ್ಟುವುದು, ಶುಚಿಗೊಳಿಸುವುದು ಹಾಗೂ ಬೀಜ ಸಂಸ್ಕರಣದಂತಹ ಎಲ್ಲ ಕೆಲಸಗಳು ಹೆಣ್ಣಿನ ಕೆಲಸಗಳೆಂದು ರೂಢಿಸಿಕೊಂಡು ಬರಲಾಗಿದೆ. ಮತ್ತು ಇದನ್ನು ಹೆಣ್ಣಾದವಳು ಮಾಡುವ ಕೆಲಸಗಳೆಂದು ನಿರ್ಧರಿಸುವುದು. ಇದೇ, ಇದಕ್ಕೆ ಕಾರಣ ಹೆಣ್ಣಿನ ಜೈವಿಕತೆಯನ್ನು ಆಧಾರವಾಗಿಟ್ಟುಕೊಂಡು, ಹೆಣ್ಣು ದುರ್ಬಲಗಳೆಂದು, ಹುಸಿ ನಂಬಿಕೆಯನ್ನು ಭಿತ್ತಿ ಈ ಕೆಲಸಗಳನ್ನು ಹೆಣ್ಣಿಗೆ ಹಚ್ಚಿರುವುದು. ಹೆಣ್ಣಿಗೆ ಶ್ರಮದಾಯಿಕ ಕೆಲಸ ಮಾಡಲು ಆಗುವುದಿಲ್ಲ ಎಂದು ಹೇಳುವ ಮುಖಾಂತರ ಕೆಲವು ಹೆಣ್ಣಿನ ಶ್ರಮದಾಯಿಕತೆಯನ್ನು ಅಪಮೌಲ್ಯ ಗೊಳಿಸಿರುವ ತಂತ್ರ ಕಂಡುಬರುತ್ತದೆ. ಇದಕ್ಕೆ ಇಂದು ಗಂಡಿನ ಶ್ರಮಕ್ಕೆ ಬೆಲೆ, ಪ್ರತಿಫಲ ಎರಡು ಇದೆ. ಹೆಣ್ಣಿಗೆ ಇಲ್ಲ, ಸಂಪ್ರದಾಯ ಆಚರಣೆಗಳಿಂದ ಉಂಟಾದ ಲಿಂಗಾಧಾರಿತ ಶ್ರಮವಿಭಜನೆಯ ಶ್ರೇಷ್ಠ–ಕನಿಷ್ಠತೆ ಮೇಲು–ಕೀಳುಗಳಂತಹ ಮೌಲ್ಯಗಳನ್ನು ಸೃಷ್ಠಿ ಮಾಡಿವೆ. ಹೆಣ್ಣಿನ ಕೆಲಸಗಳನ್ನು ಅದೃಶ್ಯಗೊಳಿಸಿ, ಆರ್ಥಿಕ ವಲಯದಿಂದ ದೂರವಿರುವ ತಂತ್ರಗಳು ನಿರ್ವಹಿಸಿವೆ. ಮತ್ತು ಗಂಡಸು ಕಟ್ಟಿಕೊಟ್ಟ ಹಾಗೂ ನಿರ್ದೇಶಿಸಿದ ಕೆಲಸಗಳನ್ನು ಹೆಣ್ಣಿನ ಕೆಲಸಗಳೆಂದು ನಿರ್ವಚಿಸಲಾಗಿದೆ.

"ಲಿಂಗಾಧಾರಿತ ಶ್ರಮವಿಭಜನೆ ತಂತ್ರಗಾರಿಕೆಯಿಂದಾಗಿ ಸ್ತ್ರೀ ಹಾಗೂ ಪುರುಷರ 'ದುಡಿಮೆ' 'ಶಕ್ತಿ' 'ಸಾಮರ್ಥ್ಯಗಳನ್ನು' ತಂತ್ರ ಲಿಂಗಾಧಾರವಾಗಿ ನಿರ್ವಚಿಸಲಾಯಿತು. ಸ್ತ್ರೀ–ಪುರುಷರ ಜೈವಿಕ ಮಾನಸಿಕ ಹಾಗೂ ಬೌದ್ಧಿಕ ಸಾಮರ್ಥ್ಯವನ್ನು ಪುರುಷಗಾರಿಕೆ ಸಿದ್ಧಾಂತದ ಮಂಡನೆಯೊಂದಿಗೆ ಸ್ತ್ರೀಯರು ದುರ್ಬಲರೆಂದೂ ವ್ಯಾಖ್ಯಾನಿಸಲಾಯಿತು. ಇದಕ್ಕನುಗುಣವಾಗಿಯೇ 'ಶ್ರಮವಿಭಜನೆ' ಎಂದು ನಂಬಿಸಲಾಯಿತು. ಆದುದರಿಂದ ಈಗ ಮಹಿಳೆಯ ದುಡಿಮೆಯ ಕ್ಷೇತ್ರ 'ಮನೆ'ಯಾಯಿತು. ಮಹಿಳೆಯ ನಿಸರ್ಗ ಸಹಜವಾಗಿ ನಿರ್ವಹಿಸಬೇಕಾದ ಸಂತಾನೋತ್ಪತ್ತಿ ಹಾಗೂ ಸಂಗೋಪನೆಗಳು ದುಡಿಮೆಯನ್ನು ಶ್ರಮವಿಭಜನೆಗೆ ತರ್ಕವಾಗಿ ಬಳಸಲಾಯಿತು. 'ಶಕ್ತಿ'ವಂತನಾದ ಪುರುಷ ದಿನದಿನದ ಅಗತ್ಯಗಳಾದ ಆಹಾರ, ವಸತಿ, ರಕ್ಷಣೆ ವ್ಯವಸ್ಥೆಗಳಿಗಾಗಿ ದುಡಿಯುವುದು ಸರಿ ಎನ್ನಲಾಯಿತು. ಮೊದಲ ನೋಟಕ್ಕೆ ಈ ತರ್ಕದಲ್ಲಿ ಲೋಕವೇನೂ ಕಾಣಿಸದು, ಸ್ತ್ರೀ ಪುರುಷರು ಒಂದಾಗಿ ಬಾಳಬೇಕಾದ ಸಂದರ್ಭದಲ್ಲಿ ಪರಸ್ಪರ ಅನುಕೂಲಕ್ಕಾಗಿ, ಎಲ್ಲ ಶ್ರಮಗಳನ್ನು ಇಬ್ಬರು ಹಂಚಿಕೊಂಡಿದ್ದಾರಷ್ಟೆ ಎನಿಸುತ್ತದೆ. ಆದರೆ ಇಬ್ಬರ ದುಡಿಮೆಗಳನ್ನು ವ್ಯಾಖ್ಯಾನಿಸಿದ್ದು ಮಾತ್ರ ಅಸಮಾನತೆಯಲ್ಲಿ ನೆಲೆಗೊಳಿಸಲಾಯಿತು. ಇಬ್ಬರೂ ಕೂಡ ವಿಭಿನ್ನ ಬಗೆಯ ಉತ್ಪಾದನಾ ಚಟುವಟಿಕೆಗಳಲ್ಲೇ ತೊಡಗಿಸಿಕೊಂಡಿದ್ದರೂ, ಅವುಗಳ ಗಳಿಕೆ ಮಾತ್ರ

ವಿಭಿನ್ನ ಸ್ವರೂಪಗಳದು. ಗಂಡಸಿನ 'ಗಳಿಕೆ' ಆರ್ಥಿಕತೆಗೆ ಸಂಬಂಧಿಸಿದ್ದರೆ ಹೆಂಗಸ್ಸಿನ 'ಗಳಿಕೆ' ಜೀವ ಮೂಲದ ಸೃಷ್ಟಿಗೆ ಹಾಗೂ ಸಂಗೋಪನೆಗಳಿಗೆ ಸಂಬಂಧಿಸಿದ್ದು ಒಂದು ಮೂರ್ತವಾದ ವಾಸ್ತವವಾದರೆ, ಇನ್ನೊಂದು ಅಮೂರ್ತಸತ್ಯ. ಇದನ್ನು ಬಳಸಿಕೊಂಡು ಸೇವಾವಲಯ ಹಾಗೂ ಅಧಿಕಾರ ವಲಯಗಳನ್ನು ನಿಷ್ಕರ್ಷೆ ಮಾಡುವುದು ಕಷ್ಟವಾಗಲಿಲ್ಲ. ಇದಕ್ಕಾಗಿ ಕೆಲವೊಂದು ತಂತ್ರಗಳನ್ನು ಅನುಸರಿಸಲಾಯಿತು. ಸ್ತ್ರೀ ಮತ್ತು ಪುರುಷರ ಸಾಮರ್ಥ್ಯ ಹಾಗೂ ಬುದ್ಧಿಗಳನ್ನು ಮೌಲ್ಯಮಾಪನ ಮಾಡುವ ನೆಪದಲ್ಲಿ ತಾರತಮ್ಯಗಳನ್ನು ಸೃಷ್ಟಿಸಲಾಯಿತು. ಈಗಾಗಲೆ ಆರ್ಥಿಕವಾಗಿ ಪುರುಷನನ್ನು ಅವಲಂಬಿಸಬೇಕಾದ ಸ್ಥಿತಿಗೆ ಇಳಿದಿದ್ದ ಹೆಣ್ಣಿಗೆ ಈ ನಿರ್ಣಯಗಳನ್ನು ಪ್ರಶ್ನಿಸುವ ಅವಕಾಶಗಳೇ ಲಭ್ಯವಾಗಲಿಲ್ಲ. ಮುಂದೆ ನಡೆದಿದ್ದೆಲ್ಲಾ, ನಿರ್ಣಯವನ್ನು ವಾಸ್ತ ವಕ್ಕೆ ಇಳಿಸುವ ಪ್ರಯತ್ನಗಳೇ. ಸಮಾಜದ ಎಲ್ಲರೂ ಅನುಸರಿಸಬೇಕಾದ ನಿಯಮಗಳನ್ನು ರೂಪಿಸಿ ಜಾರಿಗೊಳಿಸುತ್ತಾ ಬರಲಾಯಿತು. ಇದು ಏಕಪಕ್ಷೀಯವಾಗಿ ಪುರುಷನಿಗೆ ಬೇಕಾದಂತೆ ಅನುಕೂಲ ಸಿಂಧುತ್ವಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಮೇಲುನೋಟಕ್ಕೆ ಸಾಮಾಜಿಕ ನಿಯಮಗಳನ್ನು ಎಲ್ಲರಿಗೂ ಅನ್ವಯವಾಗುತ್ತದೆ ಎಂಬಂತಿದ್ದರೂ, ವಾಸ್ತವದಲ್ಲಿ ಅವಳ ಲೈಂಗಿಕತೆಯನ್ನು ನಿರ್ಬಂಧಿಸಿ ಪುರುಷನ ಹಕ್ಕನ್ನು ಸ್ಥಾಪಿಸುವ ಹುನ್ನಾರ ಅತ್ಯಂತ ಪ್ರಧಾನವಾದುದು, ಇದಕ್ಕೆ ಅನುಕೂಲವಾಗುವ ಸಮಾಜೀಕರಣ ತರಬೇತಿಗೆ ಮಾನ್ಯತೆ ಬರುವಂತಾಯಿತು. ಇದು ಸ್ತ್ರೀಪುರುಷರ ದುಡಿಮೆ ಗಳಿಕೆಗಳನ್ನು ಪುರುಷನು ಅಪವ್ಯಾಖ್ಯಾನಗೊಳಿಸುತ್ತಾ ಬರಲು ಸಾಧ್ಯವಾಯಿತು. ಈಗ ಶ್ರಮ ಹಾಗೂ ಸಂಪತ್ತುಗಳು ಸೇವೆ ಹಾಗೂ ಸಂಪಾದನೆಗಳಿಗೆ ಸಂವಾದಿ ಎಂಬಂತೆ ನಿರ್ವಚನಗೊಂಡವು. ಸಹಜವಾಗಿ ಹೆಂಗಸ್ಸಿನ ಶ್ರಮ ಸೇವಾವಲಯದಲ್ಲಿ ಗಂಡಸಿನ ಸಂಪಾದನೆ ಅಧಿಕಾರ ವಲಯದಲ್ಲಿ ಸ್ಥಿರಗೊಳ್ಳುವುದು ಸಾಧ್ಯವಾಯಿತು "(ಎಚ್.ಎಸ್. ಶ್ರೀಮತಿ, ೨೦೦೪, ಪು.೧೯೯). ಈ ಬಗೆಯ ಚಿಂತನೆ ಮಾದರಿಗಳು ಸಂಪ್ರದಾಯ ಸಂಗತಿಗಳು. ಹೀಗೆ ಲಿಂಗಾದಾರಿತ ಶ್ರಮವಿಭಜನೆಯನ್ನು ಉಂಟು ಮಾಡಿದವು ಮತ್ತು ಹೆಣ್ಣನ್ನು ಹೇಗೆ ಅಧೀನತೆಗೆ ಒಳಪಡಿಸಲು ಕಾರಣವಾದವು ಎನ್ನುವುದಕ್ಕೆ ಸ್ಪಷ್ಟನೆಯನ್ನು ನೀಡುತ್ತವೆ.

ಸಿಮೋನ ದ ಬೋವ,ರ ಅವರು ತಮ್ಮ The Second Sex ಕೃತಿಯಲ್ಲಿ "ಆರ್ಥಿಕತೆ ಮತ್ತು ಸಂತಾನದ ಕಾರಣಗಳು ಹೆಣ್ಣಿನ ದೌರ್ಬಲ್ಯಗಳಾಗಿವೆ. ಇದರಿಂದ ಹೊರಬರಬೇಕಾದ ಮಾರ್ಗಗಳನ್ನು ಶೋಧಿಸುವುದೇ ಹೆಣ್ಣಿನ ಸಂಸ್ಯೆಗೆ ಪರಿಹಾರ (ಉದ್ಧೃತ ಎಚ್.ಎಸ್. ಶ್ರೀಮತಿ, ಪು. ೪೨) ಎನ್ನುತ್ತಾರೆ. ಜೈವಿಕತೆಯನ್ನು ಆಧಾರವಾಗಿಟ್ಟುಕೊಂಡು ಸೃಷ್ಟಿ ಮಾಡಿರುವ ಸಂಪ್ರದಾಯಿಕ ಚಿಂತನೆಗಳೇ ಲಿಂಗಾಧಾರಿತ ಶ್ರಮವಿಭಜನೆಗೆ ಮತ್ತು ಲಿಂಗಾತಾರತಮ್ಯಕ್ಕೆ ಕಾರಣವಾಗಿವೆ ಎನ್ನುವ ವಿಚಾರವನ್ನು ಮುದ್ದಿಟ್ಟು ಅದರಿಂದ ಹೊರಬರಬೇಕಾದ ಸಂಗತಿ ಹೇಳಿರುವುದು ಕಂಡುಬರುತ್ತದೆ.

"ಲಿಂಗ ಹುಟ್ಟಿನಿಂದ ಬಂದದ್ದಾಗಿದ್ದು, 'ಲಿಂಗತ್ವ' ಸಮಾಜಿಕವಾದುದು. ಆದ್ದರಿಂದ ಲಿಂಗದ ಆಧಾರದಿಂದ ಸಮಾಜದಲ್ಲಿ ಸೃಷ್ಠಿಯಾದ ಹೆಣ್ಣು ಗಂಡಿನ ಪಾತ್ರಗಳು ಪ್ರಾಕೃತಿಕವಾದುದಲ್ಲ. ಅಸಹಜವಾದವು. ಅವು ಆಯಾ ಸಂದರ್ಭದ ಸಂಸ್ಕೃತಿಕ, ಸಾಮಾಜಿಕ ಸೃಷ್ಠಿಗಳು" ಎಂದು ಸ್ತ್ರೀವಾದಿಗಳು ಭಾವಿಸುತ್ತಾರೆ. ಮಾರ್ಕ್ಸ್‌ವಾದಿ ಸ್ತ್ರೀವಾದ ಹಾಗೂ ಸಮಾಜವಾದ, ಸ್ತ್ರೀವಾದಗಳು ಕೂಡ ಶ್ರಮವಿಭಜನೆಯನ್ನು ಲಿಂಗತಾರತಮ್ಯದ ನೆಲೆಯಲ್ಲಿ ನಡೆದಿರುವುದನ್ನು ಗುರುತಿಸಿ ವಿಶ್ಲೇಷಿಸುತ್ತವೆ. "ಮಾರ್ಕ್ಸ್‌ವಾದವು ಖಾಸಗಿ ಆಸ್ತಿ, ದುಡಿಮೆ ಹಾಗೂ ಗಳಿಕೆಗಳಿಗೆ ಸಾಮಾಜಿಕರಿಗೆ ಲಭ್ಯವಾಗುವ ಅವಕಾಶಗಳು ಮೂಲತಃ ಸಂಪನ್ಮೂಲ ವಿತರಣೆಯಲ್ಲಿ ಅಸಮಾನತೆಯನ್ನು ಜಾರಿಗೊಳಿಸುವ ತಂತ್ರಗಳೆಂದು ಗುರುತಿಸುತ್ತಾದಾದರೆ, ಸಾಮಾಜಿಕ ಶ್ರೇಣಿಕರಣದ ತಂತ್ರವೇ ಈ ನೆಲೆಗಳನ್ನು ಜಾರಿಗೊಳಿಸುತ್ತದೆ" (ಶ್ರೀಮತಿ ಎಚ್.ಎಸ್., ೨೦೦೩, ಪು.೩೬) ಎಂದು ಸಮಾಜವಾದವು ವ್ಯಾಖ್ಯಾನಿಸುತ್ತದೆ. ಹೀಗೆ ಸ್ತ್ರೀ-ಪುರುಷರ ಅಸಮಾನತೆಯಲ್ಲಿ ಹಾಗೂ ಲಿಂಗಾಧಾರಿತ ಶ್ರಮವಿಭಜನೆಗೆ ಕೆಲಸ ಮಾಡುತ್ತವೆ ಎನ್ನುವುದು ಗೊತ್ತಾಗುತ್ತದೆ.

"ಸಂಸ್ಕೃತಿಯು ಸ್ತ್ರೀ-ಪುರುಷರ ನಡುವೆ ಕಲ್ಪಿಸಿರುವ ಸಂಬಂಧಿಗಳ ಸ್ವರೂಪ ಹೆಣ್ಣನ್ನು ಯಾವುದೇ ಉತ್ಪಾದನಾ ಚಟುವಟಿಕೆಯಿಂದ ಪ್ರತ್ಯೇಕಗೊಳಿಸಿಡುವಷ್ಟು ಪ್ರಬಲವಾಗಿದೆ. ವಿವಾಹ, ಕುಟುಂಬ, ಮನೆಗಳೆಂಬ ಒಂದೇ ಸೂರಿನ ಚೌಕಟ್ಟಿನಲ್ಲಿಯೂ ಹೆಣ್ಣಿನ ಕೆಲಸ ಕಾರ್ಯಗಳು, ಪುರುಷನ ಆಶ್ರಯದಲ್ಲೆ ಬದುಕಬೇಕಾದ ಹೆಣ್ಣಿನ ಸಂದರ್ಭವನ್ನು ತಂದಿಟ್ಟಿದೆ. ಅವಳ ದೈಹಿಕ ದುಡಿಮೆ ಹಾಗೂ ಸಂತಾನೋತ್ಪತಿಯ ದುಡಿಮೆಗಳೆರಡನ್ನು ಆಕ್ರಮಿಸಿ ಬಿಡುವ, ಅಸಮಾನತೆಯು ಕೇವಲ ಭೌತಿಕ ಸಂಗತಿಯಾಗಿರುವುದಿಲ್ಲ. ಅವಳ ಮನಸ್ಸು ಬುದ್ಧಿಗಳನ್ನು ಈ ಸಂಪ್ರದಾಯ ಆಚರಣೆಗಳು ಆಳಿದ್ದರಿಂದ, ಹೆಣ್ಣಿನ ದುಡಿಮೆ ಶ್ರಮಕ್ಕೆ ಯಾವುದೇ ಬೆಲೆ ಇಲ್ಲ ಎನ್ನವ ವಾದವು".(ಶ್ರೀಮತಿ ಎಚ್.ಎಸ್., ೨೦೦೩, ಪು.೩೬, ೩೪) ಸಮಾಜವಾದವು ಮತ್ತು ಮಾರ್ಕ್ಸ್‌ವಾದಗಳು ಸಂಪ್ರದಾಯ ಆಚರಣೆಗಳು ಸೃಷ್ಠಿ ಮಾಡಿರುವ ಈ ರೀತಿಯಾಗಿ ಲಿಂಗಾಧಾರಿತ ಶ್ರಮವಿಭಜನೆಯನ್ನು ಅರ್ಥೈಯಿಸಿರುವುದು ಕಂಡು ಬರುತ್ತದೆ.

"ಸಂಸ್ಕೃತಿಯಲ್ಲಿರುವ ಪುರುಷ ರಾಜಕಾರಣವನ್ನು ತಿರಸ್ಕರಿಸುವ ಮೂಲಕ ಸ್ತ್ರೀ-ಪುರುಷರ ಸಂಬಂಧಗಳ ಸ್ವರೂಪದಲ್ಲಿ ಮೂಲ ಮಾರ್ಪಡಗಳನ್ನು ಮಾಡಬೇಕಿದೆ. ಹೆಣ್ಣಿನ ಸ್ವಾಯತ್ತತೆ ಅಸ್ತಿತ್ವಗಳ ಶೋಧ ಸ್ತ್ರೀವಾದ ಪ್ರಜ್ಞೆಗಳ ಮೂಲಕ ಹೊರತರಬೇಕಾಗಿದೆ ಮತ್ತು ಸಂಸ್ಕೃತಿಯಲ್ಲಿನ ರಾಜಕಾರಣವನ್ನು ಗುರುತಿಸಿ ಸರಿಪಡಿಸಬೇಕಾಗಿರುವುದು ಅಗತ್ಯವಿದೆ. ಏಂಗೆಲ್ಸ್‌ನ್ನುತನ 'The orgion of family private property and the State' ಕೃಷಿಯ ಚರಿತ್ರೆಯ ಆರಂಭದಲ್ಲಿ ಉಳುಮೆ, ಬಿತ್ತನೆಗಳಂತಹ ಕೆಲಸಗಳಲ್ಲಿ ಕ್ರಮವಾಗಿ ಸ್ತ್ರೀ-ಪುರುಷರು

ತೊಡಗುತ್ತಿದ್ದಿರಬಹುದಾದರೂ, ಈ ಶ್ರಮವಿಭಜನೆಯಲ್ಲಿ ಮೇಲು-ಕೀಳಿನ ಭಾವವಿರದೆ ಸಮಾನ ನೆಲೆಯಲ್ಲಿ ಸಮಾನವಿತ್ತು. ಏಕೆಂದರೆ ಗಂಡಸು ಮನೆಯ ಹೊರಗೆ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗುತ್ತಿದ್ದವಾದರೆ, ಹೆಂಗಸು ಮನೆಯ ಒಳಗೆ ಇದ್ದ ಆವರಣದಲ್ಲಿ ಉಳಿದರೂ ನಿಸರ್ಗ ಸಹಜ ಸಂತಾನೋತ್ಪತ್ತಿಯ ಶ್ರಮವಷ್ಟೇ ಅಲ್ಲದೆ, ಕೈತೋಟ ಪಶುಪಾಲನೆ, ನೇಯ್ಗೆ, ಕುಂಬಾರಿಗಳಂತಹ ಉತ್ಪಾದನಾ ಚಟುವಟಿಕೆಗಳಲ್ಲಿ ಶ್ರಮವನ್ನು ಹಾಕುತ್ತಿದ್ದಳು. ಹಾಗಾಗಿ ಆರ್ಥಿಕತೆಯಲ್ಲಿ ಭಾಗಿದಾರಳಾದ ಇವಳು ಪುರುಷನೊಂದಿಗೆ ಸಮಾನ ನೆಲೆಯಲ್ಲಿಯೇ ಬದುಕುತ್ತಿದ್ದಳು. ಇಂದಿಗೂ ಆರ್ಥಿಕ ಚಟುವಟಿಕೆಗಳಲ್ಲಿ ಹೆಣ್ಣಿನ ಭಾಗವಹಿಸುವಿಕೆ ಅನಿವಾರ್ಯವೆನಿಸುವ ಸಮುದಾಯಗಳಲ್ಲಿ ಹೀಗೂ ಇದೆ. ಆದರೆ ಕ್ರಮೇಣವಾಗಿ ನಾಗರಿಕತೆ, ಸಂಸ್ಕೃತಿಗಳು ವಿಕಾಸಗೊಳ್ಳುತ್ತಾ ನಡೆದಂತೆ, ಸಾಧನ, ಸಲಕರಣೆಗಳು ಹೆಚ್ಚು ಹೆಚ್ಚಾಗಿ ಒದಗುತ್ತಾ ಹೋದಂತೆ, ಹೆಚ್ಚಿನ ಉತ್ಪಾದನಾ ಚಟುವಟಿಕೆಗಳು ಗಂಡಸಿನ ಹತೋಟಿಗೆ ಬರತೊಡಗಿದವು ಆ ಮೂಲಕ ಹೆಣ್ಣಿನ ಹತೋಟಿ ಸಾಧ್ಯವಾಯಿತು" (ಏಂಗೆಲ್ಸ್, ಉದ್ಧೃತ ಎಚ್.ಎಸ್. ಶ್ರೀಮತಿ, ೨೦೦೩, ಪು.೬೩). ಆದರೆ ನಾಗರೀಕತೆಯ ಪ್ರಕ್ರಿಯೆ ಬೆಳೆದ ನಂತರ ಲಿಂಗಾಧಾರಿತ ತಾರತಮ್ಯತೆಗಳು ಅಧಿಕೃತಗೊಳ್ಳುತ್ತಾ ಹೋದವು ಎಂದಿರುವುದು.

ಸಂಪ್ರದಾಯ ಆಚರಣೆಗಳು ಸಮಾಜದಲ್ಲಿ ಸೃಷ್ಟಿಸುತ್ತಿರುವ ಲಿಂಗಾಧಾರಿತ ಶ್ರಮವಿಭಜನೆ, ತಾರತಮ್ಯದ ಸಂಗತಿಗಳನ್ನು ಹೇಳಿರುವುದು ಇದರಿಂದ ತಿಳಿಯಬಹುದಾಗಿದೆ. ಇದಕ್ಕೆ ಸಿಮಾನ್ ದ ಬೋವಾರವರು 'ಹೆಂಗಸಾಗಿ ಯಾರು ಹುಟ್ಟುವುದಿಲ್ಲ, ಹೆಂಗಸನ್ನಾಗಿ ಮಾಡಲಾಗುತ್ತದೆ ಎಂದು ಹೇಳಿರುವ ಹಿನ್ನೆಲೆಯಿಂದ ನೋಡಿದರೆ ಸಾಮಾಜಿಕ ವ್ಯವಸ್ಥೆಯಲ್ಲಿ ಸಂಪ್ರದಾಯಿಕ ಚಿಂತನೆಗಳು ಹೇಗೆ ಒಬ್ಬ ಸ್ತ್ರೀಯನ್ನು ಹೆಣ್ಣಾಗಿ ಸೃಷ್ಟಿ ಮಾಡಿವೆ ಎಂಬುದು ಸ್ಪಷ್ಟವಾಗುತ್ತವೆ. ಹೆಣ್ಣಿನ ಜೈವಿಕ ಸಹಜ ಕ್ರಿಯೆಗಳು ಸುತ್ತ ಹೆಣೆದಿರುವ ಮಿಥ್‌ಗಳು ಕಲ್ಪಿತ ರಚನೆಗಳು. ಅವು ನಿಸರ್ಗ ಸಹಜ ಪ್ರಕ್ರಿಯೆಗಳಲ್ಲ. ಅವು ಶಕ್ತಿ ಸಾಮರ್ಥ್ಯವನ್ನು ಪ್ರಕಟಿಸುವುದಿಲ್ಲ. ಅವು ಲಿಂಗಕ್ಕೆ ಅನುಗುಣವಾಗಿ ಸಾಂಸ್ಕೃತಿಕ ಅಂಶಗಳನ್ನು ಹಚ್ಚಿ ಶಕ್ತಿದಾಯಕ, ಶ್ರಮದಾಯಕ ಪೋಷಕ ಗುಣಗಳನ್ನು ಸೃಷ್ಟಿಗೊಳಿಸಿರುವುದು. ಸಂಸ್ಕೃತಿಯಲ್ಲಿನ ಸಂಪ್ರದಾಯಿಕ ಚಿಂತನೆಗಳೇ ಅದನ್ನು ಆಚರಣೆಯಲ್ಲಿ ತಂದಿರುವುದರಿಂದಲೇ ಹೆಣ್ಣಿಗೆ ಗೃಹಕೃತ್ಯಕ್ಕೆ ಕಾರಣವಾಗಿದೆ. ಇದನ್ನು ವಿಶ್ಲೇಷಣೆಗೆ ಒಳಪಡಿಸಿದರೆ ಪುರುಷ ಕಲ್ಪಿತ ಮಿಥ್ಯಗಳಿಂದ ಎನ್ನುವುದು ಗೊತ್ತಾಗುತ್ತದೆ. ಏಕೆಂದರೆ ಕಲೆ, ಸಾಹಿತ್ಯ, ಪುರಾಣ, ಐತಿಹ್ಯಗಳು ಮುಂತಾದ ನಮ್ಮ ಎಲ್ಲ ಸಾಂಸ್ಕೃತಿಕ ಅಭಿವ್ಯಕ್ತಿಗಳಲ್ಲಿ ಹೆಣ್ಣನ್ನು ಕುರಿತು ಅಸಂಖ್ಯೆ ಬಗೆಯ ಮಿಥ್ಯಗಳು ತುಂಬಿಕೊಂಡಿವೆ. ಪ್ರತಿಯೊಂದು ವಲಯಗಳಲ್ಲಿ ಹೆಣ್ಣು ಗೈರು ಹಾಜರಿಯನ್ನಾಗಿಸಿರುವುದೇ ಇದಕ್ಕೆ ಸಾಕ್ಷಿ. ಮಿಥ್ಯಗಳು ಇಲ್ಲದೊಂದು ಬದುಕನ್ನು ದಾಖಲಿಸಿ ಸುಳ್ಳನ್ನು ಸೃಷ್ಟಿಸಿವೆ. ಎನ್ನೋಣ; ಈ ಮಿಥ್ಯಗಳ ಸೃಷ್ಟಿಗೊಳಿಸಿರುವ ಚಿಂತನೆಯಲ್ಲಿ ಕೇವಲ

ಕಲ್ಪನೆಗಳು, ಭ್ರಮೆಗಳು. ಆದರೆ ಅವು ಸೃಷ್ಟಿ ಮಾಡಿರುವ ಚಿಂತನೆ, ಅವು ಸಾಮಾಜಿಕ ವಾಸ್ತವದೊಂದಿಗೆ ತೀತ್ರವಾಗಿ ಸಂಬಂಧವನ್ನು ಭಿತ್ತಿ ಬಿಡುತ್ತವೆ. ಲಿಂಗಾಧಾರಿತ ಶ್ರಮವಿಭಜನೆಯ ರಾಜಕಾರಣವನ್ನು ಸಿಮೋನ್ ಅ ಆರು ಹೀಗೆ ಗುರುತಿಸುತ್ತಾರೆ. "ಮಾನವ ಕುಲವನ್ನು ಸ್ತ್ರೀ–ಪುರುಷ ಎಂಬ ಎರಡು ಪ್ರತ್ಯೇಕ ಜಾತಿಗಳಾಗಿ ವಿಭಜಿಸಬಹುದು ಎಂಬುದನ್ನು ಕಟ್ಟಿದ ಮೊದಲ ಮಿಥ್ಯ ಎಂದು. ಇದಕ್ಕೆ ಗಂಡು ಜಾತಿಯು ಸ್ವಾಯತ್ತ ಬಗೆಯದೆಂದು, ಹೆಣ್ಣು ಜಾತಿಯು ಗಂಡು ಜಾತಿಗೆ ಪೂರಕವಾಗಿ ಒದಗಿ ಬರುವ ಕೆಳ ನೆಲೆಯೆಂದೂ, ಕಟ್ಟಿರುವ ಮಿಥ್ಯಗಳು ಕೂರ ಇದಕ್ಕೆ ಪೋಷಕವಾಗಿ ರೂಪಿತವಾಗಿದೆ. ಅದು ಈವರೆಗೂ ಒಂದಿಷ್ಟು ಅಲುಗಾಡದೆ, ಬದಲಾಗದೆ ಸ್ಥಿರವಾಗಿ ಉಳಿದು ಬಂದಿದೆ. ಅಷ್ಟೇ ಅಲ್ಲ ಇದನ್ನು ಮಿಥ್ಯ ಎಂದೇನು ಹಾಳುವುದಿಲ್ಲ. ಬದಲಿಗೆ ಅನುಭವಕ್ಕೆ ದಕ್ಕುವ ವಾಸ್ತವ ಸತ್ಯ ಎಂದೇ ಪ್ರಸ್ತುಪಡಿಸಿ ಒಪ್ಪಿತವಾಗಿದೆ. ಈ ಸ್ತ್ರೀ–ಪುರುಷರ ವಿಭಜನೆ ಖಂಡಿತವಾಗಿಯೂ ಜೈವಿಕ ಲಕ್ಷಣಗಳಲ್ಲಿನ ವ್ಯತ್ಯಾಸಗಳನ್ನು ಮಾತ್ರ ಆಧರಿಸಿದ್ದಲ್ಲ. ಬದಲಿಗೆ ಈ ವಿಭಿನ್ನ ಜಾತಿಗಳು, ವಿಭನ್ನ ಗುಣ ಸ್ವಭಾವಗಳನ್ನು ತೋರುವ ಮೂಲಕ ವಿಭಿನ್ನ ವ್ಯಕ್ತಿತ್ವಗಳೇ ಆಗಿವೆ ಎಂಬ ವಿವರಣೆಯದು. ವಾಸ್ತವದಲ್ಲಿ ಸ್ತ್ರೀ–ಪುರುಷರಾದರೂ ಈ ನಿರ್ವಚನವನ್ನು ಸುಳ್ಳು ಮಾಡುವ ಗುಣಸ್ವಭಾವಗಳನ್ನು ತೋರುತ್ತಾರಾದರೆ, ಆ ವ್ಯಕ್ತಿಗಳನ್ನು ದೋಷ ಪೂರ್ಣರೆನ್ನಲಾಗುತ್ತದೆಯೇ ಹೊರತು, ನಿರ್ವಚನವನ್ನಲ್ಲ. ಹೆಣ್ಣಾಗಿ ಹುಟ್ಟಿದ ಮೇಲೆ ಹೆಣ್ಣು ಗುಣವು ಅದು ರೂಪಿಸುವ ಸ್ತ್ರೀತ್ವವೂ ಕೂಡಿಕೊಳ್ಳುವುದೇ ಸಹಜ ಸ್ಥಿತಿ. ಹಾಗೆ ಆಗಲ್ಲವೆಂದರೆ ಅವಳು ಹೆಣ್ಣೇ ಅಲ್ಲ ಎಂದು ನಿಜದ ತಲೆಯ ಮೇಲೆ ಹೊಡೆದಂತೆ ಈ ಮಿಥ್ಯ ಸಾರುತ್ತದೆ. ಇದರ ಎದುರು ಅನುಭವವು ಹೇಳುತ್ತಿರುವ ಸಂಗತಿಗಳು ಅರ್ಥಹೀನವೆನಿಸಿಬಿಡುತ್ತವೆ. ಈ ಮಾನವ ಕುಲದ ಪುರುಷನು ಮಾತ್ರವೇ ವ್ಯಕ್ತಿ ಎನಿಸಿ ಸ್ತ್ರೀಯು ಇವನ ಅಸ್ತಿತ್ವಕ್ಕೆ ಸಾಪೇಕ್ಷವಾಗಿ ವಿವರಣೆಗೊಳ್ಳುವ ಒಂದು ವಸ್ತುವಾಗಿ ಬಿಡುತ್ತಾಳೆ. ಜೈವಿಕ ಲಕ್ಷಣಗಳಾದ ಲಿಂಗ ವ್ಯತ್ಯಾಸಗಳು. ಈ ಮಿಥ್ಯನ ಪ್ರಾಬಲ್ಯದಲ್ಲಿ ಲಿಂಗತಾರತಮ್ಯವಾಗಿ ನೆಲೆಗೊಳ್ಳುವ ಪ್ರಕ್ರಿಯೆಗೊಳಿಸುತ್ತವೆ. ಇದು ಸೃಷ್ಟಿಸುವ ಒತ್ತಡಗಳಲ್ಲಿ ಸಿಲುಕಿದ ಹೆಣ್ಣಿಗೆ ಸಹಜೀವಿಯಾದ ಗಂಡನೊಂದಿಗೆ ಸಮಾನ ನೆಲೆಯಲ್ಲಿ ನಿಲ್ಲುವುದು ಅಸಾಧ್ಯವಾಗಿ ಅವಳು ತನ್ನ ಅಸ್ತಿತ್ವವನ್ನು ಮರೆತು ಅವನಿಗೆ ಒದಗುವ ಒಂದು ಪರಿಕರವಾಗಿ ಒಪ್ಪಿಕೊಳ್ಳುವುದು ಅನಿರ್ವಾಯವಾಗುತ್ತದೆ" (ಎಚ್.ಎಸ್. ಶ್ರೀಮತಿ, ೨೦೦೩, ಪು.೭೧) ಎಂದು.

ಸಂಪ್ರದಾಯ ಆಚರಣೆಗಳು ಲಿಂಗತಾರತಮ್ಯಗಳನ್ನು ಸೃಷ್ಟಿಸುತ್ತವೆ. ಜೊತೆಗೆ ಸಾಮಾಜಿಕ ಅಸಮಾನತೆಯನ್ನು ಸೃಷ್ಟಿಸುತ್ತವೆ. ಇದಕ್ಕೆ ಕೆಲವು ಸ್ತ್ರೀವಾದಿಗಳು "ಹೆಣ್ಣು ಎಂಬುದು ನಿಸರ್ಗ ಸಹಜವಾದ ಸಂಗತಿ. ಮಾನವ ಸಂಬಂಧಗಳ ಬಗೆಗೆ ಅವಳಿಗಿರುವ ತೀವ್ರ ಕಾಳಾಜಿ, ಆ ಬಗೆಗಿನ ಅವಳ ಸೂಕ್ಷ್ಮ ಸಂವೇದನೆ ಪುರುಷನಿಗೆ ಇರುವುದು ಸಹಜವೆನಲ್ಲ, ಅವಳ

ಚಿಂತನೆಯೂ ಪುರುಷನ ಚಿಂತನೆಯಂತೆ ವ್ಯವಹಾರ ಪ್ರಧಾನವಾದ ಬುದ್ಧಿ ಪ್ರಧಾನವಾದ ಚಿಂತನೆಯಲ್ಲ, ಬದಲಿಗೆ ಭಾವ ಪ್ರಧಾನವಾದದ್ದು, ಪುರುಷ ಚಿಂತನೆ ಈ ಅಂಶದ ಬೆನ್ನ ಹಿಡಿದು ಅವಳ ಚಿಂತನೆಯ ದಿಕ್ಕು ತಪ್ಪಿಸುವ ಹುನ್ನಾರುಗಳನ್ನು ರೂಪಿಸುತ್ತದೆ. ಹಾಗೆಯೇ ಮನೆ, ಮಕ್ಕಳು, ಸಂಬಂಧಗಳು ಎಂಬ ಬಗ್ಗೆ ಹೇಗೆ ಇರುವ ಸೂಕ್ಷ್ಮ ಸಂವೇದನೆಗಳನ್ನು ದೌರ್ಬಲ್ಯಗಳೆಂಬಂತೆ ಬಳಸಿಕೊಳ್ಳಲು ನೋಡುತ್ತದೆ" (ಎಚ್.ಎಸ್.ಶ್ರೀಮತಿ, ಪು.೪) ಎನ್ನುತ್ತಾರೆ ಎಂದು ದೊರೆಯುವ ಮಾಹಿತಿ ಸಂಪ್ರದಾಯ ಆಚರಣೆಗಳಿಂದಾಗಿ ಪುರುಷ ಪ್ರಧಾನತೆಯು ಅಳವಡಿಸಿಕೊಂಡಿರುವ ಮೌಲ್ಯಗಳ ಕುರಿತಾಗಿ ಹೇಳಿರುವುದು ಕಂಡುಬರುತ್ತದೆ. ಜೊತೆಗೆ ವ್ಯವಸ್ಥೆ ಸೃಷ್ಟಿಗೊಂಡಿರುವ ಮೌಲ್ಯಗಳಿಗೆ ವಾಸ್ತವ ಸಂಗತಿಗಳಲ್ಲ ಎನ್ನುವಂತ ವಿಚಾರವನ್ನು ಹೇಳಿರುವುದು ದೊರೆಯುತ್ತದೆ. ಇನ್ನು ಮುಂದುವರೆ ಸಂಪ್ರದಾಯ ಆಚರಣೆಗಳ ಮಾನವನಲ್ಲಿ ಒಬ್ಬರಾದ ಹೆಣ್ಣು–ಗಂಡಿನ ನಡುವಿನ ಸಂಬಂಧಗಳ ಕುರಿತಾಗಿ ಅಶ್ವಿನಿ ಧೋಂಗಡೆ ಅವರು ಈ ರೀತಿಯಾಗಿ ಹೇಳುತ್ತಾರೆ. "ಸ್ತ್ರೀ–ಪುರುಷರ ಶಾರೀರಿಕ ಭೇದವಿರುವುದು ನಿಜ ಅಂತ ಮಾತ್ರಕ್ಕೆ ಈ ಅವರ ವ್ಯಕ್ತಿತ್ವ, ವೃತ್ತಿ ಜೀವನ ಶೈಲಿ ಹಾಗೂ ವರ್ತನೆಗಳಲ್ಲಿ ವ್ಯಾತ್ಯಾಸ ತರವಷ್ಟು ಗಂಭೀರವಾದುದೇನಲ್ಲ, ಪರಂಪರೆ ಸಂಸ್ಕೃತಿ ಸಾಮಾಜಿಕ ಅಪೇಕ್ಷೆಗಳು ಮಕ್ಕಳನ್ನು ಪಾಲಿಸಿ ಪೋಷಿಸುವೆಂದು ಸ್ತ್ರೀಯರ ಪಾಲಿಗೆ ಬರುವ ಕೆಲಸಗಳೆಂದೆ ಈ ಭೇದ ಉಂಟು ಮಾಡಲಾಗಿದೆ.

ಸ್ತ್ರೀ–ಪುರುಷರ ನಡುವಣ ಭೇದಕ್ಕೆ ಸಾಮಾಜಿಕ ಘಟಕವೇ ಮೂಲ ಕಾರಣವಾಗಿದೆ. ಇದರ ಕುರಿತಾಗಿ ಮನಶಾಸ್ತ್ರಜ್ಞರು ಕೂಡ ಈ ವಿಚಾರದಲ್ಲಿ ತಮ್ಮ ಸಹಮತವನ್ನು ವ್ಯಕ್ತಪಡಿಸಿದ್ದಾರೆ" (ಅಶ್ವಿನಿ ಧೋಂಗಡೆ, ೨೦೦೫, ಪು.೧೩೫). "ಹೆಣ್ಣು–ಗಂಡುಗಳ ಸಹಜ ಸಾಮರ್ಥ್ಯಗಳನ್ನು 'ವೈಜ್ಞಾನಿಕ ಚಿಂತನೆಗಳು ಆಯಾ ತಳಿಗಳ ಗುಣಲಕ್ಷಣಗಳನ್ನಾಧರಿಸಿ ವ್ಯಾಖ್ಯಾನಿಸಿವೆ ಹಾಗೂ ಗಂಡು ತಳಿಯ ಲಕ್ಷಣಗಳನ್ನು ಗುಣಾತ್ಮಕವಾಗಿಯೂ, ಹೆಣ್ಣು ತಳಿಯನ್ನು ನೇತ್ಯಾತ್ಮಕವಾಗಿಯೂ ಪರಿಗಣಿಸಿ ಕ್ರಮವಾಗಿ ಸಶಕ್ತ–ಅಶಕ್ತ ಗುಂಪುಗಳೆಂದು ವಿಭಜನೆ ತೀರ್ಮಾನಗಳನ್ನು ನೀಡಿವೆ. ಹೆಣ್ಣು–ಗಂಡು ಗುಣಲಕ್ಷಣಗಳಲ್ಲಿ 'ವ್ಯತ್ಯಾಸ'ಗಳಿರುವುದೇನೂ, ಸುಳ್ಳಲ್ಲ. ದೈಹಿಕ ಸಾಮರ್ಥ್ಯದಲ್ಲಿ ಮೊದಲ ನೋಟಕ್ಕೆ ಸಾಧಾರಣವಾಗಿ ಹೆಣ್ಣಿಗಿಂತ ಗಂಡು ಹೆಚ್ಚು ಬಲಶಾಲಿ ಎಂಬುದನ್ನು ನಿರಾಕರಿಸಲು ಕಾರಣಗಳಿಲ್ಲ. ತೂಕ, ಎತ್ತರ, ಶಕ್ತಿ ಎಲ್ಲದರಲ್ಲೂ ಅವನದೆ ಮೇಲಗೈ ಆದರೆ ದೇಹದ ಆಯಾಸವನ್ನು ಹೆಚ್ಚು ಒತ್ತು ಪಡೆದುಕೊಳ್ಳುವ ಅವಳಲ್ಲೇ ಹೆಚ್ಚು. ಇತ್ತಿಚೀನ ಹಲವು ದಶಕಗಳಲ್ಲಿ ಮಹಿಳೆ ಕ್ರೀಡೆ, ಸೈನ್ಯ ವಿಭಾಗಗಳಂತಹ ಕ್ಷೇತ್ರಗಳಲ್ಲಿ ತೋರುತ್ತಿರುವ ಸಾಧನೆಗಳು ಅವನ ಆಂತರಿಕ ಶಕ್ತಿ ಸಾಮರ್ಥ್ಯಗಳು ಪ್ರಕಟಗೊಳ್ಳಬಹುದಾದ ಸಾಧ್ಯತೆಗಳನ್ನು ಕುರಿತು ಸಾಕಷ್ಟು ಹೇಳುತ್ತವೆ" (ಎಚ್.ಎಸ್. ಶ್ರೀಮತಿ, ೨೦೦೫, ಪು.೧೧೫) ಎಂದು ದೊರೆಯುವ ಮಾಹಿತಿಯು ಹೆಣ್ಣು–

ಗಂಡಿನ ಜೈವಿಕ ಆಧಾರವನ್ನಾಗಿಟ್ಟುಕೊಂಡು ವಿಭಜನೆ ಮಾಡುವ ಸಂಪ್ರದಾಯ ಆಚರಣೆಗಳ ಪ್ರವೃತ್ತಿಯನ್ನು ವಿರೋಧಿಸಿರುವುದು ಕಂಡುಬರುತ್ತದೆ. ಹೆಣ್ಣಿನ ಜೈವಿಕ ಸಹಜ ಕ್ರಿಯೆ ಸಂಬಂಧಿಸಿದವುಗಳಾದ ಋತುಚಕ್ರ, ಬಸಿರು ಹೆರಿಗೆಗಳಂತಹ ಸಹಜ ಕ್ರಿಯೆಗಳನ್ನಾಧರಿಸಿ ಅವಳನ್ನು ದೌರ್ಬಲ್ಯವೆಂದು, ನಿರ್ವಚಿಸುವ ಪ್ರವೃತ್ತಿಯನ್ನು ಪ್ರತಿಭಟಿಸಬೇಕಿದೆ. ಹೆಣ್ಣಿನ ಜೈವಿಕ ಸಹಜ ಕ್ರಿಯೆಗಳನ್ನು ಹೆಣ್ಣಿನ ಶಕ್ತಿ ಸಂಕೇತಗಳೆಂದು, ಗುರುತಿಸಬೇಕೆಂದು ಸ್ತ್ರೀವಾದವು ಒತ್ತಾಯಿಸುತ್ತದೆ. ಸ್ತ್ರೀವಾದವು ಪರಂಪರೆಯಲ್ಲಿನ ತಾಯ್ತಿನದ ವೈಭವೀಕರಣವನ್ನು ವಿರೋಧಿಸುತ್ತದೆ. ಹಾಗೆಯೇ ಹೆಣ್ಣಿನ ಸಿದ್ಧ ಮಾದರಿ ಪಾತ್ರಗಳನ್ನು ವಿರೋಧಿಸುತ್ತದೆ. ಲಿಂಗಾಧಾರಿತ ತಾರತಮ್ಯವಿಲ್ಲದೆ, ಜೈವಿಕ ಭಿನ್ನತೆಯನ್ನು ಗುರುತಿಸಬೇಕೆಂಬ ಅಂಶದ ಕಡೆಗೆ ಒತ್ತು ನೀಡಿರುವುದು ಕೂಡ ಹೇಳುತ್ತದೆ. ಈ ಹಿನ್ನೆಲೆಯಿಂದ ಹಾಗೆ ಹೆಣ್ಣಿಗೆ ಪರಂಪರಗತವಾಗಿ ಬಂದಿರುವ ಸಿದ್ಧ ಮಾದರಿ ಪಾತ್ರಗಳ ಪುನರ್ ವ್ಯಾಖ್ಯಾನ ಮಾಡುತ್ತ, "ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಮನೆಯ ಹೊರಗೆ ದುಡಿಯಲು ಪ್ರಾರಂಭಿಸಿದ ಮಹಿಳೆಗೆ 'ತಾಯ್ತಿನ' ಗರ್ಭಧಾರಣೆಗಳು ಅವಳ ಮನೆಯ ಹೊರಗಿನ ಸಾಮರ್ಥ್ಯಗಳಿಗೆ ಅಡ್ಡಿ ಆತಂಕ ಉಂಟು ಮಾಡಿದವು. ಅವಳಿಗೆ ಇದ್ದಕ್ಕಿದಂತೆ ಎರಡು ಪಾತ್ರಗಳನ್ನು ನಿರ್ವಹಿಸಬೇಕಾದ ಸಂದರ್ಭ. ಇದಕ್ಕೆ ಇವಳ ಪೂರ್ಣ ಪ್ರಮಾಣದಲ್ಲಿ ಸಿದ್ಧಳಿದ್ದಳೋ ಇಲ್ಲವೋ ಅಂತೂ ಮನೆಯ ಒಳಗೆ ಹಾಗೂ ಹೊರಗೆ ಎರಡು ನೆಲೆಗಳಲ್ಲಿ ದುಡಿಯಬೇಕಾದ ಸಂದರ್ಭ ಒದಗಿತು. ಇದೇ ಸಂದರ್ಭದಲ್ಲಿ, ವೈದ್ಯಕೀಯ ಜಗತ್ತಿನಲ್ಲಿ 'ಗರ್ಭನಿರೋಧಕ' ಔಷಧಿಗಳು ಹೊರಬಿದ್ದವು, ಅವು ಮಹಿಳೆಯರಿಗೆ ವರದಾನವಾಗಿ ಕಂಡು ಬಂದವು. ಬಸಿರು, ಬಾಣಂತನ-ತಾಯ್ತನ, ಹಾಲೂಡುವಿಕೆ ಇತ್ಯಾದಿ ನಿರಂತರ ಕ್ರಿಯೆಗಳಿಂದ ಮಹಿಳೆ ಬಿಡುಗಡೆ ಹೊಂದಿ, ತನ್ನ ಸಾಧನೆಗಳಿಗಾಗಿ ತನಗಾಗಿ ಕ್ಷಣಗಳನ್ನು ಮೀಸಲಿರಿಸಿಕೊಳ್ಳಲು ಸಾಧ್ಯವಾಯಿತು. ತಾನೂ ಬೇಕಾದಾಗ ಬೇಕೆನಿಸಿದಷ್ಟು ಮಕ್ಕಳನ್ನು ಪಡೆದುಕೊಳ್ಳುವ ಕಲ್ಪನೆಯೊಂದು ಮಹಿಳೆಯ ಬೇಕೆನಿಸಿದಷ್ಟು ಮಕ್ಕಳನ್ನು ಪಡೆದುಕೊಳ್ಳುವ ಕಲ್ಪನೆಯೊಂದು ಮಹಿಳೆಯ ಬದುಕಿನಲ್ಲಿ ಅರಳಲು ಕಾರಣವಾಯಿತು (ಮಂಗಳಾ ಪ್ರಿಯದರ್ಶಿನಿ, ೨೦೦೭, ಪು.೩).

ಸಮಾಜದಲ್ಲಿ ಸೃಷ್ಟಿಗೊಂಡಿರುವ ಮತ್ತು ಸೃಷ್ಟಿಗೊಳ್ಳುತ್ತಿರುವ ಲಿಂಗಾಧಾರಿತ ಶ್ರಮವಿಭಜನೆಗೆ ಸಾಂಸ್ಕೃತಿಕ ಮೌಲ್ಯಗಳೇ ಕಾರಣವಾಗಿದೆ. ಇದಕ್ಕೆ "ಮಹಿಳೆಯ ಸ್ಥಾನ-ಮಾನಗಳ ಅವನತಿ ಮೂರು ವಿಧಗಳಲ್ಲಿ ಆಯಿತೆಂದು ಹೇಳಬಹುದು. ಅವು ಅವಳ ದೈಹಿಕ ಅಶಕ್ತತೆ, ಕಾಲಕ್ರಮೇಣವಾಗಿ ಬೆಳೆದುಕೊಂಡು ಬಂದ ಸಾಮಾಜಿಕ ರೀತಿ, ನೀತಿಗಳಿಂದ ಅವಲಂಬಿತವಾಗಿದೆ. ಮುಖ್ಯವಾಗಿ ಹೆಣ್ಣು ಉತ್ಪಾದನೆ, ಆಡಳಿತ ಹಾಗೂ ಧರ್ಮ ಈ ಮೂರು ಕ್ಷೇತ್ರಗಳಿಂದ ದೂರವಿರಿಸಲ್ಪಟ್ಟಳು. ಅವಳು ಕುಟುಂಬದೊಳಗೆ ಕೇಂದ್ರೀಕರಿಸಲ್ಪಟ್ಟಳು. ಮಕ್ಕಳನ್ನು ಹೇರುವ ಹೊರುವ ಪಾತ್ರಗಳಲ್ಲೆ, ನಿರತಳಾದಳು. ಹೀಗಾಗಿ ಸಮಾಜದ ಮೂಲ ಕ್ಷೇತ್ರಗಳಾದ

ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ಕ್ಷೇತ್ರಗಳಿಂದ ದೂರವಾದಳು. ಇದು ಇಂದು ಸಮಾಜದಲ್ಲಿ ಭಾರತೀಯ ಮಹಿಳೆಯು ಅನುಭವಿಸುತ್ತಿರುವ ಶೋಷಣೆಯಿಂದ ತಿಳಿಯಬಹುದೆಂದು ಇದಕ್ಕೆ ಮುಖ್ಯಕಾರಣ. ಸಮಾಜ ಸಂರಚನೆಯಲ್ಲಿರುವ ಹೆಣ್ಣು ಮತ್ತು ಗಂಡಿನ ನಡುವಿನ ಅಸಮಾನ ಸಾಂಸ್ಕೃತಿಕ ಅಂಶಗಳು ಹಾಗೂ ಅವಳ ಹಿಂದಿರುವ ವಿರೋಧಾಭಾಸಗಳು" (ಮಂಗಳಾ ಪ್ರಿಯದರ್ಶಿನಿ, ೨೦೦೭, ಪು.೫೨) ಇದಕ್ಕೆ ಪೂರಕವೆನ್ನುವಂತೆ ಫ್ರಾನ್ಸ್ ದೇಶದ ಸ್ತ್ರೀವಾದಿ ಚಿಂತಕಿ ಸಿಮೋನ ದ ಬೋವಾರವರ (The Second Sex) ಕೃತಿಯಲ್ಲಿ ಹೆಣ್ಣಿನ ಸ್ಥಾನ 'ಎರಡನೆ ದರ್ಜೆಯದು' ಎಂಬ ಸ್ಥಿರ ಮಾದರಿ ಪಾತ್ರವನ್ನು ಒಡೆಯುವ ಸಂದರ್ಭದಲ್ಲಿ "ಹೆಣ್ಣು ಒಂದು ಜೈವಿಕ ಘಟಕವೇ ಹೊರತು ಚಾರಿತ್ರಿಕ ಘಟಕವಲ್ಲ,

ಹೆಣ್ಣಿಗೆ ಸ್ವತಃ ವ್ಯಕ್ತಿತ್ವ ಇಲ್ಲದಂತೆ, ಪುರುಷ ಮಾಡಿರುವುದರಿಂದಲೆ, ಹೆಣ್ಣು, ಗಂಡಿಗೆ ಅಧೀನಗಳಾಗಿದ್ದಾಳೆ ಎನ್ನುವ ಅಭಿಪ್ರಾಯವನ್ನು ಮಂಡಿಸುತ್ತಾ ಮಾನವ ಕುಲವನ್ನು 'ಗಂಡಸು' ಎಂದು ವ್ಯಾಖ್ಯಾನಿಸಲಾಗಿದೆ. ಹೆಣ್ಣನ್ನು ಗಂಡಿನ ಅಧೀನಕ್ಕೆ ಒಳಪಡಿಸಿಕೊಂಡಿದ್ದರಿಂದಲೇ ಅವನು ಆಕೆಯನ್ನು ಬೇಕಾದ ಹಾಗೆ ಬಳಸಿಕೊಳ್ಳುತ್ತಾನೆ, ನಡೆಸಿಕೊಳ್ಳುತ್ತಾನೆ, ರೂಪಿಸಿಕೊಳ್ಳುತ್ತಾನೆ. ಅವಳ ಮೇಲೆ ಅಧಿಕಾರ ಚಲಾಯಿಸುತ್ತಾನೆ" (ಸಿಮೋನ ದ ಬೋವಾ, ಉದ್ಧೃತ ಮಂಗಳಾ ಪ್ರಿಯದರ್ಶಿನಿ, ೨೦೦೭, ಪು.೪೩) ಎಂದು ಮುಂದುವರೆದು ಜೈವಿಕತೆಯನ್ನಾಧರಿಸಿದ ಸಂಪ್ರದಾಯ ಆಚರಣೆಗಳು ಲಿಂಗಾಧಾರಿತ ಶ್ರಮವಿಭಜನೆಗೆ ಉಂಟು ಮಾಡಿರುವ ಬಂಧನವು "ಮುಖ್ಯವಾಗಿ ಯಾವ ಮನೆ, ಕುಟುಂಬಗಳು ಹೆಣ್ಣು ತನ್ನ ರಕ್ಷಣೆ ಕೇಂದ್ರಗಳೆಂದೂ ಭಾವಿಸಿದಳೋ ಅದೇ ಅವಳನ್ನು ಬಂಧನದಲ್ಲಿರಿಸಲು ಸಹಾಯಕಾರಿಯಾದವು" (ಮಂಗಳಾ ಪ್ರಿಯದರ್ಶಿನಿ, ೨೦೦೭,ಪು.೫೩) ಹೀಗೆ ಬಂಧನ ಮತ್ತು ಲಿಂಗಾಧಾರಿತ ಶ್ರಮವಿಭಜನೆ ಪರಿಪೂರ್ಣವಾಗಿ ತೊಲಗಬೇಕಾದರೆ ಹೆಣ್ಣು ಮನೆಯಾಚೆ ದುಡಿದರೆ ಅವಳಿಗೆ ಸಮಾನತೆ ದೊರೆಯಬಲ್ಲದು. ಸಂಪೂರ್ಣ ಸ್ವತಂತ್ರಗಳಾಗುತ್ತಾಳೆ. ಇದರ ಜೊತೆಗೆ ಹೆಣ್ಣೆಂಬ ಕಾರಣಕ್ಕಾಗಿಯೇ ಅವಳ ಕುರಿತು ಬೆಳೆಸಿಕೊಂಡು ಬಂದ ಸಾಂಪ್ರದಾಯಿಕ ಮನೋಭಾವಗಳಿಂದ ಸಮಾಜವನ್ನು ಬದಲಾಯಿಸಬೇಕಾಗಿದೆ ಎಂದು ಹೇಳಿರುವುದು ಕಂಡುಬರುತ್ತದೆ. ಈ ಕುರಿತಾಗಿ ಕೂಡ ಖ್ಯಾತ ಸ್ತ್ರೀವಾದಿ ಚಿಂತಕಿ ಬೆಟ್ಟಿ ಫ್ರೀಡಮ್ ಹೆಣ್ಣಿನ ಸಿದ್ಧ ಮಾದರಿ ಪಾತ್ರಗಳನ್ನು ಕುರಿತು ವಿವರಿಸುವಾಗ 'The Feminimisticನಲ್ಲಿ "ಹೆಣ್ಣು ಪಾರಂಪರಿಕ ಸಮಾಜದಲ್ಲಿ ಕೇವಲ ತಾಯಿಯ ಅಥವಾ ಹೆಂಡತಿ ಪಾತ್ರದಷ್ಟೆ ಇಟ್ಟು ನೋಡುವುದರಿಂದ, ಅವಳು ಬೇರೆ ಬೇರೆ ರೀತಿಯಲ್ಲಿ ತನ್ನ ವ್ಯಕ್ತಿತ್ವವನ್ನು ಅರಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಇದು ಹೆಣ್ಣಿಗೆ ಅಷ್ಟೆ ಆಗುವ ಅನ್ಯಾಯವಲ್ಲ. ಒಟ್ಟು ಸಮಾಜಕ್ಕೆ ಆದ ಅನ್ಯಾಯ ಆದುದರಿಂದ ಹೆಣ್ಣು ಸಂಪ್ರದಾಯಿಕ ಪಾತ್ರಗಳ ನಿರ್ವಹಣೆಯಿಂದ ಹೆಣ್ಣು ತೃಪ್ತಿಗೊಳ್ಳಬಾರದು ಈ ಸಿದ್ಧಪಾತ್ರಗಳ ಚೌಕಟ್ಟಿನಿಂದ ಹೊರಬರಬೇಕು, ಮನೆಯಿಂದಾಚೆ ಹೊರಬಂದು

ಸಮಾಜದಲ್ಲಿ ಬೇರೆ ಬೇರೆ ಉದ್ಯೋಗಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಾಗ ಅವಳಿಗೆ ಸಿದ್ಧ ಪಾತ್ರಗಳಿಂದ ವಿಮುಕ್ತಿ ದೊರೆಯಲು ಸಾಧ್ಯವಾಗುತ್ತದೆ. ಮನೆಯಿಂದ ಹೊರಬಂದು ದುಡಿಯಲಾರೆ ಎಂದು ಹೇಳುವ ಹೆಣ್ಣಿನ ಮನೋಭಾವವನ್ನು ಪುನರಿಸ್ಕರಿಸಬಾರದು, ಹೆಣ್ಣು ಹೊರಬಂದು ದುಡಿಯುವ ಮೂಲಕ ಅವಳ ವ್ಯಕ್ತಿತ್ವ ವಿಕಾಸ, ಕೌಟುಂಬಿಕ ವಿಕಾಸ, ಸಮಾಜ ವಿಕಾಸಕ್ಕೆ ಕಾರಣವಾಗುವುದರಿಂದ, ಹೆಣ್ಣು ಹೊರಬಂದು ದುಡಿಯುವುದನ್ನು ಒತ್ತಾಯಿಸುತ್ತಾರೆ (ಬೆಟ್ಟಿ ಫ್ರೀಡನ್ – ಉದ್ಧೃತ ಮಂಗಳ ಪ್ರಿಯದರ್ಶಿನಿ, ೨೦೦೭, ಪು.೬೪).

ಮಾರ್ಕ್ಸ್‌ವಾದ, ಮಾರ್ಕ್ಸ್ ಮತ್ತು ಏಂಗೆಲ್ಸ್‌ನ ವಿಚಾರದೊಂದಿಗೆ ಬೆಳೆದಂತೆ ಮಾರ್ಕ್ಸ್‌ವಾದ ಹೆಣ್ಣು–ಗಂಡಿನ ಕುರಿತು ಹೇಳುವಾಗ ಅವರ ಪ್ರಕಾರ ಹೆಣ್ಣಿನ ಶೋಷಣೆಗೆ ಗಂಡಿನ ಬದುಕಿನ ಗುರಿಯೇನು ಅಲ್ಲ. ಬಂಡವಾಳಶಾಹಿ ವ್ಯವಸ್ಥೆಯು ಒಂದು ಭಾಗವಾಗಿ ಈ ಶೋಷಣೆ ರೂಪುಗೊಳ್ಳುತ್ತದೆ. ಕುಟುಂಬದೊಳಗಿನ ಶ್ರಮವಿಭಜನೆಯಲ್ಲಿರುವ ತಾರತಮ್ಯ ಈ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಗೆ ಕಾರಣವಾಗಿರುವುದನ್ನು ಮಾರ್ಕ್ಸ್‌ವಾದ ಗುರುತಿಸುತ್ತದೆ. ಹಾಗೇ ಲಿಂಗಾಧಾರಿತ ಶ್ರಮವಿಭಜನೆಯಲ್ಲಿ ಉಂಟಾಗಿರುವ ಹೆಣ್ಣಿನ ಶ್ರಮದ ದುಡಿಮೆಯನ್ನು ದಾಖಲಿಸದೆ ಹೋದದ್ದನ್ನು ಮಾರ್ಕ್ಸ್‌ವಾದ ಕಟುವಾಗಿ ಟೀಕಿಸುತ್ತದೆ. ಯಾಕೆಂದರೆ ಕೌಟುಂಬಿಕ ಜವಾಬ್ದಾರಿಯಿಂದಾಗಿ ಅವಳನ್ನು ಸಾರ್ವಜನಿಕ ರಂಗದಲ್ಲಿ, ಉತ್ಪಾದನೆಯಲ್ಲಿ ಭಾಗಿಯಾಗಲು ಬಿಟ್ಟಿಲ್ಲ. ಆದುದರಿಂದ ಹೆಣ್ಣಿನ ಶೋಷಣೆ ಉಂಟಾಗಿದೆ ಎಂದು ಹೇಳುತ್ತದೆ. ಮತ್ತೆ ಏಂಗೆಲ್ಸ್ ಶ್ರಮವಿಭಜನೆ ಕುರಿತು ವಿವರಿಸುವಾಗ ಸ್ತ್ರೀ–ಪುರುಷರಿಗೆ ಸಮಾನವಾಗಿ ಶ್ರಮವಿಭಜನೆವಿರಬೇಕೆಂದು ಭಾವಿಸಿದ್ದಾನೆ. ಮುಂದುವರೆದು ಅವರು "ಸ್ತ್ರೀಪುರುಷರ ನಡುವಿನ ಲಿಂಗಾಧಾರಿತ ಶ್ರಮ ವಿಭಜನೆ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಲಿಂಗ ಸಮಾನತೆ ಸಾಧ್ಯವಾಗುವುದಿಲ್ಲ. ಎಲ್ಲಿಯವರೆಗೆ ಲಿಂಗ ಸಮಾನತೆ ಸಾಧಿತವಾಗುವುದಿಲ್ಲವೋ ಅಲ್ಲಿಯವರೆಗೆ ಅವಳ ವಿಮೋಚನೆ ಕೂಡ ಸಾಧ್ಯವಾಗುವುದಿಲ್ಲ" (ಮಂಗಳ ಪ್ರಿಯದರ್ಶಿನಿ, ೨೦೦೭, ಪು.೭೦).

"ಹೆಣ್ಣಿಗೆ ಮನೆಯಲ್ಲಿ ಮಾಡುವ ಕೆಲಸ ಕಾರ್ಯಗಳು ಆರ್ಥಿಕವಾಗಿ ಅವರಿಗೆ ಸಹಾಯಕವಲ್ಲ ಎಂದ ಮಾತ್ರಕ್ಕೆ ಅವಳ ಕೆಲಸ ಕಾರ್ಯಗಳು ದುಡಿಮೆ ಬೆಲೆಯಿಲ್ಲದ್ದೆ ಅಥವಾ ಬೆಲೆಯಲ್ಲ ಎಂದಾಗ ಅದು ನಿಷ್ಪ್ರಯೋಜಕವೇ? ಅಂತಹ ಮಹಿಳಾ ದುಡಿಮೆ ಸಂಬಂಧಪಟ್ಟ ಪ್ರಶ್ನೆಗಳು ಚರ್ಚೆ ಮಾಡಿ ನಂತರ ಮಹಿಳೆಯ ಇಬ್ಬಗೆಯ ದುಡಿಮೆಯನ್ನು ಅತ್ಯಂತ ಪ್ರಮುಖ ಕೊಡುಗೆ ಎಂದು ಮಾರ್ಕ್ಸ್‌ವಾದಿಗಳು ಹೇಳಿರುವುದು" (ಉದ್ಧೃತ ಮಂಗಳ ಪ್ರಿಯದರ್ಶಿನಿ, ೨೦೦೭, ಪು.೭೧) ಗಮನಿಸಬೇಕು. ಹೆಣ್ಣಿನ ದೇಹರಚನೆಯ

ಕಾರಣವನ್ನು ಮುಂದಿಟ್ಟುಕೊಂಡು ಅವಳನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷನಂತೆ ಸರಿಸಮನವಾಗಿ ಭಾಗವಹಿಸಲು ಸಾಧ್ಯವಿಲ್ಲ ಎಂಬ ತಿಳುವಳಿಕೆಯನ್ನು ಮಾರ್ಕ್ಸ್‌ವಾದಿಗಳು ಪ್ರಶ್ನೆ ಮಾಡಿರುವರು. "ಹೆಣ್ಣು ಹೊರುವ, ಹೆರುವ ಯಂತ್ರವಾಗಿ ಪರಿಗಣಿಸಿದ್ದೆ ಅವಳ ಶೋಷಣೆ ಮೂಲವಾಯಿತು. ತನಗಿಲ್ಲದ ಸೃಷ್ಠಿಶೀಲ ಶಕ್ತಿ ಹೆಣ್ಣಿನಲ್ಲಿರುವುದರಿಂದಲೇ ಅವಳ ಮೇಲೆ ಪುರುಷ ನಿಯಂತ್ರಣವನ್ನು ಹಾಕಲಾರಂಭಿಸಿದ. ಒಟ್ಟಾರೆಯಾಗಿ ಹೆಣ್ಣಿನ ಅಸಮಾನತೆಯನ್ನು ತೊಡೆದು ಹಾಕಬೇಕಾದರೆ ಹೆಣ್ಣಿನ ಜೈವಿಕ ಕ್ರಿಯೆ ಮೇಲೆ ಇರುವ ಅವನ ಯಜಮಾನತ್ವವನ್ನು ತಿರಸ್ಕರಿಸಬೇಕು ಎಂದು ಹೇಳುತ್ತಾರೆ" (ಮಂಗಳ ಪ್ರಿಯದರ್ಶಿನಿ, ೨೦೦೭, ಪು.೭೬).

ಜೈವಿಕ ಕ್ರಿಯೆಯಾದ 'ತಾಯ್ತಿನ'ದ ಆಧಾರವನ್ನು ಇಟ್ಟುಕೊಂಡು ಹೆಣ್ಣಿನ ಮೇಲೆ ಹೇರಿರುವ ಶ್ರಮವನ್ನು ಕುರಿತು 'ವುಮೆನ್ಸ್ ವರ್ಕ ದಿ ಹೌಸ್ ವೈಫ್, ಪಾಸ್ಟ್ ಅಂಡ್ ಪ್ರೆಸೆಂಟ್' ಕೃತಿಯಲ್ಲಿ ಆನ್ಲ್ ಒಕ್ಲೆರವರು 'ತಾಯ್ತಿನದ'ದ ಕುರಿತು ಸಂದರ್ಭದಲ್ಲಿ 'ತಾಯ್ತಿನ'ವನ್ನು ಪಾರಂಪರಿಕ ನಂಬಿಕೆಯನ್ನು ಒಪ್ಪಿಕೊಳ್ಳದೆ, ಮಗುವನ್ನು ತಾಯಿಯೊಬ್ಬಳೆ ಕಾಪಾಡಬಲ್ಲಳಾಗುತ್ತಾಳೆ ಎಂಬುದು ಶೇಕಡ ನೂರರಷ್ಟು ಸತ್ಯವಲ್ಲ, ಮಗುವಿನ ಬೆಳವಣಿಗೆಗೆ ಸಂದರ್ಭದಲ್ಲಿ ಪ್ರೀತಿ, ಮಾರ್ಗದರ್ಶನ, ಸಹಕಾರ, ಶಿಸ್ತು ಇವುಗಳು ಅಗತ್ಯವಿದ್ದು, ಅದನ್ನು ತಾಯಿಯೋ ಮಾಡಬೇಕೆಂದಿಲ್ಲ. ಅದನ್ನು ಅದರ ಮೇಲೆ ಪ್ರೀತಿಯಿಟ್ಟಿರುವ ಯಾರಾದರೂ ಮಾಡಬಹುದು. ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಇಕ್ಕಟಿಗೆ ಸಿಲುಕಿಸಲೆಂದೇ ತಾಯ್ತಿನವನ್ನು ವೈಭವೀಕರಿಸಿದೆ. ಹೆಣ್ಣಿನ ಮೇಲೆ ತಾಯ್ತನದ ಹೊಣೆಗಾರಿಕೆಯನ್ನು ಬಲವಂತವಾಗಿ ಹೇರಲಾಗಿದೆ. ತಾಯ್ತಿನವು ಹೆಣ್ಣಿಗೆ ವೈಭವೀಕರಿಸುವ ಮೌಲ್ಯವಾಗಿದೆ. ಇದಕ್ಕೆ ಏಡ್ರಿಯನ್ ರಿಚರವರು 'Women Born Mother Wood Experinces and Insitution' ಗ್ರಂಥದಲ್ಲಿ "ತಾಯಿ ಪಾತ್ರವನ್ನು ನಿರ್ವಹಿಸಿದಿದ್ದರೆ ಅವಳು ಹೆಣ್ಣೆ ಅಲ್ಲ ಎಂಬ ಭಾವನೆಯುಂಟು ಮಾಡಿದೆ. ಹೆಣ್ಣು ಮಾಡುವ ಕೆಲಸಗಳನ್ನು ಗಂಡು ಮಾಡಬಲ್ಲ. ಉದಾಹರಣೆಗೆ; ಒಂದು ಮಗುವಿಗೆ ಊಟ ತಿನ್ನಿಸುವುದು, ನಿದ್ದೆ ಮಾಡಿಸುವುದು, ವಿದ್ಯೆ ಬುದ್ಧಿಗಳನ್ನು ಹೇಳಿಕೊಡುವುದು ಗಂಡು ಮಾಡಬಹುದೆಂದು" (ಮಂಗಳ ಪ್ರಿಯದರ್ಶಿನಿ, ೨೦೦೭, ಪು.೭೯). ಹೆಣ್ಣಿನ ಪರಾಧೀನತೆ ಸ್ಥಿತಿ ಉಂಟಾಗುವುದಕ್ಕೆ ಹೆಣ್ಣಿನ ಜೈವಿಕತಗಿಂತ ಸಮಾಜಿಕ ರಚನೆಯೆ ಪ್ರಮುಖ ಕಾರಣ ಎಂದು ಶೂಲಮಿಥ್ ಫೈರಸ್ಟೋನ್, ಬೆಟ್ಟಿ ಫ್ರೀಡನ್, ಕೆಟ್ಟ ಮಿಲ್ಲಟ್ ಮೊದಲಾದ ಸ್ತ್ರೀವಾದಿಗಳು ಹೇಳಿರುವುದು ಅವರ ಚಿಂತನೆಯಲ್ಲಿ ಕಂಡು ಬರುತ್ತದೆ. ಇದಕ್ಕೆ ಕೆಟ್ಟ ಮಿಲ್ಲೆಟ ತನ್ನ 'Sexual Politic'ನಲ್ಲಿ "ಮಹಿಳೆಯನ್ನು ಕುರಿತಂತೆ, ಆಕೆಯ ಶಕ್ತಿ ಸಾಮರ್ಥ್ಯಗಳನ್ನು ಕುರಿತಂತೆ, ಅಪನಂಬಿಕೆ ಹಾಗೂ ಸಂಕುಚಿತ ಮನೋಭಾವವೇ ಎನ್ನುತ್ತಾಳೆ". ಇದರಲ್ಲಿ

ಹೆಣ್ಣಿನ ಸಾಮರ್ಥ್ಯವನ್ನು ಕುರಿತಂತೆ ಸೃಷ್ಟಿ ಮಾಡಿರುವ ಅಪನಂಬಿಕೆಗಳು, ಹೆಣ್ಣಿಗೆ ಸಂಕುಚಿತ ತಂದು ಆಕೆಯನ್ನು ಗೃಹಕ್ಕೆ ಸೀಮತಗೊಳಿಸುತ್ತವೆ ಎನ್ನುವ ಅಂಶವನ್ನು ಹೇಳುತ್ತಾಳೆ. ಅದರಂತೆ ಮನೋವಿಶ್ಲೇಷಣಾತ್ಮಕ ಸ್ತ್ರೀವಾದಿಗಳೂ ಕೂಡ ವ್ಯಕ್ತಿಯ, ವ್ಯಕ್ತಿತ್ವ ವಿಕಾಸದಲ್ಲಿ ಜೈವಿಕತೆಗಿಂತಲೂ ಜೈವಿಕೇತರ ಸಂಬಂಧಗಳು ಮುಖ್ಯ ಪ್ರಭಾವ ಬೀರುತ್ತವೆ. ಲಿಂಗಾಧಾರಿತ ಶ್ರಮದ ಕುರಿತಾಗಿ ಮಕ್ಕಳನ್ನು ಪಾಲಿಸುವುದು, ಪೋಷಿಸುವ ಸಂದರ್ಭದಲ್ಲಿ ತಾಯಿಯೇ ಎಲ್ಲ ಜವಾಬ್ದಾರಿಗಳನ್ನು ಹೊರಬೇಕೆಂಬ ನಿಯಮವೇನು ಇಲ್ಲ. ಪಾರಂಪರಿಕತೆ ತಾಯಿಯೇ ಮಕ್ಕಳ ಪಾಲನೆ, ಪೋಷಣೆ ಮಾಡಬೇಕೆಂದು ನಂಬುತ್ತದೆ. ಅದು ಪ್ರಕೃತಿ ಸಹಜ ಎಂಬುದು ಅದರ ತಿಳುವಳಿಕೆ. ಆದರೆ ಇದು ಸತ್ಯವಾದ ಅಂಶವಲ್ಲ, ಪುರುಷರಿಗೆ ಮಾತೃತ್ವದ ಅರಿವಾಗುವುದು ತಾನು ಮಕ್ಕಳು ಪೋಷಣೆ ಮಾಡಿದಾಗ ಮಾತ್ರ, ಆಗ ಹೆಣ್ಣು ಗಂಡುಗಳಿಬ್ಬರ ಪಾತ್ರದ ಬಗ್ಗೆ ಸಮಾನವಾದ ಗೌರವ, ಕಳಕಳಿ ಉಂಟಾಗುತ್ತವೆ ಎಂದಿರುವುದು. ಮತ್ತು ಡಿನ್ನರ್ ಸ್ಟ್ರೈನ್‌ಗೆ ಸಮಾಜದಲ್ಲಿ ಲಿಂಗಾಧಾರಿತ ಪಾತ್ರಗಳು ವಿಭಿನ್ನತೆ ಮತ್ತು ಭಿನ್ನ ಶ್ರಮವಿಭಜನೆಗಳು, ಹುಸಿಯಾದ ವ್ಯವಸ್ಥೆಗಳನ್ನು ಒಡೆದು ಛಿದ್ರಗೊಂಡಾಗ ಮಾತ್ರ ಗಂಡು ಮತ್ತು ಹೆಣ್ಣುಗಳಿಬ್ಬರೂ ಬದುಕಿನಲ್ಲಿ ತಮ್ಮ ನಿಜವಾದ ವ್ಯಕ್ತಿತ್ವವನ್ನು ಸಮರ್ಥವಾಗಿ ರೂಪಿಸಿಕೊಳ್ಳಲು, ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯವನ್ನು ಮುಂದಿಡುತ್ತಾರೆ. ಹೀಗೆ ಜೈವಿಕತೆಯನ್ನಾಧರಿಸಿದ ಸಂಪ್ರದಾಯ ಆಚರಣೆಗಳು ಸೃಷ್ಟಿ ಮಾಡಿರುವ ಲಿಂಗಾಧಾರಿತ ಶ್ರಮ ವಿಭಜನೆ ಪ್ರತಿವಾದಿಗಳನ್ನು ಸ್ತ್ರೀವಾದ ಸ್ತ್ರೀವಾದಿ ಚಿಂತಕರು, ಸಿದ್ಧಾಂತಗಳು ಮಂಡಿಸುವುದು ಕಂಡುಬರುತ್ತದೆ.

ಸಂಪ್ರದಾಯಿಕ ಮನೋಭಾವನೆಯಿಂದ ಹೆಣ್ಣನ್ನು ವೈಭವೀಕರಿಸುತ್ತ ಅವಳ ತಾಳ್ಮೆ, ಧಾರಣೆ, ಶಕ್ತಿಗಳನ್ನು ಕೊಂಡಾಡುತ್ತಾ ಅವಳನ್ನು ಭಾವುಕ ನೆಲೆಯಲ್ಲಿ ಗುರುತಿಸಿ, ಪುರುಷನನ್ನು ಶಕ್ತಿ ಸಾಮರ್ಥ್ಯ, ಸಾಹಸ, ವಿಚಾರವಂತಿಕೆ, ತೀರ್ಮಾನ ಗುಣಗಳನ್ನು ಮಹತ್ವದೆಂದು ಭಾವಿಸಿ ಪುರುಷನನ್ನು ಬೌದ್ಧಿಕ ನೆಲೆಯಲ್ಲಿ ಗುರುತಿಸುವ ಪರಂಪರೆಯ ಸಂಸ್ಕೃತಿ ಸ್ತ್ರೀವಾದವು ವಿರೋಧಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯ ಹೆಣ್ಣಿನಿಂದ ನಿರೀಕ್ಷಿಸುವ ಗುಣ ಮೌಲ್ಯಗಳು ಪಿತೃಪ್ರಧಾನ ಸಮಾಜದ ರಚನೆಗಳಾದ್ದರಿಂದ ಅವುಗಳಿಂದ ಹೆಣ್ಣನ್ನು ಬಿಡುಗಡೆಗೊಳಿಸಿಕೊಳ್ಳಬೇಕಿದೆ. "ಸಮಾಜದಲ್ಲಿ ರೂಢಿಗತವಾಗಿ ನಡೆದುಕೊಂಡು ಬಂದಿರುವ ನಂಬಿಕೆಗಳಲ್ಲಿ ಆಗಬೇಕಾಗಿರುವ ಬದಲಾವಣೆಗಳನ್ನು ಕುರಿತು ಚಿಂತಿಸುವುದು. ಮತ್ತು ಅದಕ್ಕೆ ಒತ್ತಾಯಿಸುವುದು ಹಾಗೇ ಹೆಣ್ಣನ್ನು 'ಲಿಂಗ'ದ ಕಾರಣದಿಂದಲೆ ಅವಳನ್ನು ದಮನಗೊಳಿಸಲಾಗಿರುವ ಸಂಗತಿಗಳು, ಅವಳ ಜೈವಿಕ ಸ್ಥಿತಿಗಾಗಲಿ, ಮಾನಸಿಕ ಸ್ಥಿತಿಗಾಗಲಿ,

ಅವಳ ಅಭಿವ್ಯಕ್ತಿ ಅಭಿಪ್ರಾಯಗಳು, ಗೌಣವಾಗಿರುವುದನ್ನು ಪುನರ್‌ವ್ಯಾಖ್ಯಾನ, ಪುನರ್‌ಚಿಂತನೆಗಳನ್ನು ಮಾಡಬೇಕೆಂದು ಸ್ತ್ರೀವಾದಿಗಳು ಒತ್ತಾಯಿಸುತ್ತಾರೆ.

ಹೀಗೆ ಸ್ತ್ರೀವಾದ, ಸ್ತ್ರೀವಾದಿ ಚಿಂತಕರು ಹಲವು ಸಿದ್ಧಾಂತ, ಚಿಂತನೆಗಳ ಮೂಲಕ ಪಾರಂಪರಿಕವಾಗಿ ಮುನ್ನಡೆದುಕೊಡು ಬಂದಿರುವ, ಬರುತ್ತಿರುವ ಸಾಂಪ್ರದಾಯಿಕ ಮೌಲ್ಯಗಳನ್ನು ಮತ್ತು ಹೆಣ್ಣಿನ ಜೈವಿಕತೆಯನ್ನು ಆಧಾರವಾಗಿಟ್ಟುಕೊಂಡು ಸೃಷ್ಠಿ ಮಾಡಿರುವ ನಂಬಿಕೆಗಳನ್ನು ಮುರಿದು ಲಿಂಗಸಮಾನತೆ ತರುವ ಪ್ರಯತ್ನ ಮಾಡಿರುವುದು ಕಂಡುಬರುತ್ತದೆ. ಹೆಣ್ಣಿನ ಜೈವಿಕತೆಯನ್ನು ಆಧಾರವಾಗಿಟ್ಟುಕೊಂಡು ಸೃಷ್ಠಿಮಾಡಿರುವ ಸಂಪ್ರದಾಯ ಆಚರಣೆಗಳು ಹೆಣ್ಣನ್ನು ಕೇವಲ ಶ್ರಮವಿಭಜನೆಯೊಂದೇ ನೆಲೆಯಲ್ಲಿ ಅಲ್ಲ, ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ನೆಲೆಗಳಿಂದಲೂ ಶೋಷಣೆಗೆ ಒಳಪಡಿಸಿದೆ. ಆದುದರಿಂದ ಮುಂದಿನ ಅಧ್ಯಾಯದಲ್ಲಿ ಸಂಪ್ರದಾಯ ಆಚರಣೆಗಳು ಹೇಗೆ ಸಾಮಾಜಿಕ ಲಿಂಗಾ ಅಸಮಾನತೆಯನ್ನು ಸೃಷ್ಠಿಗೊಳಿಸಿವೆ ಎನ್ನುವ ಸಂಗತಿಯನ್ನು ಅಧ್ಯಯನ ಮಾಡಲಾಗಿದೆ.

ಅಡಿ ಟಿಪ್ಪಣಿ

೧. ಹೇಮಲತಾ ಎಚ್.ಎಂ., ೨೦೦೪, **'ಮಹಿಳಾ ಅಧ್ಯಯನ ಸಂಚಿಕೆ'**, ಡಿ.ವಿ.ಕೆ.ಮೂರ್ತಿ, ಮೈಸೂರು ಪು.೩೪

೨. ಶ್ರೀಮತಿ ಎಚ್.ಎಸ್., ೨೦೦೪, **'ಹೆಣ್ಣು–ಹೆಂಗಸು'**, ಬಾಲ್ಯದ ಕೆರೆ ಪ್ರಕಾಶನ, ಮಂಡ್ಯ, ಪು.೧೧೯

೩. ಶ್ರೀಮತಿ ಎಚ್.ಎಸ್., ೨೦೦೪, **'ಚಹರೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೪೨

೪. ಅದೇ, ಪು.೪೨

೫. ಶ್ರೀಮತಿ ಎಚ್.ಎಸ್., ೨೦೦೪, **'ಸ್ತ್ರೀವಾದ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೩೬

೬. ಅದೇ, ಪು.೩೬, ೩೭

೭. ಶ್ರೀಮತಿ ಎಚ್.ಎಸ್., ೨೦೦೪, **'ಹೆಣ್ಣು–ಹೆಂಗಸು'**, ಬಾಲ್ಯದ ಕೆರೆ ಪ್ರಕಾಶನ, ಮಂಡ್ಯ, ಪು.೨೦

೮. ಶ್ರೀಮತಿ ಎಚ್.ಎಸ್., ೨೦೦೪, **'ಸ್ತ್ರೀವಾದ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೭೧

೯. ಶ್ರೀಮತಿ ಎಚ್.ಎಸ್., ೨೦೦೪, **'ಚಹರೆ'**, ಇಳಾ ಪ್ರಕಾಶನ, ಬೆಂಗಳೂರು, ಪು.೪

೧೦. ಅಶ್ವಿನಿದೊಂಗಡೆ, ೨೦೦೫, **'ಸ್ತ್ರೀವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆಗಳು'**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೩೫

೧೧. ಶ್ರೀಮತಿ ಎಚ್.ಎಸ್., ೨೦೦೪, **'ಚಹರೆ'**, ಇಳಾ ಪ್ರಕಾಶನ, ಬೆಂಗಳೂರು, ಪು.೧೧೫

೧೨. ಮಂಗಳಾ ಪ್ರಿಯದರ್ಶಿನಿ, ೨೦೦೭, **'ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಪ್ರವೇಶಿಕೆ'**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೭

೧೩. ಅದೇ, ಪು.೫೨

೧೪. ಅದೇ, ಪು.೪೩

೧೫. ಅದೇ, ಪು.೫೩

೧೬. ಅದೇ, ಪು.೬೪

೧೭. ಅದೇ, ಪು.೭೦

೧೮. ಅದೇ, ಪು.೭೧

೧೯. ಅದೇ, ಪು.೭೬

೨೦. ಅದೇ, ಪು.೭೯

* * *

ಅಧ್ಯಾಯ ಏಳು

ಸಂಪ್ರದಾಯ ಆಚರಣೆಗಳು : ಲಿಂಗಾಧಾರಿತ ಅಸಮಾನತೆ, ಅಧಿಕಾರ ಹಂಚಿಕೆಯ ಅಸಮಾನತೆ

೭

ಸಂಪ್ರದಾಯ ಆಚರಣೆಗಳು : ಲಿಂಗಾಧಾರಿತ ಅಸಮಾನತೆ, ಅಧಿಕಾರ ಹಂಚಿಕೆಯ ಅಸಮಾನತೆ

ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುವ ಸಂಪ್ರದಾಯ ಆಚರಣೆಗಳು ಲಿಂಗಾಧಾರಿತ ಅಸಮಾನತೆಯನ್ನು ಸೃಷ್ಟಿಗೊಳಿಸುತ್ತಿವೆ. ಅಸಮಾನತೆಯ ಜೊತೆಗೆ ಅಧಿಕಾರ ಹಂಚಿಕೆಯಲ್ಲೂ ತಾರತಮ್ಯವನ್ನು ಸೃಷ್ಟಿಗೊಳಿಸುತ್ತವೆ ಎನ್ನುವುದರ ಈ ಅಧ್ಯಯನದ ಊಹೆಯಾಗಿದೆ. ಸಮುದಾಯದ ಒಳಗಡೆ ನಡೆಯುವ ಹೆಣ್ಣಿನ ಜೈವಿಕತೆಯನ್ನಾಧರಿಸಿದ ಸಂಪ್ರದಾಯ ಆಚರಣೆಗಳು ಗಂಡು ಹೆಣ್ಣಿನ ಮಧ್ಯೆ ಶ್ರೇಷ್ಠ ಕನಿಷ್ಠತೆಯನ್ನು ಸ್ಥಾಪಿಸುತ್ತಿವೆ. ಜೊತೆಗೆ ಭಿನ್ನ ಲಿಂಗಗಳ ಮಧ್ಯೆ ಅಂತರವನ್ನು ಸೃಷ್ಟಿಗೊಳಿಸುತ್ತವೆ. ಅವುಗಳನ್ನು ಈಗಾಗಲೆ ಅಧ್ಯಯನದಲ್ಲಿ ದಾಖಲಾದವುಗಳನ್ನ ಉಲ್ಲೇಖಗಳನ್ನೇ ಎತ್ತಿಕೊಂಡು ಅವುಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಆದಿಮಾನವರಾಗಿದ್ದ ಕಾಲದಲ್ಲಿ ಗಂಡು ಹೆಣ್ಣಿನ ಮಧ್ಯೆ ಸಮಾನವಾದ ಮುಕ್ತವಾದ. ಜೀವನ ನಡೆಸುವ ಅವಕಾಶವಿತ್ತು. ಆದರೆ ಮಾನವ ವ್ಯವಸ್ಥಿತವಾದ ಬದುಕು ಎನ್ನುವ ಭ್ರಮೆಯಲ್ಲಿ ರೂಢಿಸಿಕೊಂಡ ಸಂಪ್ರದಾಯ ಆಚರಣೆಗಳು ಸಮುದಾಯದಲ್ಲಿ ವಿಸ್ತರಣೆಗೊಂಡು ಲಿಂಗ ಮತ್ತು ಭಿನ್ನ ಜೈವಿಕತೆನ್ನಾಧರಿಸಿ ಲಿಂಗಾಧಾರಿತವಾದ ಅಸಮಾನತೆಯನ್ನು ಹುಟ್ಟುಹಾಕಿರುವುದು ಇದೆ. ನಿಸರ್ಗ ಸೃಷ್ಟಿಯಲ್ಲಿ ಅಸಂಖ್ಯ ಜೀವ ವೈವಿಧ್ಯಗಳಿದ್ದು ಬಹುತೇಕ ಜೀವ ಸಂಕುಲಗಳಲ್ಲಿ ಹೆಣ್ಣು ಗಂಡುಗಳೆಂಬ ಲಿಂಗಭೇಧವಿರುತ್ತದೆ. ಆದರೆ ಈ ಬೇಧಗಳು ನಿಸರ್ಗದಲ್ಲಿ ಪ್ರಕೃತಿ ಸಹಜವಾದಂತಹದ್ದು. ಎರಡು ಭಿನ್ನ ಲಿಂಗಗಳು (ಗಂಡು–ಹೆಣ್ಣು) ಬೆರೆತು ಒಂದಾಗುವ ಮೂಲಕ ಹೊಸದಂದು ಜೀವದ ಸೃಷ್ಟಿಯಾಗುವುದು. ಇದಕ್ಕಾಗಿಯೇ ಹೆಣ್ಣು ಗಂಡು ರೂಪಗೊಂಡಿರುವುದು. ಈ ನಿಸರ್ಗ ಪ್ರಕ್ರಿಯೆಯಲ್ಲಿ ಪ್ರಧಾನ ಅಧೀನ ಎನ್ನುವುದು ಇರುವುದಿಲ್ಲ. ಜೊತೆಗೆ ತಾರತಮ್ಯದ ಪ್ರಶ್ನೆ ಮೊದಲೆ ಬರುವುದಿಲ್ಲ. ಆದರೆ ಸಮಾಜವು ಸೃಷ್ಟಿಸಿದ ಮೌಲ್ಯಗಳಿಂದಾಗಿ ಪ್ರಕೃತಿ ಸಹಜವಾದ ಜೈವಿಕತೆನ್ನಾಧರಿಸಿ ಮೇಲು–ಕೀಳು ಎನ್ನುವಂತಹ ಸಂಗತಿಗಳು ಹುಟ್ಟಿಕೊಂಡಿವೆ. ಇವುಗಳನ್ನು ಆಧರಿಸಿಯೇ ಪ್ರತ್ಯೇಕವಾದ ನೀತಿ ನಿಯಮಗಳು ಸ್ಥಾಪಿತವಾಗಿವೆ. ಆದರೆ ಜೈವಿಕ ಸಂಬಂಧಿ ಕ್ರಿಯೆಗಳನ್ನು ನಡೆಸುವ

ಕಣ್ಣು, ಮೂಗು, ಬಾಯಿ, ಹೃದಯ, ಶ್ವಾಸಕೋಶ, ಮುಂತಾದ ದೇಹದ ವಿವಿಧ ಅಂಗಾಂಗಗಳು ತಮತಮಗೆ ನಿಗದಿತವಾದ ಕೆಲಸಗಳನ್ನು ಮಾಡುವಂತೆ ಜನನಾಂಗಗಳೂ ಸೃಷ್ಟಿ ಕ್ರಿಯೆಯಲ್ಲಿ ತಮಗೆ ನಿಗದಿತವಾದ ಕರ್ತವ್ಯಗಳನ್ನು ಮಾಡುತ್ತವೆ. ಒಂದೇ ವ್ಯತ್ಯಾಸವೆಂದರೆ ಉಳಿದ ಅಂಗಗಳಂತೆ ಜನನಾಂಗಗಳು ಒಂದೇ ವ್ಯಕ್ತಿಯಲ್ಲಿ ಪರಿಪೂರ್ಣವೆನಿಸುವುದಿಲ್ಲ. ವಿಭಿನ್ನ ಲಿಂಗದೊಂದಿಗೆ ಬೆರೆತಾಗಷ್ಟೇ ಅದರ ಕ್ರಿಯೆ ಪೂರ್ಣಗೊಳ್ಳುತ್ತದೆ. ಈ ಕಾರಣದಿಂದ ಹೆಣ್ಣು ಗಂಡುಗಳು ಪರಸ್ಪರ ಅವಲಂಬಿಗಳೆವೆನಿಸುವುದೂ ಅಷ್ಟೇ ಸಹಜ ಒಟ್ಟಾರೆಯಾಗಿ ಲಿಂಗಭೇದ ಎಂಬುದು ಸಹಜ ದೈಹಿಕ ಗುಣ ಲಕ್ಷಣವೇ ಆಗಿದೆ. ಆದರೆ ಈ ನಿಸರ್ಗ ಕ್ರಿಯೆಯನ್ನಾಧರಿಸಿ (ಜೈವಿಕತೆಯನ್ನಾಧರಿಸಿ) ಗಂಡು ಹೆಣ್ಣಿನಲ್ಲಿ ಅನೇಕ ರೀತಿಯಾದ ಭೇದಗಳು ಸೃಷ್ಟಿಗೊಂಡಿವೆ. ಈ ಭೇದಗಳಿಗೆ ಕಾರಣ ಜೈವಿಕತೆಯನ್ನಾಧರಿಸಿದ ಸಂಪ್ರದಾಯ ಆಚರಣೆಗಳು. ಅವುಗಳು ಗಂಡು ಹೆಣ್ಣಿನಲ್ಲಿ ಪ್ರತ್ಯೇಕತೆಯನ್ನು ಸೃಷ್ಟಿಮಾಡಿರುವುದು ಕಂಡುಬರುತ್ತಿದೆ. ಇದಕ್ಕೆ ಹೆಣ್ಣು ಋತುಮತಿಗೊಂಡ ನಂತರ ಹೇಳುವ ಮಾತುಗಳಾದ ದೊಡ್ಡವಳಾದ ಹೆಣ್ಣು ನೀನು ಸೂಕ್ಷ್ಮವಾಗಿ ಇರಬೇಕು, ಒಂದು ವೇಳೆ ಸೂಕ್ಷ್ಮವಾಗಿ ಇರದಿದ್ದರೆ ನಮ್ಮ ಜಾತಿಯಲ್ಲಿ ನಿನ್ನ ಬಗ್ಗೆ ತಪ್ಪಾದ ಅಭಿಪ್ರಾಯ ಮೂಡುತ್ತದೆ. ನೀನು ಹೋರಗಡೆ ಹೋಗುತ್ತೀಯ ಸೂಕ್ಷ್ಮತೆಯಿಂದ ಹೋಗಿಬರಬೇಕು, ಹೆಚ್ಚಾಗಿ ಹೊರಗಡೆ ಹೋಗಬಾರದು. ನೀನು ತಲೆ ಎತ್ತಿ ನಡೆಯಬಾರದು, ತಲೆ ತಗ್ಗಿಸಿಕೊಂಡು ಹೋಗಬೇಕು ಇದಕ್ಕೆ 'ನಮ್ಮ ಜಾತಿಯಲ್ಲಿ ಅಥವಾ ಸಮುದಾಯದಲ್ಲಿ ದೊಡ್ಡವರಾದ (ಋತುಮತಿಗೊಂಡ ನಂತರ) ಹುಡಗಿಯರನ್ನು ನಾವು ಹೆಚ್ಚಾಗಿ ಹೊರಗಡೆ ಕಳುಹಿಸುವುದಿಲ್ಲ ಮತ್ತು ನಾವು ಬಹಳ ಸೂಕ್ಷ್ಮತೆಯಿಂದ ಬೆಳೆಸುತ್ತಿದ್ದೇವೆ' ಎಂದು ಹೇಳುವ ಸಂಗತಿಗಳು ಕೆಲವು ಸಮುದಾಯಗಳಲ್ಲಿ ಕಂಡುಬರುತ್ತದೆ. ಹೀಗೆ ಸ್ತ್ರೀ-ಪುರುಷರಲ್ಲಿ ನಿಸರ್ಗ ಸಹಜವಾದ ಜೈವಿಕತೆಯನ್ನಾಧರಿಸಿ ಸಂಪ್ರದಾಯ ಆಚರೆಣೆಗಳು ಲಿಂಗಾತಾರತಮ್ಯದ ಲಿಂಗಸಮಾನತೆಯನ್ನು ಪ್ರಕಟಿಸಿ ಬಿಟ್ಟಿವೆ. ಇದು ಮನುಕುಲಕ್ಕೆ ಮಾನವಾಭಿವೃದ್ಧಿಗೆ ದುರಂತವಾದ ಸಂಗತಿಯಾಗಿದೆ.

ಗಂಡು ಹೆಣ್ಣಿನಲ್ಲಿ ನಿಸರ್ಗ ಸಹಜ ಸಮಾನ ವೈಶಿಷ್ಟ್ಯ ಸಾಮಾರ್ಥ್ಯಗಳೇ ಇರುವ ಸಂಬಂಧದಲ್ಲಿ ಈ ಲಿಂಗಾಧಾರಿತವಾದ ಅಸಮಾನತೆಗಳು ಸಾಧ್ಯವಾದುದು ಹೇಗೆ ಎಂಬುದನ್ನು ನೋಡಿದರೆ, ಸಮಾಜದ ಜಾತಿ ಸಮುದಾಯಗಳಲ್ಲಿ ಆಳವಾಗಿಬೇರೂರಿರುವ ಜೈವಿಕತೆಯನ್ನಾಧರಿಸಿದ ಸಂಪ್ರದಾಯ ಆಚರಣೆಗಳು ಎನ್ನುವುದು ಗೊತ್ತಾಗುತ್ತದೆ. ಏಕೆಂದರೆ ಜೈವಿಕ ಸಹಜ ಕ್ರಿಯೆಯನ್ನಾಧಾರಿಸಿ ಹೆಣ್ಣಿಗೆ ಕೀಳಿರಿಮೆಯಂತಹ ಸಂಗತಿಗಳನ್ನು ಹೇಳುವುದರ ಮೂಲಕ ಮತ್ತು ಹೆಣ್ಣನ್ನು ಪ್ರತ್ಯೇಕವಾಗಿ ಇರಿಸುವುದರ ಮೂಲಕ ಗಂಡು ಹೆಣ್ಣಿನ ಮಧ್ಯೆ ಯಾವುದೇ ರೀತಿಯಾದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ಸಮಾನತೆ ಸಂಬಂಧವಿಲ್ಲದಂತೆ ಮಾಡಿರುವುದು ಕಂಡುಬರುತ್ತದೆ. ಇದಕ್ಕೆ "ಗೊಲ್ಲ ಸಮುದಾಯದಲ್ಲಿ ಋತುಮತಿಗೊಂಡ

ಮತ್ತು ಮುಟ್ಟಾದ ಹೆಣ್ಣನ್ನು ೩ ದಿನಗಳ ಕಾಲ ಮನೆಯ ಒಳಗೆ ಅಥವಾ ಹೊರಗಡೆ ಸೂತಕ'ದ ಹೆಸರಿನಲ್ಲಿ ಪ್ರತ್ಯೇಕ ಇರುವುದನ್ನು ಕಾಣಬಹುದು ಕಾಲ ಕಳೆದಂತೆ ಕ್ರಮೇಣದಲ್ಲಿ ಈ ಸೂತಕ ಕಡಿಮೆಯೆನಿಸಿದರೂ ವಾಸಿಸುವ ಮನೆಗಳಲ್ಲಿಯೇ ಸೂತಕದ ಜಾಗವನ್ನು ಗುರುತಿಸಿಕೊಂಡು ಮುಟ್ಟಿನ ಸಂಪ್ರದಾಯ ಆಚರಣೆಗಳನ್ನು ಮುಂದುವರೆಸುತ್ತಾರೆ. ಕೆಲವು ಸಮುದಾಯಗಳಲ್ಲಿ ಇದು ಇಂದಿಗೂ ಮುಟ್ಟಿನ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಗೊಲ್ಲ ಬುಡಕಟ್ಟಿನಲ್ಲಿ ಹೆಣ್ಣು ಮೈನೆರೆದಾಗ ದೇವರು ಹಟ್ಟಿ ಮತ್ತು ಮನೆಗಳಿಗೆ ಸೂತಕ ಎಂಬ ನಂಬಿಕೆಯಿದ್ದು ಇಂತಹ ಹೆಣ್ಣು ಮಕ್ಕಳಿಗೆ ಹಟ್ಟಿಯ ಹೊರಗಡೆ ಸಂಕೇತವಾಗಿ ಗುಡಿಸಲು ಕಟ್ಟಿಬಿಡುತ್ತಾರೆ. ಮೈನೆರೆದ ಹೆಣ್ಣು ಮಕ್ಕಳು ಬಿಸಿಲು, ಮಳೆ ಗಾಳಿಯನ್ನದೆ ಬಟಂಬಯಲಿನ್ನಲ್ಲಿಯೇ ಅಥವಾ ಮರದ ಕೆಳಗೆ ಅನಾಥರಂತೆಯೇ ಇಲ್ಲವೇ ಊರಿನ (ಮೇಲು ವರ್ಗದ) ಮನೆಯ ಹೋರಾಂಡದಲ್ಲಿ ಕಾಲ ಕಳೆಯಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಬೇರೆ ಜಾತಿಯ ಯುವಕರು ಗೊಲ್ಲ ಹೆಣ್ಣು ಮಕ್ಕಳಿಗೆ ಕಿರುಕುಳ ಕೊಟ್ಟಿರುವ ಅನೇಕ ನಿದರ್ಶನಗಳಿವೆ. ಮೈನೆರೆದವಳ ಮತ್ತು ಮುಟ್ಟಾದವಳ ಇವರಿಬ್ಬರಲ್ಲಿ ಯಾರ ನೆರಳೂ ಕೂಡ ಯಾರ ಮೇಲೆ ಬಿಳುವಂತಿಲ್ಲ. ಊಟವನ್ನು ಕೊಡುವಾಗ ನಿಂತು ಕೊಡುತ್ತಾರೆ. (ಎತ್ತಿಹಾಕುವ ಮೂಲಕ) ನೀರನ್ನು ಕೂಡ ಕೈ ಬೊಗಸೆಗೆ ಸುರಿಯುತ್ತಾರೆ. ದಿನ ನಿತ್ಯದ ಹೆಣ್ಣಿನ ಬಗ್ಗೆ ಶುಚಿತ್ವದ ಬಗೆ ಗತಿಯೇನು ಎಂಬುದರ ಬಗ್ಗೆ ಯಾರು ಯೋಚಿಸುವುದಿಲ್ಲ. ಅಷ್ಟರ ಮಟ್ಟಿಗೆ ಸೂತಕದ ಹೆಸರಿನಲ್ಲಿ ಮಡಿ ಮೈಲಿಗೆಯ ಸಂಪ್ರದಾಯ ಆಚರಣೆಯನ್ನು ಮಾಡುತ್ತಾರೆಯೇ ಋತುಮತಿಯಾದುದಕ್ಕಾಗಿ ಶಾಲೆಯನ್ನು ಮಧ್ಯೆ ಬಿಡಿಸಿರುವುದು ಹೆಚ್ಚು. ಶ್ರೀಮಂತ ಮನೆತನದ ಹೆಣ್ಣು ಮಕ್ಕಳು ಕೂಡ ಕಾಲೇಜು ವಿದ್ಯಾಭ್ಯಾಸ ಮಾಡಿಲ್ಲ. ಇದು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಶಾಲೆ ಬಿಡಿಸುತ್ತಿರುವುದು ಕಂಡುಬರುತ್ತದೆ. (ಗುರುಲಿಂಗಯ್ಯ ಎಂ., ೨೦೦೫, ಪುಟ.೩೧,೩೨) ಹೀಗೆ ಜೈವಿಕತೆಯನ್ನಾಧರಿಸಿ ಮಡಿ, ಮೈಲಿಗೆ ಎನ್ನುವ ಸಂಪ್ರದಾಯಿಕ ಕಟ್ಟೆಳೆಗಳನ್ನು ಹಾಕುತ್ತವೆ. ಆದರೆ ಪುರುಷನಿಗೆ ಜೈವಿಕತೆಗೆ ಯಾವುದೇ ಮಡಿ, ಮೈಲಿಗೆ ನಿರ್ಬಂಧ ನಿಷೇಧ ಇಲ್ಲ. ಈ ತೆರೆನಾದ ಸಂಗತಿಗಳು ಗಂಡು ಹೆಣ್ಣಿನ ಮಧ್ಯೆ ಲಿಂಗಾಧಾರಿತವಾಗಿ ಮೌಲ್ಯಗಳಿಗೆ ಕಾರಣವಾಗುತ್ತದೆ. ಜೊತೆಗೆ ಲಿಂಗಾಧಾರಿತವಾಗಿ ಸ್ಥಾನಮಾನಗಳು ನಿರ್ಧಾರಗೊಳಿಸುತ್ತವೆ. ಹೀಗೆ ನಿರ್ಧಾರಗೊಳ್ಳುವ ಸ್ಥಾನಮಾನಗಳು ಗಂಡು ಹೆಣ್ಣು ಪ್ರತ್ಯೇಕವಾಗಿ ಇರುವಂತೆ ನೋಡಿಕೊಳ್ಳುತ್ತವೆ. ಹಾಗೂ ಸ್ವಾತಂತ್ರ ಅಧಿಕಾರವನ್ನು ಹಂಚಿಕೆಗೊಳಿಸುತ್ತವೆ.

ಜೈವಿಕತೆಯನ್ನಾಧರಿಸಿ ನಡೆದಿರುವ, ನಡೆಯುತ್ತಿರುವ ಸಂಪ್ರದಾಯ ಆಚರಣೆಗಳು ಲಿಂಗಾಧಾರಿತ ಅಸಮಾನತೆ ಜೊತೆಗೆ ಅಧಿಕಾರದ ವಲಯಗಳಿಂದ ದೂರವಿಡುವಂತಹ ಕೆಲಸ ಮಾಡುತ್ತಿರುವುದು ಇದೆ. ಅದು ಹೇಗೆಂದರೆ ಹೆಣ್ಣು 'ಚಂಚಲೆ', ಹೆಣ್ಣು ಅಧಿಕಾರಕ್ಕೆ

ಯೋಗ್ಯಳಲ್ಲ. ಹೆಣ್ಣು ನಿರ್ಣಾಯ ಸ್ಥಾನಕ್ಕೆ ಯೋಗ್ಯಳಲ್ಲ, ಅವಳು ಯಾವಗಲೂ ಅಡುಗೆ ಮನೆಯಲ್ಲಿಯೇ ಇರಬೇಕು. ಹೆಣ್ಣಾದವಳು ಹೆಚ್ಚಾಗಿ ಮಾತನಾಡಬಾರದು. ಬೇಗನೆ ಮನೆ ಸೇರಬೇಕು, ಹೆಣ್ಣು ಹೆಚ್ಚು ಒತ್ತು ಮನೆಯ ಹೊರಗಡೆ ಇರುವುದು ಸೂಕ್ತವಲ್ಲ ಎಂದು ಸಂಪ್ರದಾಯಿಕ ಮೌಲ್ಯಗಳನ್ನು ಸಮಾಜದಲ್ಲಿ ಬಿತ್ತಿರುವುದೂ ಇದೆ. ಇದನ್ನೆ ಬಹುತೇಕ ವಾಗಿ ಹೆಣ್ಣು ಋತುಮತಿಗೊಂಡ ನಂತರ ಹೇಳಲಾಗುತ್ತದೆ. ಇದರಿಂದಾಗಿ ಸಮಾಜದಲ್ಲಿ ಎಂದರೆ ಹೆಣ್ಣೆಂದರೆ ಅಸ್ತಿತ್ವ ವ್ಯಕ್ತಿತ್ವವಿಲ್ಲ ಎನ್ನುವಂತಾಗಿದೆ. ಆದರೆ ಈ ಗುಣ ಸ್ವಭಾವ ರೀತಿ ನೀತಿ ನಡವಳಿಕೆ ಎಲ್ಲವು ಹೆಣ್ಣಿಗೆ ಆರೋಪಿಸಲ್ಲಟ್ಟ ಗುಣಗಳು ಮತ್ತು ನಯನಾಜುಕು ಸಹನೆ ತ್ಯಾಗ ಕ್ಷಮೆ ಸೇವಾ ಭಾವನೆಗಳತಂಹ ಅನೇಕಾನೇಕ ಮೃದುಗುಣಗಳು ಹೆಣ್ಣಿನವು ಎನ್ನುವಂತೆ ಆರೋಪಿಸುತ್ತವೆ. ಹಾಗೇಯೇ ಹಿಂಜರಿಕೆ ಕೀಳಿರಿಮೆ ಭಯ ನಮ್ರತೆಯಂತಹ ಅನೇಕಾನೇಕ ದೌರ್ಬಲ್ಯಗಳು ಅವಳ ಸ್ವಭಾವ ಎನಿಸುವಂತೆ ಮೌಲ್ಯಗಳನ್ನು ಹೇರಿ ಹೆಣ್ಣಿಗೆ ರೂಪಿಸಲಾಗುತ್ತವೆ. ಇದಕ್ಕೆ "ಈ ಗುಣಸ್ವಭಾವ ನಡುವಳಿಕೆಗಳು ಹುಟ್ಟಿನಿಂದ ಬರುವುದಿಲ್ಲ ಬದಲಿಗೆ ಇವುಗಳನ್ನು ಸಮಾಜವು ವ್ಯಕ್ತಿಗಳಲ್ಲಿ ಪ್ರಯತ್ನ ಪೂರಕವಾಗಿ ಭಿತ್ತಿ ಬೆಳೆಸುತ್ತದೆ." (ಶ್ರೀಮತಿ ಎಚ್.ಎಸ್., ೨೦೦೩, ಪುಟ ೯೫) ಎಂದು ಹೇಳುತ್ತಾರೆ.

ಜೈವಿಕತೆಯನ್ನಾಧಾರಿಸಿ ನಡೆಯುವ ಸಂಪ್ರದಾಯ ಆಚರಣೆಗಳು ಲಿಂಗಾಧಾರಿತ ಅಸಮಾನತೆ, ಅಧಿಕಾರ, ಹಂಚಿಕೆಯಂತಹ ಸಂಗತಿಗಳನ್ನು ಸೃಷ್ಠಿಮಾಡುವುದು ಕಂಡುಬರುತ್ತದೆ. 'ಅಸಮಾನತೆ' "ಯಾವಾಗಲೂ ಮತ್ತೊಬ್ಬರ ಇರುವಿಕೆ ಅಲ್ಲೆಗಳೆದು ವ್ಯವಹರಿಸುವುದು, ಹುಟ್ಟು ಮುಖ್ಯವಾಗುವುದು ಮಾತು ಮತ್ತು ಕೃತಿ ನಡುವೆ ಸಂಬಂಧ ಇಲ್ಲದಿರುವುದು" (ಚಂದ್ರಪೂಜಾರಿ ಎಂ, ೨೦೦೮, ಪು.೯೭) ಎಂದಿರುವುದು ಕಂಡುಬರುತ್ತದೆ. ಸಂಪ್ರದಾಯವು ಸೃಷ್ಟಿಗೊಳಿಸಿದ ಮೌಲ್ಯಗಳು ಹೆಣ್ಣನ್ನು ಅಲ್ಲೆಗಳೆಯುವ ನೆಲೆಯಲ್ಲಿ ಮುಂದುವರೆಯುತ್ತವೆ. ಜೊತೆಗೆ ಭಿನ್ನ ಜೈವಿಕತೆಯನ್ನಾಧರಿಸಿ ಭಿನ್ನ ನೆಲೆಯಲ್ಲಿ ಅಸಮಾನತೆಯನ್ನು ಸೃಷ್ಠಿಸುತ್ತಿವೆ. ಹೀಗೆ ಸೃಷ್ಠಿಗೊಳ್ಳುವ ಲಿಂಗಾಧಾರಿತ ಅಸಮಾನತೆಗಳು ಅದಿಕಾರ ಹಂಚಿಕೆಯಂತಹ ಕೆಲಸ ಮಾಡುತ್ತವೆ. ಅಧಿಕಾರವೆನ್ನುವುದು " ಇಚ್ಛೆಗನುಗುಣವಾಗಿ ಪರಿಣಾಮಗಳನ್ನು ಉತ್ಪಾದಿಸುವುದೇ ಅಧಿಕಾರ ಎಂದು ವ್ಯಾಖ್ಯಾನಿಸಬಹುದು"(ಬರ್ಟ್ರಂಡ ರಸೆಲ್(ಅನು)ನಾರಾಯಣ ಪಿ.ವಿ., ೨೦೦೭, ಪು.೨೫) ಸೃಷ್ಠಿಗೊಂಡ ಸಂಪ್ರದಾಯ ಆಚರಣೆಗಳು ಲಿಂಗಾಧಾರಿತವಾಗಿ ಪುರುಷನ ಇಚ್ಛೆಗನುಗುಣವಾಗಿ ರೂಪಿತಗೊಂಡು ಹೆಣ್ಣನ್ನು ಅತಂತ್ರ ಅಧಿಕಾರ, ಅರ್ಥಿಕತೆಯಂತ ಸಂಗತಿಗಳಿಂದ ದೂರವಿಡಲು ಕಾರಣವಾಗುತ್ತವೆ. ಅದು ಹೇಗೆಂದರೆ 'ಸಂತಾನ' ಕ್ರಿಯೆಯಾದ ಪ್ರಜನನ ಕ್ರಿಯೆ ಮಾತ್ರ ಹೆಣ್ಣಿನ ಕೆಲಸ, ಉತ್ಪಾದನೆ, ಆರ್ಥಿಕತೆ ಅಧಿಕಾರದಂತಹ ಕ್ರಿಯೆಯಲ್ಲಿ ಮಾತ್ರ ಗಂಡು ಎಂದು ಸ್ಥಿರಗೊಳಿಸುವುದು ಕಂಡುಬರುತ್ತದೆ. ಉದಾ: ಗಾದೆಗಳಲ್ಲಿ ದೊರೆಯುವ 'ಹೇರಲಾರದ ಹೆಣ್ಣಲ್ಲ ಎಳೆಯಲಾರದ ಎತ್ತಲ್ಲ' ಎನ್ನುವ ಗಾದೆ ಹೆಣ್ಣು ಪ್ರಜನನ(ಎತ್ತು) ಗಂಡು ಆರ್ಥಿಕತೆ ನೆಲೆಗೆ ವಿಸ್ತಾರಗೊಳ್ಳುವಂತೆ ಮಾಡುತ್ತವೆ.

ಹುಟ್ಟು ನಿಸರ್ಗ ಸಹಜ ಧರ್ಮ ಹುಟ್ಟಿದ ನಂತರ ಸಮಾನಹಕ್ಕು, ಸ್ಥಾನಮಾನಗಳು ದೊರಕುವುದು ಸಹಜ ಧರ್ಮವಾಗಬೇಕು. ಮತ್ತು ಈ ಕುರಿತಾಗಿ ಸಂವಿಧಾನವು ಪ್ರಜಾಪ್ರಭುತ್ವದ ಮಾದರಿಯಲ್ಲಿ ಜಾತಿ, ವರ್ಗ, ಧರ್ಮ, ಲಿಂಗ, ಜನಾಂಗ, ಭಾಷೆ, ಬಣ್ಣ ಆಧಾರಿತವಾಗಿ ಭೇದ ತಾರತಮ್ಯವನ್ನು ವಿರೋಧಿಸುತ್ತದೆ. ಆದರೆ ಸಂಪ್ರದಾಯವು ಸೃಷ್ಟಿಸಿದ ಮೌಲ್ಯಗಳಲ್ಲಿ ಗಂಡು ಹೆಣ್ಣಿಗೆ ಅಸಮಾನತೆ ಸೃಷ್ಟಿಯಾಗಿವೆ. ಈ ಅಸಮಾನತೆಯು ನಕರಾತ್ಮಕ ನೆಲೆಯಲ್ಲಿ ನಿರ್ವಚನೆಗೊಂಡಿದೆ. ಈ ಅಸಮಾನತೆಯು ಯಾವಾಗಲೂ ಗಂಡು ಹೆಣ್ಣಿನಲ್ಲಿ ಅಂತರವನ್ನು ಸೃಷ್ಟಿಗೊಳಿಸುವ ಪ್ರಕ್ರಿಯೆಗಳಾಗಿವೆ. ಹೀಗಾಗಿ ಇವುಗಳು ಲಿಂಗಾಧಾರಿತ ಅಸಮಾನತೆಯನ್ನು ಸೃಷ್ಟಿಗೊಳಿಸುವುದರ ಕುರಿತ ಎಚ್ಚರಿಕೆ ಅಗತ್ಯವಿದೆ. ಯಾಕೆಂದರೆ ಸಂಪ್ರದಾಯವು ಸೃಷ್ಟಿಸಿದ ಮೌಲ್ಯಗಳು ಸೃಷ್ಟಿ ಸಹಜ ಗುಣಧರ್ಮಗಳು ಎನ್ನುವ ನೆಲೆಯಲ್ಲಿ ಮುಂದುವರೆದು ಅವು ಪುರುಷನ ಕೈ ಸೇರಿ ಪುರುಷನಿಗೆ ಹಕ್ಕು ಅಧಿಕಾರ ವಲಯದಲ್ಲಿ ಗುರುತಿಸಿಕೊಳ್ಳುವಂತೆ ಮಾಡಿರುವುದು ಕಂಡುಬರುತ್ತದೆ. "ಅಧಿಕಾರ ವ್ಯಾಖ್ಯಾನ ಕೂಡ ನಕಾರಾತ್ಮಕವಾಗಿ ಚಿತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ತಂತ್ರಗಾರಿಕೆ, ಒಡೆದು ಆಳುವುದು, ಸ್ವಾರ್ಥಸಾಧನೆ ಇತ್ಯಾದಿ ಗುಣ ವಿಶೇಷಣಗಳೊಂದಿಗೆ ಅಧಿಕಾರವನ್ನು ಗುರುತಿಸಲಾಗುತ್ತದೆ." (ಚಂದ್ರಪೂಜಾರಿ ಎಂ., ೨೦೦೮, ಪು.೩೪) ಹೀಗೆ ಅಧಿಕಾರವು ನಕಾರಾತ್ಮಕವಾಗಿ ಚಿತ್ರಿತಗೊಂಡಿರುವುದರಿಂದ ಹಲವಾರು ದುಷ್ಪಾರಿಣಾಮಗಳನ್ನು ಹೆಣ್ಣು ಎದುರಿಸಬೇಕಾಗಿದೆ. ಅದು ಹೇಗೆಂದರೆ ಹೆಣ್ಣು ಯಾವಾಗಲೂ ಗಂಡಿನ ಅಧೀನದಲ್ಲಿ ಇರಬೇಕು. ಗಂಡಿಗೆ ವಿರುದ್ಧವಾಗಿ ಅಥವಾ ಪಿತೃಪ್ರದಾನ ವ್ಯವಸ್ಥೆಗೆ ವಿರುದ್ಧವಾಗಿ ಮಾತನಾಡಬಾರದು. ಗಂಡನ ನೀತಿ, ನಿರ್ದೇಶನಗಳಲ್ಲಿ ಮುಂದುವರೆಯಬೇಕು ಎಂದು ಹೆಣ್ಣಿಗೆ ಸರಿಸಮಾನವಾಗಿ ಅಧಿಕಾರ ಚಲಾಯಿಸದಂತೆ ಮಾಡಿವೆ. ಅಷ್ಟೇ ಏಕೆ ಹೆಣ್ಣು ಗಂಡಿನ ವಿರುದ್ಧವಾಗಿ ವರ್ತಿಸಿದರೆ ದೈವ-ವಿರೋಧಿ ಎಂಬಂತೆ ಈ ಸಂಪ್ರದಾಯ ನಿರ್ದೇಶನ ಮಾಡಿವೆ. ಹೆಣ್ಣು ಹುಟ್ಟಿದ ಮನೆಯಿಂದ ಹೆಣ್ಣು ಆಸ್ತಿ, ಅಧಿಕಾರ ಕೇಳುವಂತಿಲ್ಲ, ಹೊಂದುವಂತಿಲ್ಲ ಅದು ಸಂಪ್ರದಾಯ ಬದ್ಧ ನಿಯಮ, ಇದು ನಮ್ಮ ಜಾತಿ, ಸಂಸ್ಕೃತಿಯಲ್ಲಿ ಹೆಣ್ಣನ್ನು ಬೆಳೆಸಿದ ಪರಿ ಎಂದು ಬಿಂಬಿಸಲಾಗುತ್ತದೆ. ಒಂದು ವೇಳೆ ಹೆಣ್ಣು ಹುಟ್ಟಿದ ಮನೆಯಿಂದ ಆಸ್ತಿ-ಅಧಿಕಾರ ಕೇಳಿದರೆ ಅವಳು ಹೆಣ್ಣು ಅಲ್ಲ ಎಂದು ಜರಿಯಲಾಗುತ್ತದೆ.

ಹೆಣ್ಣು ಋತುಮತಿಗೊಂಡ ನಂತರ ಹುಟ್ಟಿಗೊಂಡಿರುವ ಸಂಪ್ರದಾಯ ಮಾತು, ಮೌಲ್ಯಗಳು ಹೆಣ್ಣು ಕೊಟ್ಟ ಮನೆಗೆ ಹೋಗುವವಳು. ಏನಿದ್ದರೂ ಅವಳಿಗೆ ಗಂಡನ ಮನೆ ಮುಖ್ಯ ಎನ್ನುವ ಚಿಂತನೆಗಳನ್ನು ಹುಟ್ಟು ಹಾಕಿವೆ. ಜೊತೆಗೆ ಈ ತೆರನಾದ ಮೌಲ್ಯಗಳನ್ನು ಹೆಣ್ಣಿನ ಮನೋಭಾವನೆಯಲ್ಲಿ ಬೆಳೆಯುವಂತಾಗಿವೆ. ಹೀಗೆ ಬೆಳೆಸಿ ಬೆಳೆದ ಮೌಲ್ಯಗಳು ಹೆಣ್ಣನ್ನು ಪರಕೀಯವಾಗಿ ಕಾಣಲು ಕಾರಣವಾಗುತ್ತವೆ. ಗಂಡು ಮಾತ್ರ ಆಸ್ತಿ, ಅಧಿಕಾರವಂತನೂ

ವಂಶ ಬೆಳೆಸುವವನು. ಹೆಣ್ಣು ಮಾತ್ರ ಪರಕೀಯಳು, ಎನ್ನುವಂತ ಚಿಂತನೆಗಳಿಗೆ ಕಾರಣವಾಗುತ್ತವೆ. ಇವು ಎಲ್ಲಿಯವರೆಗೆ ಎಂದರೆ ಕೇವಲ ಗಂಡಿಗೆ ಮಾತ್ರ ಹಕ್ಕು, ಅಧಿಕಾರ ಎನ್ನುವಂತಹಂತವರೆಗೆ ಮತ್ತು ತಂದೆಯಿಂದ ಮಗನಿಗೆ ವಂಶಪರಂಪರೆಯಾಗಿ ಆಸ್ತಿ-ಅಧಿಕಾರ ಹಸ್ತಾಂತರಗೊಳ್ಳುವರೆಗೂ ಅದು ಮಗನ ಹೆಸರಿಗೆ ನಾಮಕಾರಣವಾಗುವವರೆಗೆ ಮುಂದುವರೆಯುತ್ತವೆ.

ಸಾವಿನ ಸಂದರ್ಭದ ಸಂಪ್ರದಾಯ ಆಚರಣೆಗಳು ಹೆಣ್ಣನ್ನು ಅಧ್ಯಾತ್ಮಿಕ, ಆರ್ಥಿಕ ಹಾಗೂ ಅಧಿಕಾರದ ನೆಲೆಯಲ್ಲಿ ನಿರಕಾರಿಸಲ್ಪಡುವ ಸಂಗತಿಗಳಿಗೂ ಸಂಬಂಧವಿದೆ ಎನ್ನವುದು ನನ್ನ ಊಹೆ. ಇದನ್ನು ಸಾವಿನ ಸಂದರ್ಭದಲ್ಲಿನ ಕೆಲವು ಸಂಪ್ರದಾಯ ಆಚರಣೆಗಳನ್ನು ಗಮನಿಸಿ ವಿಶ್ಲೇಷಣೆಗೆ ಒಳಪಡಿಸಿ ಸ್ಪಷ್ಟ ಪಡಿಸಿಕೊಳ್ಳುವುದಕ್ಕೆ ಪ್ರಯತ್ನಿಸಲಾಗಿದೆ. ಈ ಕುರಿತು "ಹರಿಜನರಲ್ಲಿ ತಂದೆ ತಾಯಿಯಾರಾದರೂ ಸತ್ತರೆ ವಯಸ್ಸಿಗೆ ಬಂದ ಹಿರಿಯ ಮಗ ಹೆಣಕ್ಕೆ ಹೆಗಲು ಕೊಟ್ಟು ಹೊತ್ತು ಕೊಂಡು ಹೋಗಿ ಮಣ್ಣು ಮಾಡುವ ಕಾರ್ಯ ಮಾಡುತ್ತಾರೆ. ನಂತರ ತಿಥಿಯ ಸಂದರ್ಭದಲ್ಲಿ ಹಿರಿಯ ಮಗನೆ ಮುಂದೆ ನಿಂತು ಮೂರು ದಿನದಲ್ಲಿ ಅಥವಾ ಐದು ದಿನಗಳಲ್ಲಿ ತಿಥಿ ಕಾರ್ಯಗಳನ್ನು ನೇರವೇರಿಸ ಬೇಕು ಈ ಕಾರ್ಯಗಳಲ್ಲಿ ಹಿರಿಯ ಮಗನೆ ತಂದೆ/ತಾಯಿಯ ತಿಥಿಯ ಪೂಜೆ ಮಾಡಿ ಎಡೆ ಹಾಕಬೇಕು, ಹೀಗೆ ಹಾಕುವುದರಿಂದ ಮನೆಯ ಸೂತಕ ಕಳೆಯುತ್ತದೆ. ಮನೆಯ ಮೈಲಿಗೆ ಮುಗಿಯುತ್ತದೆ. ಎಂದು ಭಾವಿಸುತ್ತಾರೆ." (ಪುಟ್ಟಯ್ಯ ಬಿ.ಎಂ., ೨೦೦೧, ಪುಟ ೨೬) ಹೀಗೆ ಹಲವು ಸಮುದಾಯಗಳಲ್ಲಿ ಸಾವಿನ ಸಂದರ್ಭದ ಸಂಪ್ರದಾಯ ಆಚರಣೆಗಳು ನಡೆಯುತ್ತವೆ. ಹೀಗೆ ನಡೆಯುವ ಸಂಪ್ರದಾಯ ಆಚರಣೆಗಳು ಹಿರಿಯ ಮಗನೆ ತಂದೆ/ತಾಯಿಯ ಅಂತ್ಯಕ್ರಿಯೆ ಪೂರೈಸಿದರೆ ಮನೆಯ ಸೂತಕ, ಮೈಲಿಗೆ ಕಳೆದಂತೆ ಮತ್ತು ಮುಕ್ತಿ ದೊರೆಯುತ್ತದೆ. ಎಂಬ ನಂಬಿಕೆಗಳು ಹುಟ್ಟುಹಾಕಿವೆ. ಈ ವಿಚಾರ ಕೇವಲ ಮುಕ್ತಿಯ ನಲೆಯಲ್ಲಿ ಅಂತ್ಯಗೊಳ್ಳುವುದಿಲ್ಲ. ಯಾರು ತಂದೆ ತಾಯಿಗಳಿಗೆ ಮಣ್ಣು ಮಾಡುತ್ತಾರೋ, ಯಾರು (ತಂದೆ/ತಾಯಿ) ಕಿಚ್ಚು ಹಚ್ಚುತ್ತಾರೋ ಅವರೆ ತಿಥಿಯನ್ನು ಮಾಡಬೇಕು. ಇದು ಗಂಡಸಿನ ಹಕ್ಕುಗಳಾಗಿ ಉಳಿಯುತ್ತವೆ. ಈ ಹಕ್ಕುಗಳು ಇಷ್ಟಕ್ಕೆ ಸಿಮಿತಗೊಳ್ಳುವುದಿಲ್ಲ. ಬದಲಾಗಿ ಆ ಮನೆಯ ಚಿರ, ಚರಾಸ್ತಿ ಒಡೆತನಕ್ಕೆ ಹಕ್ಕುದಾರನಾಗುತ್ತನೆ. ಮತ್ತು ಹಕ್ಕುದಾರನ್ನಾಗಿ ಮಾಡುತ್ತವೆ. ಇದು ಅವನನ್ನು ಕುಟುಂಬದ ಯಜಮಾನನಾಗಿ ಮಾಡುತ್ತವೆ.

ಹೆಣ್ಣುಮಕ್ಕಳು ಸಂತ ತಂದೆ ತಾಯಿಯರಿಗೆ ಮಣ್ಣು ಮಾಡಿದರೆ ಕಿಚ್ಚು ಹಚ್ಚಿದರೆ, ತಿಥಿ ಮಾಡಿದರೆ, ರೌರವರ ನರಕವನ್ನು ಅನುಭವಿಸುವುದಿಲ್ಲ. ಬದಲಾಗಿ ತಿಥಿ ಮಾಡಿದ ಅವರ ಮಕ್ಕಳು ಕಿಚ್ಚು ಹಚ್ಚಿದ ಹೆಣ್ಣುಮಕ್ಕಳು ರೌರವರ ನರಕವನ್ನು ಅನುಭವಿಸಬೇಕಾಗುತ್ತದೆ ಎಂದು ಈ ಬಗೆಯ ಮೋಕ್ಷ ಹಾಗೂ ನರಕದ ಪರಿಕಲ್ಪನೆಗಳನ್ನೇ ಮುಂದೆ ತಂದು ಭಯದ

ವಾತಾವರಣವನ್ನು ಸೃಷ್ಟಿಸಿ ಹೆಣ್ಣು ಈ ಪ್ರಕ್ರಿಯೆದಲ್ಲಿ ಪಾಲ್ಗೊಳ್ಳದಂತೆ ನೋಡಿಕೊಳ್ಳಲಾಗಿದೆ. ಆ ಮೂಲಕ ಅವಳನ್ನು ಕುಟುಂಬದೊಳಗಿನ ಆರ್ಥಿಕ ಹಾಗು ಅಧಿಕಾರದ ನೆಲೆಯಿಂದ ದೂರವಿಡಲಾಗಿದೆ.

ಇನ್ನೂ ಸಾವು ಕುರಿತಾದ ಸಂಪ್ರದಾಯ ಆಚರಣೆ ಮೌಲ್ಯಗಳು ಹೆಣ್ಣನ್ನು ಅಧಿಕಾರ ಹೀನಳನ್ನಾಗಿ ಮಾಡುವ ಸಂಗತಿ ಕಂಡುಬರುತ್ತವೆ. ಅದು ಹೇಗೆಂದರೆ ಹೆಣ್ಣಿಗೆ ಗಂಡಸತ್ತ ನಂತರ 'ವಿಧವೆ', 'ಮುಂಡೆ' ಎಂದು ಪರಿಗಣಿಸಿ ಗಂಡ ಸತ್ತನೆನ್ನುವ ಕಾರಣ ನೀಡಿ ಹೆಣ್ಣಿಗೆ ನಮ್ಮ ಜಾತಿ ಸಂಪ್ರದಾಯದಲ್ಲಿ ಗಂಡ ಸತ್ತ ಹೆಂಡತಿ(ಹೆಣ್ಣಿನ) ದೇಹದ ಮೇಲಿನ ಬೆಲೆಬಾಳುವ ತಾಳಿ, ಕಿವಿಯೋಲೆ, ಉಂಗುರ, ಬಂಗಾರದಂತಹ ಆಭರಣಗಳನ್ನು ತೆಗೆಸಲಾಗುತ್ತದೆ ಎಂದು ಹೇಳಲಾಗುತ್ತದೆ. ಈ ತೆರನಾದ ಸಂಪ್ರದಾಯ ಆಚರಣೆಗಳು ಹೆಣ್ಣು ಗಂಡನಿಂದಲೋ ಅಥವಾ ತವರಿನಿಂದಲೋ ಪಡೆದ ಬೆಲೆಬಾಳುವ ಆಭರಣಗಳನ್ನು ಹಾಕದಂತೆ(ನೀಡದೆ) ಮಾಡಿ ಆ ಹೆಣ್ಣನ್ನು ಆರ್ಥಿಕತೆಯಿಂದ ದೂರ ಮಾಡಲಾಗುತ್ತದೆ. ಈ ಮೂಲಕ ಅವಳಿಗೆ ಯಾವುದೇ ಅಲಂಕಾರ, ಹಕ್ಕು, ಅಧಿಕಾರ ಹೊಂದುವಂತಿಲ್ಲ ಎನ್ನುವ ಸಂಪ್ರದಾಯಿಕ ಮೌಲ್ಯಗಳ ಮೂಲಕ ಹೆಣ್ಣಿಗೆ ಅಧಿಕಾರ ಅಸಮಾನತೆ ಹಂಚಿಕೆಯನ್ನು ಗೊಳಿಸಿರುವುದು ಹಲವು ಸಮುದಾಯಗಳು ಕಂಡುಬರುತ್ತವೆ.

ಜೈವಿಕತೆಯನ್ನಾಧರಿಸಿ ಹೆಣ್ಣು ಬೆಳೆದಂತೆಲ್ಲ ಅಧಿಕಾರ ಹೀನಳಾಗಿ ಮುಂದುವರೆಸುವುದು ಕಂಡುಬರುತ್ತವೆ. ಅದು ಹೇಗೆಂದರೆ ಗಂಡು ಬೆಳೆದಂತೆಲ್ಲ ಹಕ್ಕು, ಅಧಿಕಾರವಂತನನ್ನಾಗಿ ಬೆಳೆಸುವಂತಹದ್ದು, ಹೆಣ್ಣು(ಹುಡುಗಿ) ಬೆಳೆದಂತೆಲ್ಲ ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ ಆಶ್ರಯ ಪಡೆದು ಬದುಕಬೇಕು ಎನ್ನುವಂತ ಸಂಗತಿಗಳು ಕಂಡುಬರುತ್ತವೆ. ಸ್ತ್ರೀಯು ಮನೆಯೊಳಗೆ ಇರಬೇಕು, ಗೃಹಿಣಿಯಾಗಿರಬೇಕು, ತಾಯಿಯಾಗಿ, ಹೆಂಡತಿಯಾಗಿ ಪುರುಷ ಸೇವೆ ಮಾಡಬೇಕು. ಎಲ್ಲರಿಗೂ ವಿಧೇಯಳಾಗಿ ಬದುಕು ನಡೆಸಬೇಕು. ಸದ್ಗುಣ ಸಂಪನ್ನೇಯಾಗಿರಬೇಕು. ಹೀಗೆ ಹತ್ತಾರು ಮೌಲ್ಯಗಳನ್ನು ಕಾಪಾಡಿಕೊಂಡು ಉಳಿಸಿಕೊಂಡು ಹೋಗುವುದು ಹೆಣ್ಣಿನ ಧರ್ಮ ಎಂದು ಋತುಮತಿ ಸಂದರ್ಭದ ಆಚರಣೆ, ವಿವಾಹ, ಸೀಮಂತ ಮೊದಲಾದ ಸಂಪ್ರದಾಯ ಆಚರಣೆಗಳು ಹೇಳುತ್ತವೆ. ಮನೆಗಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿದ್ದ ಅನೇಕ ಕುಟುಂಬಗಳಲ್ಲಿ ಗಂಡು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿ ಜ್ಞಾನವಂತನ್ನಾಗಿ, ಅಧಿಕಾರ ಹಿಡಿಯುವಂತನನ್ನಾಗಿ ಮತ್ತು ಉದ್ಯೋಗ ತರಬೇತಿಗೆ ಹೆಚ್ಚು ಅಥವಾ ಸಂಪೂರ್ಣ ಗಮನ ನೀಡುವುದು ಕಂಡುಬರುತ್ತದೆ. ಅದೇ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಖರ್ಚು ಮಾಡಲು ಹಿಂಜರಿಯುವುದು. ಅದರಲ್ಲೂ ವಿಶೇಷವಾಗಿ ಋತುಮತಿಗೊಂಡ ನಂತರ ಹೆಣ್ಣನ್ನು ಓದಲು(ಶಾಲೆ) ಬಿಡಿಸಿ ಬೇಗ ಮನೆಗೆಲಸ ಕಲಿಸಿಕೊಡುತ್ತಾರೆ. ಬೆಳೆದ(ಋತುಮತಿಗೊಂಡ) ಹೆಣ್ಣು ಮಗಳು ಸೆರಗಿನ ಕೆಂಡ ಅವಳ ರಕ್ಷಣೆ

ಮಾಡುವುದು ಕಷ್ಟ ಎಂದು ಭಾವಿಸುತ್ತಾರೆ. ಹುಡುಗಿಗೆ ಏನಾದರೆ(ಲೈಂಗಿಕ ಅಪಚಾರವಾದರೆ) ಆದರೆ ನಾವೇ(ನಮ್ಮ ಕುಟಂಬವೇ) ಹೊಣೆ ಒತ್ತುಕೊಳ್ಳಬೇಕಾಗುತ್ತದೆ. ಎನ್ನುವ ಸಂಪ್ರದಾಯಿಕ ಮನೋಭಾವನೆಯಿಂದಾಗಿ ಹೆಣ್ಣನ್ನು ಹೊರಗಡೆ ದುಡಿಯಲಿಕ್ಕೆ, ಅರ್ಥಿಕ ಸಂಪಾದನೆಗೆ ರಾಜಕೀಯ ವ್ಯವಹಾರಕ್ಕೆ ಹೀಗೆ ಇತರ ವಲಯಗಳಿಗೆ ಹೆಣ್ಣನ್ನು ಹೋಗದಂತೆ ಮಾಡಿವೆ. ಶಿಕ್ಷಣ, ಜ್ಞಾನ, ವಯಸ್ಸು ಯಾವುದನ್ನು ಲೆಕ್ಕಿಸದೆ ಬೇಗನೆ ಮದುವೆ ಮಾಡಿ ಬಿಡಲಾಗುತ್ತದೆ. ಇವುಗಳು ಹೆಣ್ಣಿಗೆ ಅಸಮಾನತೆ ಅಧಿಕಾರ ಹೀನತೆಯಂತಹ ಸಂಗತಿಗಳು ಸೃಷ್ಟಿಯಾಗಲು ಕಾರಣವಾಗುತ್ತವೆ.

ಇದಕ್ಕೆ "ಸ್ತ್ರೀಯರನ್ನು ಲೈಂಗಿಕ ಜೀವಿಗಳೆಂದು ಪರಿಗಣಿಸುವುದಕ್ಕಿಂತ ಮಾನವ ಜೀವಿಗಳನ್ನಾಗಿ ನೋಡಬೇಕು. ಅವರ ಬೇಡಿಕೆಗಳನ್ನು ಕೇವಲ ಮಹಿಳೆಯರ ಬೇಡಿಕೆಯನ್ನಾಗಿ ಪೂರೈಸುವುದಕ್ಕಿಂತ ಮಾನವ ಜೀವಿಯ ಬೇಡಿಕೆಗಳಾಗಿ ಪೂರೈಸುವುದು ತುಂಬಾ ಮುಖ್ಯ ಎನ್ನುತ್ತಾಳೆ. ಮೇರಿ ಸ್ತ್ರೀಯರಲ್ಲಿ ತಾರ್ಕಿಕ ಶಕ್ತಿಯಿದೆ. ವಿಚಾರ ಮಾಡುವ, ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಹೊಂದಿದ್ದರೆ, ತಾರ್ಕಿಕ ಶಕ್ತಿಯಿರುವುದರಿಂದ ಪುರುಷರಂತೆ ಹಕ್ಕುಗಳನ್ನು ಹೊಂದಲು ಬಾಧ್ಯರಾಗಿದ್ದರೆ ಮನುಷ್ಯನು ಶಕ್ತಿಯನ್ನು ಹೊಂದಿರುವುದರಿಂದ ಪ್ರಾಣಿಗಿಂತ ಭಿನ್ನವಾಗಿದ್ದಾನೆ ಎಂದು ಸ್ವಾಭಾವಿಕ ಹಕ್ಕುಗಳ ಸಿದ್ಧಾಂತವು ಹೇಳುತ್ತದೆ. ಮಹಿಳೆಯರಿಗೆ ಸ್ವಾಭಾವಿಕ ಹಕ್ಕುಗಳನ್ನು ನಿರಾಕರಿಸಿದರೆ ಅವರು ತಾರ್ಕಿಕ ಜೀವಿಗಳಲ್ಲವೆಂದು ಹೇಳಿದಂತಾಗುತ್ತದೆ. ಕೆಲವು ಪುರುಷರಿಗೆ ಪ್ರತಿಭೆ ಕೌಶಲ್ಯವಿಲ್ಲವೆಂದು ಹಕ್ಕುಗಳನ್ನು ಹೇಗೆ ನಿರಾಕರಿಸುವುದಿಲ್ಲವೋ ಹಾಗೇ ಸ್ತ್ರೀಯರು ಪುರುಷರಿಗಿಂತ ಕೀಳು ಎಂದು ಹಕ್ಕುಗಳನ್ನು ನಿರಾಕರಿಸುವಂತಿಲ್ಲ. ಸ್ತ್ರೀಯರು ಪುರುಷರಿಗಿಂತ ಕೀಳು ಎಂಬುದನ್ನು ಮೇರಿ ಒಪ್ಪಿಕೊಳ್ಳುವುದಿಲ್ಲ. ಆದರೆ ಅನೇಕ ಪೀಳಿಗೆಗಳಿಂದ ಅವರ ಸಾಮರ್ಥ್ಯ ಕೌಶಲ್ಯಗಳನ್ನು ನಿರ್ಲಕ್ಷಿಸಿ ಬಳಸಿಕೊಳ್ಳದೇ ಇರುವುದರಿಂದ ಅವರು ಗಟ್ಟಿಹೋಗಿದ್ದಾರೆ. ಅವರಿಗೆ ಸಾಕಷ್ಟು ಅವಕಾಶ ಸ್ವಾತಂತ್ರ್ಯ ಹಾಗೂ ಶಿಕ್ಷಣ ದೊರೆತರೆ ತಮ್ಮ ಸಾಮರ್ಥ್ಯವನ್ನು ಬೆಳೆಸಿಕೊಂಡು ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುತ್ತಾರೆ ಎಂಬುದು ಅವಳ ಅಭಿಮತ" (ಉದ್ಧೃತ: ಹೇಮಲತಾ ಹೆಚ್.ಎಂ., ೨೦೦೬, ಪು.೫೭)

ಸಂಪ್ರದಾಯ ಆಚರಣೆಗಳು ಸೃಷ್ಟಿಗೊಳಿಸಿದ ಮೌಲ್ಯಗಳು ಪುರುಷ ಪ್ರಧಾನ ಸಮಾಜಕ್ಕೆ ಪುರುಷ ಚಿಂತನೆಗೆ ಆಶಯಕ್ಕೆ ಅನುಗುಣವಾಗಿ ಸ್ತ್ರೀ ಪುರುಷರಿಗೆ ಪ್ರತ್ಯೇಕವಾದ ಲೋಕಗಳನ್ನು ಸೃಷ್ಟಿಸುತ್ತವೆ. ಹೀಗೆ ಪ್ರತ್ಯೇಕವಾದ ಮೌಲ್ಯಗಳು ಗಂಡು ಹೆಣ್ಣಿನ ಮಧ್ಯ ಹಕ್ಕು ಬಾಧ್ಯತೆ ಅಧಿಕಾರ ಹಂಚಿಯಂತಹ ಸಂಗತಿಗಳನ್ನು ಸೃಷ್ಟಿಸುತ್ತವೆ. ಅದರಲ್ಲಿ ಗಂಡಿಗೆ ಬಾಧ್ಯತೆಗಳನ್ನು ಜೈವಿಕತಾರವಾಗಿ ನಿಗಧಿಗೊಳಿಸುತ್ತವೆ. ಇದಕ್ಕೆ "ಈ ಸಮಾಜೀಕರಣ ಪ್ರಕ್ರಿಯೆ ಸಮಾಜದ ಒಂದು ಅಂತರ್ಗತ ಚಟುವಟಿಕೆಯೋ ಎಂಬಂತೆ ನಿರಂತರವಾಗಿ ಅದರ ಎಲ್ಲ ಅಂಗಾಗಳಲ್ಲಿ ಜಾರಿಯಲ್ಲಿರುತ್ತವೆ. ಇಲ್ಲಿ ವ್ಯಕ್ತಿಗಳನ್ನು ಕುಳಿತರೂ, ನಿಂತರೂ ಬಿಡದೆ

ಆವರಿಸಿರುತ್ತದೆ. ಒಂದು ಮಗು ಹುಟ್ಟಿದ ಕ್ಷಣದಿಂದಿಲೇ ಈ ತರಬೇತಿಗೆ ಒಡ್ಡಿಕೊಳ್ಳುತ್ತದೆ. ನಡೆ ನುಡಿ ನೋಟ ಆಟ ಪಾಠ ವೇಷ ಭೂಷಣಗಳಿಂದ ಹಿಡಿದು ಒತ್ತಾಯದ ತರಬೇತಿಗೆ ಒಳಾಗದ ಮಗು ತನ್ನ ಗುಣ ಸ್ವಾಭಾವಿಕ ಆಸೆ ಆಕಾಂಕ್ಷೆಗಳನ್ನು ಮೊದಲುಗೊಂಡು ಸಂಪೂರ್ಣ ಅಂತರಂಗ ಬಹಿರಂಗಗಳಲ್ಲಿ ಸಾಮಾಜಿಕ ಚಿಂತನೆ,ಆಶಯ ಆದೇಶಗಳನ್ನು ಆವಾಹಿಸಿಕೊಳ್ಳದೆ ವಿಧಿಯೇ ಇಲ್ಲದಾಗುತ್ತದೆ. ಮಕ್ಕಳನ್ನು ಪಾಲಿಸುವ ಬೆಳೆಸುವ ಎಲ್ಲ ಹಂತಗಳಲ್ಲೂ ನಾವು ಅದರ ವೇಷ ಭೂಷಣ ಮಾತುಕತೆ ಆಹಾರ ವಿಹಾರಗಳನ್ನು ನಿಯಂತ್ರಿಸುತ್ತ ಮೃಧುಗುಣ, ಕೀಳಿರಿಮೆ ದುರ್ಬಲ ಸ್ವಭಾವ ಆಸೆ ಆಕಾಂಕ್ಷೆಗಳ ಕನಸುಗಳನ್ನು ಕಾಣದ ಸೇವಾ ವಲಯದಲ್ಲಿ ನೆಲೆಸುವ ಅಲಿಖಿತ ಆದೇಶವನ್ನು ಹೆಣ್ಣುಮಕ್ಕಳಿಗೂ, ಗಡಸು ಗುಣ ಪ್ರತಿಷ್ಠೆಯ ಅಹಂಭಾವ ಆಸೆ, ಆಕಾಂಕ್ಷೆಗಳ ಕುದರೆಯನ್ನೇರಿ ಸಾಗುವ ಯಜಮಾನ ಹಕ್ಕುಗಳನ್ನು ಗಂಡು ಮಕ್ಕಳಿಗೆ ಕೊಟ್ಟುಬಿಡುತ್ತವೆ. ಇದಕ್ಕೆ ಹೆಣ್ಣು-ಗಂಡು ಮಕ್ಕಳನ್ನು ಬೆಳೆಸುವ ವಿಧಾನಗಳನ್ನು ಗಮನಿಸಬೇಕು. ಮನೆ, ಶಾಲೆ, ವ್ಯವಹಾರ, ಮದುವೆಗಳೆಂಬ ವಿವಿಧ ಸಂದರ್ಭಗಳಲ್ಲಿ ನಿರಂತರವಾಗಿ ಸಾಗುತ್ತಲೆ ಹೋಗುವ ಈ ಸಾಮಾಜಿಕರಣದ ಒತ್ತಡದಲ್ಲಿ ಗಂಡು ಮಕ್ಕಳನ್ನು ಯಜಮಾನರಾಗುತ್ತ ಹೆಣ್ಣುಮಕ್ಕಳು ಅವರಿಗೆ ಅಧೀನರಾದ ಸೇವಕಿಯರೆನಿಸುತ್ತಾ ವ್ಯಕ್ತಿತ್ವವನ್ನು ಪಡೆದಿರುತ್ತಾರೆ." (ಶ್ರೀಮತಿ.ಎಚ್.ಎಸ್.೨೦೦೩, ಪುಟ.೯೬) ಹೀಗೆ ಸಾಮಾಜೀಕರಣ ಪ್ರಕ್ರಿಯೆ ಕೆಲಸಮಾಡುತ್ತದೆ. ಎನ್ನುವುದನ್ನು ಹೇಳುತ್ತಾರೆ. ಈ ಸಾಮಾಜಿಕರಣಕ್ಕೆ ಮುಖ್ಯ ಕಾರಣ ಸಂಪ್ರದಾಯ ಆಚರಣೆಗಳು. ಆದರೆ ಇದೇ ಸಂಪ್ರದಾಯಿಕ ಮಾತುಗಳು ಗಂಡಿಗೆ ಹೇಳುವಲ್ಲಿ ಇದಕ್ಕೆ ವಿರುದ್ಧವಾಗಿ. ಧೈರ್ಯಶಾಲಿಯಾಗಿರಬೇಕು, ಶೂರನಾಗಿಬೇಕು, ಹೆಮ್ಮೆ ಪುತ್ರನಾಗಬೇಕು ಅಧಿಕಾರವಂತನಾಗಿಬೇಕೆಂದೇ ಹೇಳಲಾಗುತ್ತದೆ. ಹೆಣ್ಣಿನ ದೇಹದಲ್ಲಾಗುವ ಜೈವಿಕ ಸಹಜ ಕ್ರಿಯೆಯ ಜೈವಿಕತೆಯನ್ನಾಧರಿಸಿದ ಸಂಪ್ರದಾಯ ಆಚರಣೆಗಳಿಂದಾಗಿ ಲಿಂಗಾಧಾರಿತ ಮೌಲ್ಯಗಳನ್ನು ಬಿತ್ತುವುದು ಕಂಡುಬರುತ್ತದೆ.

ಸಂಪ್ರದಾಯ ಆಚರಣೆಗಳು ಸೃಷ್ಟಿಗೊಳಿಸುವ ಮೌಲ್ಯಗಳಿಂದಾಗಿ ಹೆಣ್ಣಿಗೆ ಧಾರ್ಮಿಕ ಸಮಾಜಿಕ ಮತ್ತು ಆರ್ಥಿಕ ವಲಯಗಳಿಂದ ದೂರವಿರುವಂತೆ ಕೆಲಸ ಮಾಡುತ್ತವೆ. ಅದು ಹೇಗೆಂದರೆ ಹೆಣ್ಣು ಮಾಡಬೇಕಾದ ಕೆಲಸ. ಬೇರೆ ಗಂಡು ಮಾಡಬೇಕಾದ ಕೆಲಸ ಬೇರೆಯೇ ಎಂದು ವಿಂಗಡಿಸಿ ಗಂಡಿಗೆ ಪ್ರತೇಕವಾದ ಸ್ಥಾನ ನೀಡಿ ಹೆಣ್ಣಿಗೆ ಪ್ರತ್ಯೇಕ ಸ್ಥಾನ ನೀಡಿ ಗಂಡು ಹೆಣ್ಣಿನ ಮಧ್ಯೆ ಮೇಲು ಕೀಳು, ಶ್ರೇಷ್ಠ ಕನಿಷ್ಠ ಎಂದು ಹೇಳುತ್ತವೆ. ಅದನ್ನು ವೈದಿಕದಲ್ಲಿ ಕಂಡುಬರುವ ನಮ್ಮ ಜಾತಿ ಸಮುದಾಯದವರಲ್ಲಿ ಋತುಮತಿ ಮತ್ತು ಮುಟ್ಟಾದ ಹೆಣ್ಣು ತುಳಿಸಿ ದಳವನ್ನು ಎತ್ತುವಂತಿಲ್ಲ, (ಕಿತ್ತುವಂತಿಲ್ಲ) ದೇವರ ಕೋಣೆಯಲ್ಲಿ ದೇವರನ್ನು ಮುಟ್ಟುವಂತಿಲ್ಲ, ತೆಂಗಿನ ಕಾಯಿ ಒಡೆಯುವಂತಿಲ್ಲ, ಗಂಟೆ ಬಾರಿಸುವಂತಿಲ್ಲ ಆರತಿ ಬೆಳಗುವಂತಿಲ್ಲ, ಪುರುಷ ದೇವರನ್ನು ಮುಟ್ಟುವಂತಿಲ್ಲ, (ನಿಷೇಧ) ಗೌರಿ ಪೆಟ್ಟಿಗೆ ಮಾತ್ರ

ಪೂಜೆ ಸಲ್ಲಿಸಬೇಕು, ಹೆಣ್ಣು ಮಕ್ಕಳು ತುಳಿಸಿ ಮುಟ್ಟಬಾರದು, ತೆಗೆದುಕೊಳ್ಳಬಾರದು, ಋತುಮತಿಯಾದ ನಂತರ ಕೂದಲು ತೆಗೆದರೆ ಮುತ್ತೈದೆತನ ಹೋದಂತೆ, ಹೆಣ್ಣು ಮಕ್ಕಳು ಬಳೆ ಇಲ್ಲದೆ ಇರಬಾದರು."ಕಮಲಾಪುರದ ವನಜಾಕ್ಷಿ ಅವರ ಅಭಿಪ್ರಾಯ. ಹೀಗೆ ಹೆಣ್ಣಿಗೆ, ಧಾರ್ಮಿಕ, ಸಾಮಾಜಿಕ ವಲಯದಿಂದ ದೂರವಿಡುವ ಸಂಗತಿಗಳು ಕಂಡುಬರುತ್ತವೆ. ಇವರಲ್ಲಿ (ವೈದಿಕರಲ್ಲಿ) ಧಾರ್ಮಿಕ ವಲಯ ವಿಶೇಷವಾಗಿ ಹಿಂದಿನಿಂದಲೂ ಆರ್ಥಿಕ ಉತ್ಪಾದನೆ ಕೇಂದ್ರ ಬೆಳೆದು ಬಂದಂತಹದ್ದು. ಈ ವಲಯ ಗಂಡಿಗೆ ಮೀಸಲು, ಹೆಣ್ಣಿಗೆ ಇಲ್ಲಿ ಸ್ಥಾನವಿಲ್ಲ ಎನ್ನುವ ಅಂಶಗಳು ಕಂಡುಬರುತ್ತವೆ. ಜೊತೆಗೆ ಹೆಣ್ಣು ನಾಲ್ಕು ಗೋಡೆ ಮಧ್ಯೆ ಇದ್ದು, ಪುರುಷ ಪ್ರಧಾನ ಸೃಷ್ಟಿಸಿದ ಮೌಲ್ಯಗಳ ಅಡಿಯಲ್ಲಿಯೇ ಬದುಕಬೇಕು ಎನ್ನುವಂತ ಚಿಂತನೆಗಳು ಸೃಷ್ಟಿಸಿರುವುದು ಕಂಡುಬರುತ್ತದೆ. ಇದು ಇಂದಿಗೂ ಹೆಣ್ಣನ್ನು ಸಾರ್ವಜನಿಕ ವಲಯಗಳಂತಹ ಸಂಗತಿಗಳಿಗೆ ಮುಖಾಮುಖಿಯಾಗಲೂ ಸಾಧ್ಯವಾಗಿಲ್ಲ.

ಇನ್ನು ಜೈವಿಕತೆಯನ್ನಾಧರಿಸಿದ ಸಂಪ್ರದಾಯ ಆಚರಣೆಗಳು ಕೇವಲ ಋತುಮತಿ, ಮುಟ್ಟು ಒಂದೇ ಅಲ್ಲ ಹೆಣ್ಣಿನ ಜೈವಿಕ ಸಹಜ ಕ್ರಿಯೆಯಾದ 'ತಾಯ್ತನ' ಅಥವಾ ಪ್ರಜನನ ಕ್ರಿಯೆ ಸಂಬಂಧಿ ಮೌಲ್ಯಗಳಿಂದ ಲಿಂಗಾಧಾರಿತವಾಗಿ ಅಸಮಾನ, ಅಧಿಕಾರ ಹಂಚಿಕೆಯನ್ನು ಮಾಡಿರುವುದು ಕಂಡುಬರುತ್ತದೆ. ಅದು ಹೇಗೆಂದರೆ 'ಹೆಣ್ಣಿಗೆ ಗರ್ಭಧರಿಸುವುದು, ಹೇರುವುದು ನೈಸರ್ಗಿಕವಾದ ಪ್ರಕ್ರಿಯೆ ಮತ್ತು ಇದು ಹೆಣ್ಣಿನ ನೈಸರ್ಗಿಕವಾದ ಶಕ್ತಿ, ಆದರೆ ಇದನ್ನು ಆಧರಿಸಿ ಹೆಣ್ಣಿಗೆ, ಪಾಲನೆ, ಪೋಷಣೆ, ರಕ್ಷಣೆ ಜವಾಬ್ದಾರಿಯನ್ನು ಹಾಕಿ, ಗಂಡಿಗೆ ಇದರಿಂದ ಬಿಡುವು ನೀಡಿ ಗಂಡಿಗೆ ಸ್ವತಂತ್ರವಾಗಿರಿಸುವ ನೆಲೆಯಲ್ಲಿ ಮುನ್ನಡೆಸಿಕೊಂಡು ಹೋಗುತ್ತಿರುವುದು ಕಂಡುಬರುತ್ತದೆ. ಇದನ್ನು ಇಂದಿಗೂ ಹೆಣ್ಣು ಗೃಹಕೃತ್ಯ ಸಂಗತಿಗಳನ್ನು ನಿರ್ವಹಿಸುತ್ತಿರುವುದರಿಂದ ತಿಳಿದುಬರುತ್ತದೆ. ಇದರಿಂದಾಗಿ ಇಂದು ಹೆಣ್ಣಿಗೆ "ಪುರುಷನಿಗೆ ತಾನು ಅಧೀನಳಲ್ಲ ಸಮಾನಳು ಎಂದು ಸ್ಥಾಪಿಸುವುದು ಹೇಗೆ ಎಂಬುದೇ ಹೆಣ್ಣಿನ ಮುಂದೆ ಇರುವ ಬಹುದೊಡ್ಡ ಸಮಸ್ಯೆ (ಶ್ರೀಮತಿ ಎಚ್.ಎಸ್. ಪು.೨೧)ಯಾಗಿದೆ. ಸಂಪ್ರದಾಯ ಆಚರಣೆಗಳು ಲಿಂಗ ಶ್ರೇಷ್ಠತೆಯಂತಹ ಸಂಗತಿಗಳನ್ನು ಹುಟ್ಟುಹಾಕುತ್ತಿವೆ. ಜೊತೆಗೆ ಹೆಣ್ಣಿಗೆ ಸಾಮಾಜಿಕ, ಕೌಟುಂಬಿಕ ನೆಲೆಯಲ್ಲಿ ನೆಮ್ಮದಿ ಸಿಗದಂತೆ ಮಾಡಿವೆ. ಇವುಗಳು ಕೃತಕವಾಗಿ ರಚನೆಗೊಂಡವುಗಳು ಹಾಗೂ ಇವುಗಳ ಬಹುತೇಕ ಉದ್ದೇಶವನ್ನು ಒಳಗೊಂಡಿವೆ. ಇದಕ್ಕೆ ಆಧಾರವಾಗಿ "ಸ್ತ್ರೀ–ಪುರುಷರಲ್ಲಿ ನಿಸರ್ಗ ಸಹಜ ವ್ಯತ್ಯಾಸಗಳು ಇತರ ಪ್ರಾಣಿವರ್ಗಗಳಲ್ಲಿ ಇರುವಂತೆ ಇಲ್ಲಿ ವೈವಿಧ್ಯವಿದೆಯೇ ಹೊರತು ಅಸಮಾನತೆ ಇಲ್ಲ. ಸಮಾಜ ಎಂಬ ಕೃತಕ ರಚನೆ ಮಾನವ ಪ್ರಾಣಿಗಷ್ಟೆ ಸೀಮಿತವಾದದ್ದು, ಈ ಕೃತಕ ರಚನೆಯಲ್ಲಿ ಮಾತ್ರವೇ ಅಸಮಾನತೆಯ ಪ್ರಶ್ನೆ ಬರುತ್ತದೆ. ಈ ಅಸಮಾನತೆಯು ಒಂದು ಉದ್ದೇಶ ರಚನೆಯಾದ್ದರಿಂದ ಇದರ ನಿರ್ವಹಣೆಯ ಒಂದು ಉದ್ದೇಶ ತಂತ್ರವಾಗಿ ರೂಪಗೊಳ್ಳಲು ಸಾಧ್ಯವಿದೆ" (ಶ್ರೀಮತಿ

ಎಚ್.ಎಸ್., ಪು.೩೭). ಹೀಗೆ ಜೈವಿಕತೆ ಎನ್ನುವುದು ಎರಡು ಜೀವಿಗಳಲ್ಲಿನ ವೈವಿಧ್ಯತೆ ಹೊರತು ಮೇಲು-ಕೀಳುಗಳೆಂಬ ಪ್ರಭೇದಗಳಲ್ಲ ಎಂಬ ತಿಳುವಳಿಕೆ ಮುಖ್ಯವಾಗಬೇಕಾಗಿದೆ.

ಸಂಪ್ರದಾಯ ಆಚರಣೆಗಳು ಭಿನ್ನ ಲಿಂಗಗಳಲ್ಲಿ ಪ್ರಧಾನತೆ ಅಧೀನತೆಯನ್ನು ಸೃಷ್ಟಿಸುತ್ತವೆ. ಜೊತೆಗೆ ಹೆಣ್ಣಿನಲ್ಲಿ ಒಂಟಿತನ, ಬೇಸರ, ಅಧೀನತೆ ತಂದೊಡ್ಡುವ ಹೆಣ್ಣು ಆತಂಕದಲ್ಲಿ ಸಿಲುಕಿಸುವಂತಹ ಸಂಗತಿಗಳನ್ನು ಸೃಷ್ಟಿ ಮಾಡುತ್ತಿವೆ. ಇದಕ್ಕೆ "ಮಲೆನಾಡಿನ ಕುರುಹೀನ ಶೆಟ್ಟರಲ್ಲಿ ಋತುಮತಿಗೊಂಡ ಹೆಣ್ಣಿಗೆ ಪ್ರತ್ಯೇಕವಾದ ಜಾಗ ನೀಡಿ ಕುಳ್ಳಿರಿಸಲಾಗುತ್ತಿದೆ. ಆಕೆಗೆ ಪ್ರತ್ಯೇಕವಾದ ಹಾಸಿಗೆ, ಊಟ, ತಟ್ಟೆ, ಲೋಟಗಳನ್ನು ಕೊಡುತ್ತಾರೆ. ಆಗ ಅವಳು ದೇವಸ್ಥಾನಕ್ಕೆ ಹೋಗುವಂತಿಲ್ಲ, ದೇವರಪೂಜೆ ಮಾಡುವಂತಿಲ್ಲ, ಹೂ ಮುಡಿಯುವಂತಿಲ್ಲ, ಮಂಗಳ ಕಾರ್ಯದಲ್ಲಿ ಭಾಗವಹಿಸುವಂತಿಲ್ಲ. ಆ ಅವಧಿಯಲ್ಲಿ ಆಕೆಯು ಅಲಂಕಾರಿಕ ವಸ್ತುಗಳನ್ನು (ಚಿನ್ನ, ಬಳೆ, ಸರ, ಕಿವಿಯೋಲೆ ಇತ್ಯಾದಿ) ಧರಿಸುವಂತಿಲ್ಲ, ಬರಿಗಾಲಲ್ಲಿ ನಡೆಯುವಂತಿಲ್ಲ. ಈ ಅವಧಿಯಲ್ಲಿ ಆಕೆ 'ಅಶುದ್ಧಳು' ಎಂಬ ನಂಬಿಕೆ ಕಾರಣವಾಗಿದೆ. ಹೀಗೆ ಪ್ರತಿಯೊಂದರ ನಿಷೇಧಗಳಲ್ಲಿ ಕಾಲ ಕಳೆಯುವಂತೆ ಮಾಡುತ್ತಾರೆ. ಆಕೆಯ ಮನಃಸ್ಥಿತಿ ಏನಾಗಿರುವುದು ಯಾರು ಕೂಡ ಆಲೋಚಿಸಿರುವುದಿಲ್ಲ. ಅದನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕು, ಇದೊಂದು ಮಹಾದೋಷವೆಂದು ನಂಬಿ, ಆಕೆಯು ಪುರುಷರನ್ನು ಮುಟ್ಟಬಾರದು, ಹತ್ತಿರಕ್ಕೆ ಸುಳಿಯಬಾರದು ಹೀಗೆ ಪ್ರತಿಯೊಂದರ ನಿಷೇಧದ ನಡುವೆ ಕಾಲ ಕಳೆಯುವಂತೆ ಮಾಡುತ್ತಾರೆ. ಈ ಎಲ್ಲವನ್ನು ಊಹಿಸಿದರೆ ನಮ್ಮ ಸಂಪ್ರದಾಯ ಆಚರಣೆಗಳು ನಮ್ಮನ್ನು ಯಾಕೆ ಕಟ್ಟಿ ಹಾಕಿವೆ ಎಂಬ ಪ್ರಶ್ನೆ ಆಕೆಯಲ್ಲಿ (ಹೆಣ್ಣಿನಲ್ಲಿ) ಕಾಡುತ್ತಿದೆ". (ಮಂಜಪ್ಪ ಶೆಟ್ಟಿ ಮಸಗಲಿ, ೨೦೦೦, ಪು.೧೩೫) ಹೀಗೆ ಹೆಣ್ಣಿಗೆ ಆತಂಕ, ತಲ್ಲಣಗಳ ಮಧ್ಯೆ ಬದುಕುವಂತ ಸ್ಥಿತಿ ನಿರ್ಮಾಣ ಮಾಡಿವೆ. ಇಂತಹ ವಿಧಿ-ನಿಷೇಧ, ಸಂಪ್ರದಾಯ ಆಚರಣೆಗಳಿಂದಾಗಿ ಹೆಣ್ಣು ಗಂಡಿನ ಮಧ್ಯ ಲಿಂಗಾತಾರತಮ್ಯ ಅಸಮಾನತೆಗಳು ಹೆಚ್ಚಾಗಿ ಗಂಡು ಶ್ರೇಷ್ಠ-ನೆಲೆಯಲ್ಲಿ ಹೆಣ್ಣು ಕನಿಷ್ಠ ನೆಲೆಯಲ್ಲಿ ನಿರ್ವಚಿಸಿಕೊಂಡು ಗಂಡು-ಹೆಣ್ಣಿನ ಮಧ್ಯೆ ಅಸಮಾನತೆಯ ಅಧಿಕಾರ ಹಂಚಿಕೆ ಉಂಟಾಗುತ್ತದೆ. ಹೆಣ್ಣಿಗೆ ಕೀಳಿರಿಮೆ ಆತಂಕ ತಲ್ಲಣಗಳಲ್ಲಿ ಹೆಣ್ಣು ಕಾಲಕಾಳೆಯುವಂತೆ ಮಾಡುತ್ತವೆ. ಪುರುಷ ಪ್ರಧಾನ ಸೃಷ್ಟಿಸಿದ ಮೌಲ್ಯಗಳಿಗೆ ತಲೆಬಾಗಿ ಹೆಣ್ಣಿಗೆ ಎಷ್ಟೇ ಅನ್ಯಾಯವಾಗುತ್ತಿದ್ದರು ಪ್ರತಿಭಟನೆ ಪ್ರತಿರೋದ ಮಾಡದಂತೆ ಮೌನವಹಿಸಿ ಶೋಷಣೆಗೆ ಒಳಾಗುತ್ತಿರುವುದು ಕಂಡುಬರುತ್ತಿದೆ.

ಸಂಪ್ರದಾಯದಿಂದ ಬಂದ ಮೌಲ್ಯಗಳು ನೈಸರ್ಗಿಕವಾಗಿ ಬಂದ ಹೆಣ್ಣಿನ ಗುಣಲಕ್ಷಣಗಳನ್ನು ಅವಗುಣಗಳೆಂದು, ದುರ್ಬಲವಾದವಳೆಂದು ಸಾರುತ್ತವೆ. ಅದನ್ನು ಜೈವಿಕತೆಯನ್ನಾಧರಿಸಿ ಅದು ಹೇಗೆಂದರೆ ಹೆಣ್ಣು ಋತುಮತಿಗೊಳ್ಳುವುದರಿಂದ ಅವಳು ಕೆಲಸ ಮಾಡಲು ಅಸಮರ್ಥಳು, ಅವಳಿಗೆ ಭಾರವಾದ ಕೆಲಸ ಮಾಡಲು ಸಾಧ್ಯವಿಲ್ಲ, ಏನಿದ್ದರೂ ಹಗುರಾದ

ಕೆಲಸ ಮಾಡಲು ಸೂಕ್ತ. ಮನೆಕೆಲಸವೇ ಹೆಣ್ಣಿಗೆ ಸೂಕ್ತ ಎನ್ನುವಂತ ಸಂಗತಿಗಳನ್ನು ಹೇಳುತ್ತಿರುವುದು ಕಂಡುಬರುತ್ತದೆ. ಹೀಗೆ ಹೇಳಲಾಗುತ್ತಿರುವ ಸಂಪ್ರದಾಯಿಕ ಮಾತು ಮೌಲ್ಯಗಳು ಕ್ರಿಯಾ ರೂಪದಲ್ಲಿ ಬಂದು. ಅವು ಹೆಣ್ಣನ್ನು ಅಧಿಕಾರ, ಆರ್ಥಿಕತೆ, ರಾಜಕೀಯದಂತಹ ವಲಯಗಳಿಂದ ದೂರಮಾಡಲು ಕಾರಣವಾಗುತ್ತವೆ. ಆದರೆ ಅದೇ ಪುರುಷನಿಗೆ ಈ ತೆರನಾದ ಸಂಪ್ರದಾಯಿಕ ಸಂಗತಿಗಳು ಹುಟ್ಟುವುದಿಲ್ಲ. ಹುಟ್ಟಿಲ್ಲ ಕಾರಣ ಪುರುಷ ಪ್ರಧಾನವಾದ ಸಂಪ್ರದಾಯ ಆಚರಣೆಗಳೇ ಆಗಿವೆ. ಅವು ಭಿನ್ನ ಜೈವಿಕತೆಯನ್ನಾಧರಿಸಿ ಲಿಂಗಾಧಾರಿತ ಮೌಲ್ಯಗಳನ್ನು ಬೀರಿವೆ.

ಸಮಾಜದಲ್ಲಿ ಹಕ್ಕು-ಅಧಿಕಾರ ಎನ್ನುವುದು ಪ್ರಬಲ ಶಕ್ತಿ, ಆಳುವ ವರ್ಗವನ್ನು ಸೂಚಿಸುವ ಸಂಕೇತಗಳಾಗಿವೆ. ಜೊತೆಗೆ ಮೇಲ್‌ಸ್ತರದ ಗುರುತಾಗಿ ಉಳಿಯುವಂತೆ ನೋಡಿಕೊಳ್ಳುತ್ತದೆ. ಆದುದರಿಂದ ಲಿಂಗಾಧಾರಿತ ಅಸಮಾನತೆ ಮತ್ತು ಅಧಿಕಾರ ಹಂಚಿಕೆ ಎನ್ನುವುದು, ಸಮಾಜ ವ್ಯವಸ್ಥೆಯಲ್ಲಿ ಕೇವಲ ಗಂಡು ಹೆಣ್ಣಿಗೆ ಎದುರಾಗುವ ಸಮಸ್ಯೆ ಎಂದು ಭಾವಿಸುವಂತಹ ಸಂಗತಿ ಅಲ್ಲ, ಅದೊಂದು ವ್ಯವಸ್ಥೆಯಲ್ಲಿ ಜೀವಿಯ ಅಸ್ತಿತ್ವ ಅಳಿವು, ಉಳಿಯುವ ಪ್ರಶ್ನೆಯಾಗಿದೆ. ಜೊತೆಗೆ ಹೆಣ್ಣಿನ ಜೀವನ ಬದುಕಿನ ಎಲ್ಲ ಸಂಗತಿಗಳಿಗೆ ಸಂಬಂಧಿಸಿದ ಪ್ರಕ್ರಿಯೆಯಾಗಿದೆ. ಹಾಗಾಗಿ ಲಿಂಗಾಧಾರಿತ ಅಸಮಾನತೆ ಅಧಿಕಾರ ಹಂಚಿಕೆಯಲ್ಲಿ ಎರಡು ಜೀವಿಗಳ (ಗಂಡು-ಹೆಣ್ಣು) ಮಧ್ಯೆ ಸಮಾನತೆ ಮತ್ತು ಅಸ್ತಿತ್ವ ಉಳಿಯಬೇಕಾಗಿದೆ.

ಹೆಣ್ಣಿನ ಜೈವಿಕ ಸಹಜ ಕ್ರಿಯೆಗಳೊಲ್ಲಂದಾದ 'ಪ್ರಜನನ' ಪ್ರಕ್ರಿಯೆಯು ಒಂದು ಜೀವಕ್ಕೆ ಜನ್ಮಕೊಡುವ ಶಕ್ತಿ ಹೊಂದಿದೆ. ಮತ್ತು ಇದು ನೈಸರ್ಗಿಕವಾದ ಪ್ರಕ್ರಿಯೆಯಾಗಿದೆ. ಇಂತಹ ಪ್ರಕ್ರಿಯೆಯನ್ನಾಧರಿಸಿ ಹುಟ್ಟಿಕೊಂಡ ಸಂಪ್ರದಾಯ ಆಚರಣೆಗಳು ಹೆಣ್ಣಿಗೆ ಕರ್ತವ್ಯ ಹೊಣೆ, ಗೃಹಕೃತ್ಯದ ನಿರ್ವಹಣೆಯಂತಹ ಜವಾಬ್ದಾರಿಗಳನ್ನು ಹೇರಿರುವುದು ಕಂಡುಬರುತ್ತದೆ. ಇದಕ್ಕೆ ಹೆಣ್ಣಿಗೆ ಹೇಳುವ ಸಂಪ್ರದಾಯಿಕ ಮಾತುಗಳಾದ ನಿನಗೆ (ನನಗೆ) ಅಡಿಗೆ ಮಾಡಲು ಬರಬೇಕು, ಹೆಣ್ಣಾದವಳು ಅಡುಗೆ ಮಾಡುವುದನ್ನು ಕಲಿಯಬೇಕು, ಬಟ್ಟೆ ತೊಳೆಯಬೇಕು, ಪಾತ್ರೆ ತೊಳೆಯಬೇಕು, ಕಸ ಬಳಿಯಬೇಕು, ಮನೆಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದನ್ನು ಕಲಿಯಬೇಕು ಎಂದು ನಾನಾ ರೀತಿಯಲಿ ಕೆಲಸಗಳನ್ನು ಅದು ಋತುಮತಿಗೊಂಡ ನಂತರ ಹೆಣ್ಣಿಗೆ ಹೆಚ್ಚಾಗಿ ಹೇಳುತ್ತಿರುವುದು ಕಂಡುಬರುತ್ತದೆ. ಹಾಗೇಯೆ ಈ ಕೆಲಸಗಳನ್ನು ಅವಳಿಂದಲೇ ಮಾಡುಸುವುದು ಕಾಣುತ್ತದೆ. ಅದೇ (ಪುರುಷನಿಗೆ) ಗಂಡಿಗೆ ಹೇಳುವ ಮಾತುಗಳಲ್ಲಿ ಮನೆಯ ಹೊರಗಡೆ ಇದ್ದು ವ್ಯವಹಾರ ನೋಡಿಕೊಳ್ಳಬೇಕು, ಬುದ್ಧಿವಂತನಾಗಬೇಕು ಎಂದು ಹೇಳಲಾಗುತ್ತದೆ.

ಜೈವಿಕತೆಯನ್ನಾಧರಿಸಿ ಸೃಷ್ಠಿಗೊಂಡಿರುವ ಸಂಪ್ರದಾಯ ಆಚರಣೆಗಳು. ಗಂಡು-ಹೆಣ್ಣಿನಲ್ಲಿ ಪ್ರತ್ಯೇಕವಾಗಿ ಧಾರ್ಮಿಕ ಸಾಮಾಜಿಕ, ರಾಜಕೀಯ ಸ್ಥಾನಮಾನವನ್ನು ಸೂಚಿಸುತ್ತವೆ. ಹೀಗೆ ಸೂಚಿಸಿದ ಸ್ಥಾನಮಾನಗಳಲ್ಲಿ ಗಂಡು-ಹೆಣ್ಣಿನ ಮಧ್ಯೆ ಸ್ವಾತಂತ್ರ ಅಧಿಕಾರವನ್ನು ಪ್ರತ್ಯೇಕವಾಗಿ ನೀಡುತ್ತವೆ. ಅದನ್ನು "ಸಂಪ್ರದಾಯಕ್ಕೆ ಹೆಸರಾದ ಅಯ್ಯಪ್ಪಸ್ವಾಮಿ ದೇವಾಲಯಕ್ಕೆ ಇಪ್ಪತ್ತು ವರ್ಷಗಳ ಹಿಂದೆ ನಾನು ಪ್ರವೇಶಿಸಿದ್ದೇ, ದೇವರ ಮೂರ್ತಿಯನ್ನು ಸ್ಪರ್ಶಿಸಿದ್ದೆ ಎಂದು ಕೊಟ್ಟಂತಹ ಹೇಳಿಕೆ ಪಂಡಿತರಿಂದ ಪಾಮರರವರೆಗೆ ರಾಜಕಾರಣಗಳಿಂದ ಸಾಮಾನ್ಯ ಜನರಿಗೆ, ವಿದ್ವಾಂಸರಿಂದ ವಿದ್ಯಾರ್ಥಿಗಳವರೆಗೆ, ಎಲ್ಲ ವರ್ಗದ ಜನರಲ್ಲಿ ಚರ್ಚೆಗೆ ಗ್ರಾಸವಾಗಿದೆ. ಮಹಿಳೆಯರು ಪ್ರವೇಶ ನಿಷೇಧವಿರುವ ಈ ದೇವಾಲಯದ ಒಳಗಡೆ ಪ್ರವೇಶ ಮಾಡಿದ್ದರಿಂದ ಅವಳು ಅಕ್ಷಮ್ಯ ಅಪರಾಧವೆಸಗಿದ್ದಾಳೆ. ಇದಕ್ಕಾಗಿ ಅವಳಿಗೆ ತಕ್ಕ ಶಿಕ್ಷೆ ವಿಧಿಸಬೇಕು. ಯಜ್ಞ ಪೂಜೆ, ಹವನ, ಹೋಮಗಳಿಂದ ದೇವಾಲಯವನ್ನು ಶುದ್ಧಗೊಳಿಸಬೇಕು. ಸುಪ್ರಸಿದ್ಧ ಹಿರಿಯ ವಿಚಾರವಾದಿಯೊಬ್ಬರು ಇದು ಸಮಾಜಕ್ಕೆ ಕಳಂಕತರುವಂತಹ ವಿಷಯ ಇದರಿಂದ ಸ್ತ್ರೀಯು ಸಮಾಜಕ್ಕೆ ಬಹುದೊಡ್ಡ ಅವಮಾನ ಮಾಡಿದಂತಾಗಿದೆ. ಹಾಗೆ ಇದು ಸಾಮಾಜಿಕ ಪ್ರಜ್ಞೆಗೆ ದೊಡ್ಡ ಕಳಂಕ ಇದನ್ನು ಪ್ರತಿಯೊಬ್ಬ ಸುಸಂಸ್ಕೃತಿಕ ನಾಗರಿಕರನ್ನು ಖಂಡಿಸಬೇಕು ಸಂಸತ್ತು ಮತ್ತು ವಿಧಾನಪರಿಷತ್ತುಗಳಲ್ಲಿ ಈ ಕುರಿತು ವಿಶೇಷ ಚರ್ಚೆಗಳು ನಡೆದಿವೆ."(ಸಂಯುಕ್ತ ಕರ್ನಾಟಕ., ೨೦೦೬, ಪುಟ೧೧) ನೋಡಿದರೆ ಹೆಣ್ಣಿನ ಜೈವಿಕತೆಯನ್ನಾಧರಿಸಿಯೇ ಪುರುಷ ಪ್ರಧಾನವಾದ ಮೌಲ್ಯಗಳು ಹೆಣ್ಣಿಗೆ ಸಾರ್ವಜನಿಕ (ಧಾರ್ಮಿಕ) ಬದುಕಿನಲ್ಲಿ ಸಮಾನತೆ ಇಲ್ಲ ಅವಳು ಏನಿದ್ದರೂ ಇದರಿಂದ ಹೊರಗಡೆ ಇರಬೇಕು ಎನ್ನುವ ಲಿಂಗ ಅಸಮಾನತೆಯ ಅಂಶಗಳು ಸಂಪ್ರದಾಯಿಕ ಆಚಣೆಗಳಿಂದ ಕಂಡುಬರುತ್ತದೆ. ಅದೇ ಈ ತೆರನಾಗಿ ಪುರುಷನಿಗೆ ಜೈವಿಕತೆಯನ್ನಾಧರಿಸಿ ಎಲ್ಲಿಯೂ ನಿಷೇಧಗಳನ್ನು ಹೇರಿರುವುದು ಕಂಡುಬರುವುದಿಲ್ಲ. 'ಲಿಂಗದ' ಜೈವಿಕತೆಯನ್ನಾಧರಿಸಿ ಅಸಮಾನತೆಯನ್ನು ಬಿತ್ತುತ್ತವೆ.

ಹೀಗೆ ಬಿತ್ತುವುದರ ಜೊತೆಗೆ ಅದೇ ರೀತಿಯಲ್ಲಿ ಗಂಡು ಹೆಣ್ಣಿನ ಮಧ್ಯೆ ಭಿನ್ನತೆ ಉಳಿಯುವಂತೆ ನೋಡಿಕೊಳ್ಳುತ್ತವೆ. ಇದಕ್ಕೆ ಸಾಂಪ್ರದಾಯಿಕ ಮಾತುಗಳು ಹೆಣ್ಣನ್ನು ಕಂಡರೆ ಹೇಳುವಾಗ ಗಂಡಿಗೆ ಸಹಾಯಕಳಾಗಿರಬೇಕು. ಹೆಣ್ಣು ಹೇರಲು ಮಾತ್ರ. ಗಂಡನನ್ನು ರಕ್ಷಣೆ ಮಾಡುವುದು, ಮಕ್ಕಳನ್ನು ರಕ್ಷಣೆ ಮಾಡುವುದು, ಮನೆಯನ್ನು ನೋಡಿಕೊಳ್ಳುವುದು, ಗೃಹಿಣಿತ್ವವನ್ನು ಕಾಪಾಡಿಕೊಂಡು ಹೋಗುವುದು ಅವಳ ಕೆಲಸ ಎಂದು ಹೇಳಲಾಗುತ್ತದೆ.

ಈ ಕಾರಣಕ್ಕಾಗಿ ಎಷ್ಟೋ ಜಾತಿಗಳಲ್ಲಿ ಋತುಮತಿಯಾದ ಹೆಣ್ಣುಮಕ್ಕಳು ಹಾಗೂ ಗೃಹಿಣಿಗೆ ದುಡಿಯುವ ಸಾಮರ್ಥ್ಯವಿದ್ದರೂ ಜಾತಿಗೆ ಅಂಟಿಕೊಂಡಿರುವ ಸಂಪ್ರದಾಯಗಳಿಂದಾಗಿ ಹೆಣ್ಣನ್ನು ಹೊರಗಡೆ ಹೋಗದಂತೆ ಬಂಧಿಸಿರುವುದು ಕಂಡುಬರುತ್ತದೆ. ಇದಕ್ಕೆ ಉಪ್ಪಾರ

ಜಾತಿಯಲ್ಲಿ "ಈ ಜಾತಿಯಲ್ಲಿ ಕೆಲವು ವಿಧಿ ನಿಷೇಧ ನಿಯಂತ್ರಣಗಳಿವೆ. ಋತುಮತಿಗೊಂಡ ಹೆಣ್ಣಿಗೆ ಮೈಲಿಗೆ ಸೂತಕ ಇದೆ ಆಕೆ ಮನೆಯ ಒಳಗಡೆ ಇರಬೇಕು. ಗಂಡಿನ ಮುಖ ನೋಡಬಾರದು, ಹೆಚ್ಚು ಮಾತನಾಡಬಾರದು. ಅತ್ಯಂತ ದೋಷಪೂರಿತ ಸೂತಕ ಇದು ಕಳೆಯುವವರೆಗೆ ಯಾವುದೇ ತೆರೆನಾದ ಚಟುವಟಿಕೆಗಳಿಗೆ ಋತುಮತಿಯಾದ ಹೆಣ್ಣು ಪಾಲ್ಗೊಳ್ಳಬಾರದು" (ರಮೇಶ ಸ.ಚಿ., ೨೦೦೨, ಪು.೪೮)

ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುತ್ತಿರುವ ಸಂಪ್ರದಾಯಗಳು ಹೆಣ್ಣು ಕೆಲವು ಮೌಲ್ಯಗಳನ್ನು ರೂಡಿಸಿಕೊಳ್ಳಬೇಕು ಅವು ಹೆಣ್ಣಾದಂತವಳಿಗೆ ಇರಬೇಕಾದಂತವುಗಳು ಎನ್ನುವ ಧೋರಣೆಗಳನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತವೆ. ಇದಕೆ ಉಪ್ಪಾರ ಜಾತಿಯಲ್ಲಿ "ಅನುಕೂಲವಿದ್ದವರು ಋತುಮತಿಗೊಂಡ ಹೆಣ್ಣಿಗೆ ಸರಸ್ವತಿ, ಲಕ್ಷ್ಮಿ, ರಾಧೆ ಮೊದಲಾದ ದೇವತೆಯರ ಅಲಂಕಾರವನ್ನು ಹಾಕುವುದುಂಟು. ಈ ರೀತಿಯ ಅಲಂಕರಿಸಿದ ಹುಡುಗಿಗೆ ದೃಷ್ಟಿ ತಾಕದಂತಿರಲು ಇತರೆ ಕೆಲವು ಮಕ್ಕಳಿಗೆ ವಿವಿಧ ವೇಷಗಳನ್ನು ಹಾಕಿ ಅವಳ ಜೊತೆಗೆ ಕೂರಿಸುವರು" (ರಮೇಶ ಸ.ಚಿ., ೨೦೦೨, ಪು.೪೮) ಜೊತೆಗೆ "ಆಯಾ ಪ್ರದೇಶದಲ್ಲಿ ಮತ್ತು ವಿವಿಧ ಜಾತಿ, ಸಮುದಾಯಗಳಲ್ಲಿ ರೂಢಿಯಲ್ಲಿರುವ ಸಾಂಘಿಕ ರೀತಿ ರಿವಾಜುಗಳು ಆಯಾ ಮಹಿಳೆಯರ ಜೀವಿತಗಳನ್ನು ಪ್ರಭಾವಿಸುತ್ತವೆ..... ಪ್ರದೇಶಿಕತೆಗೆ ಅಥವಾ ಜಾತಿ ಸಮುದಾಯಗಳಿಗೆ ಸಂಬಂಧಿಸಿದಂತೆ ಮತ್ತು ಪರಂಪರಾಗತವಾಗಿ ನಮ್ಮ ಚಾರಿತ್ರಿಕ ದಾಖಲೆಯಿಂದ ಹರಿದು ಬಂದಿರುವ ಪವಿತ್ರ ಸಾಹಿತ್ಯಗಳನ್ನಾಧರಿಸಿ ಹಲವು ಆದರ್ಶಗಳನ್ನು ನೀತಿ ನಿಯಮಗಳನ್ನು ಸಮಾಜವು ರೂಢಿಸಿಕೊಂಡು ಬಳಕೆಗೆ ತರುತ್ತದೆ" (ಶ್ರೀಮತಿ ಎಚ್.ಎಸ್., ಪು.೯೮) ಹೀಗೆ ಸಂಪ್ರದಾಯ ಆಚರಣೆಗಳು ಸ್ಥಿರತೆ ಇಲ್ಲದೆ ಪ್ರಾದೇಶಿಕ ಭಿನ್ನತೆಗೆ ಅನುಗುಣವಾಗಿ ಜಾರಿಗೊಂಡು ಭಿನ್ನ ಭಿನ್ನವಾಗಿ ಹೆಣ್ಣನ್ನು ರೂಡಿಸಿ ಮೌಲ್ಯಗಳನ್ನು ಸ್ಥಾಪಿಸಿ ನಡೆಸಿಕೊಳ್ಳುತ್ತವೆ. ಇದಕ್ಕೆ "ಲಿಂಗ ಅಸಮಾನತೆಯನ್ನು ಜೈವಿಕತೆ, ಲೈಂಗಿಕತೆ, ಉತ್ಪದನಾ ವ್ಯವಸ್ಥೆ, ಸಾಮಾಜೀಕರಣ ಪಿತೃಪ್ರಧಾನ ಹಾಗೂ ಬಂಡವಾಳ ವ್ಯವಸ್ಥೆಯೊಂದಿಗೆ ಒಟ್ಟಾಗಿಯೇ ಗ್ರಹಿಸಬೇಕಾಗುತ್ತದೆ" (ಗಾಯತ್ರಿ ನಾವಡ, ೧೯೯೭, ಪು.೫)

ಹೆಣ್ಣಿಗೆ ಜೈವಿಕತೆಯನ್ನಾಧರಿಸಿ ನಡೆಯುತ್ತಿರುವ ಸಂಪ್ರದಾಯಗಳು ಹೆಣ್ಣಿಗೆ ಮೌಲ್ಯಗಳನ್ನು ಮೀಸಲೀಕರಿಸಿ ಹೆಣ್ಣನ್ನು ಅಧಿಕಾರ, ಉತ್ಪಾದನ ವಲಯದಿಂದ ದೂರಮಾಡುತ್ತವೆ. ಯಾಕೆಂದರೆ ಅವುಗಳು ಸೃಷ್ಟಿಸುವ ಮೌಲ್ಯಗಳು ಅಥವಾ ವಿಧಿಗಳು ಹೇರಲ್ಪಟ್ಟವುಗಳಾಗಿವೆ. ಮತ್ತು ಇವುಗಳು ಗಂಡು-ಹೆಣ್ಣಿನ ಮಧ್ಯೆ ಅಂತರವನ್ನು ಕಾಯ್ದುಕೊಂಡು ಲಿಂಗಬೇಧವನ್ನು ಸೃಷ್ಟಿಸುತ್ತದೆ. ಆದರೆ ಅವುಗಳು ಎಲ್ಲಿಯೂ ಹೇರಲ್ಪಟ್ಟ ವಿಧಿಗಳು, ಗುಣಗಳು, ಪಾತ್ರಗಳೆಂದು ತೋರಿಸಿಕೊಳ್ಳದಂತೆ ಮುಂದುವರೆಯುತ್ತವೆ. ಮತ್ತು ಸಹಜವಾದವುಗಳೆಂದು ಭ್ರಮಿಕರಿಸುವ ಕೆಲಸ ಮಾಡುತ್ತವೆ. ಹೀಗೆ ಮಾಡಿದ್ದರಿಂದಲೇ ಇಂದಿಗೂ ಗಂಡು-ಹೆಣ್ಣಿನ ಮಧ್ಯೆ ಅಂತರ ಉಂಟಾಗಿ ಹೆಣ್ಣಿನ ಮೇಲೆ ನಿರಂತರ ಶೋಷಣೆಗೆ ಕಾರಣವಾಗಿದೆ.

ಸಮಾಜದಲ್ಲಿ ಗಂಡು-ಹೆಣ್ಣಿನ ಮಧ್ಯೆ ಅಂತರವು ಉಂಟಾಗಲಿಕ್ಕೆ ಈ ತೆರನಾದ ಸಂಪ್ರದಾಯಗಳು ಮೌಲ್ಯಗಳು ಕಾರ್ಯನಿರ್ವಹಿಸುತ್ತವೆ. ಇವುಗಳು ಶೌಚ, ಅಶೌಚ, ಗ್ರಹಿಕೆಯಲ್ಲಿ ಗಂಡು-ಶುದ್ಧ, ಹೆಣ್ಣು-ಅಶುದ್ಧ, ಮೈಲಿಗೆಂದು ಗ್ರಹಿಸುವುದಕ್ಕೆ ಕಾರಣವಾಗುತ್ತಿವೆ. ಹಾಗಾಗಿ ಗಂಡು-ಹೆಣ್ಣಿಗೆ ಪ್ರತ್ಯೇಕವಾದ ಕ್ಷೇತ್ರವನ್ನು ನಿರ್ಮಾಣ ಮಾಡಿವೆ. ಹೆಣ್ಣಿಗೆ ಸಾರ್ವಜನಿಕ ಕ್ಷೇತ್ರದಿಂದ ವಲಯಗಳಿಂದ ದೂರವಿರಿಸಲಾಗಿದೆ. ಇದಕ್ಕೆ ಸಾರ್ವಜನಿಕ ಸ್ಥಳಗಳಾದ ದೇವಸ್ಥಾನ, ಮಂದಿರ, ಮಸೀದಿ, ಮುಂತಾದ ಧಾರ್ಮಿಕ ಸ್ಥಳಗಳಲ್ಲಿ ಹೆಣ್ಣಿಗೆ ನಿಯಂತ್ರಣ ನಿಷೇಧ ಹಾಕಿರುವುದು. ಹೆಣ್ಣಿಗೆ ಅಪವಿತ್ರ ಅಶುದ್ಧ ಎನ್ನುವ ರೀತಿ ನಡೆಸಿಕೊಳ್ಳುವುದರ ಮೂಲಕ ಲಿಂಗಾಧಾರಿತವಾಗಿ ಅಸಮಾನತೆಯನ್ನು ಸ್ಥಿರಗೊಳಿಸುವಂತ ಕೆಲಸ ಮಾಡುತ್ತಿವೆ. ಹಾಗೆ ಸಮಾಜದ ಪ್ರತಿ ಚಟುವಟಿಕೆಯಲ್ಲಿ ಲಿಂಗಾಧಾರಿತವಾಗಿ ನಡೆದುಕೊಳ್ಳುವಂತೆ ನಿರ್ದೇಶನ ಮಾಡುತ್ತವೆ ಈ ಕುರಿತಾಗಿ ಹಲವು ಧರ್ಮಗಳಲ್ಲಿ ಅಥವಾ ಧರ್ಮಕ್ಕೆ ಅನುಗುಣವಾಗಿ ಹೆಣ್ಣಿಗೆ ವಸ್ತ್ರ ಸಂಹಿತೆ ಹಾಕಿರುವುದರಿಂದ ತಿಳಿದುಬರುತ್ತದೆ. ಹಾಗೆ ಹೆಣ್ಣಿಗೆ ಬಟ್ಟೆಗಳನ್ನು ಧರಿಸುವ ಕುರಿತಾಗಿ ಹೆಣ್ಣು ಇಂತಹ ಬಟ್ಟೆಗಳನ್ನು ಧರಿಸಬೇಕು, ಇಲ್ಲಿಯವರೆಗೆ ಹಾಕಿದರೆ ಮಾತ್ರ 'ಮಾನ'ವಂತಳು' 'ಶೀಲ'ವಂತಳು, 'ಚಾರಿತ್ರ್ಯ'ವಂತಳು ಎಂದು. ಹೆಣ್ಣಿಗೆ ನಿಗಧಿಪಡಿಸದಂತಹ ಸಂಗತಿಗಳಲ್ಲಿ ಮತ್ತು ನಿರ್ದೇಶಿಸಿರುವ ಸಂಗತಿಗಳಿಂದ ತಿಳಿಯಬಹುದಾಗಿದೆ. ಈ ಕುರಿತಾಗಿ "ಸಾಂಸ್ಕೃತಿಕ ಸ್ತ್ರೀವಾದವು ಸಾಮಾಜಿಕವಾಗಿ ಅಪಮೌಲ್ಯಗೊಂಡಿರುವ ಮತ್ತು ಗೊಳಿಸಿರುವ ಸ್ತ್ರೀ ಸಂಬಂಧಿ ಗುಣಗಳನ್ನು ಮೌಲ್ಯೀಕರಣಗೊಳಿಸಲು ಮತ್ತೆ ಪರಿಷ್ಕರಿಸಲು ಈ ಸ್ತ್ರೀವಾದಿಗಳು ಸ್ತ್ರೀಯರದೇ ಆದ ಪ್ರತ್ಯೇಕವಾದ ಸಾಂಸ್ಕೃತಿಕ ಅಗತ್ಯವನ್ನು ಎತ್ತಿಹಿಡಿದು ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿನ ಸಂಪ್ರದಾಯಿಕ ರೂಢಿ ರಿವಾಜುಗಳು ಅರ್ಥ ವ್ಯವಸ್ಥೆಗಳು ಹೆಣ್ಣಿನ ಶೋಷಣೆಯ ಮೂಲ ದ್ರವ್ಯಗಳು ಎಂಬುದನ್ನು ಸಾಬೀತುಪಡಿಸಲು ಹೆಚ್ಚು ಕಷ್ಟಪಡಬೇಕಾಗಿದೆ. ಏಕೆಂದರೆ ಇವೆಲ್ಲವು ಸ್ಪಷ್ಟವಾಗಿ ಗೋಚರವಾಗುವ ಸಂಗತಿಗಳು" (ಉದ್ಧೃತ ಶ್ರೀಮತಿ ಎಚ್.ಎಸ್., ೨೦೦೪, ಪು.೩೧) ಮುಂದುವರೆದು "ಹೆಣ್ಣಿನ ಶಕ್ತಿ ಎನ್ನುವುದು ಮೂಲದಲ್ಲಿ ಜೀವಿ ಕ್ಷೇಮವೆ ಆಗಿದೆ. ಇದರ ಬಹುಮುಖ್ಯ ನೆಲೆ ಅವಳ ಶರೀರವೇ ಆಗಿದೆ. ಪುರುಷ ಚಿಂತನೆಯ ಆಕ್ರಮಣ ಬಹುಮುಖ್ಯವಗಿ ಅವಳ ಈ ಶರೀರವೇ ಅವಳ ಶರೀರವನ್ನೇ ಗುರಿಯನ್ನಾಗಿಸಿಕೊಂಡಿದೆ. ಈ ಜೀವವಿರೋಧಿ ಆಕ್ರಮಣವನ್ನು ಎದುರಿಸಿ ಸ್ತ್ರೀ ಶಕ್ತಿಯನ್ನು ಮತ್ತೆ ಗಳಿಸಿಕೊಳ್ಳುವುದೇ ಈ ಸ್ತ್ರೀವಾದದ ಪ್ರಮುಖ ಚಿಂತನೆ" (ಉದ್ಧೃತ ಶ್ರೀಮತಿ ಎಚ್.ಎಸ್., ೨೦೦೪, ಪು.೩೧) ಎಂದು ಸ್ತ್ರೀವಾದವು ಹೇಳಿರುವುದು ಸಂಸ್ಕೃತಿಯಲ್ಲಿನ ಮೌಲ್ಯಪುರುಷ ಧೋರಣೆ ಕೂಡಿವೆ ಎನ್ನುವುದನ್ನು ಪ್ರಸ್ತುತಪಡಿಸುತ್ತದೆ.

ಹೆಣ್ಣಿಗೆ ನಿರ್ಬಂಧಿಸುವ ನಿಯಂತ್ರಿಸುವ ಸಂಪ್ರದಾಯ ಮೌಲ್ಯಗಳು ಹೆಣ್ಣಿಗೆ ಅಸಮಾನತೆ ನೆಲೆಗಳಲ್ಲಿ ಅಧಿಕಾರ ಹಂಚಿಕೆ ಮಾಡುತ್ತವೆ. ಈ ಕುರಿತಾಗಿ, ಸಂಸ್ಕೃತ ಸ್ತ್ರೀವಾದಿಗಳು ಅದರಲ್ಲಿ ವಿಶೇಷವಾಗಿ ಆಡ್ರಿಯನ್ ರಿಚ್, ಮೇರಿಡಾಲಿಯಂತಹ ತೀವ್ರವಾದಿ ಮಹಿಳೆಯುರ "ಸ್ತ್ರೀ ಶರೀರದೊಂದಿಗೆ ನಿಕಟಸಂಬಂಧ ಪಡೆಯುವ ಸ್ತ್ರೀಯಾತ್ಮಕ ಪ್ರಜ್ಞೆಯ ತತ್ವವನ್ನು ಪ್ರತಿವಾದಿಸಿದರು. ಒಬ್ಬ ಹೆಂಗಸಿನ ಸ್ತನಗಳು, ಗರ್ಭಕೋಶ, ಯೋನಿ, ಹೆಣ್ಣಿನ ಅಂಗಾಂಗಳು ಸ್ತ್ರೀ ವಿಶಿಷ್ಟವಾದವುಗಳಾಗಿವೆ. ಅವುಗಳು ನಡೆಸುವ ಮಾಸಿಕ ಮುಟ್ಟು, ಗರ್ಭಧಾರಣೆ, ಜೀವದ ಫಲಿಸುವಿಕೆ ಸ್ತನಪಾನ ಶಕ್ತಿಗಳಂತಹ ಪ್ರಕ್ರಿಯೆಗಳು ಅವಳಿಗಷ್ಟೆ ವಿಶೇಷವಾದ ಜೈವಿಕ ಸಂವಾದಗಳಾಗಿವೆ. ಸ್ತ್ರೀ ಶಕ್ತಿಯನ್ನು ನಿಯಂತ್ರಿಸುವ ಕುತಂತ್ರವಾಗಿ ಪಿತೃಪ್ರಧಾನ ವಿಚಾರಧಾರೆ. ಹೆಣ್ಣನ್ನು ಕೆಳದರ್ಜೆಯವಳೆಂದು ಗುರುತಿಸುತ್ತಲೇ ಇದೆ. ಇಂತಹ ಸಾಂಸ್ಕೃತಿಕ ರಾಜಕಾರಣವನ್ನು ಅರ್ಥಮಾಡಿಕೊಳ್ಳಬೇಕೆಂದು ಸ್ತ್ರೀವಾದಿ ಚಿಂತಕರು ಸೂಚಿಸಿದರು" (ಉದ್ಧೃತ ಶ್ರೀಮತಿ ಎಚ್.ಎಸ್., ೨೦೦೪, ಪು.೩೨) ಹೀಗೆ ಹೆಣ್ಣಿನ ಜೈವಿಕತೆಯನ್ನು ಅರ್ಥೈಯಿಸುವುದರ ಜೊತೆಗೆ "ಜೈವಿಕ ವೈಶಿಷ್ಟ್ಯಗಳನ್ನೇ ಪ್ರಧಾನ ಸಾಧನವಾಗಿ ಬಳಸುವ ವಿಧಾನವನ್ನು ಪ್ರಸ್ತಾಪಿಸಿದರು. ಅದು ಹಿರಿದಾದ ಬೌದ್ಧಿಕ, ಸಾಮರ್ಥ್ಯ, ವಿಶೇಷ ಸೂಕ್ಷ್ಮ ಅರಿವು, ಸಂವೇಧನೆ, ನಿರೀಕ್ಷಣಾ ಶಕ್ತಿಗಳು, ನೋವು ಸಹಿಸಬಲ್ಲ ಸಹನೆ ತಾಳ್ಮೆಗಳಂತಹವು ಸ್ತ್ರೀ ದೈಹಿಕತೆಯ ಸಾಮರ್ಥ್ಯಗಳೆಂದೇ ಸ್ವೀಕೃತವಾದಾಗ ಮಾತ್ರ ಹೆಣ್ಣಿಗೆ ಸಾಂಸ್ಕೃತಿಕ ಮೌಲ್ಯಗಳಿಂದ ಬಂದ ಮಿಥ್ಯಗಳನ್ನು ಮತ್ತು ಪಿತೃಪ್ರಧಾನತೆಯ ಹಿಡಿತದಿಂದ ಪಾರಾಗಲೂ ಸಾಧ್ಯ" (ಉದ್ಧೃತ ಶ್ರೀಮತಿ ಎಚ್.ಎಸ್., ೨೦೦೪, ಪು.೩೨) ಹೀಗೆ ಸಂಪ್ರದಾಯಿಕ ಮೌಲ್ಯಗಳು ಸೃಷ್ಟಿಗೊಳಿಸುವ ಅಸಮಾನತೆಗೆ ಪ್ರತಿರೋಧವಾಗಿ ಹೇಳಿರುವುದು ಕಂಡುಬರುತ್ತದೆ.

ಸಾಂಸ್ಕೃತಿಕವಾಗಿ ಹೆಣ್ಣಿಗೆ ಒದಗಿರುವ ಪರಿಸರದಿಂದಾಗಿ ಅಸಮಾನತೆ ತಾರತಮ್ಯ ಶೋಷಣೆಗಳಂತಹ ಸಂಗತಿಗಳನ್ನು ಒಡೆದು ಹಾಕಲು ತಂತ್ರಗಳನ್ನು ಕಂಡುಕೊಳ್ಳಬೇಕಿದೆ. ಜೈವಿಕತೆಯನ್ನು ಮುಂದಿಟ್ಟುಕೊಂಡು ಪ್ರತಿ ರಾಜಕಾರಣವನ್ನು ರೂಪಿಸಿಕೊಳ್ಳಬೇಕಾಗಿದೆ. ಈ ಕುರಿತಾಗಿ "ಮಾರ್ಕ್ಸ್‌ವಾದ ಮತ್ತು ಸ್ತ್ರೀವಾದವು ಸಂಪ್ರದಾಯ ಆಚರಣೆಗಳಿಂದ ಬಂದ ಮೌಲ್ಯಗಳು ಹೆಣ್ಣಿನ ಅಸಮಾನತೆ ಸೃಷ್ಟಿಗೊಳಿಸಲು ಕಾರಣವಾಗುತ್ತವೆ. ಇವು ಹೆಣ್ಣಿಗೆ ಅವಕಾಶಗಳ ವಿತರಣೆಯಲ್ಲಿ ಅಸಮಾನತೆಯನ್ನು ಜಾರಿಗೊಳಿಸುವ ತಂತ್ರಗಳಾಗಿ ರೂಪಿತಗೊಂಡಿವೆ. ಈ ಕಾರಣಕ್ಕಾಗಿ ಸ್ತ್ರೀಪುರುಷರ ಮಧ್ಯೆ ಅಸಮಾನತೆ ಕೆಲಸ ಮಾಡುತ್ತಿವೆ". (ಉದ್ಧೃತ : ಶ್ರೀಮತಿ ಎಚ್.ಎಸ್., ೨೦೦೪, ಪು.೩೬) ಹೀಗೆ ವಿವಾಹ, ಕುಟುಂಬ, ಸಂಸ್ಥೆಗಳು ಪುರುಷ ರಾಜಕಾರಣದ ಭಾಗವಾಗಿ ಕೆಲಸ ಮಾಡುತ್ತವೆ. ವಿವಾಹ ಕುಟುಂಬದ ಒಳಗಡೆ ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ಕೆಲವು ಸಂಪ್ರದಾಯಿಕ ಮೌಲ್ಯ-ಜವಾಬ್ದಾರಿ, ಕರ್ತವ್ಯವನ್ನು ಹೆಣ್ಣಿಗೆ ಮಾತ್ರ ಹಾಕಿ ಸ್ವಾತಂತ್ರ್ಯ ಹಕ್ಕು ಅಧಿಕಾರ ಪುರುಷನಿಗೆ ದೊರೆಯುವಂತೆ ಮಾಡಿವೆ. ಹೀಗಾಗಿ

ಕುಟುಂಬ ಸಂಸ್ಥೆಗಳು ಹೆಣ್ಣಿನ ಶೋಷಣೆಯ ನೆಲೆಗಳಾಗಿವೆ. ಇದಕ್ಕೆ ಫ್ರೆಂಚ್ ಸ್ತ್ರೀವಾದವು ಹೆಣ್ಣನ್ನು ಅಧೀನಗೊಳಿಸಿದ ಸಂಗತಿಗಳಲ್ಲಿ ರೂಢಿ ಸಂಪ್ರದಾಯ ಆಚರಣೆಗಳು ಹೆಣ್ಣಿನ ಮೇಲೆ ಆಕ್ರಮಣ ಮಾಡಿ ಹೆಣ್ಣಿಗೆ ಲಿಂಗಾಧಾರಿತವಾಗಿ ಅಸಮಾನತೆಯನ್ನು ಸೃಷ್ಟಿಸುತ್ತವೆ ಎಂದು ತಿಳಿದು ಇವುಗಳನ್ನು ಬಳಸಿಕೊಂಡ ಪುರುಷ ಪ್ರಧಾನ ಅಥವಾ ಪಿತೃಪ್ರಧಾನ ಸಮಾಜದ ವಿರುದ್ಧ ಪ್ರತಿಭಟಿಸಿರುವುದು ಕಂಡುಬರುತ್ತದೆ. ಹೆಣ್ಣಿನ ಕುರಿತಾಗಿ ಸೃಷ್ಟಿಗೊಂಡಿರುವ ಮೌಲ್ಯಗಳು ಬಹುತೇಕ ಲಿಂಗಾಧಾರಿತ ಅಸಮಾನತೆಯನ್ನುಂಟು ಮಾಡುತ್ತಿವೆ. ಅವುಗಳು ಜೈವಿಕತೆಯನ್ನಾಧರಿಸಿ ಗಂಡು, ಹೆಣ್ಣನ್ನು ಬೇರೆ ಬೇರೆ ರೀತಿಯಾಗಿ ಚಿತ್ರಿಸುವ ಕೆಲಸ ಮಾಡಿರುವುದು ಕಂಡುಬರುತ್ತದೆ. ಇದಕ್ಕೆ ಈಗಾಗಲೇ ಸಮಾಜದಲ್ಲಿ ಹೆಣ್ಣಿನ ಕುರಿತಾಗಿ ಇರುವಂತಹ ನಂಬಿಕೆ, ಮಿಥ್‌ಗಳಾದ ಹೆಣ್ಣು ಎಂದರೆ 'ಚಂಚಲೆ, ಸ್ವಾರ್ಥ, ಸುಳ್ಳು ಹೇಳುವವಳು, ನೈತಿಕ ಬಲವಿಲ್ಲದವಳು ಎಂದು ಮುಂತಾಗಿ ನಿರ್ವಚಿಸಲಾಗಿದೆ. ಈ ನೆಲೆಗಳಿಂದಲೇ ಅವಳನ್ನು ಅಧಿಕಾರದ ನೆಲೆಗಳಿಂದ ದೂರವಿಡಲಾಗಿದೆ.

ಸಂಪ್ರದಾಯ ಆಚರಣೆಗಳು ಸ್ತ್ರೀ–ಪುರುಷರ ಲಿಂಗಾಧಾರಿತ ಅಸಮಾನತೆಗೆ ಕಾರಣವಾಗುದರ ಜೊತೆಗೆ ಗಂಡು–ಹೆಣ್ಣಿನಲ್ಲಿ ಆಳುವವರ ಮತ್ತು ಆಳಿಸಿಕೊಳ್ಳುವವ ಗುಣಗಳನ್ನು ಸೃಷ್ಟಿಗೊಳಿಸುತ್ತವೆ. ಇವುಗಳು ಸೃಷ್ಟಿಗೊಳಿಸಿದ ಮೌಲ್ಯಗಳಿಂದಾಗಿ ಹೆಣ್ಣಿಗೆ ಗಂಡಿನ ವಿರುದ್ಧ ಮೀರಿ ನಿಲ್ಲುವುದಾಗಲೀ, ಎದುರುವಾದಿಸುವುದಾಗಲೀ, ಸಿಟ್ಟುಗೊಳುವುದಾಗಲಿ, ಸಾಧ್ಯವಾಗದಂತೆ ಮಾಡುತ್ತವೆ. ಕೊನೆಗೆ ಪುರುಷರೆದುರು ತಾನೊಂದು 'ವ್ಯಕ್ತಿ' ಎಂಬ ವಿಶ್ವಾಸದಿಂದ ನಿಲ್ಲುವುದು ಸಾಧ್ಯವಾಗದಂತಹ ಸ್ಥಿತಿಯನ್ನು ತಂದಿಟ್ಟಿವೆ.

ಹೆಣ್ಣಿಗೆ ವಿವಾಹ ಕುಟುಂಬಗಳ ಸಂಬಂಧಗಳಲ್ಲಿ ಗಂಡ, ತಂದೆ, ಹಿರಿಯರು, ಕಿರಿಯರು ಎನ್ನವಂತಹ ಮೌಲ್ಯ ಬಿತ್ತಿ ಅವಳನ್ನು ಪುರುಷ ಸೇವೆಗಳಲ್ಲಿ ಮುಂದುವರೆಸಿವೆ. ವಿನಹಃ ಹೆಣ್ಣಿಗೆ ಅಸ್ತಿತ್ವ, ಅಧಿಕಾರಗಳಂತ ಸಂಗತಿಗಳನ್ನು ಹುಟ್ಟುಹಾಕಿಲ್ಲ. ಈ ಕಾರಣದಿಂದಾಗಿ ಸ್ತ್ರೀವಾದವು ಅಥವಾ ಸ್ತ್ರೀವಾದ ಅಧ್ಯಯನವು ಲಿಂಗ, ಜಾತಿಗಳ ಮೇಲೆ ನಿಗದಿತ ಪಾತ್ರಗಳ ಹೇರಿಕೆಯನ್ನು ಕುರಿತು ವಿರೋಧಿಸುತ್ತದೆ ಹಾಗೆ ಪುರುಷ ಕೇಂದ್ರಿತ ಗ್ರಹಿಕೆಯಿಂದ ಅಥವಾ ಲಿಂಗ ಅಸಮಾನತೆಯಂತಹ ಗುಣ–ಸ್ವಭಾವಗಳನ್ನು ಹುಟ್ಟುಹಾಕುವ ಮೌಲ್ಯಗಳನ್ನು ಅಲ್ಲಗಳೆಯುತ್ತದೆ. ಸ್ತ್ರೀ–ಪುರುಷರ ಮೂಲ ಪ್ರವೃತ್ತಿ ಎಂದು ಬಗೆಯಲು ಕಾರಣವಾಗುವ ಸ್ತ್ರೀ ಸಂಪ್ರದಾಯ ಮೌಲ್ಯಗಳನ್ನು, ನಮ್ಮ ಸಂಸ್ಕೃತೀಕರಣ, ಸಮಾಜೀಕರಣದಿಂದ ಪ್ರಭಾವಿಸಲ್ಪಟ್ಟಿರುವ ಸಂಗತಿಗಳೆಂದು ತಿಳಿಯುತ್ತದೆ'. ಕ್ರಿಯಾತ್ಮಕ ಗುಣಗಳನ್ನು ಸ್ತ್ರೀತ್ವದ ಮೇಲೆ ಹೇರಿರುವುದನ್ನು ವಿರೋಧಿದುತ್ತದೆ. ಸಂಪ್ರದಾಯ ನುಡಿಗಟ್ಟುಗಳಾದ 'ಅಳುವ ಗಂಡಸನ್ನು ನಗುವ ಹೆಂಗಸನ್ನು ನಂಬಬಾರದು' ಎನ್ನುವಂತ ಸಂಪ್ರದಾಯಿಕ ನುಡಿಗಟ್ಟುಗಳನ್ನು ಗಂಡು, ಹೆಣ್ಣಿಗೆ ಹೇರಲ್ಪಟ್ಟ ಮತ್ತು ಹೇರಿರುವ ಗುಣಗಳಾಗಿವೆ ಎಂದು ಭಾವಿಸಿ ಇವುಗಳನ್ನು ತಿರಸ್ಕರಿಸಬೇಕೆಂದು

ಹೇಳುತ್ತದೆ. ಯಾಕೆಂದರೆ ಲಿಂಗಾಧಾರಿತ ಪಾತ್ರದಿಂದ, ಜೀವನದ ಪಾತ್ರಗಳು, ಗುರಿಗಳು ನಿರ್ಧಾರವಾಗುತ್ತವೆ. ಮತ್ತು ಗಂಡು-ಹೆಣ್ಣು ಎಂದು ನಿರ್ಧರಿಸುವ ಪಾತ್ರಗಳಲ್ಲಿ ಹಕ್ಕು, ಅಧಿಕಾರ ಅಸ್ತಿತ್ವದ ಪ್ರಶ್ನೆ ಅಡಗಿರುತ್ತದೆ. ಆದುದರಿಂದ ಅಂತಹವುಗಳಿಗೆ ಕಾರಣವಾಗುವ ಯಾವುದೇ ಅಂಶಗಳನ್ನು ಕಿತ್ತೊಗೆಯಬೇಕೆನ್ನುತ್ತದೆ.

ಸಂಪ್ರದಾಯದಲ್ಲಿ ಬಹುತೇಕ ಗಂಡು-ಹೆಣ್ಣಿಗೆ ನಿಗದಿಗೊಳಿಸುವ ಕಾರ್ಯ ನಡೆದಿದೆ. ಮತ್ತು ನಿಗದಿಗೊಳಿಸಿ ಸ್ಥಿರಮಾದರಿಯಲ್ಲಿ ಉಳಿಯುವಂತೆ ಮಾಡಿದೆ. ಉದಾಹರಣೆಗೆ ಹೇಳುವುದಾದರೆ ಹೆಣ್ಣಾದವರು ಹೆಚ್ಚಾಗಿ ತ್ಯಾಗಿಯಾಗಿರಬೇಕು. ಆತ್ಮೀಯವಾಗಿ ವರ್ತಿಸುವುದು ಕಲಿಯಬೇಕು, ಎಲ್ಲರನ್ನು ಸ್ವಾಗತಿಸುವ ಗುಣವಿರಬೇಕು, ಕೋಮಲಾಂಗಿಯಾಗಿರಬೇಕು, ಪುರುಷನಿಗೆ ಪೂರಕವಾಗಿ, ಅವಶ್ಯಕವಾಗಿ ಹೆಣ್ಣು, ನಡೆದುಕೊಳ್ಳುವಂತಿರಬೇಕು ಹೀಗೆ ಲಿಂಗಾಧಾರಿತವಾಗಿಯೆ ಸಂಪ್ರದಾಯದ ಮೌಲ್ಯ ಕಂಡುಬರುವುದರಿಂದ ತಿಳಿಯಬಹುದು. "ಮಹಿಳೆಯ ಶೋಷಣೆಗೆ ಅವಳ ಮೇಲಿನ ನಿರ್ಬಂಧ, ಅವಳ ಜೀವನದ ಅಪಮೌಲೀಕರಣಕ್ಕೆ ಬುನಾದಿಯಾಗಿ ಸಮಾಜ, ಹೆಣ್ಣಿನ ಜೈವಿಕ ಸ್ವರೂಪವನ್ನು ಬಳಸಿಕೊಂಡಿದೆ. ಹೆಣ್ಣು-ಗಂಡಿನ ನಡುವಿನ ಜೈವಿಕ ವ್ಯತ್ಯಾಸ ಎಲ್ಲ ಲಿಂಗಾಧಾರಿತ ನೀತಿಯ ಮೂಲನೆಲೆ. ಈ ಜೈವಿಕ ಭಿನ್ನತೆಯನ್ನು ಭಿನ್ನತೆಯಾಗಿ ಮಾತ್ರ ಸ್ವೀಕರಿಸಿದ್ದರೆ. ಸಮಸ್ಯೆ ಏಳುತ್ತಿರಲ್ಲಿಲ್ಲ. ಆದರೆ ಪುರಷ ದೇಹವು ಸಾಮಾನ್ಯ ಮತ್ತು 'ಶ್ರೇಷ್ಠ' ಎಂಬ ಕಲ್ಪನೆಯ ಹಿನ್ನೆಲೆಯಲ್ಲಿ ಅದೇ ಹೆಣ್ಣಿನ ಭಿನ್ನತೆಯು 'ಕೀಳೆಂದು' ಪರಿಗಣಿತವಾಯ್ತು ಹಾಗೂ ಆ ಮೂಲಕ ಅವಳನ್ನು ಹಿಂದಕ್ಕೆ ತಳ್ಳಲು ಅದೊಂದು ನೆಪವಾಯಿತು. ಈ ಸ್ಥಿತಿಯನ್ನು ಹಾಗೆಯೇ ಮುಂದುವರಿಸಬಯಸುವವರು. ಅವಳ ದೇಹವೇ ಅವಳ ವಿಧಿ. ನಾವು ಅದನ್ನು ಬದಲಾಯಿಸಲಾಗದು ಎಂದರು. ಇಂಥ ಧೋರಣೆಗಳ ವಿರುದ್ಧ ಸ್ತ್ರೀವಾದ ಪ್ರಜ್ಞೆ ದಂಗೆ ಎದ್ದಿತ್ತು. ಮಹಿಳಾ ಚಳುವಳಿ ಶ್ರೇಣೀಕರಣವಿಲ್ಲದ ಜೈವಿಕ ಭಿನ್ನತೆಗಳನ್ನು ಗಮನಿಸುವಂತೆ ಒತ್ತಾಯಿಸಿತು. ದೇಹವನ್ನು ರಾಜಕೀಯಕ್ಕೆ ತಂದಿತ್ತು ಶ್ರೇಣೀಕರಣವನ್ನು ಒಪ್ಪುವ ಚಿಂತನ ಕ್ರಮ ಪುರುಷ ದೇಹದ ಶ್ರೇಷ್ಠತೆಯನ್ನು ಒಪ್ಪುವಾಗ ಕೆಲವು ವಾಸ್ತವಾಂಶಗಳನ್ನು ಮರೆಯುತ್ತದೆ". (ಉದ್ಧೃತ : ವಿಜಯದಬ್ಬೆ, ೧೯೯೭, ಪುಟ.೭)

ಸಮಾಜದಲ್ಲಿ ಲಿಂಗ ಸಮಾನತೆಯನ್ನು ತರುವುದು ಸ್ತ್ರೀವಾದ ಗುರಿಯಾಗಿರುವುದರಿಂದಲೆ ಇವುಗಳ ಕುರಿತಾಗಿ ಎಚ್ಚರವಹಿಸಬೇಕೆನ್ನುತ್ತದೆ. "ಪುರುಷ ಜೈವಿಕ ರಚನೆ 'ಪುರುಷತ್ವ'ವನ್ನು ಸೃಷ್ಟಿಸಿದರೆ ಸ್ತ್ರೀಯರ ಜೈವಿಕ ರಚನೆ 'ಸ್ತ್ರೀತ್ವ'ವನ್ನು ಸೃಷ್ಟಿಸುತ್ತದೆ. ಎಂಬ ವಾದ ಹುರುಳಿಲ್ಲದ್ದು, ಏಕೆಂದರೆ 'ಪುರುಷತ್ವ ಮತ್ತು 'ಸ್ತ್ರೀತ್ವ' ಎಂಬ ಪರಿಕಲ್ಪನೆಗಳು ಮಾನಸಿಕ ಸ್ಥಿತಿಗಳೆ ಹೊರತು ಸಾರ್ವತ್ರಿಕ ವಾಸ್ತವಗಳಲ್ಲ. ನಮ್ಮ ದೌರ್ಬಲ್ಯಗಳು ಅಥವಾ ನಮ್ಮ ಸಾಮರ್ಥ್ಯಗಳು ನಮಗೆ ಜೀವನದಲ್ಲಿ ದೊರೆಯುವ ಅಥವಾ ದೊರೆಯದಿರುವ ಅವಕಾಶಗಳಿಂದ ಪ್ರಭಾವಿತವಾಗಿರುವಂಥವು.

ಪುರುಷ ಕೇಂದ್ರಿತ ಸಾಮಾಜಿಕ ಮೌಲ್ಯಗಳು ಅನೇಕ ಸ್ತ್ರೀಯರಲ್ಲಿ ಕೀಳರಿಮೆಯ ಪರಾಧೀನತೆಯ ಅಥವಾ ದುರ್ಬಲತೆಯ ಭಾವನೆಗಳನ್ನು ಮೂಡಿಸುತ್ತವೆ. ಸ್ತ್ರೀ-ಪುರುಷರ ಮೂಲ ಪ್ರವೃತ್ತಿಗಳು ಎಂದು ಗುರುತಿಸಲ್ಪಟಿರುವ ಅನೇಕ ಲಕ್ಷಣಗಳು ನಮ್ಮ ಸಾಂಸ್ಕೃತಿಕ ಮೌಲ್ಯವ್ಯವಸ್ಥೆಯಿಂದ ಪ್ರಭಾವಿಸಲ್ಪಟ್ಟಿವೆಯೇ ಹೊರತು, ಇವು ಸ್ತ್ರೀಯವರಿಗೆ ಸಹಜವಾಗಿ ಬಂದಂಥ ಗುಣಗಳಲ್ಲ. ಸ್ತ್ರೀಯರಿಗೆ ಸಮಾನ ಅವಕಾಶಗಳನ್ನು ನಿರಾಕರಿಸಲು ಸ್ತ್ರೀ ಜೈವಿಕತೆಯನ್ನು ಮುಂದೊಡ್ಡಿರುವ ಸಮಾಜ ಇಂದಿಗೂ ಜೈವಿಕವಾದಕ್ಕೆ ಅನಗತ್ಯವಾದ ಮಾನ್ಯತೆಯನ್ನು ನೀಡುತ್ತಾ ಬಂದಿದೆ". (ಇಂದಿರಾ ಆರ್.,೧೯೯೫, ಪುಟ.೯) ಸಂಪ್ರದಾಯಿಕ ಮೌಲ್ಯಗಳು ಹೆಣ್ಣು-ಗಂಡಿನ ನಡುವೆ ಲಿಂಗ ಅಸಮಾನತೆಯನ್ನು ಉಂಟು ಮಾಡುತ್ತವೆ ಮತ್ತು ಹೆಣ್ಣು-ಗಂಡಿನ ಸಮಾನಳು ಎನ್ನುವ ಸಂಗತಿಯನ್ನು ಮರೆ ಮಾಡುವ ಕೆಲಸ ಮಾಡಿದೆ. ಇದಕ್ಕೆ ಸ್ತ್ರೀವಾದಿಗಳು "ಸ್ತ್ರೀಯರನ್ನು ದೈಹಿಕವಾಗಿ ದುರ್ಬಲರು ಎಂದು ನಿರ್ಧರಿಸಿ ಸಮಾನತೆಗೆ ಅನರ್ಹರು ಎಂದು ಸಾರುತ್ತಿರುವವರನ್ನು ಸ್ತ್ರೀವಾದ ಮತ್ತು ಸ್ತ್ರೀವಾದಿಗಳು ಸ್ತ್ರೀಯರ ಜೈವಿಕ ದೌರ್ಬಲ್ಯ ಎಂದು ಹೇಳುವುದು ಸಾಂಸ್ಕೃತಿಕ ಪೂರ್ವಗ್ರಹದ ಪ್ರತೀಕವೇ ಹೊರತು, ಅದು ಜೈವಿಕತೆ ಸಂಬಂಧಿಸಿದಲ್ಲ ಎನ್ನುವುದು ಸ್ತ್ರೀವಾದ, ಸ್ತ್ರೀವಾದಿಗಳ ಖಚಿತ ನಿಲುವು". (ಇಂದಿರಾ ಆರ್.,೧೯೯೫, ಪುಟ.೭) ಹೀಗೆ ಜೈವಿಕತೆಯನ್ನು ಮುಂದಿಟ್ಟುಕೊಂಡು ನಿರ್ಧರಿಸುವ ಸಂಪ್ರದಾಯಿಕ ಮೌಲ್ಯಗಳು ಸೃಷ್ಟಿಗೊಳಿಸುವ ಅಂಶಗಳೇ ಹೊರತು ಸತ್ಯವಾದ ಸಂಗತಿಗಳಲ್ಲ. ಅದು ಸ್ತ್ರೀ-ಪುರುಷರ ಸಮಾನತೆಗೆ ಅಡ್ಡಿ ಬಂದಿರುವ ಕಾಯಿದೆ, ಮೊದಲು ಕಿತ್ತೊಗೆಯಬೇಕು. ಅಷ್ಟೇ ಅಲ್ಲದೆ ಸಮಾಜದಲ್ಲಿ ಅಸಮಾನತೆಯನ್ನು ಬೀರುವ ಮತ್ತು ಬೀರಲು ಕಾರಣವಾಗು ಅಂಶಗಳನ್ನು ತೊಡೆದು ಹಾಕಬೇಕೆಂದು ಹೇಳುತ್ತಾರೆ. ಇದಕ್ಕೆ ಉದಾರವಾದ ಸ್ತ್ರೀವಾದವು "ಲಿಂಗಾಧಾರಿತ ಅಸಮಾನತೆಯನ್ನು ಕೊನೆಗಣಿಸಬೇಕಾದರೆ. ಸಂಸ್ಕೃತಿಕ ಮೌಲ್ಯಗಳಿಂದ ರಚಿತವಾಗಿ ಪೋಷಿಸಲ್ಪಡುತ್ತಿರುವ 'ಪುರುಷ ಸಂಕೇತ'ವಾದ ಅಥವಾ 'ಸ್ತ್ರೀ ಸಂಕೇತವಾದ ವ್ಯಕ್ತಿತ್ವಗಳನ್ನು ಬೆಳಸಿಕೊಳ್ಳದೆ 'ದ್ವಿಲಿಂಗಿ (Androgynou) ವ್ಯಕ್ತಿತ್ವವನ್ನು ಬೆಳಸಿಕೊಳ್ಳಬೇಕಾಗಿದೆ". (ಆರ್.ಇಂದಿರಾ, ೧೯೯೫, ಪುಟ.೨೯) ಎಂದು ಸಂಪ್ರದಾಯತೆಯಲ್ಲಿ ವ್ಯಕ್ತವಾಗುವ ಲಿಂಗ ಅಸಮಾನತೆಯನ್ನು ಸೃಷ್ಟಿಸುವ ಅಂಶಗಳಿಗೆ ವಿರೋಧದ ನೆಲೆಯಲ್ಲಿ ಚಿಂತನೆಗಳನ್ನು ಹೇಳಿರುವುದು ಕಂಡುಬರುತ್ತದೆ.

ಇನ್ನೂ ಖ್ಯಾತ ಸ್ತ್ರೀವಾದಿ ಚಿಂತಕಿಯಾದ ಬೆಟಿಪ್ರೀಡನ್ನಳ 'ದಿ ಫಮಿನೈನ್ ಮಿಸ್ಟ್ಕ ಮತ್ತು 'ದಿ ಸೆಕೆಂಡ ಸೆಕ್ಸ್' ಎಂಬ ರಚನೆಗಳಲ್ಲಿ ಸಂಪ್ರದಾಯಿಕ, ಸ್ಥಿರಮಾದರಿಯ ಪಾತ್ರದಲ್ಲಿ ಹೆಣ್ಣನ್ನು ನಡೆಸುವಂತ ಕ್ರಮದ ಬಗ್ಗೆ ಪ್ರಶ್ನೆ ಮಾಡಿರುವುದು ಮತ್ತು ಸಂಪ್ರದಾಯವು ಸೃಷ್ಟಿಸುವ ತಾರತಮ್ಯ ಲಿಂಗ ಆ ಸಮಾನತೆಯ ಭಾಗವಾಗಿಯೆ ಎನ್ನುತ್ತಾರೆ. ಯಾಕೆಂದರೆ ಸ್ತ್ರೀಯರು ಅಥವಾ ಮಗಳು, ಹೆಂಡತಿ, ತಾಯಿ ಎನ್ನುವ ಸಂಪ್ರದಾಯತೆಗೊಳಿಸುವ ಮತ್ತು

ಇದೆ ಪಾತ್ರ ಚೌಕಟ್ಟುಗಳಲ್ಲಿ ಬಂಧಿಸಿ ಹೆಣ್ಣಿನ ವ್ಯಕ್ತಿತ್ವ ಹಾಗೂ ಸಮಗ್ರ ವಿಕಸನಕ್ಕೆ ಅಡ್ಡಿಯಾಗುವ ಹಿನ್ನಲೆಯಿಂದ ಖಂಡಿಸಿರುವುದು ಇದೆ. ಇದಕ್ಕೆ ಅವರು ಹೇಳಿರುವ ಮಾತುಗಳು "ಓರ್ವ ಸ್ತ್ರೀಯ ಬದುಕಿಗೆ ಈ ಸಂಪ್ರದಾಯಿಕ ಪಾತ್ರಗಳ ನಿರ್ವಹಣೆಯಲ್ಲಿ ಮಾತ್ರ ಸಾರ್ಥಕತೆ ಕಂಡು ಬರುತ್ತದೆ ಎನ್ನುವ ವಾದವನ್ನು ಫ್ರೀಡನ್ ಖಂಡಿಸಿದ್ದಾಳೆ". (ಉದ್ಧೃತ ಇಂದಿರಾ ಆರ್. ೧೯೯೫, ಪುಟ.೧೯) ಇದರಿಂದ ಗೊತ್ತಾಗುತ್ತದೆ.

ಸಮಾಜದಲ್ಲಿ ಸಂಪ್ರದಾಯ ಆಚರಣೆಗಳು ಲಿಂಗತಾರತಮ್ಯ ಅಸಮಾನತೆ ಸೃಷ್ಟಿಸುತ್ತವೆ. ಹಾಗೇ ಈ ಕುರಿತಾಗಿ "ಮಾರ್ಕ್ಸವಾದಿ ಸ್ತೀವಾದವು ವರ್ಗ ಅಸಮಾನತೆಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲರೂ, ಅದರಲ್ಲಿ ವಿಶೇಷವಾಗಿ ಸ್ತ್ರೀಯರು ಸಮಾನತೆಯನ್ನು ಗಳಿಸುವುದು ಸಾಧ್ಯತೆ ಇಲ್ಲ. ಎಂಬಂಥ ಅಭಿಪ್ರಾಯದಲ್ಲಿ ಮಾರ್ಕ್ಸ್‌ವಾದ ಸ್ತ್ರೀವಾದವು ಸಾಮಾಜಿಕ ರಚನೆಗಳಿಂದ ಸೃಷ್ಠಿಯಾದಂಥ ಒಂದು ವ್ಯವಸ್ಥೆ ಎಂಬುದನ್ನು ಎಲ್ಲ ವರ್ಗಗಳ ಸ್ತ್ರೀಯರು ಮನಗಾಣಬೇಕೆಂದು ಮಾರ್ಕ್ಸ್‌ವಾದ ಸ್ತ್ರೀವಾದಿಗಳ ವಿಚಾರವಾಗಿತ್ತು. ಹಾಗೇ ಸಂಪ್ರದಾಯಿಕ ಪದ್ದತಿಗಳನ್ನು ಒಳಗೊಂಡ ವಿವಾಹ, ಕುಟುಂಬ, ಮನೆಗೆಲಸ, ಪಿತೃ ಪ್ರಧಾನ ವ್ಯವಸ್ಥೆ 'ಪಿತೃತ್ವ' ಎಂಬುದು. ಇವುಗಳಿಂದಾಗಿ ಸ್ತ್ರೀಯ ಪರಾಧೀನತೆಯ ಮತ್ತಷ್ಟು ಹೆಚ್ಚಿಸಿತು ಎಂದು ಮತ್ತು ಈ ಕುರಿತಾಗಿ ಏಂಗಲ್ಸ್ ತನ್ನ ಕೃತಿಯಲ್ಲಿ ಆಳವಾಗಿ ಪರಿಶೀಲಿಸಿದ್ದಾನೆ." (ಉದ್ಧೃತ: ಇಂದಿರಾ ಆರ್.,೧೯೯೫, ಪುಟ.೨೨) ಇದರಿಂದಾಗಿ ಮಾರ್ಕ್ಸ್‌ವಾದ ಸ್ತ್ರೀವಾದವು ಸ್ತ್ರೀಯ ಸಮಾನತೆಯನ್ನು ಸಾಧಿಸಬೇಕಾದರೆ, ಗೃಹಕೃತ್ಯ ದುಡಿಮೆಯಂತಹ ಕೆಲಸಗಳಿಗೆ ಮಾನ್ಯತೆ, ಕೊಡಬೇಕು, ಹೆಣ್ಣು ಹೊರಬಂದು ದುಡಿಯುವಂತಾಗಬೇಕು ಎನ್ನುವಂತ ಅಂಶಗಳನ್ನು ಮಂಡಿಸಿರುವುದು ಮಾರ್ಕ್ಸ್‌ವಾದ ಸ್ತ್ರೀವಾದದಲ್ಲಿ ಕಂಡುಬರುತ್ತದೆ. ಹೀಗೆ ಸಂಪ್ರದಾಯಿಕ ಮೌಲ್ಯಗಳನ್ನು ಮೀರುವಂತ ಅಂಶಗಳನ್ನು ಹೇಳಿರುವುದು ಕಂಡುಬರುತ್ತದೆ. ಪುರುಷರಿಗೆ ಹಾಗೂ ಸ್ತ್ರೀಯರಿಗೆ ವಿಭಿನ್ನವಾದ ದೇಹ ರಚನೆ ಇದೆ. ಈ ಕಾರಣದಿಂದಾಗಿ ಸ್ತ್ರೀಯರು ಮಕ್ಕಳನ್ನು ಹೆರುವ ಹಾಗೂ ಅವುಗಳನ್ನು ಬೆಳೆಸುವ ಕ್ರಿಯೆಯಲ್ಲಿ ಭಾಗಿಗಳಾಗಲೇಬೇಕು. ಸ್ತ್ರೀ – ಪುರುಷರ ನಡುವೆ ಕಂಡು ಬರುವ ಈ ಸಹಜ ಬೇಧಗಳನ್ನು ಉಳಿಸಿಕೊಳ್ಳಲೇಬೇಕು, ಸ್ತ್ರೀಯ ದೇಹ ರಚನೆ ಅಥವಾ ಜೈವಿಕ ಕಾರ್ಯಗಳ ಕಾರಣದಿಂದಾಗಿ ಆಕೆಯ (ಹೆಣ್ಣಿನ) ಸಾಮಾಜಿಕ ಸಂಸ್ಥೆಗಳಲ್ಲಿ ಸಮಾನ ಅವಕಾಶಗಳಿಗೆ, ಸಮಾನಸ್ಥಾನಕ್ಕೆ ಅರ್ಹಳಲ್ಲ ಎನ್ನುವ ವಾದವನ್ನು ತೀವ್ರಗಾಮಿ ಸ್ತ್ರೀವಾದಿಗಳು ತಿರಸ್ಕರಿಸುತ್ತಾರೆ.

ಪುರುಷ ಪ್ರಧಾನವಾದ ಸಮಾಜದಲ್ಲಿ ಹೆಣ್ಣಿನ ಜೈವಿಕ ಕ್ರಿಯೆಗಳನ್ನು ಆಧಾರವಾಗಿಟ್ಟುಕೊಂಡು ಪುರುಷ ಹೆಣ್ಣನ್ನು ಹತೋಟಿಯಲ್ಲಿರಿಸಿಕೊಂಡು ನಿಯಂತ್ರಿಸುತ್ತಿದ್ದಾನೆ. ಇದು ಅವಳ ವ್ಯಕ್ತಿತ್ವದ ಸಹಜ ವಿಕಾಸನಕ್ಕೆ ಅಡ್ಡಿಯನ್ನುಂಟಾಗಲು ಕಾರಣವಾಗುತ್ತಿದೆ. ಸ್ತ್ರೀ–ಪುರುಷರ ಸಮಾನತೆಯನ್ನು ಸ್ಥಾಪಿಸಬೇಕಾದರೆ ಸ್ತ್ರೀಯ ಜೈವಿಕ ಕ್ರಿಯೆಗಳ ಮೇಲೆ ಪುರುಷರಲ್ಲಿ ಹೊಂದಿರುವ

ಸ್ವಾಮ್ಯವನ್ನು ಕಿತ್ತೊಗೆಯಬೇಕು, ತಾನು ಯಾವಾಗ, ಹಾಗೂ ಎಷ್ಟು ಮಕ್ಕಳನ್ನು ಪಡೆಯಬೇಕು ಆ ಮಕ್ಕಳ ಪೋಷಣೆಯಲ್ಲಿ ತನ್ನ ಪಾತ್ರವೇನು? ಮುಂತಾದ ವಿಚಾರಗಳಿಗೆ ಸಂಬಂಧಿಸಿದಂತೆ. ಸ್ತ್ರೀಯು ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಂಡಾಗ ಮಾತ್ರ ಆಕೆಗೆ (ಹೆಣ್ಣಿನ) ವಿಮುಕ್ತಿ ಸಾಧ್ಯ. ಎಂದು ಹೇಳುವುದರ ಮೂಲಕ ಸಂಸ್ಕೃತಿಯ ಸಂಪ್ರದಾಯಿಕ ಮೌಲ್ಯಗಳನ್ನು ಸ್ಥಿರ ಮಾದರಿ ಪಾತ್ರಗಳನ್ನು ಮತ್ತು ಮೌಲ್ಯಗಳಿಂದ ಹೆಣ್ಣಿಗೆ ಹೇರಿರುವ ನಿರ್ಬಂಧಗಳನ್ನು ವಿರೋಧಿಸುವುದು ಕಂಡುಬರುತ್ತದೆ.

ಇದಕ್ಕಾಗಿ ತೀವ್ರಗಾಮಿ ಸ್ತ್ರೀವಾದ ನೆಲೆಯಲ್ಲಿ ಮತ್ತು ಸ್ತ್ರೀ–ಪುರುಷರ ಮಧ್ಯೆ ಸಮಾನತೆಯನ್ನು ತರಬೇಕಾದರೆ ಸ್ತ್ರೀಯ ಸಂತಾನೋತ್ಪತ್ತಿಯನ್ನು ಒಂದು ಯಂತ್ರದಂತೆ ಕಾಣುತ್ತಿರುವುದೇ ಹೆಣ್ಣಿನ ಶೋಷಣೆಗೆ ಪ್ರಮುಖ ಮೂಲ, ಹಾಗೆಯೇ ಸಂತಾನೋತ್ಪತ್ತಿಯ ಕ್ರಿಯೆಯಲ್ಲಿ ಸ್ತ್ರೀ–ಪುರುಷರು ನಿರ್ವಹಿಸುವ ಭಿನ್ನವಾದ ಪಾತ್ರಗಳೇ ಪುರುಷನಿಗೆ ಶ್ರೇಷ್ಠತೆಯನ್ನು ನೀಡಿದೆ ಎಂದು ಹೇಳುತ್ತಾರೆ. ತೀವ್ರಗಾಮಿ ಸ್ತ್ರೀವಾದದಲ್ಲಿ ಬರುವ ಸ್ತ್ರೀವಾದ ಚಿಂತಕಿಯಾದ ಶೂಲಮಿಥ್ ಫೈರ್ ಸೋನ್‌ಳ' ದಿ ಡೈಲೆಕ್ಟಿಕ್ ಆಫ್ ಸೆಕ್ಸ್ ಕೃತಿಯಲ್ಲಿ (೧೯೭೦) "ಜೈವಿಕ ತಾಯ್ತನ (Biological Motherhood)ಕ್ಕೆ ಸಮಾಜ ನೀಡಿರುವ ಅತಿಯಾದ ಪ್ರಾಶಸ್ತ್ಯವೇ, ಸ್ತ್ರೀಯ ಅಭಿವೃದ್ಧಿಗೆ ಮಾರಕ, ಶಿಶುವಿಗೆ ಜನನ ನೀಡುವುದರಲೇ ಹೆಣ್ಣು ಜೀವನದ ಸಾರ್ಥಕತೆ ಅಡಗಿದೆ ಎಂಬ ಒಂದು ಮಿಥ್ಯೆಯ ಜಾಲದಲ್ಲಿ ಸ್ತ್ರೀಯನ್ನು ಬಂಧಿಸಿರುವ ಈ ಪುರುಷ ಪ್ರಧಾನ ಸಮಾಜಿಕ ವ್ಯವಸ್ಥೆ ತಾಯ್ತನದ ಹೆಸರಲ್ಲಿ ಸ್ತ್ರೀಯ ವ್ಯಕ್ತಿತ್ವವನ್ನು ದಮನ ಮಾಡುತ್ತದೆ ಎನ್ನುವ ಫೈರ ಸ್ಟೋನ್' ಬಸಿರು, ಶಿಶು ಜನನ' ಮುಂತಾದ ಪರಿಕಲ್ಪನೆಗಳನ್ನು ಧಿಕ್ಕರಿಸುತ್ತಾರೆ ಮತ್ತು ಎಲ್ಲಿಯವರೆಗೂ ಜೈವಿಕ ತಾಯ್ತನಕ್ಕೆ ಪ್ರಾಶಸ್ತ್ರವಿದೆಯೇ ಅಲ್ಲಿಯವರೆಗೂ 'ನನ್ನ ಮಗು' ಇತರರ ಮಗು' ಎಂಬ ಭಾವನೆಗಳು ಜಾಗೃತವಾಗಿದ್ದು ಅಸೂಯೇ ವೈರತ್ವ ಒಡೆತನ, ಮುಂತಾದ ಭಾವನೆಗಳು ಮಾನವರಲ್ಲಿ ಮೂಡಿಬರುವುದು ಸಹಜ. ಆದುದರಿಂದ ಜೈವಿಕ ತಾಯ್ತನವನ್ನು ತಿರಸ್ಕರಿಸಿ, ತಂತ್ರಜ್ಞಾನದ ನೆರವಿನಿಂದ ಕೃತಕ ವಿಧಾನಗಳನ್ನು ಅಳವಡಿಸಿ ಸ್ತ್ರೀ–ಪುರುಷರ ಸಂತಾನೋತ್ಪತ್ತಿಯ ಕ್ರಿಯೆಯಲ್ಲಿ ಪಾಲ್ಗೊಂಡಾಗ ಮಾತ್ರ ಜೈವಿಕ ಸಂತಾನೋತ್ಪತ್ತಿಯ ಹೆಸರಿನಲ್ಲಿ ನಡೆಯುತ್ತಿರುವ ಸ್ತ್ರೀಯ ದಮನ ನಿಲ್ಲುತ್ತದೆ ಎಂಬುದು ಫೈರ್ ಸ್ಟೋನ್‌ಗಳ ವಾದವಾಗಿದೆ" (ಉದ್ಧೃತ ಇಂದಿರಾ ಆರ್. ೧೯೫೫, ಪುಟ.೨೭) ಹೆಣ್ಣಿನ ಜೈವಿಕತೆಯನ್ನಾಧರಿಸಿ ಸೃಷ್ಟಿಗೊಳಿಸುವ ಮತ್ತು ಸೃಷ್ಟಿಗೊಂಡಿರುವ ಮೌಲ್ಯಗಳು ಹೆಣ್ಣನ್ನು ಶೋಷಣೆ, ತಾರತಮ್ಯ ಅಧಿಕಾರ ಹೀನಳಾನ್ನಾಗಿ ಮಾಡುತ್ತವೆ. ಅಲ್ಲದೆ ಹೆಣ್ಣಿಗೆ 'ದೈವತ್ವದ ನೆಲೆಯಲ್ಲಿ ಹೆಣ್ಣಿಗೆ ಜವಾಬ್ದಾರಿಗಳನ್ನು ಕರ್ತವ್ಯಗಳನ್ನು ಹಾಕುತ್ತವೆ ಎನ್ನುವ ಹಿನ್ನೆಲೆಯಿಂದ ಸ್ತ್ರೀವಾದಿಗಳು ಜೈವಿಕ ತಾಯ್ತನವನ್ನು ತಿರಸ್ಕರಿಸಿರುವುದು ಕಂಡುಬರುತ್ತದೆ.

ಹೆಣ್ಣು ಹೊಂದಿರುವ ಏಕೈಕ ಶಕ್ತಿಯೆಂದರೆ ಆಕೆಯ ಸಂತಾನೋತ್ಪತ್ತಿಯ ಶಕ್ತಿ, ಈ ಶಕ್ತಿ ಎಲ್ಲಿಯವರೆಗೆ ಸಂಪ್ರದಾಯಿಕ ಸಂಕೋಲೆಗಳಿಂದ ಬಂಧಮುಕ್ತವಾಗುವುದಿಲ್ಲವೊ ಅಲ್ಲಿಯವೆರೆಗೆ ಹೆಣ್ಣಿಗೆ 'ಅಧಿಕಾರ'ವೆನ್ನುವುದು ದೊರೆಯುವುದಿಲ್ಲ. ಇದಕ್ಕೆ "ತಾಯ್ತನ ಎನ್ನುವುದು ಒಂದು ಸಾಂಸ್ಕೃತಿಕ ಕಟ್ಟು ಕಥನವೇ ಹೊರತು ಎಲ್ಲ ಸ್ತ್ರೀಯರಿಗೂ ಸಹಜವಾಗಿ ಒದಗಿ ಬರುವಂತ ಗುಣವಲ್ಲ. ಏಡ್ರಿಯನ್‌ರಿಚ್, ತನ್ನ 'ಆಫ್‌ವುಮನ್ ಬಾರ್ನ್: ಮದರ್ ಹುಡ್ ಆಸ್ ಎಕ್ಸಪಿರಿಯೆನ್ಸ್ ಅಂಡ್ ಇನ್ಸ್ಟಿಟ್ಯೂಷನ್' (೧೯೭೬) ಎಂಬ ಗ್ರಂಥದಲ್ಲಿ ತಾಯ್ತನವನ್ನು ಪುರುಷ ಪ್ರಧಾನ ಸಮಾಜ ಸಾಂಸ್ಥಿಕ ವ್ಯವಸ್ಥೆಯಾಗಿ ಪರಿವರ್ತಿಸಿ ಸ್ತ್ರೀಯನ್ನು ಪರುಷನ ಅಧೀನದಲ್ಲಿಡುವ ಒಂದು ಅಸ್ತ್ರವನ್ನಾಗಿ ಬಳಸುತ್ತಿವೆ ಎನ್ನುವ ವಾದವನ್ನು ಮಂಡಿಸುತ್ತಾಳೆ". (ಇಂದಿರಾ ಆರ್. ೧೯೯೫, ಪುಟ.೩೦) ಸಂಪ್ರದಾಯ ಮೌಲ್ಯಗಳು ಪುರುಷ ಪರವಾಗಿ ಕೆಲಸ ಮಾಡಿ ಹೆಣ್ಣನ್ನು 'ತಾಯ್ತನ' ಎಂದು ವೈಭವೀಕರಿಸುವ ಮೂಲಕ ಬಳಕೆಗೊಂಡಿದೆ. ಸಂಪ್ರದಾಯಿಕ ಸಮಾಜವು ಸ್ತ್ರೀ – ಪುರುಷರ ನಡವಣ ಜೈವಿಕ ವ್ಯತ್ಯಾಸಗಳನ್ನು ಅತಿಯಾಗಿ ದೊಡ್ಡದು ಮಾಡಿ ಈ ಜೈವಿಕತೆಯ ವ್ಯತ್ಯಾಸದಿಂದಾಗಿಯೇ ಸ್ತ್ರೀ – ಪುರುಷರು ಸಮಾಜದಲ್ಲಿ ಸಮಾನ ಪಾತ್ರಗಳನ್ನು ನಿರ್ವಹಿಸಲು ಸಾಧ್ಯವಿಲ್ಲ ಎಂಬ ಮಿಥ್ಯೆಯನ್ನು ಸೃಷ್ಟಿಸಿರುವುದು ಮತ್ತು ಸ್ತ್ರೀ, ಪುರುಷರಿಗೆ ನಿಶ್ಚಿತವಾದ ಪಾತ್ರಗಳನ್ನು ಸೃಷ್ಟಿಸಿರುವುದು. ಸಂಪ್ರದಾಯ ಆಚರಣೆಗಳೆ ಆಗಿವೆ. ಇದಕ್ಕಾಗಿ ಸ್ತ್ರೀವಾದ, ಸ್ತ್ರೀವಾದದ ಚಿಂತಕರು ಸಂಪ್ರದಾಯ ಆಚರಣೆ ಮತ್ತು ಸಂಪ್ರದಾಯ ಮೌಲ್ಯಗಳನ್ನು ತಿರಸ್ಕರಿಸುವುದು, (ಖಂಡಿಸಿರುವುದು) ಕಂಡುಬರುತ್ತದೆ. ಅದು ಏಕೆಂದರೆ ಸಮಾಜದಲ್ಲಿನ ಸಂಪ್ರದಾಯ ಮೌಲ್ಯಗಳು, ಸ್ತ್ರೀ ಸಹಜ ಗುಣಗಳೆಂದು ಹೇರಲ್ಪಟ್ಟಿರುವ ಸಹನೆ, ಮೃದುತ್ವ, ಅತಿಭಾವುಕತೆ, ಪೋಷಣೆ ಮನೋಭಾವ ಮುಂತಾದ ಸ್ತ್ರೀಯ ವ್ಯಕ್ತಿತ್ವವನ್ನು ಹತ್ತಿಕ್ಕುತ್ತಿವೆ.

ಲಿಂಗವ್ಯವಸ್ಥೆಯನ್ನು ರೂಪಿಸುವ ಅಂಶಗಳಲ್ಲಿ ವ್ಯಕ್ತಿಯ ಅನುಭವಗಳು ಹಾಗೂ ಸಾಂಸ್ಕೃತಿಕ ಪ್ರಭಾವಗಳು ಅತ್ಯಂತ ಪ್ರಮುಖವಾದವುಗಳಾಗಿವೆ. ಇದಕ್ಕೆ ಸ್ತ್ರೀವಾದಿಗಳಾದ ಆರ್. ಫ್ರೇರ್ ಆಡ್ಲೆರ್, ಕ್ಲಾರೆನ್ ಹಾರ್ನಿ, ಥಾಯಸರವರು ವ್ಯಕ್ತಪಡಿಸಿದ ಅಭಿಪ್ರಾಯದಿಂದ ನೋಡಿದರೆ ಸ್ಪಷ್ಟವಾಗುತ್ತವೆ. ಅವರು "ವ್ಯಕ್ತಿಯ ಮನಸ್ಥಿಯೇ ಆಗಲಿ, ಆತನ/ಆಕೆಯ ಭವಿಷ್ಯದ ಅನುಭವಗಳೇ ಆಗಲಿ ಜೈವಿಕ ಅಂಶಗಳಿಂದ ರೂಪಿತವಾಗಬೇಕಾದ ಅವಶ್ಯಕತೆಯಿಲ್ಲ ಎಂಬುದು ಆಡ್ಲೆರನ್ ಅಭಿಪ್ರಾಯವಾಗಿದ್ದರೆ, ವ್ಯಕ್ತಿಯ ಪರಿಸರ ಆತನ/ಆಕೆಯ ವ್ಯಕ್ತಿತ್ವದ ವಿಕಾಸನದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ಎಂಬುದು ಹಾರ್ನಿಯ ವಿಚಾರವಾಗಿತ್ತು. ಪುರುಷ ಪ್ರಧಾನ ಸಂಸ್ಕೃತಿ ಸ್ತ್ರೀತ್ವದ ಕಲ್ಪನೆಯನ್ನು ಸೃಷ್ಟಿಸಿ ಸ್ತ್ರೀತ್ವದ ಸಂಕೇತವಾದ ಮೌಲ್ಯಗಳನ್ನು ಸ್ತ್ರೀಯರ ಮೇಲೆ ಹೇರುತ್ತದೆ. ಪುರುಷರು ಇಡೀ ಸಮಾಜವನ್ನು ತಮ್ಮ ಅಧೀನದಲ್ಲಿಟ್ಟುಕೊಂಡಿರುವುದರಿಂದ ಸ್ತ್ರೀಯರು ಪುರುಷರಂತಾಗಬೇಕೆಂಬ ಹಂಬಲವನ್ನು

ಬೆಳೆಸಿಕೊಳ್ಳುತ್ತಾರೆ ಎಂದು ಹಾರ್ನಿ ಸ್ತ್ರೀಯರಲ್ಲಿ ಕಂಡು ಬರುವ ಹೆಣ್ಣಿನ ಬದುಕನ್ನು ಸುತ್ತವರೆದಿರುವ ಕೃತಕ ಸಂಕೋಲೆಗಳು ಆಕೆ ಓರ್ವ ಸ್ವತಂತ್ರ ವ್ಯಕ್ತಿಯಾಗಿ ತನ್ನ ಬದುಕನ್ನು ರೂಪಿಸಿಕೊಳ್ಳಲು ಅವಕಾಶವನ್ನೇ ನೀಡುವುದಿಲ್ಲ, ಸ್ತ್ರೀ ಸಹಜ ಜೈವಿಕ ಕ್ರಿಯೆಗಳಾದ ಗರ್ಭಧಾರಣೆ, ಸಂತಾನೋತ್ಪತ್ತಿ, ಮುಂತಾದವುಗಳನ್ನೆಲ್ಲ ಹಿರಿದು ಮಾಡಿ ಹೆಣ್ಣಿನ ಕ್ರಿಯಾತ್ಮಕ ಶಕ್ತಿಯನ್ನು ದಮನ ಮಾಡಲಾಗುತ್ತದೆ. ಸಂಪ್ರದಾಯದ ಮೌಲ್ಯಗಳಾದ 'ಪತ್ನಿತ್ವ' ಮತ್ತು ತಾಯ್ತನಗಳೇ ಹೆಣ್ಣಿಗೆ ಅಡೆತಡೆಯನ್ನುಂಟು ಮಾಡುವ ಪ್ರಮುಖವಾದ ಅಂಶಗಳೆಂದು ಅವರ ಖಚಿತವಾದ ನಿಲುವಾಗಿದೆ". (ಇಂದಿರಾ ಆರ್. ೧೯೯೫, ಪುಟ. ೩೧) ಎಂದು ಸಂಪ್ರದಾಯದಲ್ಲಿನ ಸ್ತ್ರೀವಾದ ಅಸಮಾನತೆಯನ್ನು ಪ್ರಾರಂಭವಾಗುವ ಮೂಲವನ್ನು ಹೇಳುತ್ತಲೆ ಸಂಪ್ರದಾಯಕತೆಯನ್ನು ತಿರಸ್ಕರಿಸಿರುವುದು ತಿಳಿದುಬರುತ್ತದೆ.

ಲಿಂಗಾಧಾರಿತ ಅಸಮಾನತೆ, ಅಧಿಕಾರ ಹಂಚಿಕೆಯಲ್ಲಿನ ಅಸಮಾನತೆಯಂತಹ ಸಂಗತಿಗಳನ್ನು ಸಂಪ್ರದಾಯ ಆಚರಣೆಗಳು ಸೃಷ್ಟಿಸುತ್ತವೆ. ಜೈವಿಕತೆಯನ್ನಾಧರಿಸಿ ಹೆಣ್ಣಿನ ನಡೆ ನುಡಿ ಆಚಾರ ವಿಚಾರ ನಿರ್ಧಾರಗಳಂತಹ ಸಂಗತಿಗಳನ್ನು ಪುರುಷ ಪರವಾಗಿ ನಿರೂಪಿಸುತ್ತವೆ. ಇದಕ್ಕೆ ಹಲವು ಸ್ತ್ರೀವಾದ, ಸ್ತ್ರೀವಾದ ಚಿಂತಕರು ಚಿಂತನೆಗಳನ್ನು ಮಂಡಿಸಿರುವುದರಲ್ಲಿ ಸಂಪ್ರದಾಯ ಆಚರಣೆ, ಸಂಪ್ರದಾಯಿಕ ಮೌಲ್ಯಗಳನ್ನು ತಿರಸ್ಕರಿಸುವ ನೆಲೆಯಲ್ಲಿ ತಮ್ಮ ಚಿಂತನೆಯನ್ನು ಮಂಡಿಸಿರುವುದು ಕಂಡುಬರುತ್ತದೆ. ಸಮಾಜದಲ್ಲಿ ಸುವ್ಯವಸ್ಥಿತವಾದ ಬದುಕು, ಗಂಡು–ಹೆಣ್ಣಿನ ಮಧ್ಯ ಇರಬೇಕೆನ್ನುವ ಮತ್ತು ಪ್ರಧಾನತೆ, ಅಧೀನತೆಗಳು ಹೋಗಿ ಸಮಾನತೆಯ ಮೂಡಬೇಕು ಎನ್ನುವುದು ನನ್ನ ಅಧ್ಯಯನದ ಆಶಯ.

ಇಂದಿನ ಆಧುನಿಕ ಜೀವನದವರೆಗೆ ಸಂಪ್ರದಾಯ ಆಚರಣೆಗಳು ಮುಂದುವರೆದು, ಲಿಂಗಾಧಾರಿತ ಅಸಮಾನ ಮತ್ತು ಅಧಿಕಾರ ಹಂಚಿಕೆಯಂತಹ ಕೆಲಸಗಳನ್ನು ಮಾಡುತ್ತಿರುವುದರಿಂದ, ಅವುಗಳನ್ನು ಪುನರ್ ಪರಿಶೀಲನೆ, ನಿರ್ಮೂಲನೆ ಮಾಡುವಂತಹ ಕೆಲಸ ಅಗತ್ಯವಾಗಿದೆ. ಅಲ್ಲದೆ ಇವುಗಳಲ್ಲಿ ಹೆಣ್ಣಿಗೆ ಅಧೀನತೆಗೆ ಒಳಪಡಿಸುವಂತಹ ಸಂಗತಿಗಳ ಕುರಿತು ಪ್ರತ್ಯೇಕವಾಗಿ ಅಧ್ಯಯನ ಮಾಡಬೇಕಾಗಿದೆ. ಯಾಕೆಂದರೆ ಧರ್ಮ, ಸಂಸ್ಕೃತಿ ಸಂಪ್ರದಾಯ ಆಚರಣೆಗಳಂತಹ ಸಂಕಿರಣ ಸಂಗತಿಗಳು ಸಮಾಜ ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿ, ಪುರುಷ ವ್ಯವಸ್ಥೆಯ ಪರಕೆಲಸ ನಿರ್ವಹಿಸುತ್ತವೆ.

ಅಡಿ ಟಿಪ್ಪಣಿ

೧. ಗುರುಲಿಂಗಯ್ಯ ಎಂ., ೨೦೦೩, **'ಕರ್ನಾಟಕ ಗೊಲ್ಲ ಸಮುದಾಯ ಸಮಾಜ ಸಾಂಸ್ಕೃತಿಕ ಅಧ್ಯಯನ'**, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂ., ಪು.೩೧

೨. ಅದೇ, ಪು.೩೧, ೩೨

೩. ಶ್ರೀಮತಿ ಎಚ್.ಎಸ್., ೨೦೦೩, **'ಸ್ತ್ರೀವಾದ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೯೫

೪. ಚಂದ್ರಪೂಜಾರಿ ಎಂ., ೨೦೦೮, **'ರಾಜಕೀಯದ ಬಡತನ'**, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ. ಪು.೯೮

೫. ಬರ್ಟ್ರಂಡ್ ರಸೆಲ್(ಅನು) ನಾರಾಯಣ ಪಿ.ವಿ., ೨೦೦೭ **'ಅಧಿಕಾರ ಮೀಮಾಂಸೆ'**, ವಸಂತ ಪ್ರಕಾಶನ, ಬೆಂಗಳೂರು, ಪು.೨೫

೬. ಚಂದ್ರಪೂಜಾರಿ ಎಂ., ೨೦೦೮, **'ರಾಜಕೀಯದ ಬಡತನ'**, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ. ಪು.೩೪

೭. ಪುಟ್ಟಯ್ಯ ಬಿ.ಎಂ., ೨೦೦೧, 'ಸಾವು ಒಂದು ಚಿಂತನೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು.೨೦-೨೧

೮. ಹೇಮಲತಾ ಹೆಚ್.ಎಂ., ೨೦೦೦, **'ಮೇರಿ ವುಲ್‌ಸ್ಟನ್ ಕ್ರಾಫ್ಟಳ ಸ್ತ್ರೀವಾದಿ ಚಿಂತನೆಗಳು'**, ಹೊಸತು ಪತ್ರಿಕೆ ಮಾರ್ಚ್, ಪು.೫೭

೯. ಅದೇ ಪು.೯೬

೧೦. ವನಜಾಕ್ಷಿ, ಕಮಲಾಪುರ, ವಯಸ್ಸು.೪೩,

೧೧. ಶ್ರೀಮತಿ ಎಚ್.ಎಸ್., **'ಚಹರೆ'**, ಇಳಾ ಪ್ರಕಾಶನ, ಬೆಂಗಳೂರು, ಪು.೨೧

೧೨. ಅದೇ, ಪು.೩೭

೧೩. ಮಂಜಪ್ಪ ಶೆಟ್ಟಿ ಮಸಗಲಿ, ೨೦೦೦, **'ಮಲೆನಾಡಿನ ಕುರುಹಿನ ಶೆಟ್ಟರು'**, ಮಸಗಲಿ ಪ್ರಕಾಶನ, ಮೈಸೂರು, ಪು.೫೨

೧೪. ರಮೇಶ ಸ.ಚಿ., ೨೦೦೨, **'ದಕ್ಷಿಣ ಕರ್ನಾಟಕದ ಉಪ್ಪಾರ ಸಮುದಾಯದ ಸಮಾಜೋ-ಸಾಂಸ್ಕೃತಿಕ ಅಧ್ಯಯನ'**, ಸಂಶೋಧನ ಗ್ರಂಥ (ಅಪ್ರಕಟಿತ) ಪು.೪೮

೧೫. ಅದೇ, ಪು.೪೮

೧೬. ಶ್ರೀಮತಿ ಎಚ್.ಎಸ್., **'ಚಹರೆ'**, ಇಳಾ ಪ್ರಕಾಶನ, ಬೆಂಗಳೂರು, ಪು.೯೮

೧೭. ಅದೇ, ಪು.೩೧

೧೮. ಅದೇ, ಪು.೩೧

೧೯. ಅದೇ, ಪು.೩೨

೨೦. ಅದೇ, ಪು.೩೨

೨೧. ಅದೇ, ಪು.೩೬

೨೨. ವಿಜಯ ದಬ್ಬೆ, ೧೯೯೭, **'ನಾರಿ ದಾಂ: ದಿಗಂತ'**, ರಚನ ಪ್ರಕಾಶನ, ಮೈಸೂರು ಪುಟ.೭

೨೩. ಇಂದಿರಾ ಆರ್., ೧೯೯೫, **'ಸ್ತ್ರೀವಾದ ದಿಕ್ಸೂಚಿ'**, ಸಮತಾ ಅಧ್ಯಯನ ಕೇಂದ್ರ, ಮೈಸೂರು ಪುಟ.೯

೨೪. ಅದೇ, ಪುಟ.೭

೨೫. ಅದೇ, ಪುಟ.೧೯

೨೬. ಅದೇ, ಪುಟ.೧೯

೨೭. ಅದೇ, ಪುಟ.೨೨

೨೮. ಅದೇ, ಪುಟ.೨೭

೨೯. ಅದೇ, ಪುಟ.೩೦

೩೦. ಅದೇ, ಪುಟ.೩೧

೩೧. ಅದೇ, ಪುಟ.೩೨

* * *

ಅಧ್ಯಾಯ ಎಂಟು

ಸಮಾರೋಪ

೧. ಫಲಿತಗಳು

೨. ನಿವಾರಣಾ ಕ್ರಮಗಳು

೩. ಅಧ್ಯಯನ ಸಾಧ್ಯತೆಗಳು

೮

ಸಮಾರೋಪ

ಸಂಪ್ರದಾಯ ಆಚರಣೆಗಳು 'ಅನಿಷ್ಟ' ನಿವಾರಣೆಯ ಉದ್ದೇಶವನ್ನೊಳಗೊಂಡಿದೆ ಎಂದು ಹೇಳಲಾಗುತ್ತದೆ. ಆದರೆ ಇವುಗಳು ಸೃಷ್ಠಿ ಮಾಡುವ ಮೌಲ್ಯಗಳು 'ಹೆಣ್ಣಿಗೆ ಅಪಾಯಕಾರಿಯಾಗಿ ಮುಂದುವರೆಯುತ್ತಿರುವುದು ಕಂಡುಬರುತ್ತದೆ.

ಸಂಪ್ರದಾಯ ಆಚರಣೆಗಳು ಸಮಾಜದಲ್ಲಿ ಆಳವಾಗಿ ಬೇರೂರಿವೆ. ಹೀಗೆ ಬೇರೂರಿದ ಇವುಗಳು ಜೈವಿಕತೆಯನ್ನು ಕೇಂದ್ರವಾಗಿಟ್ಟುಕೊಂಡೆ ಮುನ್ನಡೆಯತ್ತಿರುವುದು ಕಂಡುಬರುತ್ತದೆ. ಸಂಪ್ರದಾಯವು ಮಾತಿನ ಮೂಲಕ ವ್ಯಕ್ತವಾಗಿ ಆಚರಣೆಯ ರೂಪದಲ್ಲಿ ಮುಂದವರೆಯುವುದು. ಇವುಗಳು ಗಂಡು-ಹೆಣ್ಣಿನ ಮಧ್ಯ ಲಿಂಗತಾರತಮ್ಯವನ್ನು ಸೃಷ್ಠಗೊಳಿಸುವ ಕೆಲಸ ಮಾಡುತ್ತಿವೆ.

೧. ಸಂಪ್ರದಾಯ ಆಚರಣೆಗಳು ಹೆಣ್ಣಿನ ಕೀಳಿರಿಮೆ ಉಂಟು ಮಾಡುವುದರ ಜೊತೆಗೆ ಸಾಮಾಜಿಕ ಸಾಂಸ್ಕೃತಿಕ ಹಾಗೂ ಇತರೆ ಆಯಾಮಗಳಲ್ಲಿ ಹೆಣ್ಣಿನ ಚಲನವಲನಗಳಲ್ಲಿ ಕುಂಠಿತಗೊಳ್ಳಲಿಕ್ಕೆ ಕಾರಣವಾಗುತ್ತಿವೆ.

೨. ಸಂಪ್ರದಾಯ ಆಚರಣೆಗಳು ಹೆಣ್ಣಿನ ಜೈವಿಕತೆಯನ್ನಾಧರಿಸಿ ಮುಂದುವರೆಯುತ್ತ ಇರುವುದರಿಂದ ಅವುಗಳು ಹೆಣ್ಣನ್ನು ಅಸ್ಪೃಶ್ಯತೆ ಅಶುದ್ಧತೆ ನೆಲೆಯಲ್ಲಿ ಕೊಂಡೊಯ್ಯುವ ಕೆಲಸ ಮಾಡುತ್ತಿವೆ. ಇದರಿಂದಾಗಿ ಹೆಣ್ಣಿಗೆ ಸ್ಥಾನಮಾನ ಮತ್ತು ಸೃಜನಶೀಲತೆಗೆ ಅಡಿಯನ್ನುಂಟು ಮಾಡುತ್ತವೆ.

೩. ಹೆಣ್ಣಿನ ಜೈವಿಕತೆಯನ್ನಾಧರಿಸಿ ಮುಂದುವರೆಯುತ್ತಿರುವ ಸಂಪ್ರದಾಯಗಳು ಹೆಣ್ಣನ್ನು ಜೈವಿಕ ನೆಲೆಯಲ್ಲಿ ನೋಡಲು ಕಾರಣವಾಗುತ್ತವೆ.

೪. ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುತ್ತಿರುವ ಬಹುತೇಕ ಸಂಪ್ರದಾಯ ಆಚರಣೆಗಳು ಅಂಧಾನುಕರಣೆ ಹಾಗೂ ಮೌಢ್ಯತೆಯನ್ನೊಳಗೊಂಡು ಮುಂದುವರೆಯುತ್ತಿರುವುದು ಕಂಡುಬರುತ್ತದೆ.

೫. ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುತ್ತಿರುವ ಸಂಪ್ರದಾಯ ಆಚರಣೆಗಳು ಹೆಣ್ಣಿನ ಹಕ್ಕು ಮತ್ತು ಆತ್ಮಗೌರವವನ್ನು ನಿರ್ಲಕ್ಷಿಸುತ್ತಿರುವುದು ಕಂಡುಬರುತ್ತಿದೆ.

ಜೊತೆಗೆ ಸ್ತ್ರೀ–ಪುರುಷರ ಅಸಮಾನತೆಯನ್ನು ಇನ್ನಷ್ಟು ಹೆಚ್ಚಿಸುವ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ.

೬. ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುತ್ತಿರುವ ಸಂಪ್ರದಾಯ ಆಚರಣೆಗಳು ಹೆಣ್ಣಿನಲ್ಲಿ ಕೀಳರಿಮೆ, ಆತಂಕ, ಭಯ ಹೀಗೆ ಹಲವಾರು ನೆಲೆಯಲ್ಲಿ ಹೆಣ್ಣಿಗೆ ಶೋಷಣೆಗೆ ಒಳಪಡಿಸುವುದು ಮತ್ತು ಲಿಂಗತಾರತಮ್ಯವನ್ನು ಶಾಶ್ವತಗೊಳಿಸುವ ಕೆಲಸ ಮಾಡುತ್ತಿರುವುದು ಕಂಡುಬರುತ್ತಿದೆ.

೭. ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುತ್ತಿರುವ ಸಂಪ್ರದಾಯ ಆಚರಣೆಗಳು ಅವಮಾನ, ಮಾನಸಿಕ, ದೈಹಿಕ ಹಿಂಸೆ ಅನುಭವಿಸಿದರೂ ಅವುಗಳು ಪಾರಂಪರಿಕ ಕಾರಣಗಳಿಂದಾಗಿ ಇಂದಿಗೂ ಮುಂದುವರೆಯುತ್ತವೆ.

೮. ಹೆಣ್ಣಿನ ಜೈವಿಕತೆಯನ್ನಾಧರಿಸಿ ಸಂಪ್ರದಾಯ ಆಚರಣೆಗಳು ಗಂಡು–ಹೆಣ್ಣಿನಲ್ಲಿ ಮೇಲು–ಕೀಳು ಎಂಬ ಧೋರಣೆ ಪ್ರಬಲವಾಗಿ ಮೂಡಿಸುವ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ.

೯. ಹೆಣ್ಣಿನ ಜೈವಿಕತೆಯನ್ನಾಧರಿಸಿ ಸಂಪ್ರದಾಯ ಆಚರಣೆಗಳು ಬಹುತೇಕ ಎಲ್ಲ ಜಾತಿ ಸಮುದಾಯ ವರ್ಗಗಳಲ್ಲಿ ಕಂಡುಬರುತ್ತಿವೆ ಮತ್ತೆ ಇವುಗಳು ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದು ಕಂಡುಬರುತ್ತದೆ. ಅದು ಏನೇ ಇರಲಿ ಇವುಗಳು ಮನುಕುಲಕ್ಕೆ ಅಪಮಾನ ಮಾಡುವಂತ ಮತ್ತು ಹೆಣ್ಣು ಸಂಕುಲಕ್ಕೆ ಅಪಾಯ ತರುವಂತವಾಗಿವೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

* ಹೆಣ್ಣು ಮಕ್ಕಳಲ್ಲಿ ಕೀಳರಿಮೆ ಉಂಟುಮಾಡಿ ಮಾನಸಿಕ ಮತ್ತು ದೈಹಿಕ ಅನಾರೋಗ್ಯಕ್ಕೆ ಕಾರಣವಾಗುತ್ತವೆ.
* ತಾಯಿ ಮತ್ತು ಶಿಶುಗಳ ಆರೋಗ್ಯ ಪಾಲನೆ ಶುಚಿತ್ವದ ಕಡೆಗೆ ಅವಕಾಶವಾಗದಂತೆ ಮಾಡುತ್ತವೆ.
* ತಾಯಿ ಮತ್ತು ಶಿಶು ಮರಣ ಪ್ರಮಾಣ ಹೆಚ್ಚಾಗುತ್ತವೆ
* ಹೆಣ್ಣಿನ ಪ್ರಾಣಕ್ಕೆ ಅಪಾಯವನ್ನು ತರುವಂತವುಗಳಾಗಿವೆ.
* ಹೆಣ್ಣು ಮಕ್ಕಳ ಮೇಲೆ ಲೈಂಗಿಕ ಆಕ್ರಮಣದ ಅವಕಾಶಗಳು ಹುಟ್ಟಿಕೊಳ್ಳುತ್ತವೆ.
* ಹೆಣ್ಣಿನ ಮಾನಸಿಕತೆಯ ಮೇಲೆ ಪರಿಣಾಮ ಬೀರುತ್ತವೆ. ಜೊತೆಗೆ ಹೆಣ್ಣಿನ ವಿಕಾಸಕ್ಕೆ ತೊಡಕುಂಟು ಮಾಡುತ್ತವೆ. ಹೆಣ್ಣೇ ತನಗೆ ತಾನು ಅನುಪಯುಕ್ತಳು ಪಾಪಿ, ಅಶುದ್ಧಳು ಭಾವಿಸುವಂತೆ ಅದೇ ಸತ್ಯವೆಂದು ಭ್ರಮಿಸುವಂತೆ ಮಾಡುತ್ತವೆ.

* ಹೆಣ್ಣಿನ ದೈಹಿಕ ನ್ಯೂನತೆಗಳ ಜೊತೆಗೆ ಅಜ್ಞಾತ ಭಯದಿಂದ ಬದುಕುವಂತೆ ಮಾಡುತ್ತವೆ.

* ಹೆಣ್ಣಿಗೆ ಆತ್ಮಗೌರವ ಹಕ್ಕುಗಳನ್ನು ನಿರಾಕರಿಸುತ್ತವೆ.

* ಸ್ತ್ರೀ-ಪುರುಷರ ನಡುವೆ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ರಂಗಗಳಲ್ಲಿ ಅಸಮಾನತೆಗಳನ್ನು ಹೆಚ್ಚಿಸುವ ಕೆಲಸ ಮಾಡುತ್ತವೆ.

ಹೀಗೆ ಹೆಣ್ಣಿಗೆ ತನ್ನತನ ಎಂದು ಸಮರ್ಥಿಸಿಕೊಳ್ಳುವ ಶಕ್ತಿ ಸಾಮಾರ್ಥ್ಯಕ್ಕೆ ಅಡ್ಡಿಯನ್ನುಂಟು ಮಾಡುತ್ತಿರುವುದು ಕಂಡುಬರುತ್ತದೆ. ಹೆಣ್ಣಿಗೆ ದಿನನಿತ್ಯದ ಸಹಜ ಕ್ರಿಯೆಗಳಲ್ಲಿ ತೊಡಕನ್ನುಂಟು ಮಾಡುವ ಕೆಲಸ ನಿರ್ವಹಿಸುತ್ತಿವೆ. ಹೆಣ್ಣಿನ ಸಹಜ ಜೈವಿಕ ಕ್ರಿಯೆ ಸಹಜ ನೆಲೆಯಲ್ಲಿ ಅರ್ಥಗೊಳಗಾಗಿದೇ ಅದೊಂದು ಅಪವಿತ್ರ ಅಶುದ್ಧ ಎನ್ನುವ ಅರ್ಥಪಡೆದುಕೊಂಡಿದೆ.

ಅನಕ್ಷರತೆ, ಅಜ್ಞಾನ ಹಾಗೂ ಮೂಢನಂಬಿಕೆಗಳ ಕಾರಣದಿಂದಾಗಿ ಇಂತಹ ಅನಿಷ್ಟವಾದ ಸಂಪ್ರದಾಯ ಆಚರಣೆಗಳು ರೂಢಿಯಲ್ಲಿವೆ. ಆದರೂ ಆರ್ಥಿಕ ಸ್ಥಿತಿ ಸುಧಾರಿಸುತ್ತಿರುವ ಪ್ರದೇಶಗಳಲ್ಲಿ ಈ ಸಂಪ್ರದಾಯ ಆಚರಣೆಗಳು ಸಡಿಲವಾಗುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಈ ಸಂಪ್ರದಾಯ ಆಚರಣೆಗಳು ಕಂಡುಬರುವುದರಿಂದಾಗಿ ಇವುಗಳನ್ನು ಕಾಲಕ್ರಮೇಣ ನಿವಾರಣೆ ಮಾಡಲು ಈ ಕೆಳಗಿನ ಕ್ರಮಕೈಗೊಳ್ಳಬಹುದು.

ನಿವಾರಣೆ ಕ್ರಮಗಳು

* ಸಂಪ್ರದಾಯ ಆಚರಣೆಗಳಿಂದಾಗುವ ಅನಾಹುತಗಳ ಬಗ್ಗೆ ಆಯಾ ಜನಾಂಗ, ಜಾತಿ, ವರ್ಗ, ವಿಶೇಷವಾಗಿ ಸಮುದಾಯದ ಜನರಿಗೆ ಸೂಕ್ತ ತಿಳುವಳಿಕೆ, ಅರಿವು ಮಾಡಿಸುವುದು.

* ದೇವರು, ಧರ್ಮಗಳ ಹೆಸರಿನಲ್ಲಿ ಅಥವಾ ಸಂಪ್ರದಾಯ ನಂಬಿಕೆ, ಅನಾರೋಗ್ಯಕರ ಆಚರಣೆಗಳನ್ನು ತೊಡೆದು ಹಾಕಲು ಅಲ್ಲಿಯ ಜನಸಮುದಾಯಕ್ಕೆ ಆ ಗ್ರಾಮಗಳ ಮಹಿಳೆಯರಿಗೆ ಯುವಕ ಸಂಘಗಳಿಗೆ ಮತ್ತು ವಿದ್ಯಾವಂತ ಸಮುದಾಯದ ಸಹಕಾರ ಪಡೆದು ಸಂಪ್ರದಾಯ ಆಚರಣೆಗಳು ಸೃಷ್ಟಿ ಮಾಡುವ ಅನಾಹುತ, ಅಪಕಲ್ಪನೆಗಳ ಬಗ್ಗೆ ಅರಿವು ಮಾಡಿಸುವುದು (ತಿಳಿ ಹೇಳುವ ನೀತಿ) ಬೀದಿ ನಾಟಕ ಪಾತ್ರಧಾರಿಗಳಿಂದ ಕರಪತ್ರಗಳು, ಕಿರುತೆರೆಯ ಮೂಲಕ ಜಾಗೃತಿ ಮೂಡಿಸಬೇಕು.

* ಆಯಾ ಜನಾಂಗಗಳ ಜಾತಿಗಳ ಮುಖಾಂತರ ಪುರುಷ ಸ್ತ್ರೀಯರಿಗೆ ಈ ಆಚರಣೆಯ ಅಮಾನವೀಯತೆಯ ಕುರಿತು ಮನದಟ್ಟು ಮಾಡಿ ಅವರ ಸಹಕಾರ ಪಡೆದು ಅವರಲ್ಲಿ ಸಾಮಾಜಿಕ ಜಾಗೃತಿ ಉಂಟು ಮಾಡಬೇಕು.

* ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುವ ಪದ್ಧತಿಯನ್ನು ನಿಷೇಧಿಸುವ ಕಾನೂನು ತರಬೇಕು.

* ಜೈವಿಕತೆಯನ್ನಾಧರಿಸಿ ನಡೆಯುವ ಸಂಪ್ರದಾಯ ಆಚರಣೆಗಳನ್ನ ನಿರ್ಮೂಲನೆ ಮಾಡುವ ನಿಟ್ಟಿನಿಲ್ಲಿ ನಿರಂತರವಾಗಿ ಸಮೂಹ ಮಾಧ್ಯಮ ಮೂಲಕ ಜಾಗೃತಿ ಮಾಡಿಸುವ ಕೆಲಸ ಮಾಡಿಸಬೇಕು.

* ಹೆಣ್ಣಿನ ಜೈವಿಕತೆಯನ್ನಾಧರಿಸಿ ಸಂಪ್ರದಾಯ ಆಚರಣೆಗಳಲ್ಲಿ ಮುಖ್ಯವಾಗಿ ಜಾತಿಪದ್ಧತಿ, ಮೌಢ್ಯತೆ ಬಡತನ, ಅನಕ್ಷರತೆ, ಅಸಹಾಯಕತೆ, ಲಿಂಗತಾರತಮ್ಯ ಇತ್ಯಾದಿ ಕಾರಣಗಳಿದ್ದು ಇವುಗಳ ನಿವಾಹರಣೆಗೆ ಸರಕಾರ ವಿವಿಧ ಇಲಾಖೆಗಳ ಕ್ರಿಯಾ ಯೋಜನೆಯನ್ನು ರೂಪಿಸಬೇಕು. ಸರಕಾರ ಜೊತೆಗೆ ಜನಪರ ಸಂಘಟನೆಗಳು ಮಹಿಳಾ ಸಂಘಟನೆ, ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸಹಕರಿಸಬೇಕು.

* ಋತುಮತಿ, ಮುಟ್ಟಾದವರನ್ನು ದೂರವಿಡುವಂತಹ ಪದ್ಧತಿ ಆಚರಣೆಗಳನ್ನು ನಿಷೇಧಿಸಬೇಕು ಹಾಗೆ ಕಾನೂನುಗಳನ್ನು ತಂದು, ಕಟ್ಟುನಿಟ್ಟಿನ ಅನುಷ್ಠಾನಗಳ ಮೂಲಕ ಅವುಗಳ ನಿವಾರಣೆ ಮಾಡಬಹುದು.

* ಹೆಣ್ಣಿನ ಜೈವಿಕತೆಯನ್ನಾಧರಿಸಿ ಸಂಪ್ರದಾಯ ಆಚರಣೆಗಳನ್ನು ನಡೆಸಿಕೊಂಡು ಹೋಗುವವರ ಅರಿವಿನ ಕೊರೆತೆ ನೀಗಿಸಲು ಮೌಢ್ಯತೆ ನಿವಾಹರಿಸಲು, ಆಚರಣೆ ಮಾಡುವವರ ಹಾಗೂ ಪ್ರೇರೇಪಿಸುವವರ ಮನಃಸ್ಥಿತಿ ಬದಲಾವಣೆ ಮಾಡುವಂತಹ ತಿಳುವಳಿಕೆಕೊಡುವ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.

ಜನಸಮುದಾಯಕ್ಕೆ ಸೂಕ್ತವಾದ ಶಿಕ್ಷಣ ಮತ್ತು ತಿಳುವಳಿಕೆ ನೀಡುವುದು ಕಾನೂನು ಬಳಕೆ ಮಾಡುವುದರ ಮೂಲಕ ಹೆಣ್ಣಿನ ಮೇಲಾಗುವ ದೈಹಿಕ, ಮಾನಸಿಕ ಹಿಂಸೆಗಳನ್ನು ತಡೆಯುವ ನಿಟ್ಟಿನಲ್ಲಿ ಸಾಮಾಜಿಕ ಕಾರ್ಯಗಳು ರೂಪಗೊಳ್ಳಬೇಕಿದೆ.

ಕಾನೂನು ತಜ್ಞರ ಅಭಿಪ್ರಾಯದ ಪ್ರಕಾರ ಸ್ತ್ರೀಯರ ದೈಹಿಕ, ಜೈವಿಕ, ಸಂತಾನ ಅಭಿವೃದ್ಧಿಯ ಬಾಹ್ಯ ಸ್ಥಿತಿಗಳ ಅಳವಡಿಸಿ ಆಕೆಯ ಹುಟ್ಟಿಗೆ ಮಾತ್ರವಲ್ಲ ನಿತ್ಯದ ಸಹಜ ಸ್ಥಿತಿಗಳು ಅಸಹ್ಯವಾದವುಗಳೆಂದು ಸೂಚ್ಯವಾಗಿ ಹೇಳಿ ಮಾನಸಿಕವಾಗಿ ಆಕೆಯನ್ನು ಅಬಲೆ ಅಸಹಾಯಕಳೆಂದು ದೂರಿಕರಿಸಿ, ಲಿಂಗಭೇದವನ್ನು ಸ್ಥಿರೀಕರಿಸುವ ಆಚರಣೆ ಸಂಪೂರ್ಣವಾಗಿ ಸಾಮಾಜಿಕ ಕಾರಣಗಳನ್ನು ಹೊಂದಿದೆ. ಇಂತಹ ಆಚರಣೆಯ ವಿರುದ್ಧ ಮಹಿಳೆಯರಿಗೆ ವೈಜ್ಞಾನಿಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಆಕೆಯ ಹೆತ್ತವರು, ಪೋಷಕರನ್ನು ದಂಡಿಸುವ ಕಾಯಿದೆಯು ಬಳಕೆಗೆ ಬರಬೇಕು, ಸೆಕ್ಷನ್ ೪೯೮ ಎ (ಐಪಿಎಸ್ ೧೮೬೦) ವಿವಾಹಿತ ಸ್ತ್ರೀಗೆ ಆಕೆಯ ಪತಿಯಿಂದ ಕಿರುಕುಳ ಈ ವಿಧಿಯು

ಹಿಂಸೆಯನ್ನು ಮಹಿಳೆಯ ದೇಹದ ಆರೋಗ್ಯ ಅಥವಾ ಮಾನಸಿಕ ಆರೋಗ್ಯಕ್ಕೆ ಹಾನಿಯುಂಟು ಮಾಡುವ ಯಾವುದೇ ಉದ್ದೇಶಿತ ನಡಾವಳಿಕೆ ಎಂದು ವ್ಯಾಖ್ಯಾನಿಸಿದೆ. ಇಲ್ಲಿ ತಪ್ಪು ಎಸಗುವರಿಗೆ ಮೂರು ವರ್ಷ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲು ಅವಕಾಶವಿದೆ. ಸಂವಿಧಾನ ಪರಿಚ್ಛೇದ ಹದಿನೇಳುರಲ್ಲಿ ಅಸ್ಪೃಶ್ಯತಾ(ಅಪರಾಧ) ಕಾಯಿದೆ. ೧೯೫೫ನ್ನು ರೂಪಿಸಲಾಗಿದೆ. ಆದರೆ ಕುಟುಂಬದ ಒಳಗೆ ಜಾತಿಯ ಕಾನೂನು ಅವಶ್ಯಕತೆ ಇದೆ. ಈ ಕಾಯಿದೆಯ ಅಡಿಯಲ್ಲಿ ಅಥವಾ ಈ ಕಾಯಿದೆ ಮೂಲಕ ಜೈವಿಕತೆಯನ್ನಾಧರಿಸಿ ಸಂಪ್ರದಾಯ ಆಚರಣೆಗಳನ್ನು ಒತ್ತಾಯಪೂರ್ವಕವಾಗಿ ಹೇರುವವರ ವಿರುದ್ಧ, ಕಾಯಿದೆಯನ್ನು ಜಾರಿಗೊಳಿಸಬಹುದು. ಹಾಗೇ ಈ ಕಾಯಿದೆಯ ಮೂಲಕ ಅಮಾನವೀಯ ಆಚರಣೆಗಳನ್ನು ಮಾತ್ರವಲ್ಲ ಲಿಂಗಾತಾರತಮ್ಯಂತಹ ಇತರೆ ಸಂಪ್ರದಾಯ ಆಚರಣೆಗಳನ್ನು ನಿಯಂತ್ರಿಸಬಹುದು. ಇದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿಕೊಂಡು ಹೋಗಬೇಕಾದ ಅವಶ್ಯಕತೆ ಇದೆ. ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ರೂಪಗೊಂಡ ಸಂಪ್ರದಾಯ ಆಚರಣೆಗಳು ಆಕೆಗೆ ದೈಹಿಕ ಮತ್ತು ಮಾನಸಿಕ ಹಿಂಸೆ ಕೊಡುತ್ತದೆ. ಹೀಗಾಗಿ ಅವುಗಳನ್ನು ಅಪರಾಧವೆಂದು ಪರಿಗಣಿಸಬಹುದಾಗಿದೆ. ಒಟ್ಟಾರೆಯಾಗಿ ಈ ಅನಿಷ್ಠ ಅಸಂಬದ್ಧ ಸಂಪ್ರದಾಯ ಆಚರಣೆಗಳ ವಿರುದ್ಧ ನಿಯಂತ್ರಣ ತರುವ ಅಗತ್ಯವಿದೆ.

ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುವ ಸಂಪ್ರದಾಯ ಆಚರಣೆಗಳಿಗೆ ಪ್ರತ್ಯೇಕವಾದ ಕಾನುನು ಅಗತ್ಯವಿದೆ ಎಂದು ಹೇಳುತ್ತಾರೆ. ಆದರೆ ಅದಕ್ಕಿಂತ ಮೊದಲಿಗೆ ಸಮಾಜದ ಪರಿವರ್ತನೆ ಜನ-ಸಮುದಾಯದ ಮನವೊಲಿಸುವುದು ಅಗತ್ಯವಿದೆ ಎಂದು ಕಾನೂನು ತಜ್ಞರು ತಿಳಿಸುತ್ತಾರೆ.

ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಯುತ್ತಿರುವ ಸಂಪ್ರದಾಯ ಆಚರಣೆಗಳು ಹೆಣ್ಣಿನ ಜೈವಿಕತೆ ಕುರಿತು, ಸಾಮಾಜಿಕ ದೃಷ್ಟಿಕೋನಗಳನ್ನು ರೂಪಿಸುತ್ತದೆ. ಹೀಗೆ ರೂಪಿತಗೊಂಡ ಸಾಮಾಜಿಕ ದೃಷ್ಠಿಕೋನಗಳು ಹೆಣ್ಣಿನ ಸ್ಥಾನಮಾನ ನಿರ್ಧರಿಸಲು ಮಾನದಂಡವಾಗಿ ನಿಂತುಕೊಳ್ಳುತ್ತವೆ. ಸಂಪ್ರದಾಯ ಆಚರಣೆಗಳು ಹೆಣ್ಣಿನ ಜೈವಿಕತೆ ಕುರಿತು ಸೃಷ್ಟಿಸುವ ದೃಷ್ಠಿಕೋನಗಳಲ್ಲಿ ಹೆಣ್ಣಿನಗೆ ನಿರ್ಬಂಧ, ನಿಯಂತ್ರಣವನ್ನು ಹಾಕುತ್ತವೆ.

ಹೆಣ್ಣಿನ ಜೈವಿಕತೆಯ ಕುರಿತಿರುವ ಅಪಕಲ್ಪನೆಗಳೇ ಹೆಣ್ಣಿನ ಶೋಷಣೆ, ದೌರ್ಜನ್ಯಗಳಿಗೆ ಮೂಲ ಕಾರಣವಾಗಿದೆ. ಹೆಣ್ಣಿನ ಜೈವಿಕ ಪ್ರಕ್ರಿಯೆಗಳನ್ನು ಸಕರಾತ್ಮಕವಾಗಿ ಯೋಚಿಸುವಂತೆ, ಸಮಾಜವನ್ನು ಪರಿವರ್ತಿಸಬೇಕಾಗಿದೆ. ಹೆಣ್ಣಿನ ಜೈವಿಕತೆಯನ್ನು ಆಧರಿಸಿ ನಡೆಯುವ ಸಂಪ್ರದಾಯ ಆಚರಣೆಗಳನ್ನು ನಿಯಂತ್ರಿಸಬೇಕು ಮತ್ತು ಈ ನಿಟ್ಟಿನಲ್ಲಿ ಪ್ರತಿ ನಗರ, ಗ್ರಾಮಗಳಲ್ಲಿ ಜಾಗೃತಿ ಮೂಡಿಸಬೇಕು.

ಹೆಣ್ಣಿನ ಜೈವಿಕತೆಯನ್ನಾಧರಿಸಿ ನಡೆಸುತ್ತಿರುವ ಸಂಪ್ರದಾಯ ಆಚರಣೆಗಳನ್ನು ಕೈ ಬಿಡಬೇಕಿದೆ. ಇಲ್ಲವೆ ಅವಳ ವ್ಯಕ್ತಿತ್ವವನ್ನು ಗೌರವಿಸುವ ಹಾಗೂ ಅನಾವರಣಗೊಳಿಸುವ ನಿಟ್ಟಿನಲ್ಲಿ ಸಂಪ್ರದಾಯ ಆಚರಣೆಗಳನ್ನು ಮುರಿದುಕಟ್ಟಬೇಕಿದೆ. ಹೀಗೆ ಮುರಿದ ಕಟ್ಟಿದ ಸಂಪ್ರದಾಯ ಆಚರಣೆಗಳು ಹೆಣ್ಣಿನ ಬಗ್ಗೆ ಹೊಸ ತಾತ್ವಿಕತೆಯನ್ನು ರೂಪಿಸಬೇಕಿದೆ. ಅವಳ ಚಹರೆ ಆಕೆಗೆ, ಸಮಾಜಕ್ಕೆ ಕಾಣಿಸಬೇಕಿದೆ. ಹಾಗಾದಾಗ ಮಾತ್ರ ಹೆಣ್ಣಿನ ಜೈವಿಕ ಪ್ರಕ್ರಿಯೆಯು ಸಕಾರಾತ್ಮಕವಾಗಿ ನೋಡುವ ಸಾಮಾಜಿಕ ದೃಷ್ಟಿಕೋನಗಳೂ ರೂಪಿತವಾಗಲೂ ಸಾಧ್ಯ.

ಅಧ್ಯಯನದ ಹೊಸ ಸಾಧ್ಯತೆಗಳು

ಈ ಅಧ್ಯಯನದಲ್ಲಿ ಕೆಲವು ಜಾತಿ ವರ್ಗ ಪಂಗಡ ಸಮುದಾಯಗಳನ್ನು ಆಯ್ದುಕೊಂಡು ಅಧ್ಯಯನ ಮಾಡಲಾಗಿದೆ. ಇನ್ನು ಮುಂದುವರೆದು ಈ ಅಧ್ಯಯನದಿಂದ ಹೊರತಾದ ಜಾತಿ ವರ್ಗ ಸಮುದಾಯಗಳು ಆಧರಿಸಿ ಅಧ್ಯಯನ ಮಾಡುವ ಸಾಧ್ಯತೆಯನ್ನು ಮುಂದಿಡುತ್ತದೆ.

ಸಮಯ, ದಿನ, ಕಾಲ ಉರುಳಿದಂತೆ ವ್ಯಕ್ತಿ ಸಮುದಾಯ, ಸಮಾಜ ಬದಲಾಗುತ್ತಿರುತ್ತದೆ. ಅದರಂತೆ ಸಂಪ್ರದಾಯ ಆಚರಣೆಗಳು ಬದಲಾಗುತ್ತಿರುತ್ತವೆ. ಆದುದರಿಂದ ಇವುಗಳು ಹೆಣ್ಣಿನ ಜೈವಿಕತೆಯನ್ನು ನೋಡುವ ರೀತಿಯಲ್ಲಿ ಕುರಿತು ಅಧ್ಯಯನ ಮಾಡುವ ಸಾಧ್ಯತೆ ಇದೆ.

ಸಮುದಾಯಗಳಲ್ಲಿ ವರ್ಗಶ್ರೇಣಿಕರಣವೊಂದು ಮೈ ತಾಳುತ್ತಿದೆ. ಅಂದರೆ ಒಂದು ಜಾತಿ ಸಮುದಾಯದ ಒಳಗೆ ಶ್ರೀಮಂತ ವರ್ಗಗಳು, ಮಧ್ಯಮವರ್ಗ, ಬಡವರು, ಅನಕ್ಷರಸ್ಥರು, ಅಕ್ಷರಸ್ಥರು ಎಂಬ ಭೇದಗಳಿವೆ. ಒಂದೇ ಜಾತಿ ಸಮುದಾಯ ಒಳಗಡೆ ಭಿನ್ನಾಭಿನ್ನವಾದ ಭಿನ್ನ ಸಂಸ್ಕೃತಿ ಆಚರಣಾ ಲೋಕವನ್ನು ಸೃಷ್ಟಿಸುತ್ತಿವೆ. ಇದು ಒಂದು ಜಾತಿ ಸಮುದಾಯಕ್ಕೆ ಅನ್ವಯವಾಗುತವಂತಹ ಒಂದೇ ಬಗೆಯ ಆಚರಣೆ ಹೇಳುವಂತಿಲ್ಲ. ಒಂದೇ ಜಾತಿಯಲ್ಲಿಯೇ ಅವರವರ ಆರ್ಥಿಕ ಸಾಮರ್ಥ್ಯವನ್ನು ಅವಲಂಬಿಸಿ ಸಂಪ್ರದಾಯ ಆಚರಣೆಗಳು ಕವಲೊಡೆದು ಭಿನ್ನರೂಪ ತಳಿದಿವೆ. ಆದುದರಿಂದ ಜಾತಿ ಸಮುದಾಯದ ಒಳಗೆ ಇರುವ ವರ್ಗ ಭೇದವನ್ನು ಆಧರಿಸಿ ಅದಕ್ಕನುಗುಣವಾಗಿ ಭಿನ್ನವಾಗಿರುವ ಹೆಣ್ಣಿನ ಜೈವಿಕತೆಯ ಕುರಿತಿರುವ ಸಂಪ್ರದಾಯ ಆಚರಣೆಗಳನ್ನು ಅನುಲಕ್ಷಿಸಿ ಅಧ್ಯಯನ ಮಾಡಬೇಕಿದೆ.

* * *

ಅನುಬಂಧ

- ವಕ್ತೃ ವಿವರ
- ಆಕರ ಗ್ರಂಥಗಳು

ಅನುಬಂಧ

ವಕ್ತೃ ವಿವರ

೧. ವನಜಾಕ್ಷಿ, ವಯಸ್ಸು.೪೩, ಕಮಲಾಪುರ, ಜಾತಿ ಬ್ರಾಹ್ಮಣ

೨. ಕಮಲಮ್ಮ, ವಯಸ್ಸು.೪೮, ಗಂಗಾವತಿ, ಜಾತಿ ಬ್ರಾಹ್ಮಣ

೩. ಕಮಲಮ್ಮ, ವಯಸ್ಸು.೪೩, ಮಾನ್ವಿ, ಜಾತಿ ಬ್ರಾಹ್ಮಣ

೪. ಸೋಮಪ್ಪ, ವಯಸ್ಸು.೪೮, ಆನೆಗುಂದಿ, ಜಾತಿ ಅಂಬಿಗರು, ಬೆಸ್ತರು

ಆಕರ ಗ್ರಂಥಗಳು

೧. ಅಂಬೇಡ್ಕರ್.ಬಿ.ಆರ್(ಸಂ) ಕನ್ನಡಕ್ಕೆ: ಕುಮಾರ್ ವೆಂಕಣ್ಣ, ೧೯೬೩, **'ಅಸ್ಪೃಶ್ಯರು'**, ವಸಂತ್ ಪ್ರಕಾಶನ ಬೆಂಗಳೂರು-೪.

೨. ಅನುಸೂಯ ಕಾಂಬಳೆ, ೧೯೯೯, **'ವಿಚಾರ ಸಾಹಿತ್ಯ ಮತ್ತು ಹೆಣ್ಣು'**, ವೈಚಾರಿಕ ಸಾಹಿತ್ಯ ಪ್ರಕಾಶನ ರಾಯಭಾಗ, ಬೆಳಗಾಂ

೩. ಅರ್ಜುನ ಗೊಳಸಂಗಿ, ೨೦೦೦ **'ದಲಿತ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ'**, ವಿಮೋಚನಾ ಪ್ರಕಾಶನ ಅಥಣಿ.

೪. ಅನುಪಮ ನಿರಂಜನ, ೧೯೯೨, **'ಶುಭಕಾಮನೆ'**, ಡಿ.ವಿ.ಕೆ.ಮೂರ್ತಿ, ಮೈಸೂರು.

೫. ಅಮೀನ್ ಅಹ್ಸನ್ ಇಸ್ಲಾಹಿ ಸೈಯದ್ ಅಬ್ದುಲ್ ಅಲ್‌ಮೌದೂರಿ (ಅನು) ನೂರಮಹಮ್ಮದ್, ೨೦೦೨, **'ಸಂದೇಶ ಪ್ರಚಾರ ಮತ್ತು ಮಹಿಳೆಯರು'**, ಶಾಂತಿ ಪ್ರಕಾಶನ, ಮಂಗಳೂರು

೬. ಅಶ್ವಿನಿ ದೊಂಗಡೆ, (ಅನು) ವಿಠಲರಾವ್ ಗಾಯಕವಾಡ್, ೨೦೦೧, **'ಸ್ತ್ರೀವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆಗಳು'**, ಕ.ವಿ.ವಿ. ಹಂಪಿ

೭. ಅಂಬೇಡ್ಕರ್ .ಬಿ.ಆರ್ (ಅನುವಾದ) ಮ.ನ. ಜವರಯ್ಯ, ೨೦೦೦, **ಜಾತಿ ಸತಿ ಮತ್ತು ಮಹಿಳೆ'**, ಸಿದ್ದಾರ್ಥ, ಗ್ರಂಥಮಾಲೆ, ಮೈಸೂರು.

೮. ಇಂದಿರಾ .ಆರ್, ೧೯೯೫, **'ಸ್ತ್ರೀವಾದಿ ದಿಕ್ಸೂಚಿ'**, ಸಮತ ಅಧ್ಯಯನ ಕೇಂದ್ರ ಮೈಸೂರು.

೯. ಇಂದಿರಾ .ಆರ್, ೨೦೦೨, **ಮಹಿಳೆ ಸಮಾಜ ಮತ್ತು ಸಂಸ್ಕೃತಿ'**, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೧೦. ಇಂದಿರಾ ಹೆಗಡೆ, ೨೦೦೪, **'ಬಂಟರು ಒಂದು ಸಾಮಾಜೋ–ಸಂಸ್ಕೃತಿ ಅಧ್ಯಯನ'**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೧. ಇಂದಿರಾ ಕೃಷ್ಣಪ್ಪ, ೨೦೦೪, **ನಮ್ಮ ಮಗಳು ನಮ್ಮ ಶಕ್ತಿ** ', ತೋ.ಬಿ. ಕೃಷ್ಣಪ್ಪ ಟ್ರಸ್ಟ್

೧೨. ಇಬ್ರಾಹಿಂ ಈಸದ್, ೨೦೦೨, ಪ್ರವಾದಿ ಮಹಮ್ಮದ್ (ಸ) **'ಜೀವನ ಮತ್ತು ಸಂದೇಶ'**, ಶಾಂತಿ ಪ್ರಕಾಶನ ಮಂಗಳೂರು

೧೩. ಇಂಗ್ ಹುಟ್ಟರ್, ೧೯೯೮, **'ಅವಳು ಹೊಟ್ಟೆಯಿಂದಿದ್ದಾಳೆ'**, ಮನೋಹರ ಗ್ರಂಥ ಮಾಲಾ, ಧಾರವಾಡ.

೧೪. ಉಷಾ. ಎಂ, ೨೦೦೫, **'ಮಹಿಳೆ ಮತ್ತು ಜಾತಿ ಒಂದು ಸೈದ್ದಾಂತಿಕೆ ಗ್ರಹಿಕೆ'**, ಕನ್ನಡ ವಿ.ವಿ.ಹಂಪಿ

೧೫. ಉಷಾ. ಎಂ, ೨೦೦೪, **'ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು'**, ಕನ್ನಡ ವಿ.ವಿ.ಹಂಪಿ

೧೬. ಒಡೆಯರ್ .ಡಿ. ಹೆಗಡೆ, **'ಬೆಂಕಿಯಲ್ಲಿ ಕಮರಿದ ಹೂವು'**,

೧೭. ಒಡೆಯರ್ .ಡಿ. ಹೆಗಡೆ, ೨೦೦೭, **'ಮಹಿಳಾ ಅಧ್ಯಯನ ಪದ ಕೋಶ'**, ಒಡೆಯರ್ .ಡಿ. ಹೆಗಡೆ ಪ್ರಕಾಶನ

೧೮. ಓಬಳೇಶ್ವರ ಘಟ್ಟ, ೨೦೦೨, **'ಬುದ್ಧನ ಧರ್ಮ ಮತ್ತು ಇತರ ಧರ್ಮಗಳು'**, ಶಿವಗಂಗಾ ಪ್ರಕಾಶನ

೧೯. ಕಮಲಾ ಹಂಪನಾ, ೨೦೦೩, **'ಬೊಗಸೆ (ಮಹಿಳಾ ಸುತ್ತಮುತ್ತ)'**, ಸಿ.ವಿ.ಜಿ. ಪಬ್ಲಿಕೇಶನ್ ಬೆಂಗಳೂರು.

೨೦. ಕವಿತ ರೈ., ೨೦೦೭, 'ವಿವಾಹ ಮತ್ತು ಕುಟುಂಬ', ಕನ್ನಡ ವಿವಿ, ಹಂಪಿ

೨೧. ಕಿಶೋರಿ ನಾಯಕ್. ಕೆ, ೨೦೦೫, **'ಲಿಂಗತ್ವ ಸಮನ್ವಾಯ'**, ಮಂಗಳೂರು ವಿ.ವಿ

೨೨. ಕಿಶೋರಿ ನಾಯಕ್. ಕೆ., ೧೯೯೯, **'ಸ್ತ್ರೀವಾದ ನೆಲೆಗಳು ಮತ್ತು** ನಿಲವುಗಳು ಮಂಗಳೂರು ವಿ.ವಿ.

೨೩. ಕುಮಾರ ಬಿ.ಆರ್, ೨೦೦೪ **'ಮುದ್ದೆ ಕಂಬಾರರು'**, ಸಾರ್ ಎಂಟರ್ ಪ್ರೈಸಸ್ ಮೈಸೂರು

೨೪. ಕೃಷ್ಣಮೂರ್ತಿ ಹನ್ನೂರು, ೧೯೯೩, **'ಮ್ಯಾಸಬೇಡರ ಸಂಸ್ಕೃತಿ'**, ಕರ್ನಾಟಕ ಸಾಹಿತ್ಯ ಅಕಾಡಿಮಿ, ಬೆಂಗಳೂರು.

೨೫. ಕೃಷ್ಣಮೂರ್ತಿ ಅಗ್ರಹಾರ, ೧೯೭೬, **'ಬೆಳದಿಂಗಪ್ಪನ ಪೂಜೆ'**, ಮುಂಗಾರು ಪ್ರಕಾಶನ, ಬೆಂಗಳೂರು

೨೬ ಕೃಷ್ಣಮೂರ್ತಿ ಕೆ.ಎಸ್., ೨೦೦೪, **'ಉಪನಿಷತ್ತುಗಳ ಸಾರ'**, ಕಾವ್ಯಾಲಯ ಪ್ರಕಾಶನ, ಜಯನಗರ, ಮೈಸೂರು

೨೭ ಕೃಷ್ಣಯ್ಯ ಎ.ಡಿ., ಮೂಲ (ಡಾ.ಬಿ.ಆರ್.ಅಂಬೇಡ್ಕರ್, ೨೦೦೬, **'ಬುದ್ಧ ಮತ್ತು ಆತನ ಧರ್ಮ'**, ಪ್ರೊ.ಅರಿಯಸ್, ಸುದರಂ ನಿರ್ದೇಶಕರು ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು.

೨೮. ಕೋದಂಡರಾಮ ಎನ್.ಕೆ., ೨೦೦೫, **'ಮಹಿಳೆ ಮತ್ತು ಸಾಮಾಜಿಕತೆ'**, ಶ್ರೀಮತಿ ಯಶೋಧಾರಗೌಡ, ಟ್ರಸ್ಟ್, ಮೈಸೂರು

೨೯. ಕೋಸಂಬಿ ಡಿ.ಡಿ (ಅನು) ಟಿ.ಎಸ್.ವೇಣುಗೋಪಾಲ ಶೈಲಜ, ೨೦೦೩, **'ಪುರಾಣ ಮತ್ತು ವಾಸ್ತವ'**, ಚಿಂತನ ಪ್ರಕಾಶನ, ಉತ್ತರ ಕನ್ನಡ

೩೦. ಗಂಜೂರು ಚಂದ್ರಶಾಸ್ತ್ರೀ ವೇ, ೨೦೦೩, **'ಧರ್ಮಶಾಸ್ತ್ರ ಪದ್ಧತಿ'**, ಪೂಜಾ ಪುಸ್ತಕ ಭಂಡಾರ

೩೧. ಗಂಗಾಧರ ದೈವಜ್ಞ, ೨೦೦೨, **'ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ'**, ಪ್ರಸಾರಾಂಗ, ಕನ್ನಡ ವಿವಿ, ಹಂಪಿ

೩೨. ಗಾಯಿತ್ರಿ ನಾವಡ, – **'ಕರಾವಳಿ ಜನಪದ ಸಾಹಿತ್ಯ ಸ್ತ್ರೀವಾದಿ ನೆಲೆಗಳು'**,

೩೩. ಗಾಯಿತ್ರಿ ನಾವಡ, ೧೯೯೭, **'ವಿರಚನೆ'**, ಎನ್.ಆರ್.ಎ.ಎಂ.ಎಚ್.ಪ್ರಕಾಶನ, ಕೋಟೇಶ್ವರ

೩೪. ಗಾಂಧಿ ಎಂ.ಕೆ., ೧೯೬೯, **'ಮಹಿಳೆಯರು'**, ಗಾಂಧಿಸ್ಮಾರಕ ನಿಧಿ ಕರ್ನಾಟಕ ಶಾಖೆ

೩೫. ಚಕ್ಕರೆ ಶಿವಶಂಕರ ಚಂದ್ರಮತಿ ಸಂದ, ೨೦೦೪, **'ಗೋರವರ ಸಂಸ್ಕೃತಿ ಚಿಪ್ಪೊಡೆದ ಮೌನ (ಸ್ತ್ರೀವಾದ ವಿಮರ್ಶೆ)'**, ಅಭಿರುಚಿ ಪ್ರಕಾಶನ, ಸರಸ್ವತಿಪುರ, ಮೈಸೂರು

೩೬. ಚಂದ್ರಪೂಜಾರಿ ಎಂ., ೨೦೦೫, **'ಸಂಶೋಧಕರು ಮತ್ತು ಕ್ಷೇತ್ರಕಾರ್ಯ'**, ಕನ್ನಡ ವಿವಿ, ಹಂಪಿ

೩೭. ಚಂದ್ರಪೂಜಾರಿ ಎಂ., ೨೦೦೮, **'ರಾಜಕೀಯದ ಬಡತನ'**, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

೩೮. ಚಂದ್ರಶೇಖರ ಬಿ.ಎಸ್., ೨೦೦೧, **'ಸಮಾಜ ವಿಜ್ಞಾನಗಳಲ್ಲಿ ಸಂಶೋಧನ ವಿಧಾನಗಳು'**, ಕನ್ನಡ ವಿವಿ, ಹಂಪಿ

೩೯. ಜಯಲಕ್ಷ್ಮಿ ಕೆ., ೨೦೦೬, **'ಹೆಣ್ಣು ಅಸ್ತಿತ್ವದ ಹೋರಾಟದಲ್ಲಿ'**, ಅನಾವರಣ ರಾಮಮೋಹನಪುರ, ಬೆಂಗಳೂರು

೪೦. ಜೋತ್ಸ್ನಾ ಕಾಮತ್, ೧೯೯೯, **'ಮಹಿಳೆ ಒಂದು ಅಧ್ಯಯ'**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪೧. ಜೋತ್ಸ್ನಾ ಕಾಮತ್, ೨೦೦೧, **'ಮಹಿಳೆ: ಅಂದು–ಇಂದು'**, ಪ್ರೇಮಸಾಯಿ ಪ್ರಕಾಶನ, ಬೆಂಗಳೂರು

೪೨. ಜೋಗನ ಶಂಕರ, ೧೯೯೩, **'ದೇವದಾಸಿ ಸಂಪ್ರದಾಯ**, ವಿವೇಚನಾ ಪ್ರಕಾಶನ, ಅಥಣಿ

೪೩. ಜ್ಯೋತಿ ಶಶಿಕುಮಾರ, ೨೦೦೭, **'ಮಹಿಳಾ ಸಾಮಾಜಿಕತೆ'**, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿವಿ, ಹಂಪಿ

೪೪. ತಪಸ್ವಿಕುಮಾರ್ ನ., ೨೦೦೦, **'ಸಂಸ್ಕೃತಿ ವಿಕಾಸ'**, ಚೇತನ ಬುಕ್‌ಹೌಸ್, ಮೈಸೂರು

೪೫. ತಾಪಿತ ಧರ್ಮರಾವ್ (ಅನು) ರವಿಬೆಳಗೆರೆ, ೧೯೮೯, **'ವಿವಾಹ ಹುಟ್ಟು ಮತ್ತು ಪೂರ್ವೋತ್ತರ'**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪೬. ತಾಳ್ತಜೆ ವಸಂತಕುಮಾರ, ೨೦೦೫, **'ಚೌದ್ದಾಯನ**, ಕನ್ನಡ ವಿಭಾಗ, ಮಂಗಳೂರು ವಿವಿ

೪೭. ತೇಜಸ್ವಿನಿ ನಿರಂಜನ ಸೀಮಂತಿನ ನಿರಂಜನ (ಸಂ), ೧೯೯೪, **'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ**, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು

೪೮. ಧರಣಿದೇವಿ, ೧೯೯೮, **'ಸ್ತ್ರೀವಾದ ಮತ್ತು ಭಾರತೀಯತೆ'**, ಚೇತನ ಬುಕ್‌ಹೌಸ್, ಮೈಸೂರು

೪೯. ನಂದನ ವೈ.ಬಿ., ೨೦೦೦, **'ಬೌದ್ದ ನಿತ್ಯಾಚರಣೆಗಳೂ'**, ಮಹಾಬೋದಿ ಸೊಸೈಟಿ

೫೦. ನರಸಿಂಹಮೂರ್ತಿ ಎಚ್.ಬಿ., ೨೦೦೪, **'ಹಿಂದೂಧರ್ಮ ಮತ್ತು ಜೀವನ ಪದ್ಧತಿ ಪ್ರಶ್ನೋತ್ತರ ರೂಪದಲ್ಲಿ'**, ವಿಕಾಸ ಪ್ರಕಾಶನ, ನೆರಂಬಳ್ಳಿ, ಉಡುಪಿ ಜಿಲ್ಲೆ.

೫೧. ನಾಗರಾಜ ಕೆ.ಜಿ., ೨೦೦೩, **'ದೇವಾಂಗ ಸಂಸ್ಕೃತಿ'**, ಡಾ.ಜಿ.ಸರೋಜಮ್ಮ ಜಿ.ಆರ್.ಶ್ರೀನಿವಾಸ ಸೇವಾ ಪ್ರತಿಷ್ಠಾನ, ಬೆಂಗಳೂರು

೫೨. ನಾರಾಯಣ ಪ.ವಿ., ಮೂಲ:ರಸೆಲ್, **'ಮದುವೆ ಮತ್ತು ನೀತಿ'**, ವಸಂತ ಪ್ರಕಾಶನ, ಬೆಂಗಳೂರು

೫೩. ನಾಯಕ ಡಿ.ಬಿ., ೨೦೦೫, **'ಜಾನಪದ ಲೇಖನಗಳು(ಸುಳ್ಳಿ ಒಂದು ಅಧ್ಯಯನ)'**, ಗುಲ್ಬರ್ಗಾ ವಿವಿ, ಗುಲ್ಬರ್ಗಾ

೫೪. ನಿಂಗಣ್ಣ ಸಣ್ಣಕ್ಕಿ, ೧೯೯೩, **'ಗೊಂದಲಿಗರ ಸಂಸ್ಕೃತಿ'**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೫೫. ನಿರೂಪಮಾ, ೧೯೯೬, **'ಧರ್ಮಶಾಸ್ತ್ರಗಳು ಸ್ತ್ರೀ ಹಾಗೂ ಶೋಷಣೆ'**, ಆರತಿ ಪಬ್ಲಿಕೇಷನ್ಸ್, ಬೆಂಗಳೂರು

೫೬. ನೀಲಮ್ಮ ಕತ್ನಳ್ಳಿ, ೧೯೯೭, **'ಮಹಿಳೆ ಅಲವು ಮುಖಗಳು'**, ರೇಣುಕ ಪ್ರಕಾಶನ, ಗುಲಬರ್ಗಾ

೫೭. ಪ್ರೀತಿ ಶುಭಚಂದ್ರ, ೨೦೦೨, **'ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು'**, ಕನ್ನಡ ವಿವಿ, ಹಂಪಿ

೫೮. ಭಾನುಮತಿ ವೈ.ಸಿ., ೨೦೦೩, **'ಜಾನಪದ ಆಂತರ್ಯ'**, ತಳಗವಾದಿ ಪ್ರಕಾಶನ, ಮೈಸೂರು

೫೯. ಭಾರತಿಜೀವಿ, ೨೦೦೬, **'ದೇವದಾಸಿ ಪ್ರಸಂಗ ದೀಪ್ತಿ'**, ಡಾ..ಎಸ್.ಜಿ.ಭಾರತಿ ಜೀವಿ

೬೦. ಭಾಸ್ಕರ ಟಿ.ಎಂ., ೨೦೦೦, **'ಸುಡುಗಾಡು ಸಿದ್ಧರು ಒಂದು ಸಂಸ್ಕೃತಿ ಅಧ್ಯಯನ'**, ಮುರುಗಣ ಪ್ರಕಾಶನ, ಗುಲಬರ್ಗಾ.

೬೧. ಭೈರಗೌಡ ಎಂ., ೨೦೦೦, **'ಇಳಿಗರ ಜಾನಪದ ಅಧ್ಯಯನ'**,

೬೨. ಬೋರಲಿಂಗಯ್ಯ ಹಿ.ಚಿ., ೨೦೦೧, **'ವಿಸ್ಮೃತಿ ಮತ್ತು ಸಂಸ್ಕೃತಿ'**, ಸಿ.ವಿ.ಜಿ., ಪಬ್ಲಿಕೇಷನ್ಸ್ ಬೆಂಗಳೂರು.

೬೩. ಮಹೇಶ ತಿಪ್ಪಶೆಟ್ಟಿ, ೧೯೯೫, **'ಸಾಮಾಜಿಕ ಆಲೋಚನೆ'**, ದಾಳಿಂಬ ಪ್ರಕಾಶನ, ಹುನಗುಂದ

೬೪. ಮಂಜುನಾಥ ಬೇವಿನಕಟ್ಟಿ, ೧೯೯೩, **'ಜನಪದ ಸಂಸ್ಕೃತಿ'**, ತೇಜಸ್ವಿನಿ ಪ್ರಕಾಶನ, ಹೂವಿನಹಡಗಲಿ

೬೫. ಮಂಜುನಾಥ ಬೇವಿನಕಟ್ಟಿ, **ಬುಡಕಟ್ಟು ನಂಬಿಕೆಗಳು ಒಂದು ನೋಟ'**, ಕನ್ನಡ ವಿವಿ, ಹಂಪಿ

೬೬. ಮಂಗಳ ಪ್ರಿಯದರ್ಶಿನಿ, ೨೦೦೭, **'ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಪ್ರವೇಶಿಕೆ'**, ಮಹಿಳಾ ಅಧ್ಯಯನ, ಕನ್ನಡ ವಿವಿ, ಹಂಪಿ

೬೭. ಮಂಜಪ್ಪಶೆಟ್ಟಿ ಮಸಗಲಿ ಎಂ.ಪಿ., ೨೦೦೦, **'ಮಲೆನಾಡಿನ ಕುರುಹಿನ ಶೆಟ್ಟರು'**, ಮಸಗಲಿ ಪ್ರಕಾಶನ, ಮೈಸೂರು

೬೮. ಮಧು ವೆಂಕಟರೆಡ್ಡಿ, ೧೯೯೬, **'ಥೇರಿ ಗಾಥ'**, ಮಹಿಳಾ ಸಾಹಿತ್ಯಿಕಾ ನವನಗರ, ಹುಬ್ಬಳ್ಳಿ

೬೯. ಮಧುಕೇಶ್ವರಿ (ಅನು) ಮೀರಾ ಎಲ್.ಜಿ. ೧೯೯೭, **'ಮಾನುಷಿಯ ಮಾತು'**, ಅಕ್ಷರ ಚಿಂತನ ಪ್ರಕಾಶನ, ಹೆಗ್ಗೋಡು

೭೦. ಮನುಚಕ್ರವರ್ತಿ, (ಅನು) ಮೀರಾ ಎಲ್.ಜಿ. ೧೯೯೯, **'ಬಹುಮುಖಿ'**, ಅಕ್ಷರ ಚಿಂತನ ಪ್ರಕಾಶನ, ಹೆಗ್ಗೋಡು

೭೧. ಮಲಿಕಾ ಗಂಟಿ, ೨೦೦೫, **ಧರಣಿ ಮೆಲೊಂದು'**, ಗೌತಮ ಪ್ರಕಾಶನ,

೭೨. ಮಾರುತಿ ವಿ.ಎಸ್., ೨೦೦೨, **'ಗೋಸಂಗಿ ಸಮುದಾಯ ಒಂದು ಅಧ್ಯಯನ (ಅಪ್ರಕಟಿತ)**

೭೩. ಮಿರ್ಜಿ ಅಣ್ಣಾರಯ್ಯ, ೧೯೯೭, **'ಜೈನ ಧರ್ಮ'**, ಶಾಂತಿ ಸೇವ ಸದನ ಶೇಡಬಾಳ

೭೪. ಮೊಗಳ್ಳಿ ಗಣೇಶ, ೧೯೯೮, **'ಸೊಲ್ಲು'**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು

೭೫. ಮೊಗಳ್ಳಿ ಗಣೇಶ, ೨೦೦೫, **'ಆದಿಮ (ಸಂಶೋಧನ ಗ್ರಂಥ)'**, ಸಾರಂಗ ಪ್ರಕಾಶನ, ತಿಪಟೂರು

೭೬. ಯಂಡಮೂರಿ ವೀರೇಂದ್ರನಾಥ, ೨೦೦೫, **'ಓ ಹೆಣ್ಣು ನೀನೆಷ್ಟು ಒಳ್ಳೆಯವಳು'**, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

೭೭ ರಮೇಶ ಸ.ಚಿ., ೧೯೯೬, **'ದಕ್ಷಿಣ ಕರ್ನಾಟಕ ಉಪ್ಪಾರ ಸಮುದಾಯ ಸಮಾಜೋ–ಸಾಂಸ್ಕೃತಿಕ ಅಧ್ಯಯನ'**, (ಅಪ್ರಕಟಿತ)

೭೮. ರಹಮತ್ ತರಿಕೇರಿ, ೨೦೦೦, **'ಧರ್ಮ ವಿಶ್ವಕೋಶ'**, ಕನ್ನಡ ವಿವಿ, ಹಂಪಿ

೭೯. ರಾಜಪ್ಪ ದಳವಾಯಿ, ೧೯೯೩, '**ಹಕ್ಕಿ ಪಿಕ್ಕಿಯರ ಸಂಸ್ಕೃತಿ**', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೮೦. ರಾಜೇಂದ್ರ ಡಿ.ಕೆ., **ನಮ್ಮ ಸುತ್ತಲಿನ ನಂಬಿಕೆಗಳು**',

೮೧. ರಾಜಶೇಖರ್ ಎಸ್., ೨೦೦೧, '**ಭಾರತೀಯ ಸಮಾಜ**', ಭ್ರಮರ ಪ್ರಕಾಶನ,

೮೨. ರಾಜಶೇಖರ ಜಿ.(ಅನು) ಮೂಲ: ಪೌರಭ್ ದುಬೆ, ಪಣಿಂದಂ ದೇವ ಇಷಿತಾ ಬ್ಯಾನರಜಿ, ೧೯೯೩, '**ದಾರು ಪುತಿಮಾ ನ ಪೂಜಿವೆ ಅಸ್ಪೃಶ್ಯದ ಧಾರ್ಮಿಕ ದಂಗೆಯ ಅಧ್ಯಯನ**', ಅಕ್ಷರ ಚಿಂತನ

೮೩. ರಾಮಜೋಯಿಸ ಮ.ನ್ಯಾಯಮೂರ್ತಿಗಳು, ೨೦೦೫, '**ಮನಸ್ಮೃತಿಯಲ್ಲಿ ಶಾಶ್ವತ ಜೀವನದ ಮೌಲ್ಯಗಳು**', ಸಪ್ನ ಬುಕ್‌ಹೌಸ್, ಬೆಂಗಳೂರು.

೮೪. ರಾಮಚಂದ್ರ ಬರುಗೂರು, ೧೯೯೩, '**ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದ ಚಿಂತನೆ**', ಅಂಕಿತ ಪುಸ್ತಕ, ಬೆಂಗಳೂರು

೮೫. ರಾಮಚಂದ್ರ ಬರುಗೂರು, ೨೦೦೧, '**ಸಂಸ್ಕೃತಿ : ಶ್ರಮ ಮತ್ತು ಸೃಜನಶೀಲತೆ**', ಅಂಕಿತ ಪುಸ್ತಕ, ಬೆಂಗಳೂರು

೮೬. ರಾಮಚಂದ್ರ ಡೇರೆ (ಅನು)ವಿಠಲರಾವ್ ಗಾಯಕ್ವಾಡ್, ೨೦೦೩, '**ಲಜ್ಜಾಗೌರಿ**', ಕನ್ನಡ ವಿವಿ, ಹಂಪಿ

೮೭. ರಾಮಯ್ಯಂಗಾರ ಹೆಚ್.ಜಿ. ೨೦೦೫, '**ವಿವಾಹ ಮತ್ತು ದಾಂಪತ್ಯ ಜೀವನ**', ಹಂಸಾ ಎಂಟರ್ ಪ್ರೈಸಸ್

೮೮. ರೋಹಿಣಿ ಬಿ.ಎಂ., ೧೯೯೫, '**ಸ್ತ್ರೀ ಸಂಸ್ಕೃತಿ ಶಿಕ್ಷಣ**', ಹೇಮಾಂಶು ಪ್ರಕಾಶನ, ಮಂಗಳೂರು

೮೯. ಲಲಿತ, ೨೦೦೫, '**ಮೊಗ್ಗನ್ನು ಮುರುಟಿಸಿದವರು**', ಮಹಿಳಾ ಜ್ಯತಿ ಪ್ರಕಾಶನ

೯೦. ಲೀಲಾ ಸಂಪಿಗೆ, ೨೦೦೫, '**ವೈಶ್ಯೆಯರು ಒಂದು ಆಧುನಿಕ ಬುಡಕಟ್ಟೆ?**', ನೆಲೆ ಅಕಾಡೆಮಿ ಪ್ರಕಾಶನ

೯೧. ವಂದನಶಿವ(ಮೂಲ) ಕನ್ನಡಕ್ಕೆ ಮಾಧವ ಐತಾಳ, ೨೦೦೫, '**ಭತ್ತದ ಚಿಲುಮೆ**', ಕನ್ನಡ ವಿವಿ, ಹಂಪಿ

೯೨. ವಾಗೇಶ್ವರಿ ಶಾಸ್ತ್ರಿ, ೧೯೯೩, '**ಸುಲಭ ಸಂಪ್ರದಾಯಿಕ ವಿವಾಹ ಒಂದು ವಿಶ್ಲೇಷಣೆ**', ವಾಗ್ದೇವಿ ಕಲಾನಿಕೇತನ, ಬೆಂಗಳೂರು

೯೩. ವಾಗೇಶ್ವರಿ ಶಾಸ್ತ್ರಿ, '**ಹಿಂದೂ ಸ್ತ್ರೀ ಚಿತೆಯಿಂದ ಚಿಂತೆಗೆ**',

೯೪. ವಿಜಯಕುಮಾರ್ ಎನ್. ಕರಿಕಲ್, ೨೦೦೭, '**ಮಹಿಳೆ ಮತ್ತು ಸಮಾಜ**', ಕನ್ನಡ ವಿವಿ,ಹಂಪಿ

೯೫. ವಿಜಯಲಕ್ಷ್ಮಿ ಕೆ.ಎಂ., ೨೦೦೫, **'ಸ್ತ್ರೀವಾದ ಸಾಹಿತ್ಯದ ಒಂದು ಚಳುವಳಿ ಮತ್ತು ಇತರ ಲೇಖನಗಳು'**, ಜಾಗೃತಿ ಪ್ರಿಂಟರ್ಸ್, ಬೆಂಗಳೂರು

೯೬. ವಿಜಯ, ೨೦೦೫, **'ನಿಜಧ್ಯಾನ'**, ಪ್ರಸ್‌ಕ್ಲಬ್ ಪ್ರಕಾಶನ, ಬೆಂಗಳೂರು

೯೭. ವಿಜಯ ದಬ್ಬೆ, ೧೯೯೭, **'ನಾರಿ : ದಾರಿ–ದಿಗಂತ'**, ರಚನ ಪ್ರಕಾಶನ, ಮೈಸೂರು.

೯೮. ವಿಜಯ ಸಬರದ(ಸಂ), ೨೦೦೫, **'ಮಹಿಳೆಯ ಶೋಷಣೆಯ ಸವಾಲುಗಳು'**, ಗುಲ್ಬರ್ಗಾ ವಿವಿ, ಗುಲ್ಬರ್ಗಾ.

೯೯. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨, **'ಅಕ್ಕಮ್ಮನ ಆಚರಣೆ'**, ಕನ್ನಡ ವಿವಿ, ಹಂಪಿ

೧೦೦. ವಿನೋಬ, ೧೯೬೮, **'ಸ್ತ್ರೀ ಶಕ್ತಿ'**, ಭೂಧಾನ ಕಾರ್ಯಾಲಯ ಪ್ರಕಾಶನ, ಬೆಳಗಾಂ.

೧೦೧. ವೀಣಾಶಾಂತೇಶ್ವರಿ (ಸಂ), ೧೯೯೩, **ಮಹಿಳಾ ಅಧ್ಯಯನ'**, ಪ್ರೊ.ಹೆಚ್.ವಿ.ನಾಗೇಶ್ ಸನ್ಮಾನ ಸಮಿತಿ ಧಾರವಾಡ

೧೦೨. ವೀರಭದ್ರಪ್ಪ ಬಿ.ವಿ., ೨೦೦೧, **'ವೇದಗಳಲ್ಲಿ ಜನ ಸಾಮಾನ್ಯರು'**, ಕನ್ನಡ ವಿವಿ, ಹಂಪಿ

೧೦೩ ವೀರೇಶ ಬಡಿಗೇರ, ೧೯೯೯, **ಗುಳ್ಳವ್ವ ಆಚರಣೆ– ವಿಶ್ಲೇಷಣೆ'**, ಮಯ ಪ್ರಕಾಶನ, ಕಮಲಾಪುರ

೧೦೪. ವಿಶ್ವನಾಥ ಡಿ.ಎಸ್., ೨೦೦೬, **'ಬದುಕಿನ ಧರ್ಮ–ಮಹಿಳೆ'**, ಗಣೇಶ ಪಬ್ಲಿಕೇಷನ್ಸ್, ಬೆಂಗಳೂರು

೧೦೫. ವೆಂಕಟಸ್ವಾಮಿ ಎಂ., ೨೦೦೩, **'ಅಸ್ಪೃಶ್ಯರು'**, ನವಕರ್ನಾಟಕ ಪ್ರಕಾಶನ, ಪಬ್ಲಿಕೇಷನ್ ಪ್ರೈವೆಟ್‌ಲಿ.

೧೦೬. ವೆಂಕಟರಾಮಣಯ್ಯ ಟಿ.ವಿ., ೧೯೮೭, **'ಅವರವರ ಕಣ್ಣಲ್ಲಿ ಗಂಡು–ಹೆಣ್ಣು'**, ತೊಣ್ಣೂರು ಪ್ರಕಾಶನ ರಾಜಾಜಿನಗರ, ಬೆಂಗಳೂರು

೧೦೭. ವೆಂಕೋಬರಾವ್ ಡಿ., ೨೦೦೦, **'ನ್ಯಾಯಕ್ಕಾಗಿ ಮಹಿಳೆಯರ ಹೋರಾಟ'**, ದಿವ್ಯ ಚಂದ್ರ ಪ್ರಕಾಶನ, ಬೆಂಗಳೂರು

೧೦೮. ವೆಂಕಟಗಿರಿ ದಳವಾಯಿ, ೨೦೦೮, **'ಸಂಸ್ಕೃತಿ ಮಹಿಳಾ ಮಾಲಿಕೆ–೦೬'**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೦೯. ಶಂಕರನಾರಾಯಣ ತೀ.ನಂ., ೧೯೮೨, **'ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳು'**, ಮೈಸೂರು ವಿವಿ, ಮೈಸೂರು

೧೧೦. ಶಂಕರನಾರಾಯಣಭಟ್ ಕೆ.,೧೯೮೨, **'ಹಿಂದೂ ಧರ್ಮದ ಪರಿಚಯ'**, ಶ್ರೀ ರಾಮಕೃಷ್ಣ ಪ್ರಕಾಶನ, ಭಾಗಮಂಡಲ, ಕೊಡಗು.

೧೧೧. ಶಾಂತ ಇಮ್ರಾಪುರ, ೨೦೦೫, **'ನಿರ್ಭಯದ ನಿಲುವು (ವಿಮರ್ಶಾತ್ಮಕ ಲೇಖನಗಳು)'**, ಚಿತ್ತಾರ ನಿರ್ಮಲನಗರ, ಧಾರವಾಡ

೧೧೨. ಶಾಂತ ಇಮ್ರಾಪುರ., ೨೦೦೧, 'ಮಹಿಳೆ – ಸಾಹಿತ್ಯ, ಸಂಸ್ಕೃತಿ', ಚೇತನ ಪ್ರಕಾಶನ, ಧಾರವಾಡ

೧೧೩. ಶಾಂತ ಇಮ್ರಾಪುರ, ೨೦೦೧, 'ಮಹಿಳೆ ಮತ್ತು ಸಾಮಾಜಿಕ', ಚೇತನ ಪ್ರಕಾಶನ, ಧಾರವಾಡ

೧೧೪. ಶಾರದ ಶಾಮಣ್ಣ, ೧೯೯೯, 'ಭಾರತೀಯ ಮಹಿಳೆ (ಪೌರಾಣಿಕ ಹಿನ್ನೆಲೆಯಲ್ಲಿ ವಿಮರ್ಶೆ)', ಕಳಸ ಪ್ರಕಾಶನ, ಬೆಂಗಳೂರು

೧೧೫. ಶ್ರೀಮತಿ ಹೆಚ್.ಎಸ್., 'ಗೌರಿ : ದುಃಖ', ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಕೇಷನ್ಸ್, ಬೆಂಗಳೂರು

೧೧೬. ಶ್ರೀಮತಿ ಹೆಚ್.ಎಸ್., ೨೦೦೭, 'ದಿ ಸೆಕೆಂಡ್ ಸೆಕ್ಸ್',

೧೧೭. ಶ್ರೀಮತಿ ಹೆಚ್.ಎಸ್., ೨೦೦೪, 'ಹೆಣ್ಣು – ಹೆಂಗಸು', ಬಾಲ್ಯದ ಕೆರೆ ಮಂಡ್ಯ

೧೧೮. ಶ್ರೀಮತಿ ಹೆಚ್.ಎಸ್., ೨೦೦೩, 'ಸ್ತ್ರೀವಾದ', ಕನ್ನಡ ವಿವಿ, ಹಂಪಿ

೧೧೯. ಶ್ರೀಮತಿ ಹೆಚ್.ಎಸ್ (ಕನ್ನಡ) ಮೂಲ: ಜೆರಾಲ್ಡಿನ್ ಫೋರ್ಬ್ಸ್, ೨೦೦೧, 'ಆಧುನಿಕ ಭಾರತದಲ್ಲಿ ಮಹಿಳೆ', ಕನ್ನಡ ವಿವಿ, ಹಂಪಿ

೧೨೦. ಶ್ರೀಮತಿ ಹೆಚ್.ಎಸ್., ೨೦೦೨, 'ಗರ್ಭಾಶಯ ಮಹಿಳೆಯ ಶಕ್ತಿ ಕೇಂದ್ರ, ಕನ್ನಡ ವಿವಿ,ಹಂಪಿ

೧೨೧. ಶ್ರೀಕಂಠ ಕೂಡಿಗೆ (ಸಂ), ೧೯೯೯, 'ಜಾನಪದ ವಿವಿಧ ಮುಖಗಳು', ಕರ್ನಾಟಕ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೧೨೨. ಶ್ರೀಮತಿ ಹೆಚ್.ಎಸ್., 'ಚಹರೆ', ಇಳಾ ಪ್ರಕಾಶನ, ಬೆಂಗಳೂರು

೧೨೩. ಶೇಷನವರತ್ನ (ಅನುವಾದ), ೨೦೦೫, 'ಮನಸ್ಮೃತಿ', ಸಮಾಜ ಪುಸ್ತಕಾಲಯ, ಧಾರವಾಡ

೧೨೪. ಶೇಷನವರತ್ನ, ೧೯೯೮, 'ಜಾಗತಿಕ ಧರ್ಮಗಳು', ಸಮಾಜ ಪುಸ್ತಕಾಲಯ, ಧಾರವಾಡ

೧೨೫. ಶೇಷನವರತ್ನ, ೨೦೦೩, 'ಅಥರ್ವೇದ', ಸಮಾಜ ಪುಸ್ತಕಾಲಯ, ಧಾರವಾಡ

೧೨೬. ಶೈಲಜ ಹಿರೇಮಠ್, ೧೯೯೯, 'ಪಾತರದವರು', ಕನ್ನಡ ವಿವಿ, ಹಂಪಿ

೧೨೭. ಶೈಲಜ ಹಿರೇಮಠ್, ೨೦೦೪, 'ಸ್ತ್ರೀ ಕಥನ', ಭುವನ ಪ್ರಕಾಶನ, ಹೊಸಪೇಟೆ

೧೨೮. ಶೈಲಜ ಹಿರೇಮಠ್, ೨೦೦೪, 'ಮಾತೃ ಪ್ರಧಾನತೆಯ ಪರಿಕಲ್ಪನೆ', ಕನ್ನಡ ವಿವಿ, ಹಂಪಿ

೧೨೯. ಷಣ್ಮುಖಯ್ಯ ಅಕೂರ್ ಮಠ್, ೧೯೯೪, 'ಧರ್ಮ ಸಂಪದ', ಚೆನ್ನಚೇತನ ಪ್ರಕಾಶನ, ಹೊನ್ನಾಳಿ

೧೩೦. ಸಮತಾ ಬಿ. ದೇಶಮಾನಿ, ೨೦೦೩, 'ಸಮಾಜಶಾಸ್ತ್ರ ಮತ್ತು ಮಹಿಳೆ', ಚೇತನ ಬುಕ್‌ಹೌಸ್

೧೩೧. ಸಣ್ಣರಾಮ, ೧೯೯೯, 'ಲಂಬಾಣಿ ಸಂಸ್ಕೃತಿ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕರ್ನಾಟಕ ಸರ್ಕಾರ

೧೩೨. ಸರಸ್ವತಿ ರಿಸಬೂಡ (ಸಂ), 'ಸ್ತ್ರೀ–ಪುರುಷ', ಇಳಾ ಪ್ರಕಾಶನ, ಬೆಂಗಳೂರು

೧೩೩. ಸರೋಜ ಕೆ., ೨೦೦೧, 'ಮಹಿಳೆ ಮತ್ತು ಆರೋಗ್ಯ', ಕನ್ನಡ ವಿವಿ, ಹಂಪಿ

೧೩೪. ಸಾರಾ ಅಬೂಬಕರ್, ೨೦೦೭, 'ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ', ಕನ್ನಡ ವಿವಿ, ಹಂಪಿ

೧೩೫. ಸಿದ್ದಲಿಂಗಯ್ಯ, ೨೦೦೫, 'ಗ್ರಾಮದೇವತೆಗಳು ಜನಪದೀಯ ಅಧ್ಯಯನ', ಅಂಕಿತ ಪುಸ್ತಕ ಬಸವನಗುಡಿ, ಬೆಂಗಳೂರು

೧೩೬. ಸಿದ್ದಯ್ಯ ಕೆ.ಬಿ., ೧೯೯೪, 'ನಾಲ್ಕು ಶೇಷ್ಠ ಸತ್ಯಗಳು'

೧೩೭. ಸುಮಿತ್ರಾಬಾಯಿ ಬಿ.ಎನ್., ೨೦೦೬, 'ಸ್ತ್ರೀವಾದ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೩೮. ಸುಮಿತ್ರಾಬಾಯಿ ಬಿ.ಎನ್., ಗಾಯಿತ್ರಿ ಎನ್., ೧೯೯೫, 'ಸ್ತ್ರೀವಾದಿ ಪ್ರವೇಶಕೆ', ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು

೧೩೯. ಸುಲೋಚನಾ ದೇವಿ ಆರ್., ೧೯೭೫, 'ಆಯ್ದ ಪ್ರಬಂಧಗಳು', ಅಕ್ಕಮಹಾದೇವಿ ಕೃಷ್ಣರಾಜೇಂದ್ರ ಬಡಾವಣೆ ತುಮಕೂರು

೧೪೦. ಸುದಾರ್ಥ ಹಾಸನ, ೧೯೯೬, 'ಸಂಸ್ಕಾರ', ಅನಂತ ಪ್ರಕಾಶನ, ಬೆಂಗಳೂರು

೧೪೧. ಸುನಂದಮ್ಮ ಆರ್., ೨೦೦೫, 'ಮಹಿಳಾ ಸಂಸ್ಕೃತಿ', ಸಮತಾ ಅಧ್ಯಯನ ಕೇಂದ್ರ, ಮೈಸೂರು

೧೪೨. ಹರಿಲಾಲ್ ಪವಾರ್, 'ಹೂ ಹೊನಸಾತಿ', ಪ್ರಿಯತಮ್ ಪ್ರಕಾಶನ, ಧಾರವಾಡ

೧೪೩. ಹಾಲತಿ ಸೋಮೇಶ್ವರ, ೨೦೦೭, 'ಮಹಿಳಾ ಚಳುವಳಿ (ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ)', ವಿಸ್ಮಯ ಪ್ರಕಾಶನ, ಮೈಸೂರು

೧೪೪. ಹಾಲತಿ ಸೋಮೇಶ್ವರ, ೨೦೦೮, 'ಸ್ತ್ರಿ ಪರ', ವಿಸ್ಮಯ ಪ್ರಕಾಶನ, ಮೈಸೂರು.

೧೪೫. ಎಸ್.ಎಸ್.ಹಿರೇಮಠ್, ೨೦೦೫, 'ಜಾನಪದ ಸಮಾಜ ಸಂಸ್ಕೃತಿ (ವಿಮರ್ಶೆ)', ಸೂರ್ಯ ಪ್ರಕಾಶನ, ಚಿತ್ರದುರ್ಗ

೧೪೬. ಹೇಮಲತಾ ಹೆಚ್.ಎಂ., ೨೦೦೪, 'ಮಹಿಳಾ ಅಧ್ಯಯನ', ಡಿ.ವಿ.ಕೆ.ಮೂರ್ತಿ, ಮೈಸೂರು.

೧೪೭ ಅಂಬಳಿಕೆ ಹಿರಿಯಣ, ೧೯೯೯, 'ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು

೧೪೮. ಕೃಷ್ಣಮೂರ್ತಿ ಹನ್ನೂರು, ೨೦೦೬, 'ಮ್ಯಾಸಬೇಡರು' ಸಂವಹನ ಮೈಸೂರು

೧೪೯.ಅಭಯ ಕುಮಾರ ಕೌಕ್ರಾಡಿ, ೧೯೯೭, 'ಮುಗೇರರು ಜನಾಂಗ ಜಾನಪದ ಅಧ್ಯಯನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,

೧೫೦.ಗುರುಲಿಂಗಯ್ಯ .ಎಂ 'ಕರ್ನಾಟಕ ಗೊಲ್ಲ ಸಮುದಾಯ' ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಸಾಮಾಜಿಕ ಸಾಂಸ್ಕೃತಿಕ ಅಧ್ಯಯನ ಬೆಂಗಳೂರು – ೨೦೦೫.

೧೫೧.ಪುಟ್ಟಯ್ಯ ಬಿ.ಎಂ., ೨೦೦೧, 'ಸಾವು ಒಂದು ಚಿಂತನೆ', ಕನ್ನಡ ವಿವಿ, ಹಂಪಿ

ಸಂಚಿಕೆ/ಲೇಖನಗಳು

೧. 'ಜಾನಪದ ೧೯೯೧' (ಸಂ)ಜಿ.ಎಸ್. ಭಟ್ಟ ಸಂಪಾದಕ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೩.

೨. 'ಮಹಿಳಾ ಅಧ್ಯಯನ' (ಸಂಪುಟ೨) ಉತ್ತಾರಾಯಣ ಮತ್ತು ದಕ್ಷಣಾಯನ, ಕನ್ನಡ ವಿವಿ. ಹಂಪಿ.

೩. 'ಅಂತಸ್ತಿನ ಅನ್ವೇಷಣೆ' –ಕರ್ನಾಟಕ ಗ್ರಾಮೀಣ – ಮಹಿಳೆಯರ ಅಧ್ಯಯನದ ಸಂಕ್ಷಿಪ್ತ ವರದಿ, ವಿಭ ಅಧ್ಯಯನಗಳ ರಾಷ್ಟ್ರೀಯ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆ ಆವರಣ ಬೆಂಗಳೂರು ೧೯೯೮.

೪. 'ಜಾನಪದ ಜಗತ್ತು' ಡಿಸೆಂಬರ್ ೧೯೯೦.

೫. 'ಜಾನಪದ ಜಗತ್ತು' ಜೂನ್ ೧೯೯೧.

೬. 'ಸಾಧನೆ' ಸಂಚಿಕೆ (೪) ೧೯೭೫ ಬೆಂಗಳೂರು ವಿ.ವಿ ಅಕ್ಟೋಬರ್, ಡಿಸೆಂಬರ್ ಸಂಪುಟ ಸಂಚಿಕೆ (೪).

೭. 'ವಿಭಿನ್ನ ನೆಲೆಗಳು, ವಿಭಿನ್ನ ರಾಜಕೀಯ ಜೆಂಡರ್ ಹಾಗೂ ಅನನ್ಯಲೆಗಳು ಒಂದು ವಿಚಾರ ಸಂಕಿರಣ ನವೆಂಬರ್ ೨೦೦೫. ಹೆಂಗಸರ ಹಕ್ಕಿನ ಸಂಘ

೮. ವಚನ ಸಂಸ್ಕೃತಿ ಸಾಮಾಜಿಕ ಆಯಾಮಗಳು ಟಿ.ಆರ್. ಚಂದ್ರಶೇಖರ, ಸಿ.ವಿ.ಜಿ ಬೆಂಗಳೂರು–೨೦೦೪.

೯. ಲೇಖನ ಬುಡಕಟ್ಟು ಮಹಿಳೆ: ಸ್ಥಾಪಿತ ಗ್ರಹಿಕೆಗಳಿಗೆ ಭಿನ್ನಮತ' – ಶೈಲಜಾ ಹಿರೇಮಠ ಆದಿವಾಸಿ ಆಖ್ಯಾನ (ಸಮುದಾಯಗಳ ಅಧ್ಯಾಯನಕ್ಕೊಂದು ಆಕರ (ಸಂ) ಎ.ಎಸ್. ಪ್ರಭಾಕರ್. ಸಿದ್ದಾರ್ಥ ಪ್ರಕಾಶನ ಹೊಸಪೇಟೆ ೨೦೦೬.

* * *